ಸಂಪುಟ ೧೮
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ
ಮೇ, ೧೯೮೬

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮಿಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು,

ಲೇಖನ ಸ್ವೀಕೃತವಾದಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-೫೮೦ ೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨ ೫೦

(ಅಂಚೆವೆಚ್ಚ : ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ದರ : ರೂ. ೪-೦೦ ಮಾತ್ರ
ಹಣವನ್ನು ಡಿಮಾಂಡ ಡ್ರಾಫ್ಟ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ
ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೮ ಸಂಚಿಕೆ : ೪

ಪ್ರಧಾನ ಸಂಪಾದಕರು :
ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು :
ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೮ ಸಂಚಿಕೆ : ೪

ಅಕ್ಷಯತೃತೀಯಾ ಸಂಚಿಕೆ

ಮೇ, ೧೯೮೬

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಪಿ. ಆರ್. ಜಂಗಮನಿ, ಬಿ.ಎ., ಬಿ.ಕಾಮ್.

ಅಲ್ಲಮ ಮುದ್ರಣಾಲಯ, ಶಹಪೂರಪೇಟೆ, ಗದಗ

ಪ ರಿ ವಿ ಡಿ

ಪುಟ

೧. ಅಂಬಿಗರ ಚೌಡಯ್ಯ ಮತ್ತು ಬಂಡಾಯ ೧ – ೮
— ಬಸವರಾಜ ಸಬರದ

೨. ಅರಿವಿನ ಜಾಗೃತಿ ಪದ್ಧತಿಯ ಅನ್ವಯ ೯ – ೩೦
— ಕಿರಣ್ ಕಮಲಾಪ್ರಸಾದ ಜೆ. ಸ.

೩. 'ಚಿತ್ರಾಂಗದೆ'ಯ ಕನಸುಗಳು – ಒಂದು ವಿಶ್ಲೇಷಣೆ ೩೧ – ೩೮
— ಎಂ. ಇಕ್ಬಾಲ್

೪. ಭಾರತದ ಶಿಕ್ಷಣ – ಒಂದು ಸಮೀಕ್ಷೆ ೩೯ – ೪೭
— ವ್ಹಿ. ಜಿ. ಮಾರೀಹಾಳ

೫. ಸ್ವಧರ್ಮ ಮತ್ತು ಪರಧರ್ಮ ೪೮ – ೫೨
— ವಿಲ್ಯಂ ಮಾಡ್ತ

೬. ಕರ್ನಾಟಕ ಮತ್ತು ಆಂಧ್ರಗಳ ಸಂಬಂಧದಲ್ಲಿ
ಜೈನ ಧರ್ಮದ ಪಾತ್ರ ೫೩ – ೫೯
— ಎಸ್. ವ್ಹಿ. ಪಿ. ಹಳಕಟ್ಟಿ

೭. ಇಂಗ್ಲಂಡದಲ್ಲಿ ಕನ್ನಡ ಹಸ್ತಪ್ರತಿಗಳು ೬೦ – ೭೪
— ಎಂ. ಎಂ. ಕಲಬುರ್ಗಿ

೮. ವಿಜಯನಗರ ಬುಕ್ಕರಾಯನ ಭಾವೀಕೇರಿ ಶಾಸನ ೭೫ – ೮೦
– ಒಂದು ಸಂಶೋಧನೆ
— ಎಚ್. ಆರ್. ರಘುನಾಥ ಭಟ್

೯. ಸನ್ನತಿಯ ೨೦೦೦ ವರ್ಷದ ಕೋಟೆ ೮೧ – ೮೯
— ಎಸ್. ಕೆ. ಜೋಶಿ

೧೦. ತುಮಕೂರು ಜಿಲ್ಲೆಯ ಶಾಸನಗಳು : ಒಂದು ಅಧ್ಯಯನ ೯೦ – ೯೨
— ಕೆ. ಬಿ. ಶಿವತಾರಕ್

೧೧. ಕನ್ನಡೇತರರಿಗೆ ಕನ್ನಡ ಕಲಿಸುವ ಕ್ರಮ ೯೩ – ೧೦೬
— ಎಸ್. ಎಲ್. ಸಣ್ಣೆಲ್ಲಪ್ಪನವರ

೧೨. 'ಹರಳಯ್ಯಗಳ ವಾದ ಖಂಡನ' (ಚೌಪದನ) ೧೦೭ – ೧೧೬
ಕವಿ ಚನ್ನಮಲ್ಲನ ಮೇಲೆ ಒಂದು ಬೆಳಕು
— ವ್ಹಿ. ಶಿವಾನಂದ
೧೩. ಜಾನಪದ ಸಾಹಿತ್ಯದಲ್ಲಿ ಮಗನ ಪ್ರಲಾಪ ೧೧೭ – ೧೨೦
— ಸದಾನಂದ ಪಾಟೀಲ
೧೪. ಯಡ್ರಾವಿಯ ಶಾಸನಗಳು ೧೨೧ – ೧೩೪
— ಬಿ. ಆರ್. ಹಿರೇಮಠ
— ಹನುಮಾಕ್ಷಿ ಗೋಗಿ
ಸಾದರ ಸ್ವೀಕಾರ
— ವಿಲ್ಯಂ ಮಾಡ್ತ

ಅಂಬಿಗರ ಚೌಡಯ್ಯ ಮತ್ತು ಬಂಡಾಯ

● ಬಸವರಾಜ ಸಬರದ

ಆದ್ಯವಚನಕಾರರ ಪರಂಪರೆಯನ್ನು ಒಪ್ಪಿಕೊಳ್ಳುತ್ತಲೇ ಸಂಪ್ರದಾಯವನ್ನು ಅಲ್ಲಗಳೆಯುವ; ವೀರಶೈವ ಧರ್ಮದಲ್ಲಿದ್ದುಕೊಂಡೇ ಅದರ ಶಾಸ್ತ್ರ ಗುಣವನ್ನು ವಿಡಂಬಿಸುವ ಅಂಬಿಗರ ಚೌಡಯ್ಯ ನಿಜವಾದ ಬಂಡಾಯಗಾರನಾಗುತ್ತಾನೆ. ಉಳಿದ ವಚನಕಾರರಂತೆ ಚೌಡಯ್ಯ ವಚನ ಚಳುವಳಿಗೆ ಬದ್ಧನಾಗಿದ್ದರೂ ಅಲ್ಲಿಯ ಲೋಪ ದೋಷಗಳನ್ನು ಎತ್ತಿ ಹೇಳುವದರ ಮೂಲಕ ಭಿನ್ನವಾಗಿ ಕಾಣುತ್ತಾನೆ.

ಸಾಮಾನ್ಯವಾಗಿ ಎಲ್ಲಾ ವಚನಕಾರರು ತಮ್ಮ ವಚನಗಳಲ್ಲಿ ತಮ್ಮ-ತಮ್ಮ ಇಷ್ಟ ದೈವವನ್ನು ಅಂಕಿತವಾಗಿಟ್ಟುಕೊಂಡರೆ; ಚೌಡಯ್ಯ ತನ್ನ ಹೆಸರನ್ನೇ ಅಂಕಿತ ವನ್ನಾಗಿಸಿಕೊಂಡಿದ್ದಾನೆ. ಉಳಿದ ವಚನಕಾರರಲ್ಲಿದ್ದ ಕೀಳರಿಮೆ ಕಿಂಕರಭಾವ ಚೌಡಯ್ಯನಲ್ಲಿ ಕಾಣುವದಿಲ್ಲ. ಒಂದು ಚಳುವಳಿಯ ಬೆನ್ನೆಲುಬಾಗಿದ್ದುಕೊಂಡು ತನ್ನ ತನವನ್ನು ಉಳಿಸಿಕೊಂಡು ಬೆಳೆಯುವದರಿಂದ ಚೌಡಯ್ಯ ಅತ್ಯಂತ ಗಮನ ಸೆಳೆಯುವ ವಚನಕಾರನಾಗಿ ಕಾಣುತ್ತಾನೆ.

ಚೌಡಯ್ಯನ ವಚನಗಳನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಿ ವಚನ ದಿಂದ ವಚನಕ್ಕೆ ಬೆಳವಣಿಗೆಯಾಗುತ್ತಾ ಹೋದದ್ದು ಕಂಡುಬರುತ್ತದೆ. ಪ್ರಾರಂಭ ದಲ್ಲಿ ಗುರು - ಲಿಂಗ – ಜಂಗಮ ಹಾಗೂ ಧರ್ಮ – ದೇವರುಗಳ ಬಗೆಗೆ ತೋರುವ ಆತನ ಭಕ್ತಿ ಕ್ರಮೇಣ ಬೆಳವಣಿಗೆಯಾದಂತೆ ವೈಚಾರಿಕವಾಗುತ್ತಾ, ವಾಸ್ತವ ವಾಗುತ್ತಾ ಸಾರ್ವಕಾಲಿಕ ಸತ್ಯವಾಗಿಬಿಡುತ್ತದೆ. ಆದ್ದರಿಂದ ಚೌಡಯ್ಯ ಇಂದಿಗೂ ಪ್ರಸ್ತುತನಾಗುತ್ತಾನೆ. ಇಂತಹ ಬದಲಾವಣೆ, ಈ ರೀತಿಯ ಖಚಿತತೆ ಉಳಿದ ವಚನ ಕಾರರಲ್ಲಿ ಕಾಣುವದಿಲ್ಲ.

ಪ್ರಮುಖ ಚಳುವಳಿಯೊಂದು ಧರ್ಮದ ಕಟ್ಟುಪಾಡಿಗೆ ಬಿದ್ದು ಹೇಗೆ ಬಾಡಿ ಹೋಯಿತೆನ್ನಲಿಕ್ಕೆ ವಚನ ಚಳುವಳಿಯೇ ಜೀವಂತ ಸಾಕ್ಷಿ. ಏನೆಲ್ಲವನ್ನೂ ಸಾಧಿಸುವ ಸಾಧ್ಯತೆಗಳನ್ನು ಹೊಂದಿದ್ದ ಆ ಚಳುವಳಿ ಪೂಜೆ-ಪ್ರಸಾದದಲ್ಲಿಯೇ ತಲ್ಲೀನವಾಗಿ ಆಧ್ಯಾತ್ಮದ ಗುಂಗಿನಲ್ಲಿಯೇ ಕರಗಿ ಹೋಗಿ ವಿಫಲವಾಯಿತು ಎನ್ನುವದು ಈಗ ಚರಿತ್ರೆಗೆ ಸೇರಿದ ವಿಷಯ. ಇಂತಹ ಚಳುವಳಿಯ ಒಡಲಾಳದಲ್ಲಿಯೇ ಚೌಡಯ್ಯನಂತಹ ಬಂಡಾಯಗಾರರು ಎಷ್ಟೇ ದನಿಯೆತ್ತಿ ಗುಡುಗಿದರೂ ಚಳುವಳಿ ಬೇರೊಂದು ದಿಕ್ಕು ಹಿಡಿದದ್ದು ಅದರ ದುರಂತವೆನ್ನಬಹುದು.

ಚೌಡಯ್ಯನಲ್ಲಿ ಎರಡು ರೀತಿಯ ಬಂಡಾಯವನ್ನು ಕಾಣಬಹುದು. ವಿಮರ್ಶೆ ಮತ್ತು ಸ್ವವಿಮರ್ಶೆ ಈತನ ವಚನಗಳಲ್ಲಿ ಒಟ್ಟೊಟ್ಟಿಗೆ ನಡೆದಿವೆ. ವೈದಿಕಶಾಹಿ ಸಂಸ್ಕೃತಿಯನ್ನು ಅದರ ಡಾಂಭಿಕತೆಯನ್ನು ವಿವರಿಸುತ್ತ, ಬಹುದೇವೋಪಾಸನೆಯನ್ನು ವಿರೋಧಿಸುತ್ತ ವಿಡಂಬಿಸುತ್ತ, ಅಂಧಸಂಪ್ರದಾಯಗಳನ್ನು ಅಲ್ಲಗಳೆಯುತ್ತ ಏಕದೇವೋಪಾಸನೆಯ ಕಡೆಗೆ ಕರೆದೊಯ್ಯುವದು. ಗುರು–ಲಿಂಗ–ಜಂಗಮರ ಸಂಬಂಧ ವನ್ನು ವಾಸ್ತವತೆಯ ತಳಹದಿಯ ಮೇಲೆ ವಿಶ್ಲೇಷಿಸಿ ಹೇಳುವದು, ಇವೆಲ್ಲಾ ಆಗಿನ ವ್ಯವಸ್ಥೆಯಲ್ಲಿ ಚೌಡಯ್ಯ ಮಾಡಿದ ಬಂಡಾಯದ ಸಾಧನೆಗಳು. ಇದನ್ನು ಸಮಾಜದ ವಿಮರ್ಶೆ ಎಂದು ಕರೆಯಬಹುದು. ಮುಂದೆ ಬರುಬರುತ್ತಾ ಚೌಡಯ್ಯ ಲಿಂಗ–ಧರ್ಮ–ದೇವರುಗಳನ್ನೇ ಪ್ರಶ್ನಿಸುತ್ತಾನೆ. ಪೂಜೆ–ಪುನಸ್ಕಾರಗಳನ್ನು ಅಲ್ಲಗಳೆಯುತ್ತಾ ಮನುಷ್ಯ ಸಾಧನೆಯನ್ನು ಎತ್ತಿ ಹೇಳುತ್ತಾನೆ. ತಾನಿದ್ದ ಚಳುವಳಿಯ ಲೋಪ–ದೋಷಗಳನ್ನೂ ಬಯಲು ಮಾಡುತ್ತಾ ಚೌಡಯ್ಯ ಸಾರ್ವಕಾಲಿಕವಾಗಿ ಸ್ಪಂದಿಸುತ್ತಾನೆ. ಇದು ಎರಡನೇ ರೀತಿಯ ಬಂಡಾಯ. ಇದನ್ನು ಸ್ವವಿಮರ್ಶೆ ಎನ್ನಬಹುದು. ವಿಮರ್ಶೆ ಮತ್ತು ಸ್ವವಿಮರ್ಶೆ; ವಿಶ್ಲೇಷಣೆ ಹಾಗೂ ಹೋರಾಟ ಇವೆರಡೂ ಏಕಕಾಲಕ್ಕೆ ನಡೆದಾಗ ನಿಜವಾದ ಬಂಡಾಯ ಹುಟ್ಟುತ್ತದೆ. ಇದನ್ನು ಚೌಡಯ್ಯನ ವಚನಗಳಲ್ಲಿ ಕಾಣಬಹುದು.

ಕಲ್ಲು–ಕಟ್ಟಿಗೆ–ಮರ–ಮಡಿಕೆ ಇವುಗಳನ್ನೇ ದೇವರೆಂದು ಪೂಜಿಸುತ್ತಾ; ನೂರೆಂಟು ದೇವಸ್ಥಾನಗಳಿಗೆ ಅಲೆದು ಪೂಜಾರಿಗಳಿಂದ ಶೋಷಿಸಲ್ಪಟ್ಟ ಹಲವಾರು ಅಜ್ಞ ಜನತೆಗೆ ಚೌಡಯ್ಯ ಏಕದೇವೋಪಾಸನೆಯನ್ನು ಕಲಿಸುತ್ತಾನೆ. ಒಂದರ್ಥದಲ್ಲಿ ಇದು ಪ್ರಾರಂಭದ ಬಂಡಾಯವಾಗುತ್ತದೆ. ಲಿಂಗವನ್ನು ಧರಿಸಿಯಾದ ಮೇಲೂ ಏಕದೇವೋಪಾಸನೆಯತ್ತ ಬರದ ಜನ ಮತ್ತೆ ವೈದಿಕ ವಿಧಿ–ವಿಧಾನಗಳನ್ನೇ ಅನುಕರಿಸುವದನ್ನು ಕಂಡು ಚೌಡಯ್ಯ ಕಟುವಾಗಿ ಟೀಕಿಸುತ್ತಾನೆ:

> " ಉದಾಸೀನವ ಮಾಡುವ ಸಮಯಹೀನನ ಕೊರಳಲ್ಲಿ
> ಶಿವಲಿಂಗವ ಕಟ್ಟಿರ್ದಡೇನಯ್ಯ ?
> ಪಡುವಲ ಕಾಯಿಗೆ ಕಲ್ಲುಕಟ್ಟಿದಂತೆ
> ಆ ಪಾಪಿ ನೊಸಲ ತುಂಬ ವಿಭೂತಿಯನಿಟ್ಟಡೇನಯ್ಯ ?
> ಕೊಟ್ಟಗೆಯ ಮೇಲಣ ಕುಂಬಳಕಾಯಿಯಂತೆ "
>
> —(ಅಂ. ಚೌ. ವ. ೨೨)

ಈ ವಚನದಲ್ಲಿ ಚೌಡಯ್ಯ ಬಳಸಿದ "ಪಡವಲಕಾಯಿ" "ಕುಂಬಳಕಾಯಿ" "ಮಿಟ್ಟಭಂಡರು" — ಈ ಮೊದಲಾದ ಪದಗಳು ದೇಸೀ ಭಾಷೆಯ ಗಟ್ಟಿತನ ಪಡೆದುಕೊಂಡು ಹೆಚ್ಚು ಪರಿಣಾಮ ಬೀರುತ್ತವೆ.

ಇನ್ನೊಂದು ವಚನದಲ್ಲಿ ಚೌಡಯ್ಯ ಲಿಂಗಪೂಜೆಯಲ್ಲೇ ತಲ್ಲೀನರಾಗಿ ಜಂಗಮರನ್ನೇ ಮರೆತ ಭಕ್ತರನ್ನು ಕಟುವಾಗಿ ವಿಡಂಬಿಸುತ್ತಾನೆ:

" ಜಂಗಮನ ಕರೆತಂದು ಮನೆಯಲ್ಲಿ ಕುಳ್ಳಿರಿಸಿ
ಲಿಂಗದ ಮೇಲಣ ಜಪವೆಣಿಸುವ ಭಕ್ತನ ಬಾಯಲ್ಲಿ ಕೆರವನಿಕ್ಕಲಿ
ಅವನ ಲಿಂಗಾರ್ಚನೆಯ ಬಾಯಲ್ಲಿ ಹುಡಿಯ ಹೊಯ್ಯಲಿ
ಜಂಗಮದ ತೃಪ್ತಿಯನರಿಯದೆ ಲಿಂಗವಂತನೆಂತಾದನೋ ಮರುಳೆ
ಆತ ಪಿಸುಣ ಹೊಲೆಯನೆಂದಾತ ಅಂಬಿಗ ಚೌಡಯ್ಯ "

–(ಅಂ. ಚೌ. ವ. ೬೦)

ಇಲ್ಲಿ ಲಿಂಗಪೂಜೆಗಿಂತ ಜಂಗಮ ಮುಖ್ಯ ಎಂಬ ಭಾವವಿದೆ. ಲಿಂಗಪೂಜೆಯ ಸಂಬಂಧ ಕಡಿಮೆಯಾಗಿ ಜಂಗಮ ಸಂಬಂಧ ಬಯಸುವ ತೀವ್ರವಾದ ಬೆಳವಣಿಗೆಯಿದೆ. 'ಲಿಂಗ' ನಿರ್ಜೀವವಾದ ವಸ್ತು, 'ಜಂಗಮ' ಜೀವಂತ ಮನುಷ್ಯ. ಜಡವಸ್ತುವನ್ನು ಕಡೆಗಣಿಸಿ ಜೀವದತ್ತ ಸಾಗಿದ ಅಪೂರ್ವ ಸಾಧನೆಯಿದೆ. ಇದೇ ಭಾವ ಮುಂದಿನ ವಚನದಲ್ಲಿ ಹೀಗೆ ಮುಂದುವರೆದಿದೆ :

" ಮೊಟ್ಟೆ ಮೊಟ್ಟೆ ಪತ್ರಿ ತಂದು ಒಟ್ಟಿ ಪೂಜಿಸಿದರೇನು ?
ಮನ ಶುದ್ಧವಿಲ್ಲದನ್ನಕ್ಕರ................
ಇಂತು ಪೂಜೆಯ ಮಾಡುವದಕ್ಕಿಂತ–ಅದೇ ತೊಪ್ಪಲನು ಕುದಿಸಿ
ಪಾಕವ ಮಾಡಿದಲ್ಲಿ ಆ ಲಿಂಗವು ತೃಪ್ತಿಯಾಯಿತ್ತು
ಬರಿದೆ ಲಿಂಗವ ಪೂಜಿಸಿ, ಜಂಗಮಕ್ಕೆ ಅನ್ನವ ಕೊಡದೆ
ಲಿಂಗದ ಮುಖವು ಜಂಗಮವೆಂದು ತಿಳಿಯದೆ
ತನು ಮನ ಧನವನು–ಗುರು ಲಿಂಗ ಜಂಗಮಕ್ಕೆ ಸವೆಸದೆ
ಬಾಗಿಲಿಗೆ ಕಾವಲಿಕ್ಕಿ ಹೆಂಡಿರುಮಕ್ಕಳು ಕೂಡಿಕೊಂಡು
ತನ್ನ ತಾನೇ ತಿಂಬುವಂತ ನೀಚ ಹೊಲೆಯರ ಮೂಗಸವರಿ
ಮೆಣಸಿನ ಹಿಟ್ಟಿ ತುಂಬಿ
ಪಡಿಹಾರಿ ಉತ್ತಣ್ಣಗಳ ಪಾದುಕೆಯಿಂದ
'ಹೊಡಿ ಎಂದಾತ ನಮ್ಮ ಅಂಬಿಗ ಚೌಡಯ್ಯ. "

—(ಅಂ. ಚೌ. ವ. ೬೯)

'ಲಿಂಗದ ಮುಖವೇ ಜಂಗಮ' ಎನ್ನುವ ಚೌಡಯ್ಯನ ವಚನದಲ್ಲಿ ವಿಶಿಷ್ಟ ಅರ್ಥ ವಿದೆ. ಆಹಾರವನ್ನು ಸದುಪಯೋಗಪಡಿಸದ ಸ್ವಾರ್ಥಿಗಳನ್ನು ವಿಡಂಬಿಸಿದ್ದಾನೆ. ತೊಪ್ಪಲ ಕುದಿಸಿ ಪಾಕ ಮಾಡುವ ಕ್ರಿಯೆ, ಜಂಗಮ ತೃಪ್ತಿಯೇ ಲಿಂಗದ ತೃಪ್ತಿ ಯೆನ್ನುವ ಭಾವನೆ ಚೌಡಯ್ಯನಲ್ಲಿ ಬೆಳೆಯುವದರಿಂದ ಅಲ್ಲಿ ಹೇಳುವ ಪೂಜೆ ವಿಶಿಷ್ಟ ಅರ್ಥವನ್ನು ಪಡೆದುಕೊಳ್ಳುತ್ತದೆ. ಜಂಗಮ ಪ್ರಮುಖನಾಗಿ ಲಿಂಗ ಗೌಣವಾಗುವದು;

ಕ್ರಿಯೆ ಬೆಳೆದು ಪೂಜೆ ಹೊಸ ಅರ್ಥ ಹೊಂದುವದು; ಚೌಡಯ್ಯನ ವಿಶಿಷ್ಟಗುಣವನ್ನು ಹೇಳುತ್ತವೆ. ನೀಚ-ಹೊಲೆಯ-ಪಾದುಕೆ-ಹೊಡಿ ಈ ಮೊದಲಾದ ಪದಗಳು ಹಲವಾರು ವಚನಗಳಲ್ಲಿ ಮತ್ತೆ-ಮತ್ತೆ ಬಂದರೂ ಭಾವತೀವ್ರತೆಯಲ್ಲಿ-ವೈಚಾರಿಕತೆಯ ಹಿನ್ನೆಲೆ ಯಲ್ಲಿ ನೋಡಿದಾಗ ಮತ್ತೆ ಹೊಸ ಅರ್ಥವನ್ನು ಹೊತ್ತುಕೊಂಡು ಧಿಮಿಗುಡುತ್ತವೆ.

ಮೊದ-ಮೊದಲು ಸ್ಥಾವರಲಿಂಗ ಪೂಜೆಯನ್ನು ವಿರೋಧಿಸಿ-ಇಷ್ಟಲಿಂಗ ಪೂಜೆ ಯನ್ನು ಹೇಳಿದ ಚೌಡಯ್ಯ; ಶಿವಭಕ್ತನಾದ ಬಳಿಕ ಲಿಂಗಕ್ಕೆ ತೋರದೆ ಪ್ರಸಾದವ ಮುಟ್ಟಬಾರದು ಎಂದು ವಿವರಿಸಿದ ಇದೇ ಚೌಡಯ್ಯ ತಾನು ಬೆಳೆದಂತೆಲ್ಲಾ ತನ್ನ ಮಾತುಗಳನ್ನೇ ಮುರಿದು ಮುಂದೆ ನಡೆಯುತ್ತಾನೆ. ತಾನು ಹಾಕಿಕೊಂಡ ಗೆರೆಗಳನ್ನೇ ದಾಟ ಮುನ್ನಡೆಯುತ್ತಾನೆ. ಕ್ರಮೇಣ ಇಷ್ಟಲಿಂಗ ಪೂಜೆಯನ್ನೇ ಪ್ರಶ್ನಿಸಲು ಪ್ರಾರಂಭಿ ಸುತ್ತಾನೆ. ಪ್ರಾರಂಭದ ಭಕ್ತಿ-ಭಾವುಕತೆ-ಭಾವಾವೇಶ ಎಲ್ಲ ಮರೆಯಾಗಿ ಪ್ರಶ್ನೆಗಳೇ ತಲೆತುಂಬ ಕುಣಿಯಹತ್ತಿದಾಗ; ಇತ್ತ ಪ್ರಮುಖ ವಚನಕಾರರಿಂದ ಸರಿಯಾದ ಉತ್ತರ ಸಿಗದೇ ಇದ್ದಾಗ ಚೌಡಯ್ಯ ಪೂಜೆಯನ್ನು ಬಿಡದಂತಹ ಮತ್ತೆ ಮಾಡದಂತಹ ದ್ವಂದ್ವ ಸ್ಥಿತಿಗೆ ಬರುತ್ತಾನೆ. ಚಳುವಳಿಯೊಂದಕ್ಕೆ ಬದ್ಧನಾಗಿರುವದರಿಂದ ಉಭಯ ಸಂಕಟ ಕ್ಕೊಳಗಾಗುತ್ತಾನೆ.

ಇಂತಹ ಆತ್ಮಶೋಧನೆ- ಈ ರೀತಿಯ ಹೊಸ ವಿಚಾರ ಚೌಡಯ್ಯನ ಹಾಗೆ ಉಳಿದ ವಚನಕಾರರಲ್ಲಿ ಕಾಣುವದಿಲ್ಲ. ಪ್ರಮುಖ ವಚನಕಾರರೆಲ್ಲಾ ಪ್ರಾರಂಭದಿಂದ ಕೊನೆಯವರೆಗೆ ಒಂದೇ ಸಿದ್ಧಾಂತಕ್ಕೆ ಬದ್ಧರಾಗಿ ಅದರಲ್ಲೇ ಕರಗಿ ಹೋಗುತ್ತಾರೆ. ದುಡಿವ ವರ್ಗದಿಂದ ಬಂದ ವಚನಕಾರರು ಮಾತ್ರ ಪ್ರಶ್ನಿಸುತ್ತಾರೆ. ಅದರಲ್ಲಿಯೂ ಚೌಡಯ್ಯನಂತಹ ವಚನಕಾರ ನಿರ್ಭಿಡೆಯಿಂದ-ನಿರ್ಭಯದಿಂದ ತನ್ನ ಅಂತರಂಗದ ಭಾವನೆಗಳಿಗೆ ದನಿಕೊಟ್ಟದ್ದು, ಉಳಿದವರಿಗಿಂತ ಭಿನ್ನವಾಗಿ ಬೆಳೆದದ್ದು ಇಂದಿಗೂ ಪ್ರಮುಖವಾಗುತ್ತದೆ.

“ ಕುರುಹೆಂಬೆನೆ ? ಕಲ್ಲಿನಲ್ಲಿ ಹತ್ತಿದ ಹಾವಸೆ
ಅರಿವೆಂಬೆನೆ ? ಕಾಣಬಾರದ ಬಯಲು
ಒಂದನಹುದು, ಒಂದನಲ್ಲಾ ಎಂದು ಬಿಡಬಾರದು
ಬಿಟ್ಟಡೆ ಸಮಯವಿಲ್ಲ, ಜಿಡ್ಡ ಹಿಡಿದಡೆ ಜ್ಞಾನವಿಲ್ಲ
ಉಭಯಗುಟ್ಟಿನಲ್ಲಿ ಕೊಳೆಯುತಿದ್ದೇನೆಂದ ಅಂಬಿಗ ಚೌಡಯ್ಯ ”

—(ಅಂ. ಚೌ. ವ. ೮೩)

ಈ ಮೇಲಿನ ವಚನದಲ್ಲಿ ದ್ವಂದ್ವಭಾವವನ್ನು ಕಾಣಬಹುದು. ‘ಕುರುಹು’ ಕಲ್ಲಿ ನಲ್ಲಿ ಹತ್ತಿದ ಹಾವಸೆಯಾದರೂ ಪರಂಪರೆಯ ಗಾಢ ಪ್ರಭಾವ ಅದನ್ನು ಬಿಡದಂತೆ ಮಾಡಿದೆ. ಉಭಯಗುಟ್ಟಿನಲ್ಲಿ ಕೊಳೆಯುವ ಚೌಡಯ್ಯನ ಮನಸ್ಥಿತಿ, ಇಡೀ ದುಡಿವ ವರ್ಗದ ಜನರ ಮನಸ್ಥಿತಿಯಾಗುತ್ತದೆ. ಚೌಡಯ್ಯ ಮತ್ತೆ-ಮತ್ತೆ ವಿಚಾರಿಸಿ ಈ ನಿರ್ಧಾರಕ್ಕೆ ಬರುತ್ತಾನೆ.

" ಬೆಲ್ಲಕೆ ಚದುರರಸವಲ್ಲದೆ
ಸಿಹಿಗೆ ಚದುರರಸವುಂಟೆ ?
ಕುರುಹಿಂಗೆ ಪೂಜೆಯಲ್ಲದೆ
ಅರಿವಿಂಗೆ ಪೂಜೆಯುಂಟೆ ?
ಅರಿವು ಕರಿಗೊಂಡಲ್ಲಿ-ಕಯ್ಯ ಕುರುಹು
ಅಲ್ಲಿಯೇ ಲೋಪವೆಂದನಂಬಿಗ ಚೌಡಯ್ಯ. "

—(ಅಂ. ಚೌ. ವ. ೬೯)

ಇಲ್ಲಿ ದ್ವಂದ್ವವನ್ನು ದಾಟಿ ಮುಂದೆ ನಡೆದ ಸ್ಪಷ್ಟತೆಯಿದೆ. 'ಕಯ್ಯಕುರುಹು ಅಲ್ಲಿಯೇ ಲೋಪ' ಎನ್ನುವಲ್ಲಿ ಅರಿವು ಮುಖ್ಯವಾಗಿ ಕುರುಹಾದ ಇಷ್ಟಲಿಂಗ ಗೌಣವಾಗಿ ಬಿಡುತ್ತದೆ. ಮುಂದೆ ಬರುಬರುತ್ತ ಚೌಡಯ್ಯ ದಿಟ್ಟ ನಿಲವು ತಾಳುತ್ತಾನೆ. ತನ್ನನ್ನು ಸುಳ್ಳುಮಾಡಿಕೊಂಡು ಕಾಣದ್ದನ್ನು ಸತ್ಯ ಎನ್ನುವವರನ್ನು ಟೀಕಿಸುತ್ತಾನೆ. ಜೀವದೊಳಗಿನ ಘನವನ್ನು ವಿವರಿಸುವದರ ಮೂಲಕ ಮನುಷ್ಯ-ಮನುಷ್ಯರ ಸಾಧನೆಗೆ ಮಹತ್ವ ಸಿಗುವಂತೆ ಮಾಡುತ್ತಾನೆ. ತನ್ನೊಳಗನ್ನು ಅರಿಯುವದೇ ಪರಬ್ರಹ್ಮವನ್ನು ತಿಳಿದುಕೊಂಡಂತೆ-ಎಂದು ಹೇಳುತ್ತಾ ಪರಬ್ರಹ್ಮ-ಪರಶಿವಗಳ ಅರ್ಥವಿವರಣೆಯ ದಿಕ್ಕನ್ನೇ ಬದಲಾಯಿಸಿಬಿಡುತ್ತಾನೆ. ಆಧ್ಯಾತ್ಮ ಕ್ಷೇತ್ರದಲ್ಲಿ ಮೊದಲ ಬಾರಿಗೆ ಪ್ರವೇಶಿಸಿದ ಅಂಬಿಗ ಚೌಡಯ್ಯನಂತಹ ದುಡಿವ ವರ್ಗದ ವಚನಕಾರರು ಸ್ವತಂತ್ರ ವಿಚಾರದಿಂದ ತಾಳುವ ದಿಟ್ಟ ನಿಲುವುಗಳು ತುಂಬಾ ಸ್ವಾಗತಾರ್ಹವಾದವುಗಳು.

" ತನ್ನ ಮರೆದು ದೇವರ ಕಂಡಿಹೆನೆಂದೆಂಬರು
ತನ್ನ ಮರೆದು ದೇವರ ಕಂಡಿಹೆನೆಂಬ ಕಾರಣ
ಹರಿಹರ ಬ್ರಹ್ಮಾದಿಗಳೆಲ್ಲರೂ ತಲೆಕೆಳಗಾಗಿ ಹೋದರು
ಆ ದೇವರ ಮರೆದು-ತನ್ನವನರಿದರೆ
ತಾನೇ ನಿಜವೆಂದನಂಬಿಗ ಚೌಡಯ್ಯ "

—(ಅಂ. ಚೌ. ವ. ೧೦೬)

ಈ ಹಂತದ ವರೆಗೆ ಚೌಡಯ್ಯ ಬೆಳೆಯುತ್ತಾನೆ. "ತನ್ನನ್ನು ಅರಿ, ಕಾಣದ ದೇವರನ್ನು ಮರಿ"-ಎಂದೆನ್ನುವಲ್ಲಿ ಚೌಡಯ್ಯನ ಸಾರ್ವಕಾಲಿಕ ಸತ್ಯದ ಅನುಭಾವವಿದೆ. ತಾನೇ ನಿಜ- ಕಣ್ಣಿಗೆ ಕಾಣಲಾರದ್ದೆಲ್ಲಾ ಸುಳ್ಳು ಎನ್ನುವಲ್ಲಿ ಬದುಕಿನ ದಟ್ಟ ಸತ್ಯ ಅಡಗಿದೆ. ಕಾಣದ್ದಕ್ಕೆ ಪರಿತಪಿಸಿ ಕಾಲಕಳೆಯುವದಕ್ಕಿಂತ ಕಾಣುವ ತನ್ನನ್ನು, ತನ್ನಂತವರನ್ನು ಪ್ರೀತಿಸುವದು-ಅರ್ಥಮಾಡಿಕೊಳ್ಳುವದು ಹೆಚ್ಚು ಸಮಂಜಸವಾಗಿ ಕಾಣುತ್ತದೆ.

“ ಗುರುವೆಂದೆಂಬೆನೆ ? ಹಲವರ ಮಗ
ಲಿಂಗವೆಂದೆಂಬೆನೆ ? ಕಲುಕುಟಿಗನ ಮಗ
ಪ್ರಸಾದವೆಂದೆಂಬೆನೆ ? ಒಕ್ಕಲಿಗನ ಮಗ
ಪಾದತೀರ್ಥವೆಂದೆಂಬೆನೆ ? ದೇವೇಂದ್ರನ ಮಗ....”

ಎಂದು ವಿಡಂಬಿಸುತ್ತಾ ಇವೆಲ್ಲಾ ನಿರರ್ಥಕವೆಂದು ಸ್ಪಷ್ಟಪಡಿಸುತ್ತಾನೆ. ತನ್ನೊಳಗೆ ತಾನು ನೋಡುವದೇ ಒಳಿತೆಂದು ಹೇಳುತ್ತಾನೆ. ಅಷ್ಟಾವರಣದ ಗೊಂದಲವನ್ನು ವಿವರಿಸಿ ಸ್ವಾವಲಂಬನೆಯತ್ತ, ಸ್ವಂತ ಸಾಧನೆಯತ್ತ ಪ್ರಾಮುಖ್ಯತೆ ಕೊಡುವ ಅಂಬಿಗ ಚೌಡಯ್ಯನಲ್ಲಿ ವಿಚಾರವಾದಿಯೊಬ್ಬನ ಮನಸ್ಸು ಕಾಣುತ್ತದೆ. ಸ್ವತಂತ್ರ ವಿಚಾರದ, ಎಲ್ಲವನ್ನೂ ಪ್ರಶ್ನಿಸಿ ಸ್ವೀಕರಿಸುವ ಮನಸ್ಸು ಎಷ್ಟು ಮಹತ್ವದ್ದೆಂಬುದು ಚೌಡಯ್ಯನ ವಚನಗಳಲ್ಲಿ ಕಾಣುತ್ತದೆ.

“ ಹೂವ ಕೊಯಿದು ಕುಕ್ಕೆ ಹರಿದು
ನೀರ ಹೊಯಿವ ಕುಡಿಕೆಪೊಡೆದು
ನೋಡುವ ಕಣ್ಣ ತಲೆಕಟ್ಟೆ
ಆ ರಜತಾಗಿ ಸ್ವೈವೆರಹಾಗಿ
ಲಿಂಗವನಾರೂ ಕಂಡುದಿಲ್ಲಾಯೆಂದನಂಬಿಗ ಚೌಡಯ್ಯ ”

—(ಅಂ. ಚೌ. ವ. ೧೨೩)

ಈ ವಚನದಲ್ಲಿ ಚೌಡಯ್ಯನ ಕೊನೆಯ ನಿರ್ಧಾರವಿದೆ. ಪ್ರಗತಿಪರ ಬೆಳವಣಿಗೆಯ ಪೂರ್ಣ ಹಂತವಿದೆ. “ಲಿಂಗವನಾರೂ ಕಂಡುದಿಲ್ಲಾ” ಎನ್ನುವ ಮಾತು ಚೌಡಯ್ಯನ ಒಟ್ಟು ವ್ಯಕ್ತಿತ್ವಕ್ಕೆ, ಹೋರಾಟದ ಬದುಕಿಗೆ ಹಿಡಿದ ಕನ್ನಡಿಯಾಗಿದೆ. ಇಂತಹ ಪ್ರಾಮಾಣಿಕ ವಿಚಾರಗಳ ತೀವ್ರವಾದ ಬೆಳವಣಿಗೆ ಉಳಿದ ವಚನಕಾರರಲ್ಲಿ ಕಾಣುವದಿಲ್ಲ.

ಕೆಳವರ್ಗದಿಂದ ಬಂದ ಚೌಡಯ್ಯ ಮೊದ-ಮೊದಲು ವಚನಕಾರರ ವಿಚಾರಗಳನ್ನೇ ಒಪ್ಪಿಕೊಂಡು ಮುನ್ನಡೆದು ನಂತರದ ತನ್ನ ಸಾಧನೆಯ ಹಾದಿಯಲ್ಲಿ, ಹೋರಾಟದ ದಿಕ್ಕಿನಲ್ಲಿ ಹೊಸ ಅಂಶಗಳನ್ನು ಗುರುತಿಸಿಕೊಂಡು, ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವದರ ಮೂಲಕ ಎತ್ತರವಾಗಿ ಬೆಳೆದು ನಿಲ್ಲುತ್ತಾನೆ. ಪ್ರಾರಂಭದಲ್ಲಿ ತಾನು ಹೇಳಿದ ವಿಚಾರಗಳನ್ನೇ ಬದಲಿಸಿಕೊಂಡು ನಿರ್ಭಿಡೆಯಿಂದ ಹೇಳುವ ಚೌಡಯ್ಯನ ಈ ವಿಚಾರಗಳು ಅನುಭವದ ಪಕ್ವತೆಯನ್ನು ಹೇಳುವದರೊಂದಿಗೆ ಪ್ರಾಮಾಣಿಕ ಸಾಧಕನೊಬ್ಬನ ಕಳಕಳಿಯನ್ನು ಪ್ರಕಟಿಸುತ್ತವೆ.

ಬಸವಣ್ಣನನ್ನು ಹೊಗಳಿ-ಹೊಗಳಿ ಹೊನ್ನಶೂಲಕ್ಕೇರಿಸುವ ಜನರ ನಡುವೆ ಚೌಡಯ್ಯ, ಬಸವಣ್ಣನ ಓರೆ-ಕೋರೆಗಳನ್ನು ಪ್ರಶ್ನಿಸುವದರ ಮೂಲಕ ಉಳಿದವರೂ ಬೆಳೆಯುವಂತೆ ಪ್ರಯತ್ನಿಸುತ್ತಾನೆ.

" ನಿಂಬೆಣ್ಣ ಮಾಡುವ ಭಕ್ತಿ ನಾಡೆಲ್ಲ ಮಾಡಬಹುದಯ್ಯಾ
ಕುಂಬಾರ ಗುಂಡಯ್ಯ ಮಾಡುವ ಭಕ್ತಿ ಊರೆಲ್ಲ ಮಾಡಬಹುದಯ್ಯಾ
ಬಸವಣ್ಣ ಮಾಡುವ ಭಕ್ತಿ ಶಿಶುವೆಲ್ಲ ಮಾಡಬಹುದಯ್ಯ
ಇದೇನು ದೊಡ್ಡಿತೆಂಬರು "

ಎಂದು ನುಡಿಯುತ್ತ ಭಕ್ತಿ ಭಂಡಾರಿಯೆಂದು ಪ್ರಸಿದ್ಧಿ ಪಡೆದ ಬಸವಣ್ಣನ ಭಕ್ತಿಯನ್ನೇ ಪ್ರಶ್ನಿಸುವದರ ಮೂಲಕ ಚಳವಳಿಗೆ ಹೊಸದಿಕ್ಕು ಮೂಡಿಸಲು ಪ್ರಯತ್ನಿಸುತ್ತಾನೆ. ಭಕ್ತಿಭಂಡಾರಿ ಬಸವಣ್ಣನ ಭಕ್ತಿಯ ಮುಂದೆ ನಿಂಬೆಣ್ಣ–ಗುಂಡಯ್ಯರ ಭಕ್ತಿಯನ್ನು ಯಾರು ಗಮನಿಸಬೇಕು ? ಎಲೆಮರೆಯ ಹೂವಿನಂತೆ ಕಂಪನೀಯುವ ಈ ದುಡಿವ ವರ್ಗದ ಜನರ ಹೋರಾಟ ಯಾರಿಗೆ ತಿಳಿಯಬೇಕು ? ಇದನ್ನು ಚೌಡಯ್ಯ ತಿಳಿಸಿಕೊಡುತ್ತಾನೆ. ಹರಿತ ನಾಲಿಗೆಯ ಚೌಡಯ್ಯ ಒಮ್ಮೊಮ್ಮೆ ಈ ಹಿರಿಯ ವಚನಕಾರರಿಗೆ ನುಂಗಲಾರದ ತುತ್ತಾಗಿಬಿಡುತ್ತಾನೆ.

"ಶರಣಸತಿ ಲಿಂಗಪತಿ" ಎಂಬುದನ್ನು ಸಾಮಾನ್ಯವಾಗಿ ಎಲ್ಲಾ ವಚನಕಾರರು ಒಪ್ಪಿಕೊಳ್ಳುತ್ತಾರೆ. ತಾವೆಲ್ಲಾ ಸತಿಯಾಗಿ ಲಿಂಗವನ್ನು ಪತಿಮಾಡಿ; ಆ ಪತಿ ಸೇವೆಯಲ್ಲಿಯೇ ಉಳಿದವರು ನಿರತರಾಗಿದ್ದಾಗ ಚೌಡಯ್ಯ ಇವರ ನಿಲುವನ್ನೇ ತಲೆಕೆಳಗೆ ಮಾಡುತ್ತಾನೆ.

" ಶರಣಸತಿ ಲಿಂಗಪತಿ ಎಂಬರು
ಶರಣ ಹೆಣ್ಣಾದ ಪರಿ ಇನ್ನೆಂತು
ಲಿಂಗ ಗಂಡಾದ ಪರಿ ಇನ್ನೆಂತು
ನೀರು ನೀರ ಕೂಡಿ ಬೆರೆದಲ್ಲಿ ಭೇದಿಸಿ ಬೇರೆ ಮಾಡಬಹುದೆ ?
ಗಂಡು ಹೆಣ್ಣು ಯೋಗವಾದಲ್ಲಿ
ಆತುರ ಹಿಂಗೆ ಘಟ ಬೇರಾಯಿತ್ತು
ಶರಣಸತಿ ಲಿಂಗಪತಿ ಎಂಬ ಮಾತು
ಮೊದಲಿಗೆ ಮೋಸ ಲಾಭಕ್ಕಧೀನ
ಉಂಟೇ ಎಂದನಂಬಿಗ ಚೌಡಯ್ಯ "

—(ಅಂ. ಚೌ. ವ. ೧೭೯)

ಗಂಡು–ಹೆಣ್ಣು; ಶರಣ–ಲಿಂಗ ಇವುಗಳಲ್ಲಿ ಸಮಾನತೆಯನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನವನ್ನು ಚೌಡಯ್ಯ ಮಾಡಿದನು. ಶರಣ ಹೆಣ್ಣಾದ ಪರಿ ಹೇಗೆ ? ಎಂದು ಪ್ರಶ್ನಿಸುವ ಆತನ ಈ ಪ್ರಶ್ನೆಗೆ ಯಾರಲ್ಲಿಯೂ ಉತ್ತರವಿಲ್ಲ. ಗಂಡು-ಹೆಣ್ಣು ಕೂಡಿದಾಗ, ನೀರು–ನೀರು ಬೆರೆತಾಗ ಒಂದು ಮೇಲು, ಮತ್ತೊಂದು ಕೀಳು ಎಂಬ ಪ್ರಶ್ನೆಯೇ ಬರುವದಿಲ್ಲ. ಹೀಗಿದ್ದಾಗ ಶರಣಸತಿ–ಲಿಂಗಪತಿಯೆಂಬ ಮಾತು ಮೊದಲಿಗೇ ಮೋಸ ಎನ್ನುವ ಆತನ ಮಾತಿನಲ್ಲಿ ದಟ್ಟಸತ್ಯ ನಿಗಿನಿಗಿಸುತ್ತದೆ.

ಇಂತಹ ಪ್ರಗತಿಪರ ವಿಚಾರದ ಬಂಡಾಯ ಮನೋಭಾವದ ಚೌಡಯ್ಯನ ಬಗೆಗೆ ಇಂದು ವಿಭಿನ್ನ ದೃಷ್ಟಿಕೋನಗಳನ್ನಿಟ್ಟುಕೊಂಡು ಅಧ್ಯಯನ ಮಾಡುವದು ಅವಶ್ಯವಾಗಿದೆ. ಅಂದಿನ ವ್ಯವಸ್ಥೆಯ ವಿರುದ್ಧ ಎಲ್ಲಾ ವಚನಕಾರರು ಬಂಡೆದ್ದರೆ, ಅಂಬಿಗರ ಚೌಡಯ್ಯ ವ್ಯವಸ್ಥೆಯನ್ನು ವಿರೋಧಿಸುತ್ತಲೇ; ಶರಣರ ವ್ಯವಸ್ಥೆಯ ಲೋಪ-ದೋಷಗಳನ್ನೂ ವಿಡಂಬಿಸುತ್ತಾನೆ.

ಪ್ರಾಮಾಣಿಕ-ನಿಷ್ಠಾವಂತ-ಹೋರಾಟಗಾರನೊಬ್ಬ ಚಳವಳಿ ತನ್ನೊಂದಿಗೆ ಬರದಿದ್ದಾಗ ಅದನ್ನು ಹಿಂದೆ ಹಾಕಿ ಮುಂದೆ ಹೋಗುವ ಸಾಮರ್ಥ್ಯ ಹೊಂದಿರುತ್ತಾನೆಂಬುದನ್ನು ಚೌಡಯ್ಯನ ವ್ಯಕ್ತಿತ್ವದಲ್ಲಿ ಕಾಣಬಹುದಾಗಿದೆ.

ಕಣ್ಣಿಗೆ ಕಾಣದ ಹರಿ-ಹರ-ಬ್ರಹ್ಮಾದಿಗಳನ್ನು ಅಲ್ಲಗಳೆದು ಕಣ್ಣೆದುರು ನಡೆದಾಡುವ ಶಿವಶರಣರಿಗೆ-ಮನುಷ್ಯರಿಗೆ ಪ್ರಾಮುಖ್ಯತೆ ಕೊಡುವದು; ದೇವರು-ಧರ್ಮಗಳು ಸುಳ್ಳು ಎಂದು ಗೊಂದಲ ಎಬ್ಬಿಸದೇ, ಸೂಕ್ಷ್ಮವಾಗಿ ಅವುಗಳ ಬೇರುಗಳನ್ನೇ ಕಿತ್ತಿಸೆಯಲು ಪ್ರಯತ್ನಿಸುವದು ; ಧಾರ್ಮಿಕ ಚಳವಳಿಯೊಂದರ ಮುಂಚೂಣಿಯಲ್ಲಿದ್ದುಕೊಂಡೇ ಅದರ ಜಡತ್ವವನ್ನು ಅಲ್ಲಗಳೆಯುವದು—ಇವೆಲ್ಲಾ ಚೌಡಯ್ಯ ತೆಗೆದುಕೊಳ್ಳುವ ದಿಟ್ಟ ನಿಲುವುಗಳು. ಅರಿವಿನ ಸಾಧನೆಗಾಗಿ ಗುರು-ಲಿಂಗ-ಜಂಗಮದ ಕಲ್ಪನೆಯೇ ಹೊರತು; ಗುರು-ಲಿಂಗ-ಜಂಗಮಕ್ಕಾಗಿ ಅರಿವನ್ನು ಮರೆತು ಭಾವುಕರಾಗುವದಲ್ಲ. ಈ ಎಲ್ಲಾ ವಿಚಾರಗಳನ್ನೂ ಚೌಡಯ್ಯ ತನ್ನ ವಚನಗಳಲ್ಲಿ ಪರಿಣಾಮಕಾರಿಯಾಗಿ ಬಿಂಬಿಸಿದ್ದಾನೆ.

ಇಂದಿಗೂ ಕೂಡ ಚೌಡಯ್ಯನ ವಿಚಾರಗಳು ಪ್ರಸ್ತುತವಾಗುವದರಿಂದ; ಸಾರ್ವಕಾಲಿಕ ಸತ್ಯದೊಂದಿಗೆ ಆತನ ವಚನಗಳು ಧ್ವನಿಗುಡುವದರಿಂದ ಚೌಡಯ್ಯ ಇಂದಿನ ಬಂಡಾಯ ಚಳವಳಿಗೆ ಮೂಲ ಪ್ರೇರಣೆಯಾಗುತ್ತಾನೆ.

ಇಲ್ಲಿ ಬಳಸಿಕೊಂಡ ವಚನಗಳನ್ನು ಪ್ರೊ. ಬಿ. ಆರ್. ಹಿರೇಮಠ ಅವರು ಸಂಪಾದಿಸಿದ 'ಅಂಬಿಗ ಚೌಡಯ್ಯನ ವಚನಗಳು' ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಅರಿವಿನ ಜಾಗೃತಿ ಪದ್ಧತಿಯ ಅನ್ವಯ

● ಕಿರಣ್ ಕಮಲಾಪ್ರಸಾದ ಜೆ. ಸ.

ಅಕ್ಷರ ಜ್ಞಾನ ಅರಿವಿನ ಜಾಗೃತಿಯ ಅತ್ಯಗತ್ಯ ಅಂಗವಲ್ಲ. ಆದರೆ ಈಗಿನ ಸಮಾಜದಲ್ಲಿ ಅಕ್ಷರ ಜ್ಞಾನ ಅತ್ಯವಶ್ಯಕ. ಆದ್ದರಿಂದ ಅರಿವಿನ ಜಾಗೃತಿ ತರುವಲ್ಲಿ ಅಕ್ಷರ ಜ್ಞಾನವೂ ಒಂದು ಪ್ರಮುಖ ಸಾಧನ ಎಂಬ ಅರಿವಾಗಿ, ಅನಕ್ಷರಸ್ಥ ವಯಸ್ಕರು ಅಕ್ಷರ ಜ್ಞಾನವನ್ನು ಪಡೆಯುವದರಲ್ಲಿ ತೊಡಗುವರು. ಆದ್ದರಿಂದ ಅಕ್ಷರ ಜ್ಞಾನ ಎಂಬ ಒಂದು ಅಂಶವನ್ನು ಬಿಟ್ಟರೆ ಉಳಿದ ಹಂತಗಳನ್ನು ಯಾವುದೇ ಜನಸಮುದಾಯ ವನ್ನು ಅರಿವಿನ ಜಾಗೃತಿಯ ಹಾದಿಗೆ ತರುವಂತೆ ಪ್ರೇರಕನು ಬಳಸಬಹುದು.

೧. ಸೂತ್ರೀಕರಣ ಮತ್ತು ಸೂತ್ರಮಾಲೆಯ ರಚನೆ :

ಸೂತ್ರೀಕರಣ :

೧) ಅರಿವಿನ ಜಾಗೃತಿ ನಡೆಯಬೇಕಾದ ಸ್ಥಳಗಳಲ್ಲಿ ಪ್ರೇರಕರು ತಿರುಗಾಡಿ, ಅಲ್ಲಿಯ ಜನರ ಸಂಪೂರ್ಣ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಜನರ ಜೀವನಕ್ರಮದ ಅರಿವನ್ನು ಬೇರೆ ಬೇರೆ ರೀತಿಯಲ್ಲಿ ಪಡೆಯಬಹುದು. ತಮ್ಮ ಸ್ವಂತ ವೀಕ್ಷಣೆಯೊಂದಿಗೆ ಜನರ ಮೂಲಕವೂ ಅವರ ಬಗ್ಗೆ ಮಾಹಿತಿ ಪಡೆಯುವಂತೆ ಪ್ರಯತ್ನ ಮಾಡಬೇಕು. ಜನರಿಂದ ಅವರ ವಿಷಯ ತಿಳಿದುಕೊಳ್ಳುವಾಗ ಮುಖ್ಯ ವಾಗಿ ಗಮನದಲ್ಲಿಡಬೇಕಾದ ವಿಷಯವೇನಂದರೆ— ಯಾವುದೇ ವಿಷಯದ ಬಗ್ಗೆ ಜನರಿಂದ ತಿಳಿಯಬೇಕೆಂದಿರುವಾಗ, ಅದರ ಬಗ್ಗೆ ನೇರವಾಗಿ, ಒಂದೇ ಸವನೆ ಪ್ರಶ್ನೆಗಳ ಮಳೆ ಸುರಿಸುವ ಬದಲು ಜನರೊಡನೆ ಆತ್ಮೀಯತೆಯಿಂದ ವರ್ತಿಸಿ, ಅವರ ಬಲವನ್ನು ಮೊದಲು ಸಂಪಾದಿಸಬೇಕು. ಹರಟೆ ಹೊಡೆಯುವವನಂತೆ ಸುಖ ದುಃಖಗಳ ಮಾತು ಗಳನ್ನು ಆಡುತ್ತಾ, ಸಂದರ್ಭ ಒದಗಿದಂತೆ ಅವರ ಜೀವನದ ಬಗ್ಗೆಯೂ ಅವರ ಕೆಲಸದ ಬಗ್ಗೆಯೂ ಮಾಹಿತಿ ಪಡೆಯಬೇಕು. ಆದಷ್ಟು ಮಟ್ಟಿಗೆ ಆ ವಿಷಯಗಳನ್ನು ಸಂಭಾಷಣೆ ಮುಕ್ತಾಯವಾದ ಮೇಲೆಯೇ, ಏಕಾಂತದಲ್ಲಿ ಪುಸ್ತಕದಲ್ಲಿ ಬರೆದಿಡಬೇಕು. ಜನರ ಒಲವನ್ನು ಸಂಪೂರ್ಣವಾಗಿ ಗಳಿಸಿದ್ದರೆ, ಅವರು ಮಾತನಾಡುತ್ತಿದ್ದಾಗಲೇ ಗಮನಕ್ಕೆ ಬಂದ ಹೊಸ ಅಥವಾ ವಿಶಿಷ್ಟ ಸಂಗತಿಗಳನ್ನು ಪುಸ್ತಕದಲ್ಲಿ ಬರೆಯಬಹುದು. ಹೀಗೆ ಸಂಭಾಷಣೆಯಲ್ಲಿ ತೊಡಗಿರುವಾಗ ಮುಖ್ಯವಾಗಿ ಜನರ ಭಾಷೆ, ಅವರು ಉಪ ಯೋಗಿಸುವ ವಿಶಿಷ್ಟ ಪದಗಳು, ಬಳಸುವ ನುಡಿಗಟ್ಟುಗಳು, ಗಾದೆಗಳು ಅವರ ಮಾತಿ ನಲ್ಲಿ ಕಂಡು ಬರುವ ಅವರ ಜೀವನಕ್ರಮ, ಜೀವನ ಮೌಲ್ಯಗಳು, ರೀತಿ ಪದ್ಧತಿಗಳು,

ಕೆಲಸದ ವಿಧಾನಗಳು— ಇವೆಲ್ಲವನ್ನೂ ಗುರುತಿಸಿ ಸಂದರ್ಭೋಚಿತವಾಗಿ ಬರೆದಿಡಬೇಕು. ಹೀಗೆ ಬೇರೆ ಬೇರೆ ಜನರನ್ನು ಬೇರೆ ಬೇರೆ ವೇಳೆಗಳಲ್ಲೂ ಪ್ರಸಂಗಗಳಲ್ಲೂ ಭೇಟಿ ಮಾಡಿ, ಅವರ ಜೀವನದ ನಿಜ ಪರಿಸ್ಥಿತಿಯ ಸಮಗ್ರ ಪರಿಚಯವನ್ನು ಪಡೆಯುವಂತೆ ಪ್ರಯತ್ನಿಸಬೇಕು. ಈ ರೀತಿ ಜೀವನಕ್ರಮ, ಅವರ ಕೆಲಸಗಳು, ಅವರ ಸಮಸ್ಯೆಗಳು, ಅವರಾಡುವ ಭಾಷೆ, ಅವರ ಮೌಲ್ಯಗಳು, ಅವರ ರೀತಿ ಪದ್ಧತಿಗಳು ಇವೆಲ್ಲವುಗಳ ಬಗ್ಗೆ ಒಳಗಿನ ಜ್ಞಾನ ಪಡೆಯಬೇಕು.

೨) ಒಂದೇ ಪ್ರದೇಶದ ಬೇರೆ ಬೇರೆ ಊರುಗಳಲ್ಲಿ ಪ್ರೇರಕರು ತಿರುಗಾಡಿ, ಜನರ ನಿಜಪರಿಸ್ಥಿತಿಯ ಪರಿಚಯ ಪಡೆದ ಮೇಲೆ, ಎಲ್ಲರೂ ಒಂದು ಕಡೆ ಸೇರಿ ಎಲ್ಲರಿಗೂ ಗೋಚರವಾಗಿದ್ದ ವಿಷಯಗಳನ್ನು ಸಂಗ್ರಹಿಸಬೇಕು.

೩) ಗೋಚರವಾಗಿದ್ದ ವಿಷಯಗಳನ್ನು ಒಟ್ಟುಗೂಡಿಸಿದ ಮೇಲೆ, ಅವುಗಳ ಚರ್ಚೆ ನಡೆಸಿ ಅವುಗಳಲ್ಲಿ ಮುಖ್ಯ ವಿಷಯಗಳನ್ನು ಆರಿಸಬೇಕು. ಆ ಸಂಗತಿಗಳು ಜನರ ಜೀವನದ ಕೆಲವು ಉದಾತ್ತ ಮೌಲ್ಯಗಳನ್ನೂ ಮುಖ್ಯ ಸಮಸ್ಯೆಗಳನ್ನೂ ಸಮಾಜದ ಹಲ ಕೆಲವು ಅಂತರ್ವಿರೋಧಗಳನ್ನೂ ಒಳಗೊಂಡಿರುವಂತಿದ್ದು, ಜನರ ಸಮಗ್ರ ಚಿತ್ರವನ್ನು ಕೊಡುವಂತಿರಬೇಕು.

೪) ಆ ಪ್ರತ್ಯೇಕ ವಿಷಯಗಳಿಗೆ ಯೋಗ್ಯವಾದ ಶಬ್ದಗಳನ್ನು ಆರಿಸಬೇಕು. ಆದಷ್ಟುಮಟ್ಟಿಗೆ ಜನರು ಬಳಸುವ ಪದಗಳನ್ನೇ ಆರಿಸಬೇಕು. ಒಂದು ಸಂಗತಿಯನ್ನು ನಿರೂಪಿಸಲು ಹಲವಾರು ಶಬ್ದಗಳು ಬಳಕೆಯಲ್ಲಿದ್ದರೆ, ಅವೆಲ್ಲವನ್ನು ಗುರುತಿಸಿಟ್ಟು, ನಂತರ ಸೂತ್ರಮಾಲೆಯನ್ನು ರಚಿಸುವಾಗ ಯೋಗ್ಯವಾದ ಪದವನ್ನೇ ಆರಿಸಬಹುದು.

೫) ಪ್ರತಿ ವಿಷಯವನ್ನು ವಿವರವಾಗಿ ಸಮಾಲೋಚಿಸಿ, ಆ ವಿಷಯದ ಎಲ್ಲಾ ಮುಖಗಳ ಸ್ಪಷ್ಟಜ್ಞಾನ ಪಡೆಯಬೇಕು. ಈ ಹಂತದಲ್ಲಿ ಇಂತಹ ವಿಷಯಗಳ ಬಗ್ಗೆ ಹೆಚ್ಚು ಜಿಜ್ಞಾಸೆ ಮಾಡಿದವರ ಸಹಾಯ ಪಡೆಯುವುದು ಉತ್ತಮ. ಪ್ರತಿ ಹಳ್ಳಿಗೂ ತನ್ನದೇ ಆದ ಸ್ವರೂಪ ಇದ್ದರೂ, ಒಂದು ಪ್ರದೇಶಕ್ಕೆ ಸೀಮಿತವಾದ ಹಳ್ಳಿಗಳಲ್ಲಿ ಕೆಲವು ವಿಷಯಗಳು ಸಾಮಾನ್ಯವಾಗಿರುತ್ತವೆ. ಒಂದು ಜಿಲ್ಲೆ ಅಥವಾ ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳೂ ಇರುತ್ತವೆ. ಅದೇ ರೀತಿ ಇಡೀ ಭಾರತ ದೇಶ ಹಾಗೂ ಭಾರತ ಮತ್ತು ಇತರ ದೇಶಗಳಿಗೂ ಅನ್ವಯಿಸುವಂತಹ ವಿಷಯಗಳಿರುತ್ತವೆ. ಆದ್ದರಿಂದ ಆ ವಿಷಯಗಳ ಮೇಲೆ ಆಳವಾದ ಅಧ್ಯಯನ ಮಾಡಿದವರ ನೆರವು ಪಡೆದರೆ ನಮ್ಮ ಅರಿವಿನ ಜಾಗೃತಿ ವಸ್ತುನಿಷ್ಠವಾಗುವುದರಲ್ಲಿ ಸಂಶಯವಿಲ್ಲ.

೬) ಆರಿಸಿದ ಪ್ರತಿ ವಿಷಯದ ಬಗ್ಗೆ ಇನ್ನೂ ಸ್ಪಷ್ಟಜ್ಞಾನ ಬರಲು ಆ ವಿಷಯಗಳ ಬಗ್ಗೆ ಪ್ರೇರಕರ ಹಾಗೂ ಏನಾದರೂ ಅನುಭವಗಳಿದ್ದರೆ ಅಂತಹ ಸಂಗತಿಗಳನ್ನೂ ಘಟನೆಗಳನ್ನೂ ಸಂಗ್ರಹಿಸಬೇಕು.

೭) ಹೀಗೆ ಪ್ರತಿ ವಿಷಯದ ಮೇಲೆ ಸ್ಪಷ್ಟ ಜ್ಞಾನ ಮೂಡಿದ ಮೇಲೆ, ಪ್ರತಿ ವಿಷಯವನ್ನು ನಿರೂಪಿಸುವ ಒಂದು ಸಾಧನದ ರಚನೆಯಾಗಬೇಕು. ಒಂದು ವಿಷಯವನ್ನು ನಿರೂಪಿಸುವ ಸಾಧನಕ್ಕೆ ಸೂತ್ರವೆಂದು ಕರೆದರೆ, ಸೂತ್ರ ನಿರ್ಮಿಸುವ ಕಾರ್ಯವೇ ಸೂತ್ರೀಕರಣವೆನಿಸುವುದು. ಸೂತ್ರವು ದೃಶ್ಯರೂಪದ್ದು ಅಥವಾ ಶ್ರಾವ್ಯ ರೂಪದ್ದೂ ಆಗಿರಬಹುದು. ಅವುಗಳಲ್ಲಿಯೂ ಹಲವಾರು ವಿಧಗಳಿರಬಹುದು. ದೃಶ್ಯ ಸೂತ್ರವು ವಿಷಯವನ್ನು ಅಥವಾ ಸಮಸ್ಯೆಯನ್ನು ಎತ್ತಿ ತೋರಿಸುವ ಚಿತ್ರವಿರಬಹುದು. ಅದು ಸುಲಭ ರೀತಿಯ ರೇಖಾ ಚಿತ್ರವಾಗಿರಬಹುದು ಅಥವಾ ವರ್ಣಚಿತ್ರವಾಗಿರಲೂ ಬಹುದು. ಸ್ಥಿರಚಿತ್ರ ಹಾಗೂ ಕಿರು ಚಲನಚಿತ್ರಗಳನ್ನು ಬಳಸಬಹುದು. ಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿ ಅಂತಹ ವಿಷಯವನ್ನು ತೋರಿಸುವ ಚಿತ್ರವಿದ್ದರೆ, ಅದನ್ನೇ ಉಪಯೋಗಿಸಬಹುದು. ಬೀದಿ ನಾಟಕದ ಮೂಲಕವೂ ಒಂದು ಸನ್ನಿವೇಶವನ್ನು ತೋರಿಸಬಹುದು. ಶ್ರಾವ್ಯ ಮಾಧ್ಯಮದಲ್ಲಿ ಒಂದು ಸೂಕ್ತ ಕಥೆಯೋ ಅಥವಾ ಒಂದು ಹಾಡೋ ಸೂತ್ರವಾಗಬಹುದು. ವಾರ್ತಾಪತ್ರಿಕೆಗಳಲ್ಲಿ ಬಂದ ಸಂಗತಿಗಳ ಪಠಣ ಅಥವಾ ಬೇರೆ ಪ್ರಬಂಧಗಳ ಓದುವಿಕೆ ಕೂಡ ಸೂತ್ರವೆನಿಸಬಹುದು. ದೃಶ್ಯ ಮತ್ತು ಶ್ರಾವ್ಯ ಮಾಧ್ಯಮಗಳನ್ನು ಕೂಡಿಸಿ ಕಿರುನಾಟಕದಲ್ಲಿ ಸಮಸ್ಯೆಯನ್ನು ತೋರಿಸುವ ಸನ್ನಿವೇಶವೊಂದನ್ನು ಸಂಭಾಷಣೆಯ ಹಾಗೂ ನಟನೆಯ ಮೂಲಕ ಸ್ಪಷ್ಟಪಡಿಸಬಹುದು.

ಚಿತ್ರರೂಪದ ಸೂತ್ರದಲ್ಲಿ ಆ ವಿಷಯವನ್ನು ನಿರೂಪಿಸುವ ಶಬ್ದ (ಜನಕಶಬ್ದ) ಒಂದು ಕಡೆ ನಮೂದಿಸಿರಬೇಕು. ಶ್ರಾವ್ಯ ರೂಪದ ಸೂತ್ರದಲ್ಲಿಯೂ ಸಂಬಂಧಪಟ್ಟ ಪದದ ಬಳಕೆಯಾಗಬೇಕು.

ಸೂತ್ರಮಾಲೆ :

ಹೀಗೆ ತಯಾರಾದ ಸೂತ್ರಗಳನ್ನು ಒಂದು ಕ್ರಮದಲ್ಲಿ ಅಳವಡಿಸಿದರೆ ಸೂತ್ರಮಾಲೆ ಎನಿಸುವುದು. ಬೇರೆ ಬೇರೆ ಸೂತ್ರಗಳನ್ನು ಯಾವ ಕ್ರಮದಲ್ಲಿ ಅಳವಡಿಸಬೇಕು ಎಂಬುದರಲ್ಲಿ ಕೆಲವು ನಿಯಮಗಳನ್ನು ಪಾಲಿಸಬೇಕಾಗಬಹುದು. ಆ ನಿಯಮಗಳು ಆಯಾ ಭಾಷೆಯ ಔಚಿತ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ರೂಪಿಸಿದಂತಹವಾಗಿವೆ.

೧) ಕನ್ನಡದ ಬಗ್ಗೆ ಹೇಳುವುದಾದರೆ ಸಮಸ್ಯೆಯನ್ನು ಸೂಚಿಸುವ ಸೂತ್ರಮಾಲೆಯ ಶಬ್ದಗಳಲ್ಲಿ ಅಲ್ಪ ಪ್ರಾಣಗಳು, ಅವರ್ಗೀಯ ವ್ಯಂಜನಗಳು,ಕೆಲವು ಮಹಾಪ್ರಾಣಗಳೂ, ಒತ್ತಕ್ಷರಗಳೂ ಮತ್ತು ರ ಕಾರದ ಅರ್ಕ ಚಿಹ್ನೆಯೂ ಬರುವಂತಿರಬೇಕು. ಸ್ವರಗಳನ್ನು ಮತ್ತು ಉಳಿದ ಮಹಾ ಪ್ರಾಣಗಳನ್ನು ಹಾಗೂ ಒತ್ತಕ್ಷರಗಳನ್ನು ಅನಕ್ಷರಸ್ಥ ವಯಸ್ಕರಿಂದಲೇ ಪ್ರಶ್ನೆಗಳ ಮೂಲಕ ಪ್ರಕಟಿಸಲು ಪ್ರಯತ್ನಿಸಲಾಗುವುದು.

೨) ಮೊದಲ ಸೂತ್ರದಲ್ಲಿ ಬರುವ ಶಬ್ದ ಚಿಕ್ಕದಾಗಿದ್ದು—ಹೆಚ್ಚೆಂದರೆ ಮೂರು ಅಕ್ಷರಗಳಿಂದ ಕೂಡಿದ್ದು— ಅದರಲ್ಲಿಯ ,ಅಕ್ಷರಗಳು ವ್ಯಂಜನಗಳಾಗಿರಬೇಕು. ಸಾಧ್ಯವಾದಷ್ಟು ಮಟ್ಟಿಗೆ ಅಲ್ಪಪ್ರಾಣಗಳು ಇಲ್ಲವೇ ಅವರ್ಗೀಯ ವ್ಯಂಜನಗಳು ಬಂದರೆ ಉತ್ತಮ. ನಂತರದ ಸೂತ್ರಗಳಲ್ಲಿಯ ಶಬ್ದಗಳಲ್ಲಿ ಮಹಾಪ್ರಾಣಗಳೂ ಬೇರೆ ಸ್ವರಾಂತ ಅಕ್ಷರಗಳೂ ಬರಬಹುದು.

೩) ಇಂತಹ ಒಂಬತ್ತು ಹತ್ತು ಜನಕ ಶಬ್ದಗಳು ಬಂದ ಮೇಲೆಯೇ ಒತ್ತಕ್ಷರದ ವಿವೇಚನೆ ಬರಬೇಕು. ಮೊದಲು ಹೆಚ್ಚಿಗೆ ಬದಲಾವಣೆಯಾಗದ ಒತ್ತಕ್ಷರದ ಪರಿಚಯ ವಾಗಬೇಕು. ಆದ್ದರಿಂದ ೯ ನೇ ಅಥವಾ ೧೦ ನೇ ಸೂತ್ರದಲ್ಲಿ ಅಂತಹ ಒತ್ತಕ್ಷರವಿರುವ ಶಬ್ದ ಬರಬೇಕು. ಆ ಸೂತ್ರದ ವಿವೇಚನೆ ಆಗುವ ಮೊದಲು, ಇಷ್ಟರವರೆಗೆ ವಿವೇಚಿಸಿದ ಸೂತ್ರವೊಂದರಲ್ಲಿ ಆ ಒತ್ತಕ್ಷರದ ಮೂಲಾಕ್ಷರ ಬರುವುದು ಉಚಿತ.

೪) ನಂತರದ ಒಂದು ಜನಕ ಶಬ್ದದಲ್ಲಿ ಮೂಲಾಕ್ಷರದಿಂದ ಹೆಚ್ಚು ಮಾರ್ಪಾಡಾಗುವ ಒತ್ತಕ್ಷರ ಬರಬೇಕು. ಇದರ ಮೂಲಾಕ್ಷರವೂ ಮೊದಲಿನ ಸೂತ್ರವೊಂದರಲ್ಲಿ ಬರಬೇಕು. ಆ ಒಂದು ಒತ್ತಕ್ಷರದ ಉದಾಹರಣೆಯಿಂದ ಉಳಿದ ಇದೇ ಮಾದರಿಯ ಒತ್ತಕ್ಷರಗಳನ್ನು ಪ್ರಕಟಿಸಬಹುದು. ಆದ್ದರಿಂದ ಆ ಸೂತ್ರದ ಮೊದಲೇ ಆ ಎಲ್ಲಾ ಒತ್ತಕ್ಷರಗಳ ಮೂಲಾಕ್ಷರಗಳು ಬಂದು ಅವುಗಳ ಪರಿಚಯವಾಗಿದ್ದರೆ ಬಹಳ ಉತ್ತಮ. ಹೀಗೆ ಒತ್ತಕ್ಷರಗಳ ಕಲ್ಪನೆ ಸ್ಪಷ್ಟ ಆದ ಮೇಲೆ ಇಷ್ಟರವರಗೆ ಕಲಿತ ಎಲ್ಲಾ ವ್ಯಂಜನಗಳ ಒತ್ತಕ್ಷರಗಳನ್ನು ವಯಸ್ಕರಿಂದಲೇ ರೂಪಿಸಿಕೊಳ್ಳಬಹುದು ಮತ್ತು ಮುಂದೆ ಹೋಗುತ್ತಿದ್ದಂತೆ ಹೊಸದಾಗಿ ಕಲಿತ ವ್ಯಂಜನಗಳ ಒತ್ತಾಕ್ಷರಗಳನ್ನು ಗುರುತಿಸಬಹುದು. ಮೂಲಾಕ್ಷರದಿಂದ ಬದಲಾವಣೆಯಾಗದ ಒತ್ತಕ್ಷರಗಳ ವಿಚಾರವನ್ನು ಇನ್ನೊಂದು ಉದಾಹರಣೆಯಿಂದ ಪ್ರಕಟಿಸಬಹುದು. ಷ ಕಾರದ ಒತ್ತಕ್ಷರ ಮತ್ತು ವ ಕಾರದ ಒತ್ತಕ್ಷರಗಳನ್ನು ಸಂದರ್ಭ ಬಂದಾಗ ನೋಡಿಕೊಳ್ಳಬಹುದು.

೫) ಇದೇ ಕ್ರಮವನ್ನನುಸರಿಸಿ ಅಲ್ಪಪ್ರಾಣದಿಂದ ಮಹಾಪ್ರಾಣಗಳನ್ನು ರೂಪಿಸಿಕೊಳ್ಳಬಹುದು. ಮೊದಲು ಅಲ್ಪಪ್ರಾಣದಿಂದ ಕೇವಲ ಬಾಲವನ್ನು ಕೂಡಿಸಿ ಆಗುವ ಮಹಾಪ್ರಾಣಗಳನ್ನು ಎರಡು ಸೂತ್ರಗಳಲ್ಲಿ ಬರುವ ಶಬ್ದಗಳಲ್ಲಿಯ ಅಲ್ಪಪ್ರಾಣ ಮತ್ತು ಮಹಾಪ್ರಾಣದ ಹೋಲಿಕೆಯಿಂದ ತಿಳಿದುಕೊಳ್ಳಬಹುದು. ಅಲ್ಪಪ್ರಾಣಕ್ಕಿಂತ ವಿಶಿಷ್ಟವಾದ ರೂಪವುಳ್ಳ ಮಹಾಪ್ರಾಣಗಳನ್ನು ಇದೇ ಉದಾಹರಣೆಯಿಂದ ತಿಳಿದುಕೊಳ್ಳಬಹುದು.

೬) ಸೂತ್ರಮಾಲೆಯ ಕೊನೆಗೆ ರ ಕಾರದ ಅರ್ಕ ಚಿಹ್ನೆಯ ವಿವೇಚನೆ ನಡೆಯಬಹುದು. ಇದರ ಜ್ಞಾನವನ್ನು ಪ್ರಶ್ನೆಗಳ ಮುಖಾಂತರ ಹೊರಗೆ ತರಲು ಅರ್ಕ ಚಿಹ್ನೆಯಿಂದ ಕೂಡಿರುವ ಶಬ್ದವನ್ನು ಅದರ ಎರಡು ರೂಪದಲ್ಲಿ ಬರೆದು ತೋರಿಸಿ, ಅವುಗಳ ಹೋಲಿಕೆಯಿಂದ ಅರ್ಕ ಚಿಹ್ನೆಯ ಜ್ಞಾನವನ್ನು ವಯಸ್ಕರಿಂದಲೇ ಪ್ರಕಟಿಸ

ಬಹುದು. ಮೊದಲ ರೂಪದಲ್ಲಿ ರ ಅಕ್ಷರವನ್ನೇ ಮೂಲಾಕ್ಷರವನ್ನಾಗಿ ಬಳಸಿರಬೇಕು ಮತ್ತು ಅದರ ಜೊತೆಗೆ ಬರುವ ಅಕ್ಷರವು ಒತ್ತಾಕ್ಷರವಾಗಿರಬೇಕು. ಎರಡನೇ ರೂಪದಲ್ಲಿ, ಮೊದಲ ರೂಪದಲ್ಲಿ ಒತ್ತಾಕ್ಷರವಾಗಿ ಬಂದ ಅಕ್ಷರ ಮೂಲಾಕ್ಷರವಾಗಿ ಒಂದು ರ ಅಕ್ಷರವು ಅರ್ಕ ಚಿಹ್ನೆಯಲ್ಲಿ ಬರಬೇಕು.

೨. ಸೂತ್ರ ವಿವರಣೆ :

ಸೂತ್ರೀಕರಣ ಮತ್ತು ಸೂತ್ರಮಾಲೆಯ ರಚನೆಯಾದ ಮೇಲೆ ಪ್ರೇರಕನು ತನ್ನ ಹಳ್ಳಿಯ ವಯಸ್ಕರ ಕೂಟ ಕಟ್ಟಿ ಕ್ರಮಪ್ರಕಾರವಾಗಿ ಒಂದೊಂದೇ ಸೂತ್ರದ ಮೂಲಕ ಸಂವಾದ ನಡೆಸುವ ವಿಧಾನಕ್ಕೆ ಸೂತ್ರ ವಿವರಣೆ ಎಂದು ಕರೆಯಬಹುದು.

ಸೂತ್ರವು ಕಲಿಯುವ ವಸ್ತುವಾಗಿದ್ದು (Knowable Object) ತಮ್ಮ ಕಲಿಯುವ ಕಾರ್ಯ (Act of Knowing) ದಲ್ಲಿ ಕಲಿಯುವವರ (Knowing subjects)— ಪ್ರೇರಕ ಮತ್ತು ಅನಕ್ಷರಸ್ಥ ವಯಸ್ಕರ— ಮಧ್ಯೆ ಸಂಬಂಧ ವನ್ನೇರ್ಪಡಿಸುತ್ತದೆ.

ಸೂತ್ರದ ವಾಸ್ತವಿಕ ಆಧಾರ (Real or concrete context) ವಯಸ್ಕರ ಜೀವನದ ವಸ್ತುನಿಷ್ಠವಾಗಿರುವ ಯಾವುದೋ ಒಂದು ಸಂಗತಿಯಾಗಿರುತ್ತದೆ. ವಯಸ್ಕರ ಚರ್ಚಾಕೂಟವು ಅದರ ಸೈದ್ಧಾಂತಿಕ ಆಧಾರ (Theoretical context)ವೆನಿಸುವುದು. ಚರ್ಚಾಕೂಟದಲ್ಲಿ ವಯಸ್ಕರು ಸೂತ್ರವು ತೋರಿಸುವ ತಮ್ಮ ಜೀವನದ ಒಂದು ಅಂಶದ ವಾಸ್ತವ ಚಿತ್ರಣದ ಮುಖಾಂತರ ಆ ಸಂಗತಿಯ ಕಾರಣ (reason)ದ ಬಗ್ಗೆ ಚರ್ಚೆಯಲ್ಲಿ ತೊಡಗುವರು. ಸಂವಾದದ ಮೂಲಕ ನಡೆಯುವ ಕಲಿಯುವ ಕಾರ್ಯವು ಗೂಢವಾಗಿದ್ದಂತೆ, ಒಂದು ವಿಷಯವನ್ನು ಆವರಿಸಿದ್ದ ಮಿಥ್ಯಾ ಲೋಚನೆಗಳನ್ನು ಭೇದಿಸಿ ಹೆಚ್ಚು ಹೆಚ್ಚಾಗಿ ಅದರ ನಿಜಸ್ವರೂಪವನ್ನು ಅವರು ಬೆಳಕಿಗೆ ತರುವರು. ಈ ರೀತಿಯ ಜ್ಞಾನಕಾರ್ಯ (Cognitive operation)ದಿಂದ ಕಲಿಯುವವರು ತಮ್ಮ ಅಸ್ತಿತ್ವದ ಬಗೆಗಿರುವ ಅಭಿಪ್ರಾಯಗಳನ್ನು ವಿವೇಚನಾತ್ಮಕ ಜ್ಞಾನವನ್ನಾಗಿ ಪರಿವರ್ತಿಸಲು ಶಕ್ಯರಾಗುವರು.

ಹೀಗೆ ತಾತ್ವಿಕ ಆಧಾರ (ಚರ್ಚಾಕೂಟ)ವು ವಾಸ್ತವ ಸಂಗತಿಗಳನ್ನು ವಿಮರ್ಶಾತ್ಮಕ ವಿಶ್ಲೇಷಣೆ (Critical Analysis)ಗೆ ಒಳಗಾಗಿಸುವ ಒಂದು ವಿಶಿಷ್ಟ ಸಂದರ್ಭ ಆಗಿದೆ. ಒಂದು ವಿಷಯವನ್ನು ಚಿತ್ರಿಸುವ ಸೂತ್ರವು ಕಲಿಯಬೇಕಾದ ವಸ್ತು (Knowable object); ಸೂತ್ರವಿವರಣೆ-ಅಂದರೆ ಸೂತ್ರದಲ್ಲಿ ಬಂದ ಇಡೀ ವಿಷಯವನ್ನು ವಿಭಜಿಸಿ, ವಿಶ್ಲೇಷಿಸಿ ಅದರ ನಿಜರೂಪವನ್ನು ಕಂಡು ಹಿಡಿದು, ಪುನಃ ಅದನ್ನು ಒಂದಾಗಿಸುವ ಕೆಲಸ—ಎಂಬುದು ಕಲಿಯುವವರು (Knowing subjects) ಕಲಿಯಲು ಪ್ರಯೋಗಿಸುವ ಕಾರ್ಯ ವಿಧಾನ (Process) ವಾಗಿದೆ. ಈ ಕಾರ್ಯ ವಿಧಾನದಲ್ಲಿ ಸಂವಾದ ಅತ್ಯವಶ್ಯಕ.

ಸೂತ್ರ ವಿವರಣೆಯಲ್ಲೂ ಗಮನಿಸಬೇಕಾದ ಕೆಲವು ಹಂತಗಳಿವೆ. ಕಲಿಯುವವರು ಸಂವಾದದ ಮೂಲಕ ಸೂತ್ರೀಕರಿಸಿದ ವಸ್ತುವನ್ನು ವಿಶ್ಲೇಷಿಸಿ, ವಿಭಜಿಸಲಿಕ್ಕೆ ತೊಡಗುವರು. ಈ ಕಾರ್ಯದಿಂದ ವಸ್ತುವಿನ ಬೇರೆ ಬೇರೆ ಭಾಗಗಳಿಗಿರುವ ಸಂಬಂಧದ ಸ್ಪಷ್ಟ ಕಲ್ಪನೆಯಾಗಿ, ಇಡೀ ವಸ್ತುವಿನ ನಿಜಸ್ವರೂಪವನ್ನು ಬೆಳಕಿಗೆ ತರುವರು. ಇಷ್ಟರವರೆಗೆ ಆ ನಿಜಸ್ವರೂಪವು ಅವರಿಂದ ಮರೆಯಾಗಿತ್ತು. ಕೆಳಗೆ ಬರುವ ವಿವೇಚನೆಯಲ್ಲಿ ಸೂತ್ರ ಚಿತ್ರವೆಂದೇ ಪರಿಗಣಿಸಲಾಗಿದೆ. ಚಿತ್ರದ ಬಗ್ಗೆ ಹೇಳಿದ ವಿಷಯಗಳನ್ನು ಬೇರೆ ಮಾಧ್ಯಮದ ಸೂತ್ರಗಳಿಗೂ ತಕ್ಕಂತೆ ಅಳವಡಿಸಬಹುದು.

೧) ಪ್ರೇರಕನು ವಯಸ್ಕರಿಗೆ ಸೂತ್ರದ ಚಿತ್ರವನ್ನು ತೋರಿಸಿ, ಅವರಿಂದ ಆ ಚಿತ್ರದ ವಿವರಣೆ ಪಡೆಯಬಹುದು ಚಿತ್ರದಲ್ಲಿ ಒಂದು ಸಮಸ್ಯೆ ಅಥವಾ ವಿಷಯವನ್ನು ಎತ್ತಿ ತೋರಿಸಲು ಬೇಕಾದ ಸಂಗತಿಗಳೇ ಇರುತ್ತವೆ. ಆದ್ದರಿಂದ ಆ ಚಿತ್ರದ ಪ್ರತಿಯೊಂದು ಸಂಗತಿಯನ್ನು ಗಮನಿಸಿ ಪ್ರೇರಕನು ಅದು ಯಾವುದನ್ನು ಸೂಚಿಸುತ್ತದೆ ಎಂಬುದನ್ನು ವಯಸ್ಕರು ಕಂಡು ಹಿಡಿಯುವಂತೆ ಮಾಡಬೇಕು. ಚಿತ್ರದಲ್ಲಿ ಸೂತ್ರದ ಶಬ್ದವೂ ಇರುವುದು. ಅದನ್ನು ವಯಸ್ಕರು ಗಮನಿಸಿದರೂ ಅದು ಏನು ಎಂದು ಅವರಿಗೆ ಆ ಸಮಯಕ್ಕೆ ಗುರುತಿಸಲು ಆಗುವುದಿಲ್ಲ.

೨) ಚಿತ್ರದ ಪೂರ್ಣ ವಿವರಣೆ ಪಡೆದ ಮೇಲೆ ಆ ಚಿತ್ರ ಯಾವ ವಿಷಯ ಅಥವಾ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ ಎಂಬುದನ್ನು ವಯಸ್ಕರು ಕಂಡುಹಿಡಿಯುವಂತೆ ಮಾಡಬೇಕು. ಅಷ್ಟೇ ಅಲ್ಲ ಆ ಸಮಸ್ಯೆಯ ಬಗ್ಗೆ ವಸ್ತುನಿಷ್ಠವಾಗಿಯೂ, ಆಳವಾಗಿಯೂ ಚರ್ಚೆ ಮಾಡುವಂತೆ ಪ್ರೇರಕನು ನೋಡಿಕೊಳ್ಳಬೇಕು.

೩) ಚಿತ್ರವು ಸೂಚಿಸುವ ಸಮಸ್ಯೆಯ ಬಗ್ಗೆ ವಸ್ತುನಿಷ್ಠ ಚರ್ಚೆ ಮಾತ್ರ ಸಾಲದು. ಅರಿವಿನ ಜಾಗೃತಿ ಆಗಬೇಕಾದರೆ ಇಷ್ಟರವರೆಗೆ ವಿಶ್ಲೇಷಿಸಿದ ಸಮಸ್ಯೆ ಅಥವಾ ವಿಷಯ ನಮ್ಮ ಊರಿನ ಸಮಸ್ಯೆಯನ್ನೇ ಪ್ರತಿಬಿಂಬಿಸುತ್ತದೆ ಎಂಬ ಜ್ಞಾನ ಕೂಡಾ ವಯಸ್ಕರಲ್ಲಿ ಮೂಡಬೇಕು. ಇಲ್ಲಿ ವಯಸ್ಕರು ಆ ಸಮಸ್ಯೆ ಅಥವಾ ವಿಷಯದ ಬಗ್ಗೆ ತಮ್ಮ ಊರಿನ ನಿದರ್ಶನಗಳನ್ನು ಕೊಟ್ಟು ಚರ್ಚೆಯನ್ನು ಮುಂದುವರಿಸಬಹುದು.

೪) ಸಮಸ್ಯೆಯ ವಸ್ತುನಿಷ್ಠ ವಿಚಾರವಾಗಿ ಆ ಸಮಸ್ಯೆ ತಮ್ಮದೇ ಎಂಬ ಅರಿವು ಮೂಡಿದ ಮೇಲೆ ಆ ಸಮಸ್ಯೆಯನ್ನು ಬಗೆಹರಿಸಲು ಏನು ಮಾಡಬೇಕು ಎಂಬುದರ ಬಗ್ಗೆ ವಯಸ್ಕರು ಆಲೋಚಿಸುವರು. ಸಂವಾದದ ಮೂಲಕ ಬೇರೆ ಬೇರೆ ಪರಿಹಾರ ಮಾರ್ಗಗಳನ್ನು ವಿಶ್ಲೇಷಿಸಿ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡು ಹಿಡಿಯುವರು.

೫) ಸಮಸ್ಯೆಯ ಪರಿಹಾರದ ಬಗ್ಗೆ ಸಮಾಲೋಚನೆ ನಡೆದ ಮೇಲೆ ಪರಿಹಾರ ಮಾರ್ಗವನ್ನು ಕಾರ್ಯರೂಪಕ್ಕೆ ತರುವ ಯೋಜನೆಯನ್ನು ಹಾಕಬೇಕಾಗುವುದು. ಈ ಸಂದರ್ಭದಲ್ಲಿ ಪರಿಹಾರ ಮಾರ್ಗದಲ್ಲಿ ಬೇರೆ ಬೇರೆ ಅಡೆತಡೆಗಳು, ಅದನ್ನು ಕಾರ್ಯರೂಪಕ್ಕೆ ತರಲು ಮಾಡಬೇಕಾದ ವಿವಿಧ ಕೆಲಸಗಳು, ಆ ಕೆಲಸಗಳನ್ನು ನಿರ್ವಹಿಸಲು

ಬೇಕಾದ ಸೂಕ್ತ ಸಮಯ ಹಾಗೂ ಅವುಗಳ ನಿರ್ವಹಣೆಗೆ ಬೇಕಾದ ಅವಶ್ಯಕತೆಗಳು ಇವೆಲ್ಲವುಗಳ ಬಗ್ಗೆ ಚರ್ಚೆ ನಡೆಯುವುದು.

೬) ಪರಿಹಾರ ಮಾರ್ಗವನ್ನು ಕಾರ್ಯರೂಪಕ್ಕೆ ತರುವಲ್ಲಿಯ ಪ್ರತಿಯೊಂದು ವಿಷಯವನ್ನು ವಿಶ್ಲೇಷಿಸಿದ ನಂತರ, ಬೇರೆ ಬೇರೆ ಕೆಲಸಗಳನ್ನು ನಿರ್ವಹಿಸಲು ವಯಸ್ಕರು ಜವಾಬ್ದಾರಿ ವಹಿಸುವರು ಮತ್ತು ಕೆಲಸ ಪೂರೈಕೆಗೆ ನಿರ್ದಿಷ್ಟ ಕಾಲಮಿತಿಯನ್ನೂ ಸೂಚಿಸುವರು.

೭) ಸಮಸ್ಯೆಯ ಪೂರ್ಣಜ್ಞಾನ ಹಾಗೂ ಅದನ್ನು ಪರಿಹರಿಸುವಲ್ಲಿ ಯೋಗ್ಯವಾದ ಮಾರ್ಗವನ್ನು ಕಂಡು ಹಿಡಿದ ಮೇಲೆ, ಸಮಸ್ಯೆಯನ್ನು ಸೂಚಿಸುವ ಪದವನ್ನು ವಯಸ್ಕರು ಸಂವಾದ, ಚರ್ಚೆಯ ಮೂಲಕವೇ ಓದಲೂ ಬರೆಯಲೂ ಕಲಿಯುವರು. ಈ ಘಟ್ಟದಲ್ಲಿ ಬರುವ ವಿವಿಧ ವಿಷಯಗಳನ್ನು ಅರಿವಿನ ಜಾಗೃತಿಯ ಮೂರನೇ ಹಂತವಾದ ಅಕ್ಷರಜ್ಞಾನದಲ್ಲಿ ವಿವರಿಸಲಾಗುವುದು.

೮) ಪರಿಹಾರವನ್ನು ಕಂಡುಹಿಡಿದು ಅದನ್ನು ನಿರ್ವಹಿಸಲು ವಯಸ್ಕರು ಜವಾಬ್ದಾರಿಗಳನ್ನು ಹಂಚಿಕೊಂಡಮೇಲೆ ಕೆಲಸಗಳನ್ನು ನಿರ್ವಹಿಸಬೇಕಾಗುವುದು. ನಿಶ್ಚಿತ ಕಾಲಕ್ಕೆ ಆ ಕೆಲಸಗಳ ನಿರ್ವಹಣೆಯ ಬಗ್ಗೆ ವಿವೇಚನೆ ನಡೆಸಿ ಕೂಟವನ್ನು ಮುಂದುವರಿಸಬೇಕಾಗುವುದು. ಇದೇ ಅರಿವಿನ ಜಾಗೃತಿಯ ಕೊನೆಯ ಹಂತ. ಕಾರ್ಯ ನಿರ್ವಹಣೆಯಲ್ಲಿ ಹೊಸ ಸಮಸ್ಯೆಗಳು ತಲೆದೋರಬಹುದು. ಸಂವಾದದ ಮೂಲಕ ಅವನ್ನು ಬಗೆಹರಿಸಲು ಬೇರೆ ಮಾರ್ಗಗಳನ್ನು ಕಂಡು ಹಿಡಿಯ ಬೇಕಾಗಬಹುದು. ಅರಿವಿನ ಜಾಗೃತಿಯು ಹೀಗೆ ವಿಚಾರ– ಕೃತಿ, ಯೋಜನೆ- ಕೆಲಸಗಳ ಸಂಯೋಗದಿಂದಲೇ ರೂಪಿತಗೊಳ್ಳುವುದು ಮತ್ತು ಮುಂದುವರಿಯುವುದು.

೩. ಅಕ್ಷರ ಜ್ಞಾನ :

ಅಕ್ಷರ ಜ್ಞಾನದ ವಿವಿಧ ಹಂತಗಳನ್ನು ವಿವರಿಸಲು ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಅಮಲಗೊಂದಿಯ ಅಕ್ಕಪಕ್ಕದ ಊರುಗಳ ಪ್ರೇರಕರು ೧೯೮೫ ರ ಸಪ್ಟಂಬರ್ ೧೭ ರಿಂದ ೨೪ ರ ವರೆಗೆ ಜರುಗಿದ ವಯಸ್ಕರ ಶಿಕ್ಷಣ ತರಬೇತಿ ಶಿಬಿರದಲ್ಲಿ ಆರಿಸಿದ ಸೂತ್ರಮಾಲೆಯನ್ನು ಉದಾಹರಣೆಯಾಗಿ ಬಳಸಲಾಗಿದೆ. ಅಲ್ಲಿ ಬರುವ ಬಹುತೇಕ ಸಮಸ್ಯೆಗಳು ಕರ್ನಾಟಕದ ಬೇರೆ ಜಿಲ್ಲೆಗಳಿಗೆ ಅನ್ವಯಿಸಬಹುದಾದರೂ ಕೆಲವೊಂದು ಕಡೆ ಆಯಾ ಪ್ರದೇಶದ ವೈಶಿಷ್ಟ್ಯವನ್ನರಿತು ಬದಲಾವಣೆ ಮಾಡಬೇಕಾಗಬಹುದು.

ಅಮಲಗೊಂದಿಯ ಸುತ್ತ ಮುತ್ತಲಿನ ಹಳ್ಳಿಗಳಿಗೆ ಅನ್ವಯಿಸುವಂತೆ ರಚಿಸಿದ ಸೂತ್ರಮಾಲೆ :

ಜಗಳ, ಕಾಡು, ಕೂಲಿ, ಭೂಮಿ, ಜೀತ, ಸಾಲ, ಚಟ, ಮಹಿಳೆ/ಹೆಂಗಸು, ಆಹಾರ, ಹರಿಕಥೆ, ದೇವಸ್ಥಾನ, ಪ್ರಯಾಣ, ಮೂಢನಂಬಿಕೆ, ಜ್ಞಾನ, ಔಷಧಿ, ಸುಚಿತ್ವ, ಐಶ್ವರ್ಯ–

ಕನ್ನಡದ ಅಕ್ಷರಗಳ ವೈಶಿಷ್ಟ್ಯಗಳನ್ನು ಕಲಿಯಲು ಇಷ್ಟು ಶಬ್ದಗಳು ಸಾಕಾದರೂ, ಅಮಲಗೊಂದಿಯ ಅಕ್ಕಪಕ್ಕದ ಊರುಗಳಿಗೆ ಸಂಬಂಧಪಟ್ಟ ಇನ್ನು ಕೆಲವು ಮುಖ್ಯ ಸಮಸ್ಯೆಗಳನ್ನು ಕೂಟದಲ್ಲಿ ಚರ್ಚಿಸಬಹುದು. ಅವು ಹೀಗಿವೆ :

ಮಳೆ, ಊರು (ಜಾತಿ) ಅತಿಥಿ ಸತ್ಕಾರ, ವರದಕ್ಷಿಣೆ, ಪಾಠಶಾಲೆ, ಸರಕಾರ, ಕೆಲಸ, ಕೈಗಾರಿಕೆ (ಕಸಬು) ಸಂಘ.

೧. ಜಗಳ :

ನಮ್ಮಲ್ಲಿ ಯಾವ ರೀತಿಯ ಜಗಳಗಳು ತಲೆದೋರುತ್ತವೆ ? ಜಗಳಕ್ಕೆ ಕಾರಣಗಳು ಯಾವವು ? ಜಗಳದಿಂದಾಗುವ ಅನಿಷ್ಟಗಳೇನು? ಜಗಳವನ್ನು ತಪ್ಪಿಸಬಹುದೇ ? ಏನು ಮಾಡಬೇಕು ? (ಕೂಟ ರಚನೆ ಮತ್ತು ಯೋಗ್ಯ ಮುಖಂಡರಿಂದ ನ್ಯಾಯ ದೊರಕಿಸಿ ಕೊಡುವಂತೆ ಮಾಡುವುದು)

೨. ಕಾಡು :

ಮಳೆಯ ಅಭಾವಕ್ಕೆ ಕಾರಣ— ಕಾಡುಗಳ ನಾಶ; ಕಾಡುಗಳು ಹೇಗೆ ನಾಶವಾದವು ? "ರುಕ್ಷಾ ಕಡಿದು ಭಿಕ್ಷಾ ಬೇಡುವ ಪರಿಸ್ಥಿತಿ ಬಂದಿದೆ ನಮಗೆ." ಕಾಡು ಬೆಳೆಸಲು ಸರಕಾರದ ಯೋಜನೆಗಳು— ಅವನ್ನು ಪುರಸ್ಕರಿಸಲಿಕ್ಕೆ ನಾವೇನು ಮಾಡಬೇಕು ? ನಾವೇ ಹೆಚ್ಚು ಹೆಚ್ಚಾಗಿ ಮರಗಳನ್ನು ಬೆಳಸಬಹುದೋ ? ಏನು ಮಾಡೋಣ ?

೩. ಕೂಲಿ :

ಕರ್ನಾಟಕದ ಕಾನೂನಿನ ಪ್ರಕಾರ ಕನಿಷ್ಠ ಕೂಲಿ— ಇದು ಸಿಗುತ್ತದೋ ? ಕೆಲಸದ ಪ್ರಾಧಾನ್ಯ— ಉತ್ಪನ್ನ ಕೆಲಸದಿಂದ; ಹೆಚ್ಚುವರಿ ಬೆಲೆ ಕೆಲಸದಿಂದ ; ಕೆಲಸವಿಲ್ಲದೇ ಉತ್ಪನ್ನವಿಲ್ಲ— ಆದರೆ ಪ್ರಚಲಿತ ಸ್ಥಿತಿ : ಬಂಡವಾಳ ಹಾಕಿದವರಿಗೆ, ಭೂಮಿ ಅಧಿಕ ಇದ್ದವರಿಗೆ ಉತ್ಪನ್ನದ ಸಿಂಹಪಾಲು. ಫಲದ (ಉತ್ಪನ್ನದ) ಯೋಗ್ಯವಾದ ಪಾಲು ಕೆಲಸದಾಳುಗಳಿಗೆ ಬರಲು ಏನು ಮಾಡಲು ಸಾಧ್ಯ ? — ಕೆಲಸದಾಳುಗಳ ಸಂಘಟನೆ— ಮೊದಲು ಊರಿನವರ ನಂತರ ಅಕ್ಕ ಪಕ್ಕದ ಊರಗಳು

೪. ಭೂಮಿ :

ಯಾರ್ಯಾರಿಗೆ ಎಷ್ಟೆಷ್ಟು ಭೂಮಿ ಇದೆ ? ಭೂಮಿಯ ನಿಜವಾದ ಒಡೆತನ ಯಾರದ್ದು ? — ದೇಶದ ಸಂಪನ್ಮೂಲಗಳ ಬಳಕೆ, ಭೂಸುಧಾರಣೆಗಳ ಮುಖ್ಯ ನೀತಿ— ಕರ್ನಾಟಕದಲ್ಲಿ ಜ್ಯಾರಿಗೊಂಡಿರುವ ರೀತಿ, ನಮ್ಮ ಪ್ರದೇಶದಲ್ಲಿ ಆಗುವ ಅನ್ಯಾಯಗಳು— ಅವನ್ನು ಯಾವ ರೀತಿ ತಡೆಹಿಡಿಯಬಹುದು ?

೫) ಜೀತ :

ಜೀತವಾಳುಗಳ ಕೆಲಸದ ಪರಿಸ್ಥಿತಿ. ಜೀತಕ್ಕೆ ಹಿರಿಯರು ಏಕೆ ಮಕ್ಕಳನ್ನು ಕಳುಹಿಸುತ್ತಾರೆ?(ಹಣದ ಅವಶ್ಯಕತೆ)ಪರಿಹಾರವೇನು?—(ಉಳಿತಾಯಮಾಡುವುದು).

೬) ಸಾಲ :

ಸಾಲ ಮಾಡಬೇಕಾದ ಸಾಮಾನ್ಯ ಸಂದರ್ಭಗಳು—ಯಾವ ಕಾರಣಗಳಿಗೆ ಸಾಲದ ಮೊರೆ ಹೋಗುತ್ತಾರೆ ? ಸಾಲ ಮರುಪಾವತಿ ಮಾಡಲಿರುವ ನಿಯಮಗಳು—ಬಡ್ಡಿಯ ದರ, ಅವಧಿ.
ಸಾಲ ಸಕಾಲದಲ್ಲಿ ಮರು ಪಾವತಿ ಮಾಡದಿದ್ದರೆ ಆಗುವ ಅನಿಷ್ಟಗಳು ಯಾವವು? ಸಾಲ ತಪ್ಪಿಸಲು ಏನು ಮಾಡೋಣ ? —(ಕುಟುಂಬದ ಉಳಿತಾಯ ಮಾತ್ರ ಸಾಲದು, ಸಮುದಾಯ ಉಳಿತಾಯದ ಅವಶ್ಯಕತೆ (ಎಲ್ಲರ ನಿಧಿಯನ್ನು ಹೇಗೆ ಕೂಡಿಸೋಣ ?)

೭) ಚಟ :

ಪ್ರಮುಖ ಚಟಗಳು—ಏಕೆ ಅವುಗಳ ಅಭ್ಯಾಸ ?
ದುಶ್ಚಟಗಳಿಂದ ಆಗುವ ಪರಿಣಾಮಗಳೇನು ?
ಹೇಗೆ ಅವನ್ನು ಕೈ ಬಿಡಬಹುದು ?

೮) ಮಹಿಳೆ :

ಕುಟುಂಬದಲ್ಲಿ ಮಹಿಳೆಯ ಪಾತ್ರ— ಮಹಿಳೆಗೆ ಸಮಾಜ ಕೊಡುವ ಸ್ಥಾನ. ಮಹಿಳೆಯು ಕೊಡುಗೆಗೂ ಅವಳಿಗೆ ಸಿಗುವ ಪುರಸ್ಕಾರಕ್ಕೂ ಇರುವ ಅಂತರ ಬೇರೆ ಬೇರೆ ನಿದರ್ಶನಗಳು—ಕೆಲಸದಲ್ಲಿ ಗಂಡಿಗಿಂತ ಅವಳಿಗೆ ಕಡಿಮೆ ಕೂಲಿ; ಸಮಾಜ ನಿರ್ವಹಿಸುವಲ್ಲಿ ಅವಳಿಗೆ ಹಕ್ಕಿಲ್ಲ.......
ಈ ಪರಿಸ್ಥಿತಿಯನ್ನು ಬದಲಾಯಿಸಬಹುದೋ ? ಏನು ಮಾಡಬಹುದು ?

೯) ಆಹಾರ :

ಆಹಾರ ಏಕೆ ತೆಗೆದುಕೊಳ್ಳಬೇಕು ? ಪೌಷ್ಟಿಕ ಆಹಾರದ ಅಭಾವ — ಅದರಿಂದ ಆಗುವ ಪರಿಣಾಮಗಳು : ಹಸಿವು, ರೋಗ, ಬಾಲ್ಯಮರಣ.... ಆಹಾರದಲ್ಲಿ ಪೌಷ್ಟಿಕಾಂಶವನ್ನು ನಮ್ಮ ಪರಿಸರದಿಂದಲೇ ಬರುವಂತೆ ನೋಡಿಕೊಳ್ಳಬಹುದೋ ? ಇದರ ಬಗ್ಗೆ ಮಾಹಿತಿ ಇದ್ದವರ ಸಲಹೆ ಪಡೆಯೋಣವೇ ಯಾರನ್ನು ಕರೆಯಲೀ ? ನಾವೇನು ಮಾಡೋಣ ?

೧೦) ಹರಿಕಥೆ :

ಹರಿಕಥೆಗಳನ್ನು ಏತಕ್ಕೋಸ್ಕರ ಏರ್ಪಡಿಸುತ್ತಾರೆ ? ಹಳ್ಳಿಜನರ ಇತರ ಮನೋರಂಜನೆಯ ಸಾಧನಗಳಾವುವು ?
ಹಳ್ಳಿಯ ಸಂಸ್ಕೃತಿ— ಹಳ್ಳಿಯ ಸಂಸ್ಕೃತಿಗೆ ತಿರಸ್ಕಾರ; ಸುಶಿಕ್ಷಿತರ ಪಟ್ಟಣದ ಸಂಸ್ಕೃತಿಗೆ ಪುರಸ್ಕಾರ. ಹಳ್ಳಿಯ ಸಂಸ್ಕೃತಿಯನ್ನು ಕಾಪಾಡಲು ವೃದ್ಧಿಸಲು ಯಾವ್ಯಾವ ಕ್ರಮಗಳನ್ನು ಕೈಗೊಳ್ಳಬಹುದು ?

೧೧) ದೇವಸ್ಥಾನ :

ದೇವರು, ಪೂಜೆ, ಹಬ್ಬ, ಜಾತ್ರೆ, ಹರಕೆಗಳು, ಆಚಾರಗಳು. ದೇವರಲ್ಲಿ ನಂಬಿಕೆ —ಅದರ ನಿಜ ಅರ್ಥ. ದೇವರಿಗೆ ಪ್ರತ್ಯೇಕವಾಗಿ ಮಾಡುವ ಪೂಜೆ, ಹರಕೆ, ಜಾತ್ರೆಗಳ ಸಂದರ್ಭಗಳು : ಕಾಯಿಲೆ, ಮಳೆಯ ಅಭಾವ, ಬೇರೆ ಬೇರೆ ಬೇಡಿಕೆಗಳು...

" ದೇವರು ಕೊಟ್ಟ ಜೋಳಿಗೆಯನ್ನು ಗೂಟಕ್ಕೆ ತಗಲಿ ಹಾಕಿದರೆ ಹೊಟ್ಟೆ ತುಂಬುತ್ತೋ ? "ಮಂತ್ರಿಸಿದರೆ ಮಾವಿನಕಾಯಿ ಉದುರುವುವೇ ?....

ದೇವರಲ್ಲಿ ನಂಬಿಕೆ ಮಾನವನು ಬುದ್ಧಿ ಉಪಯೋಗಿಸಿ ಕೆಲಸ ಸಾಧನೆ ಮಾಡುವ ಅವಶ್ಯಕತೆ.

೧೨) ಪ್ರಯಾಣ :

ಜನಸಾಮಾನ್ಯರಿಗೆ ಸಾರಿಗೆಯ ಕೊರತೆ—ಶ್ರೀಮಂತರ ಅಧೀನದಲ್ಲಿರುವ ಸಾರಿಗೆಯ ಸಾಧನಗಳು.

ಸಾರಿಗೆ ಅವಶ್ಯಕತೆ ಈಡೇರಿಸಲು ಏನು ಮಾಡಲು ಸಾಧ್ಯ ? ಎಲ್ಲರಿಗೂ ಉಪ ಯೋಗವಾಗುವಂತಹ ಸಾರಿಗೆ ಮಾಧ್ಯಮ ತರಲು ಏನು ಮಾಡಲು ಸಾಧ್ಯ.

೧೩) ಮೂಢನಂಬಿಕೆ :

ಮೂಢನಂಬಿಕೆ, ಒಣ ಆಚಾರ, ಮಾಟ ಮಂತ್ರಗಳ ಸಮೃದ್ಧಿ. ನಂಬಿಕೆ ಮೂಢನಂಬಿಕೆ ಆಗುವುದು ಯಾವಾಗ ?

ತನ್ನ ಬುದ್ಧಿ ಬಿಟ್ಟು ದೇವರನ್ನೇ ಅವಲಂಬಿಸಿದಾಗ ಮಾನವ ತನ್ನ ಮಾನವತ್ವ ಬಿಡುತ್ತಾನೆ; ತನ್ನ ಜವಾಬ್ದಾರಿಯಿಂದ ವಿಮುಕ್ತನಾಗುತ್ತಾನೆ. ಇಂತಹ ಮೂಢನಂಬಿಕೆಗಳನ್ನು ಬಿಡಲು ಏನು ಮಾಡಬೇಕು ?

೧೪) ಜ್ಞಾನ :

ಒಂದು ವಸ್ತು ವಿಷಯದ ಬಗ್ಗೆ ನಿಜವಾದ ಪರಿಚಯ. ಹಳ್ಳಿಯ ಜ್ಞಾನದ ಸಂಗತಿಗಳು—ಅವನ್ನು ಹೇಗೆ ಕಾಪಾಡಬಹುದು ? ನಮ್ಮ ಹಾಗೂ ನಮ್ಮ ಪರಿಸರದ ಬಗ್ಗೆ ಹೆಚ್ಚು ಹೆಚ್ಚಿನ ಜ್ಞಾನವನ್ನು ಯಾವ ರೀತಿಯಿಂದ ತಿಳಿದು ಕೊಳ್ಳಬಹುದು ? ಅದಕ್ಕೆ ನಾವು ಮಾಡಬೇಕಾದ ಕೆಲಸ ಕಾರ್ಯ ಗಳೇನು ?

೧೫) ಔಷಧಿ :

ಆರೋಗ್ಯ ಕೆಟ್ಟಾಗ ಏನು ಮಾಡಲು ಸಾಧ್ಯ ?

ಚಿಕ್ಕಮಕ್ಕಳನ್ನು ರೋಗದಿಂದ ಕಾಪಾಡಲು ಏನು ಮಾಡಬೇಕು ?

ಪಾಶ್ಚಾತ್ಯ ಮದ್ದಿಗೂ ನಾಟಿ ಔಷಧಿಗೂ ಇರುವ ಅಂತರವೇನು ? ನಮ್ಮಲ್ಲಿ

ಗಿಡಮೂಲಿಕೆಗಳ ಮದ್ದನ್ನು ಬಳಸುತ್ತಾರೋ ? ಅವನ್ನು ಇನ್ನೂ ಹೇಗೆ ವೃದ್ಧಿಪಡಿಸಬಹುದು ?

೧೬) **ಶುಚಿತ್ವ :**

ಆರೋಗ್ಯ ಕೆಡಲು ಮುಖ್ಯ ಕಾರಣ ಏನು ?— ದೇಹವನ್ನು ಬಳಸುವ ವಸ್ತುಗಳನ್ನು, ಮನೆಯನ್ನು, ಊರನ್ನು ಶುಚಿಯಾಗಿ ಇಡದಿರುವುದು. ದೇಹವನ್ನು ಶುಚಿಯಾಗಿ ಇಡಲು ಏನು ಮಾಡಬೇಕು ? (ಜಳಕ; ಬಟ್ಟೆ, ಪಾತ್ರೆಗಳನ್ನು ತೊಳೆಯುವುದು) ಮನೆಯನ್ನು ಶುಚಿಯಾಗಲು ಏನು ಮಾಡಬೇಕು ?— ಗುಡಿಸುವುದು; ಬೆಳಕು ಹಾಯಿಸುವುದು; ಗಾಳಿ ಬೀಸುವಂತೆ ಮಾಡುವುದು....)
ಊರನ್ನು ಶುಚಿಯಾಗಿಡಲು ಏನು ಮಾಡಬೇಕು ?—
(ನೀರು ನಿಂತು ಕೊಳಚೆ ಗುಂಡಿಯಾಗದಂತೆ ನೀರು ಹರಿಯಲು ಚರಂಡಿಯ ನಿರ್ಮಾಣ, ಮಲವಿಸರ್ಜನೆಗೆ ಪ್ರತ್ಯೇಕ ಸ್ಥಳವನ್ನಿಡುವದು......)

೧೭) **ಐಶ್ವರ್ಯ :**

ಐಶ್ವರ್ಯ; ಶ್ರೀಮಂತ-ಬಡವ; ಶ್ರೀಮಂತ ರಾಷ್ಟ್ರ-ಬಡ ರಾಷ್ಟ್ರಗಳ ಸಂಬಂಧ, ಭೇದ ಭೇದದ ಮೂಲ ಏನು ? ಈ ಪರಿಸ್ಥಿತಿಯನ್ನು ಬದಲಾಯಿಸಬಹುದೋ ?

ಹಳ್ಳಿಯ ಜೀವನಕ್ಕೆ ಸಂಬಂಧಪಟ್ಟ ಆದರೆ ಸಾಕ್ಷರತೆಗೆ ಮುಖ್ಯವಲ್ಲದ ಇನ್ನೂ ಕೆಲವು ವಿಷಯಗಳು ಈ ಕೆಳಗಿನಂತಿವೆ :—

೧) **ಮಳೆ :**

ಬೇಸಾಯಕ್ಕೆ ಮಳೆಯ ಅವಶ್ಯಕತೆ.
ರೈತರು ನಿಸರ್ಗದ ಮೇಲೆ ಎಷ್ಟು ಹೊಂದಿಕೊಂಡಿದ್ದಾರೆ ?
ಇದನ್ನು ಬದಲಾಯಿಸಬಹುದೋ ? ಹೇಗೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ?

೨) **ಊರು (ಜಾತಿ) :**

ಹಲವಾರು ಜಾತಿಗಳು ಕೂಡಿ ಇರುವ ಊರಿನ ವ್ಯವಸ್ಥೆ ಹೇಗಿದೆ ?
"ಹೊರಗಿನವರ" ಪ್ರಕಾರ—ಊರಿನ ಹೆಸರು ಎಲ್ಲಾ ಜಾತಿಗಳಿಗೂ ಅನ್ವಯಿಸುತ್ತದೆ. 'ಒಳಗಿನವರ' ಪ್ರಕಾರ—ಊರು ಎಂದರೆ ಶ್ರೀಮಂತರು, ಸವರ್ಣೀಯರ ಮನೆಗಳಿರುವ ಭಾಗ :
ಹರಿಜನರು, ಕೀಳು ಜಾತಿಯವರು ವಾಸಿಸುವ ಸ್ಥಳ—ಕೇರಿ ಹಟ್ಟಿ.
ಏಕೆ ಈ ಭೇದ ? ಈ ಜಾತಿ ವ್ಯವಸ್ಥೆ ?—
ಅಸ್ಪೃಶ್ಯತೆಯ ಪಿಡುಗು—ಆಗುವ ಅವಾಂತರಗಳು.......
ಜಾತ್ಯಂತರ ತೋರಿಸಿ ಕೊಡುವ ಇತರ ನಿದರ್ಶನಗಳು—ಕಸುಬು, ಆಚಾರ....
ಈ ಪರಿಸ್ಥಿತಿಯನ್ನು ಹೇಗೆ ಬದಲಾಯಿಸಬಹುದು ?.......

೩) ಅತಿಥಿ ಸತ್ಕಾರ :

ಅತಿಥಿಗಳನ್ನು ಆಗಂತುಕರನ್ನು ಏಕೆ ಸತ್ಕರಿಸುತ್ತೇವೆ ?

ಗೃಹಸ್ಥ ಧರ್ಮ—ಭಾರತೀಯ ಸಂಸ್ಕೃತಿಯ ಮುಖ್ಯ ಅಂಗ. ಇದರ ಅರ್ಥ—ಬಳಲಿ ಬಂದವರಿಗೆ ಕರುಣೆ. ತಾತ್ಕಾಲಿಕವಾಗಿ ದಿಕ್ಕಿಲ್ಲದವರಿಗೆ ಆಶ್ರಯ, ಕರುಣೆ ಕೇವಲ ಆಕಸ್ಮಿಕವಾಗಿ ಒಮ್ಮೊಮ್ಮೆ ನಮ್ಮ ಕಡೆ ಬಂದವರಿಗೋ ಅಥವಾ ನಿಜವಾಗಿ ನರಳುವವರಿಗೆ :

ನಮ್ಮಲ್ಲಿ ವಿಧವಿಧದ ಕಾರಣಗಳಿಂದ ನರಳುವವರಾರು ? ಗತಿ ಇಲ್ಲದವರಾರು ? ಅವರಿಗೆ ನಾವೇನು ಮಾಡಬಹುದು ?

೪) ವರದಕ್ಷಿಣೆ :

ವರದಕ್ಷಿಣೆಯ ಪಿಡುಗು—ನಿದರ್ಶನಗಳು. ಆಗುವ ಅನೌಚಿತ್ಯಗಳು, ಈ ಪರಿಸ್ಥಿತಿಯನ್ನು ಬದಲಿಸಲು ಏನು ಮಾಡಬೇಕು ?

೫) ಪಾಠಶಾಲೆ :

ಶಾಲೆ, ಇಸ್ಕೂಲುಗಳಿಂದ ಆಗುವ ಪ್ರಯೋಜನ ಏನು ? ಜ್ಞಾನಾಭಿವೃದ್ಧಿ ಮಕ್ಕಳನ್ನು ಪಾಠಶಾಲೆಗೆ ಕಳುಹಿಸುವ ಅಭ್ಯಾಸ ?

೬) ಸರಕಾರ :

ಅಧಿಕಾರ ಯಾರ ಕೈಯಲ್ಲಿದೆ ? ಜನರಿಗೆ ಅಧಿಕಾರದಲ್ಲಿ ಪಾಲಿದೆಯೋ ? ಯೋಗ್ಯ ವಿಧಾನ ಸಭಾ ಮತ್ತು ಸಂಸತ್ ಸದಸ್ಯರನ್ನು ಆಯ್ಕೆ ಮಾಡುತ್ತೇವೋ ಅಂತಹ ಚುನಾಯಿತ ಸದಸ್ಯರು ಜನರ ಬಗ್ಗೆ ದುಡಿಯುತ್ತಾರೋ ? ಅವರು ತಮ್ಮ ಜವಾಬ್ದಾರಿಯನ್ನು ನಡೆಸುವಂತೆ ನಾವು ಏನು ಮಾಡಬೇಕು ? ಯೋಗ್ಯ ಸದಸ್ಯರನ್ನು ಚುನಾಯಿಸಲು ನಾವು ಏನನ್ನು ಮಾಡಬೇಕು ?

೭) ಕೆಲಸ :

ಕೈ ಕೆಲಸಕ್ಕೂ ಬುದ್ಧಿ ಕೆಲಸಕ್ಕೂ ಸಿಗುವ ಮನ್ನಣೆಗಳು.

ಏಕೆ ಈ ವ್ಯತ್ಯಾಸ ? ಕೆಲಸ ಮಾಡುವುದು ಪ್ರತಿ ಮನುಷ್ಯನ ಕರ್ತವ್ಯ ಅಗತ್ಯ ಅವಶ್ಯಕತೆಗಳು ಮಾನವರಾಗಿ ಎಲ್ಲರಿಗೂ ಸಮಾನ.

೮) ಕೈಗಾರಿಕೆ—ಕಸಬು :

ದೊಡ್ಡ ಕಾರ್ಖಾನೆಗಳು—ಪಟ್ಟಣದಲ್ಲಿ—ಉದಾಹರಣೆಗಳು;

ಸಣ್ಣ ಕೈಗಾರಿಕೆಗಳು—ನಿದರ್ಶನಗಳು.

ನಮ್ಮ ಆದಾಯವನ್ನು ಹೆಚ್ಚಿಸುವ ದಾರಿಗಳು ; ನಾವೇನಾದರೂ ಸಣ್ಣ ಕೈಗಾರಿಕೆ, ಗೃಹ ಕೈಗಾರಿಕೆ, ಉಪಕಸುಬುಗಳನ್ನು ನಡೆಸಬಹುದೋ ?

೯) ಕೂಟ (ಸಂಘ) :

ಜನರೆಲ್ಲಾ ಕೂಡಿ ಕೆಲಸ ಮಾಡುವ ಕೂಡಿ ಬಾಳುವ ಔಚಿತ್ಯ.

ಯಾವ ಯಾವ ಸಂದರ್ಭಗಳಲ್ಲಿ ಕೂಡಿಕೊಳ್ಳಬಹುದು ?

ಅರ್ಥಪೂರ್ಣ ಕೂಟ (ಸಂಘ) ವನ್ನು ನಿರ್ಮಿಸಬಹುದೋ ?

ನಿಯಮಗಳೇನು ? ಜವಾಬ್ದಾರಿಗಳಾವುವು ?

ಅಕ್ಷರ ಜ್ಞಾನದ ವಿವಿಧ ಹಂತಗಳು :

೧) ಮೊದಲ ಸೂತ್ರದಲ್ಲಿರುವ ಜನಕ ಶಬ್ದವನ್ನು ತೋರಿಸಿ ಓದಿಸುವುದು. ಉದಾ : ಜಗಳ.

೨) ಸೂತ್ರವಿಲ್ಲದೇ ಬರೀ ಶಬ್ದವನ್ನು ಬರೆದು ತೋರಿಸಿ ಓದಿಸುವುದು. ಚರ್ಚಾ ಕೂಟದ ಸಮಯದಲ್ಲೇ ಪ್ರೇರಕನು ಕಪ್ಪು ಹಲಗೆಯ ಮೇಲೆ ಶಬ್ದವನ್ನು ಹೊಸ ದಾಗಿ ಬರೆಯುವುದರ ಬದಲು, ಮೊದಲೇ ಒಂದು ಹಾಳೆಯಲ್ಲಿ ಶಬ್ದವನ್ನು ಬರೆದು ಆ ಹಾಳೆಯನ್ನು ತೋರಿಸಬಹುದು. ಇದೇ ಕ್ರಮವನ್ನು ಮುಂದಿನ ಹಂತಗಳಲ್ಲೂ ಹೊಸ ಜ್ಞಾನದ ಅರಿವು ಬರುವ ಸಂದರ್ಭಗಳಲ್ಲಿ ಬಳಸಬಹುದು.

೩) ಶಬ್ದದ ಅಕ್ಷರ (ಉಚ್ಚಾರಣಾ ಘಟಕ) ಗಳನ್ನು ಬಿಡಿಬಿಡಿಯಾಗಿ ಬರೆದು ಓದಿಸುವುದು. ಉದಾ : ಜ ಗ ಳ.

೪) ಮೊದಲನೇ ಅಕ್ಷರವನ್ನು ಬರೆದು ಓದಿಸುವುದು ಮತ್ತು ಅದನ್ನು ವಯಸ್ಕರು ಬರೆಯುವಂತೆ ನೋಡಿಕೊಳ್ಳುವುದು. ಉದಾ : ಜ

೫) ಆ ಅಕ್ಷರದ ಎಲ್ಲಾ ಕಾಗುಣಿತಗಳನ್ನು ಒಂದರ ಕೆಳಗೆ ಒಂದರಂತೆ ಬರೆದು ಸ್ವಲ್ಪಕಾಲ ವಯಸ್ಕರು ಅದನ್ನು ಗಮನಿಸಲಿಕ್ಕೆ ಹೇಳುವುದು.

ಉದಾ : ಜ
ಜಾ
ಜಿ
ಜೀ
ಜು
ಜೂ
ಜೃ
ಜೆ
ಜೇ
ಜೈ
ಜೊ
ಜೋ
ಜೌ
ಜಂ
ಜಃ

ಈ ಕಾಗುಣಿತಗಳ ಪಟ್ಟಿಯಿಂದ ವಯಸ್ಕರು ಕೇವಲ ಜ 'ಅಕ್ಷರ' ವನ್ನು ಗುರುತಿಸುತ್ತಾರೆ. ಉಳಿದ ಅಕ್ಷರಗಳನ್ನು ವಯಸ್ಕರೇ ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಿ ತಿಳಿಯುವಂತೆ ಪ್ರೇರಕ ಮಾಡಬೇಕಾದುದೇನು ?

ಓದಲಿಕ್ಕೂ ಬರೆಯಲಿಕ್ಕೂ ಕಲಿಯುವುದು ಒಂದು ಜ್ಞಾನಾರ್ಜನೆಯ ಕೃತಿ, ಬಾಯಿಪಾಠದಿಂದ ಅಥವಾ ನೆನಪಿನಿಂದ ಮಾಡುವ ಕೆಲಸವಲ್ಲ ಎಂದು ಮನಗಂಡಿದ್ದ ಪ್ರೇರಕನು, ಹೊಸ ಜ್ಞಾನವನ್ನು ಒಂದು ಸಮಸ್ಯೆಯ ರೂಪದಲ್ಲಿ ವಯಸ್ಕರ ಮುಂದಿಡುತ್ತಾನೆ. ಹೊಸ ವಿಷಯದ ಜ್ಞಾನವು ಸಮಸ್ಯೆಯನ್ನು ಪರಿಹಾರ ಮಾಡುವುದರ ಮೂಲಕ ಬರುವುದರಿಂದ ಅದು ಕೇವಲ ಪ್ರೇರಕರಿಂದ ಪಡೆದ ಕೊಡುಗೆ ಎಂದು ವಯಸ್ಕರಿಗೆ ಅನಿಸುವುದಿಲ್ಲ. ಬದಲಾಗಿ ತಾವೇ ಕ್ರಿಯಾತ್ಮಕವಾಗಿ ಗಳಿಸಿದ ಸೊತ್ತು ಎಂದು ಲೆಕ್ಕಿಸುತ್ತಾರೆ. ಹೊಸ ಜ್ಞಾನವು ಸಮಸ್ಯಾತ್ಮಕವಾಗಿ ಮೂಡಿಬರಲು ಪ್ರೇರಕನು ಎರಡು ಪ್ರಶ್ನೆಗಳನ್ನು ಕೇಳುತ್ತಾನೆ. ಪ್ರತಿ ಪ್ರಶ್ನೆಗೆ ವಯಸ್ಕರೇ ಉತ್ತರ ಕಂಡು ಹಿಡಿಯುವಲ್ಲಿ ಸ್ವಲ್ಪ ಸಮಯ ಹಿಡಿಯಬಹುದು. ಅಂತಹ ಮೌನದಿವಸಗಳ ಜಡತೆಯನ್ನು ತಾಳಲಾರದೇ ಪ್ರೇರಕನು ತಾನೇ ಉತ್ತರ ಕೊಡುವ ಪ್ರವೃತ್ತಿಗೆ ಇಳಿಯುವ ಸಂಭವವಿದೆ. ಆದರೆ ಆ ಮೌನವು ರಚನಾತ್ಮಕ ಕೃತಿಯ ಅತ್ಯವಶ್ಯಕ ಅಂಗ ಎಂದು ಅರಿತಿದ್ದ ಪ್ರೇರಕನು ವಯಸ್ಕರೇ ನಿಜೋತ್ತರವನ್ನು ಕಂಡುಹಿಡಿಯುವಲ್ಲಿ ಸಹಾಯಕನಾಗುವನು.

ಪ್ರೇರಕನು ಕೇಳುವ ಪ್ರಶ್ನೆಗಳು ಈ ರೀತಿ ಇವೆ. "ಈ ಎಲ್ಲಾ ಅಕ್ಷರಗಳಲ್ಲಿ ಒಂದೇ ರೀತಿಯಾಗಿರುವ ಅಂಶ ಮತ್ತು ಬೇರೆ ಬೇರೆ ರೀತಿಯಲ್ಲಿರುವ ಅಂಶ ಏನಾದರೂ ಇವೆಯೇ? ಅವು ಯಾವುವು ?" ಕೆಲವು ಸಂಶಯಪೂರ್ವಕ ಮೌನಕ್ಷಣಗಳ ನಂತರ ಒಬ್ಬ ವಯಸ್ಕ ಈ ರೀತಿ ಹೇಳಬಹುದು. "ಎಲ್ಲವೂ ಒಂದೇ ರೀತಿ ಸುರು ಆಗುತ್ತವೆ. ಆದರೆ ಬೇರೆ ಬೇರೆ ರೀತಿಗಳಲ್ಲಿ ಅವು ಅಂತ್ಯಗೊಳ್ಳುತ್ತವೆ. "

ಈ ಜ್ಞಾನದ ಅರಿವು ಎಲ್ಲರಲ್ಲೂ ಮೂಡಿದ ಮೇಲೆ ಪ್ರೇರಕ ಇನ್ನೊಂದು ಪ್ರಶ್ನೆಯನ್ನು ಕೇಳುತ್ತಾನೆ; "ಎಲ್ಲವೂ ಒಂದೇ ರೀತಿ ಸುರು ಆಗಿ ಬೇರೆ ಬೇರೆ ರೀತಿಗಳಲ್ಲಿ ಅಂತ್ಯವಾದರೆ, ಅವೆಲ್ಲವನ್ನು 'ಜ' ಎಂದೇ ಕರೆಯಬಹುದೋ?" ಸ್ವಲ್ಪಕಾಲದ ನಂತರ ವಯಸ್ಕರು "ಇಲ್ಲ" ಎಂದು ಉತ್ತರಿಸುವರು.

ಈ ಹಂತದಲ್ಲಿ ಪ್ರೇರಕ ಹೊಸ ಜ್ಞಾನದ ಪರಿಚಯವನ್ನು ವಯಸ್ಕರಿಗೆ ಮಾಡಿಕೊಡುತ್ತಾನೆ. ಎಲ್ಲಾ ಕಾಗುಣಿತಾಕ್ಷರಗಳ ಬೇರೆ ಬೇರೆ ಉಚ್ಚಾರ ಹಾಗೂ ಅವನ್ನು ಬರೆಯುವ ರೀತಿಯನ್ನು ತೋರಿಸಿಕೊಡುತ್ತಾನೆ. ಸಮಸ್ಯೆಯ ರೂಪದಲ್ಲಿ ಹೊಸ ಜ್ಞಾನವು ಬಂದಿರುವುದರಿಂದ ಅದು ಕೇವಲ ದಾನ ಎನಿಸುವುದಿಲ್ಲ.

೬) ಇದೇ ಪ್ರಕಾರ ಶಬ್ದದ ಉಳಿದ ಅಕ್ಷರಗಳ ಪರಿಚಯವಾಗುವುದು.
ಉದಾ : ಗ, ಳ, ಮತ್ತು ಅವುಗಳ ಕಾಗುಣಿತಗಳು :

೭) ಎಲ್ಲಾ ಅಕ್ಷರಗಳ ಪರಿಚಯವಾದ ಮೇಲೆ ಕಲಿತ ಅಕ್ಷರಗಳ ಕಾಗುಣಿತ ಗಳನ್ನು ಅಡ್ಡಕ್ಕೆ ಅಂದರೆ ಒಂದರ ನಂತರ ಒಂದರಂತೆ, ಸಾಲಾಗಿ ಪ್ರೇರಕನು ಬರೆಯುವನು.

ಉದಾ : ಜ ಜಾ ಜಿ ಜೀ ಜು ಜೂ ಜೃ ಜೆ ಜೇ ಜೈ ಜೊ ಜೋ ಜೌ ಜಂ ಜಃ

ಗ ಗಾ ಗಿ ಗೀ ಗು ಗೂ ಗೃ ಗೆ ಗೇ ಗೈ ಗೊ ಗೋ ಗೌ ಗಂ ಗಃ

ಳ ಳಾ ಳಿ ಳೀ ಳು ಳೂ ಳೃ ಳೆ ಳೇ ಳೈ ಳೊ ಳೋ ಳೌ ಳಂ ಳಃ

ಎಲ್ಲಾ ಸಾಲುಗಳನ್ನು ಪ್ರೇರಕನು ಮೊದಲು ಅಡ್ಡಕ್ಕೆ ಓದಿಸುತ್ತಾನೆ. ನಂತರ ನೇರಕ್ಕೆ, ಅಂದರೆ ಒಂದರ ಕೆಳಗೆ ಒಂದು, ಇರುವ ಅಕ್ಷರಗಳನ್ನು ಒಂದು ಸಾಲು ಎಂಬ ಲೆಕ್ಕ ದಲ್ಲಿ ಪ್ರೇರಕನು ಓದಿಸುವನು. ಮೊದಲ ನೇರ ಸಾಲನ್ನು ಓದಿಸಿದ ನಂತರ ಪ್ರೇರಕ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾನೆ. ಈ ಅಕ್ಷರಗಳಲ್ಲಿ ಒಂದೇ ರೀತಿಯಾಗಿರುವ ಮತ್ತು ಬೇರೆ ಬೇರೆ ರೀತಿಯಾಗಿರುವ ಅಂಶಗಳವೆಯೇ ? ಅವು ಯಾವುವು ? "ಸ್ವಲ್ಪ ಸಮಯದ ಮೌನದ ನಂತರ ವಯಸ್ಕರು ಈ ರೀತಿ ಉತ್ತರಿಸುವರು; "ಎಲ್ಲಾ ಅಕ್ಷರಗಳು ಬೇರೆ ಬೇರೆ ರೀತಿಯಲ್ಲಿ ಶುರು ಆಗುತ್ತವೆ. ಆದರೆ ಅವೆಲ್ಲಾ ಒಂದೇ ರೀತಿ ಅಂತ್ಯವಾಗುತ್ತವೆ."

ನಂತರ ಪ್ರೇರಕನು ಈ ರೀತಿ ಕೇಳುವನು. "ಒಂದೇ ರೀತಿಯಲ್ಲಿ ಅಂತ್ಯವಾಗುವ ಅಂಶವು ಮತ್ತು ಅದರ ಉಚ್ಚಾರವು ಬೇರೆ ಬೇರೆ ರೀತಿಯಲ್ಲಿ ಶುರು ಆಗುವ ಅಂಶ ಗಳು ಮತ್ತು ಅವುಗಳ ಉಚ್ಚಾರಗಳಿಗಿಂತ ಭಿನ್ನವಾಗಿದೆಯೇ ?" ವಯಸ್ಕರು ಸ್ವಲ್ಪ ಸಂದೇಹದಿಂದಲೇ ಹೌದು ಎಂದು ಉತ್ತರಕೊಟ್ಟು ಅಂತ್ಯವಾಗುವ ಅಂಶದ ಉಚ್ಚಾರ ವನ್ನು ಕಂಡು ಹಿಡಿಯುವರು. ಈ ಹಂತದಲ್ಲಿ ಪ್ರೇರಕನು ಇನ್ನೂ ಹೊಸ ಜ್ಞಾನದ ಅರಿವನ್ನು ವಯಸ್ಕರಲ್ಲಿ ಮೂಡಿಸುವನು. ಅಕ್ಷರದ ಕೊನೆಯಲ್ಲಿ ಬರುವ ಅಂಶ 'ಅ' ಸ್ವರದ ಉಚ್ಚಾರ ತೋರಿಸುತ್ತದೆ. ಅದು ಬೇರೆ ಅಕ್ಷರದೊಡನೆ ಸೇರಿದಾಗ ಒಂದು ಕೊಂಬಿನಂತಿದ್ದು (ˉ), ಸ್ವತಂತ್ರವಾಗಿ ಬಂದಾಗ 'ಅ' ರೂಪದಲ್ಲಿ ಬರುತ್ತದೆ ಎಂದು ತೋರಿಸುತ್ತಾನೆ, ವಯಸ್ಕರು 'ಅ' ಅಕ್ಷರವನ್ನು ಓದಲೂ ಬರೆಯಲೂ ಕಲಿಯುವರು.

೮) ಇದೇ ಪ್ರಕಾರ ಉಳಿದ ನೇರ ಸಾಲುಗಳ ಮೂಲಕ ಎಲ್ಲಾ ಸ್ವರಗಳನ್ನು ಓದಲೂ ಬರೆಯಲೂ ಪ್ರೇರಕನು ತೋರಿಸುತ್ತಾನೆ.

ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

೯) ಎಲ್ಲಾ ಸ್ವರಗಳ ಜ್ಞಾನ ಬಂದಮೇಲೆ ಪ್ರೇರಕನು ಒಂದರ ಕೆಳಗೆ ಒಂದ ರಂತೆ ಕ್ರಮವಾಗಿ 'ಜ' ದ ಸಾಲನ್ನೂ 'ಗ' ದ ಸಾಲನ್ನೂ 'ಳ' ದ ಸಾಲನ್ನೂ ಸ್ವರ ಗಳ ಸಾಲನ್ನೂ ಬರೆಯುತ್ತಾನೆ.

ಉದಾ : ಜ ಜಾ ಜಿ ಜೀ ಜು ಜೂ ಜೃ ಜೆ ಜೇ ಜೈ ಜೊ ಜೋ ಜೌ ಜಂ ಜಃ

ಗ ಗಾ ಗಿ ಗೀ ಗು ಗೂ ಗೃ ಗೆ ಗೇ ಗೈ ಗೊ ಗೋ ಗೌ ಗಂ ಗಃ

ಳ ಳಾ ಳಿ ಳೀ ಳು ಳೂ ಳೃ ಳೆ ಳೇ ಳೈ ಳೊ ಳೋ ಳೌ ಳಂ ಳಃ
ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಈ ಸಾಲುಗಳನ್ನು ಪ್ರೇರಕನು ಅಡ್ಡಕ್ಕೂ ನೇರಕ್ಕೂ. ಓದಿಸುತ್ತಾನೆ. ಹಾಗೆಯೇ ಯಾವ ಕ್ರಮವಿಲ್ಲದೇ ಅಕ್ಷರಗಳನ್ನು ಬಿಟ್ಟು ಅಕ್ಷರಗಳನ್ನು ಅವನು ಓದಿಸುತ್ತಾನೆ. ಈ ರೀತಿಯ ಪುನರಾವರ್ತನೆಯಿಂದ ಕಲಿತ ಅಕ್ಷರಗಳ ಜ್ಞಾನವು ವಯಸ್ಕರಿಗೆ ಇನ್ನೂ ಬೇರೂರಿ ನಿಲ್ಲುವುದು. ಈ ಕಾರ್ಯ ಮುಗಿದ ಮೇಲೆ ಪ್ರೇರಕನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತಾನೆ. ನಾವು ಕಾಣುವ ಈ ಬೇರೆ ಬೇರೆ ಅಕ್ಷರಗಳಿಂದ ನಾವು ಏನನ್ನಾದರೂ ರಚಿಸಬಹುದೋ ?" ಪುನಃ ಸ್ವಲ್ಪ ಕಾಲದ ವರೆಗೆ ವಯಸ್ಕರು ಮೌನ ತಾಳಿಕೊಂಡಿರಬಹುದು. ಆದರೆ ನಿಧಾನವಾಗಿ ಶಬ್ದರಚನೆಯ ಗುಟ್ಟು ಬಯಲಾಗಿ ಬೇರೆ ಬೇರೆ ಅಕ್ಷರಗಳ ಬೇರೆ ಬೇರೆ ರೀತಿಯ ಜೋಡಣೆಯಿಂದ ತಮ್ಮ ಭಾಷೆಯಲ್ಲಿ ಉಪಯೋಗಿಸಲ್ಪಡುತ್ತಿರುವ ಹಲವಾರು ಶಬ್ದಗಳನ್ನು ಅವರು ಕಂಡು ಹಿಡಿಯುವರು. ಒಬ್ಬನು ಜಗಳ ಎಂದು ಕಂಡು ಹಿಡಿದರೆ ಮತ್ತೊಬ್ಬನು ಗಳ ಇನ್ನೊಬ್ಬನು ಗಜ ಹೀಗೆ ಹೇಳುತ್ತಾ ಮುಂದುವರಿಯಬಹುದು. ಕೂಡಲೇ ಎಲ್ಲರೂ ಶಬ್ದ ಜೋಡಣೆಯ ಆಟದಲ್ಲಿ ಮಗ್ನರಾಗಿ ಹೊಸ ವಿಷಯವನ್ನು ತಾವೇ ಕಂಡು ಹಿಡಿದವು; ಎಂಬ ಸಂತೋಷದಿಂದ ತಾನು ಮುಂದು ತಾನು ಮುಂದು ಎನ್ನುತ್ತಾ ಹಲವಾರು ಶಬ್ದಗಳ ರಾಶಿಯನ್ನೇ ಮಾಡುವರು. ಉದಾ : ಜಾಗ ಗಾಳ, ಆಗ, ಜಗಿ, ಆಳ........ ಹೀಗೆ ಸೂತ್ರದಲ್ಲಿ ಮೂಲತಃ ಬಂದ ಶಬ್ದ ಜನಕ ಶಬ್ದವಾಗಿದ್ದು ಅದರಿಂದ ಹಲವಾರು ಜನ ಶಬ್ದಗಳನ್ನು ವಯಸ್ಕರು ಕಂಡು ಹಿಡಿಯುವರು.

೧೦) ಇದೇ ರೀತಿ ಬೇರೆ ಬೇರೆ ಸಮಸ್ಯೆಗಳನ್ನು ತೋರಿಸುವ ಉಳಿದ ಜನಕ ಶಬ್ದಗಳನ್ನು ಕ್ರಮವಾಗಿ ಎತ್ತಿಕೊಂಡು ಮುಂದುವರಿಯಬೇಕಾಗುವುದು.

ಎರಡನೇ ಜನಕ ಶಬ್ದದ ಅರಿವು ಆದ ಮೇಲೆ, ಎರಡೂ ಜನಕ ಶಬ್ದಗಳಲ್ಲಿ ಬರುವ ಅಕ್ಷರಗಳನ್ನು ಬೇರೆ ಬೇರೆ ರೀತಿಯಲ್ಲಿ ಕೂಡಿಸಿ ಹೊಸ ಹೊಸ ಶಬ್ದಗಳನ್ನು ವಯಸ್ಕರು ಕಂಡು ಹಿಡಿಯುವರು. ಇದೇ ರೀತಿ ಮೂರನೇ, ನಾಲ್ಕನೇ ಮತ್ತು ಐದನೇ ಜನಕ ಶಬ್ದಗಳ ವಿವೇಚನೆ ನಡೆಯುವುದು.

೧೧) ಐದು ಅಥವಾ ಆರು ಜನಕ ಶಬ್ದಗಳನ್ನು ಕಲಿತ ಮೇಲೆ, ಶಬ್ದಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸಿ ಮಾತುಗಳನ್ನು ರಚಿಸುವ ತತ್ವವನ್ನು ವಯಸ್ಕರು ಕಂಡು ಹಿಡಿಯುವರು. ಅವರು ಪೋಣಿಸಿದ ವಾಕ್ಯಗಳಲ್ಲಿ ಅವರ ಜೀವನದ ಅನುಭವವು ಸರಳವಾಗಿಯೂ ಕಾವ್ಯಾತ್ಮಕವಾಗಿಯೂ ಪ್ರತಿಬಿಂಬಿಸವುದು.

ಹೀಗೆ ಪ್ರತಿ ಹಂತದಲ್ಲೂ ವಯಸ್ಕರು ರಚನಾತ್ಮಕವಾಗಿ ಭಾಗವಹಿಸಿ ಸಂವಾದದ ಮೂಲಕ ಜ್ಞಾನಾರ್ಜನೆಯು ತಾವೇ ಗಳಿಸಿದ ಸಂಗತಿ ಎಂಬ ಅರಿವಾಗಿ ಹೆಮ್ಮೆಯಿಂದ

ಹಾಗೂ ಸಂತೋಷದಿಂದ ಮುಂದುವರಿಯುವರು. ಕನ್ನಡ ಭಾಷೆಯ ಲಿಪಿಯ ಇನ್ನೂ ಕೆಲವು ವೈಶಿಷ್ಟ್ಯಗಳನ್ನು ಇದೇ ರೀತಿ ರಚನಾತ್ಮಕವಾಗಿಯೇ ವಯಸ್ಕರು ಸಮಸ್ಯೆಯನ್ನು ಬಗೆಹರಿಸಿ ಕಂಡು ಹಿಡಿಯುವಂತೆ ಪ್ರೇರಕನು ಅವಕಾಶವನ್ನು ಕಲ್ಪಿಸಬೇಕಾಗುವುದು.

೧೨) ಒತ್ತಕ್ಷರಗಳ ಜ್ಞಾನ :

ಒತ್ತಕ್ಷರಗಳನ್ನು ಮೂಲಾಕ್ಷರಗಳಿಂದ ಹೆಚ್ಚು ಬದಲಾವಣೆಯಾಗದೇ ಬರುವ ಒತ್ತಕ್ಷರಗಳು ಮತ್ತು ಹೆಚ್ಚು ಬದಲಾವಣೆಯಾಗಿ ಬರುವ ಒತ್ತಕ್ಷರಗಳು ಎಂದು ಎರಡು ಭಾಗ ಮಾಡಬಹುದು. ಮೊದಲು ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗದ ಒತ್ತಕ್ಷರಗಳನ್ನು ಗಮನಿಸುವುದು ಒಳ್ಳೆಯದು.

ಸೂತ್ರಮಾಲೆಯನ್ನು ರಚಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ವಿಷಯವೇನೆಂದರೆ ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗದ ಒತ್ತಕ್ಷರವಿರುವ ಜನಕ ಶಬ್ದದ ವಿವೇಚನೆ ಬರುವ ಮೊದಲು, ಆ ಒತ್ತಕ್ಷರದ ಮೂಲಾಕ್ಷರವಿರುವ ಶಬ್ದ ಬರುವಂತೆ ನೋಡಿಕೊಳ್ಳಬೇಕು. ಅಂದರೆ ಒತ್ತಕ್ಷರವಿರುವ ಜನಕ ಶಬ್ದವನ್ನು ಕಲಿಯುವ ಮೊದಲು ವಯಸ್ಕರಿಗೆ ಅದೇ ಅಕ್ಷರದ ಮೂಲರೂಪ ಗೊತ್ತಿರುತ್ತದೆ. ಉದಾ : ಅಮಲಗೊಂಡಿಯ ಸೂತ್ರ ಮಾಲೆಯಲ್ಲಿ ೧೦ ನೇ ಜನಕ ಶಬ್ದ ಹುಕಥೆ ಆಗಿದ್ದು ನಂತರ ದೇವಸ್ಥಾನ ಎಂಬ ಜನಕ ಶಬ್ದ ಬಂದಿರುತ್ತದೆ.

ದೇವಸ್ಥಾನ ಶಬ್ದದಲ್ಲಿನ ಹೊಸ ಅಕ್ಷರಗಳ ಪರಿಚಯವನ್ನು ಮೇಲೆ ಹೇಳಿದ ಕ್ರಮವನ್ನನುಸರಿಸಿ ಪಡೆದ ನಂತರ ಪ್ರೇರಕನು ಒತ್ತಕ್ಷರವಾಗಿದ್ದ '್ಥ' ಅಕ್ಷರವನ್ನು ಪ್ರತ್ಯೇಕವಾಗಿ ಬರೆದು ತೋರಿಸುವನು. ಅದರ ಬಲ ಬದಿಗೆ ಥ ಅಕ್ಷರದ ಕಾಗುಣಿತಗಳನ್ನು ನೇರ ಸಾಲಾಗಿ ಅವನು ಬರೆಯುವನು ಮತ್ತು ಅವನ್ನು ಗಮನಿಸಲಿಕ್ಕೆ ವಯಸ್ಕರನ್ನು ಕೇಳುವನು.

ಉದಾ : ್ಥ ಥ
ಥಾ
ಥಿ
ಥೀ
ಥು
ಥೂ
ಥೃ
ಥೆ
ಥೇ
ಥೈ

ಥೊ
ಥೋ
ಥೌ
ಥಂ
ಥಃ

ಸ್ವಲ್ಪ ಸಮಯದ ನಂತರ ಪ್ರೇರಕನು ವಯಸ್ಕರಿಗೆ ಈ ಪ್ರಶ್ನೆ ಹಾಕುವನು : "ನೇರ ಸಾಲಿನಲ್ಲಿರುವ ಅಕ್ಷರಗಳಿಗೂ ಎಡಬದಿಯಲ್ಲಿ ಬರೆದಿರುವ ಅಕ್ಷರಕ್ಕೂ ಏನು ವ್ಯತ್ಯಾಸವಿದೆ ?" ವಯಸ್ಕರು ವ್ಯತ್ಯಾಸವನ್ನು ಗಮನಿಸಿ ಎಡಬದಿಯಲ್ಲಿದ್ದ ಅಕ್ಷರ ಸಾಲಿನಲ್ಲಿದ್ದ ಅಕ್ಷರಗಳನ್ನು ಹೋಲುತ್ತದೆ. ಆದರೆ ಅದು ಉಳಿದವುಗಳಿಗಿಂತ ಚಿಕ್ಕದಾಗಿಯೂ ತಲೆಕಟ್ಟು ಇಲ್ಲದೆಯೂ ಬಂದಿದೆ" ಎಂದು ಉತ್ತರಿಸಬಹುದು. ಹೀಗೆ ಪ್ರೇರಕನು ಸಾಮಾನ್ಯವಾಗಿ ಎಲ್ಲಾ ಅಕ್ಷರಗಳ ಒತ್ತಕ್ಷರದ ಸ್ವರೂಪವನ್ನು ತೋರಿಸಿ ಕೊಡುವನು. ಒಂದು ಅಕ್ಷರವನ್ನು ಚಿಕ್ಕದಾಗಿ ತಲೆಕಟ್ಟು ಇಲ್ಲದೇ ಇನ್ನೊಂದು ಅಕ್ಷರದ ಕೆಳಗೆ ಬರೆದರೆ ಅದು ಒತ್ತಕ್ಷರವಾಗುತ್ತದೆ. ಒತ್ತಕ್ಷರದಲ್ಲಿ ಮೂಲಕ್ಷರಕ್ಕಿಂತ ಬೇರೆಯೇ ರೂಪವಿರುವ ಅಕ್ಷರಗಳ ಬಗ್ಗೆ ಈ ಹಂತದಲ್ಲಿ ಅವನು ಏನೂ ಹೇಳುವುದಿಲ್ಲ.

೧೩) ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗುವ ಒತ್ತಕ್ಷರಗಳು :

ಅಮಲಗೊಂದಿಯ ಸೂತ್ರಮಾಲೆಯಲ್ಲಿ ೧೨ ನೇ ಜನಕ ಶಬ್ದ ಪ್ರಯಾಣ. ಇದು ದೇವಸ್ಥಾನ ಜನಕ ಶಬ್ದದ ನಂತರವೇ ಬರುತ್ತದೆ. ಪ್ರಯಾಣ ಪದದಲ್ಲಿ '್ರ' ಚಿಹ್ನೆ ರಕಾರದ ಒತ್ತಕ್ಷರ ರೂಪ. ಅದು ಮೂಲಾಕ್ಷರವನ್ನು ಅಷ್ಟು ಹೋಲುವುದಿಲ್ಲ. ಪ್ರಯಾಣ ಶಬ್ದದ ಮೊದಲು 'ರ' ಕಾರ ಬರುವಂತೆ ನೋಡಿಕೊಳ್ಳಬೇಕು. ಅದೇ ರೀತಿ ಉಳಿದ ಇಂತಹ ಒತ್ತಕ್ಷರ ಇರುವ ಮೂಲಾಕ್ಷರಗಳ ಪರಿಚಯವೂ ಈಗಾಗಲೇ ಆಗಿರಬೇಕು. ಅಮಲಗೊಂದಿಯ ಸೂತ್ರಮಾಲೆಯಲ್ಲಿ ಪ್ರಯಾಣ ಜನಕ ಶಬ್ದದ ಮೊದಲು 'ರ' ಕಾರ ೯ ನೇ ಆಹಾರ ಪದದಲ್ಲಿದೆ 'ಲ' ಕಾರ ೩ ನೇ ಕೂಲಿ ಪದದಲ್ಲಿದೆ; 'ಮ' ಕಾರ ೪ ನೇ ಭೂಮಿ ಪದದಲ್ಲಿದೆ. 'ತ' ಕಾರ ೫ ನೇ ಜೀತ ಪದದಲ್ಲಿದೆ; 'ನ' ಕಾರ ೧೧ ನೇ ದೇವಸ್ಥಾನ ಪದದಲ್ಲಿದೆ; ಮತ್ತು 'ಯ' ಕಾರ ಪ್ರಯಾಣ ಪದದಲ್ಲೇ ಇದೆ.

ಪ, ಯಾ, ಣ, ಅಕ್ಷರಗಳ ಪರಿಚಯವಾದ ಮೇಲೆ ಪ್ರೇರಕನು ಕೆಲವು ಪ್ರಶ್ನೆಗಳ ಮುಖಾಂತರ ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗಿ ಬರುವ ಒತ್ತಕ್ಷರಗಳ ಜ್ಞಾನ ಬರುವಂತೆ ನೋಡಿಕೊಳ್ಳುತ್ತಾನೆ. '್ರ' ಚಿಹ್ನೆಯನ್ನು ಬರೆದು ಈ ಚಿಹ್ನೆ ಏನು ? ಎಂದು ವಯಸ್ಕರನ್ನು ಕೇಳುತ್ತಾನೆ. ಅದಕ್ಕೆ ಅವರು "ಅದು ಒಂದು ಒತ್ತಕ್ಷರವೇ ಇರಬೇಕು" ಎಂದು ಉತ್ತರ ಕೊಡುವರು. ನಂತರ ಪ್ರೇರಕನು "ಪ್ರಯಾಣ ಶಬ್ದದಲ್ಲಿ ಬರುವ ಉಚ್ಚಾರಗಳು ಯಾವುವು ?" ಎಂದು ಪ್ರಶ್ನೆ ಹಾಕುತ್ತಾನೆ. ಅದರಲ್ಲಿ

ಪ, ರ, ಯಾ ಮತ್ತು ಣ ಉಚ್ಚಾರಗಳು ಬರುತ್ತವೆ." ಎಂದು ವಯಸ್ಕರು ಉತ್ತರಿಸುವರು. ಪ ಉಚ್ಚಾರದ ಚಿಹ್ನೆ ಪ, ಯಾ ಉಚ್ಚಾರದ ಚಿಹ್ನೆಯ; ಣ ಉಚ್ಚಾರದ ಣ ಎಂದಾದರೆ ಪ್ರಯಾಣ ಶಬ್ದದಲ್ಲಿ ರ ಉಚ್ಚಾರದ ಚಿಹ್ನೆ ಯಾವುದು ಇರಬಹುದು ? " ಎಂಬ ಪ್ರೇರಕನ ಪ್ರಶ್ನೆಗೆ "ಪ್ರಯಾಣ ಶಬ್ದದಲ್ಲಿ ್ರ ಚಿಹ್ನೆಯೇ ರಕಾರವನ್ನು ಸೂಚಿಸುತ್ತದೆ" ಎಂದು ವಯಸ್ಕರು ದೃಢವಾಗಿ ಹೇಳಬಲ್ಲರು.

ಇದಾದ ಮೇಲೆ ಪ್ರೇರಕನು ಮತ್ತೊಂದು ಪ್ರಶ್ನೆಯನ್ನು ಕೇಳುತ್ತಾನೆ : '್ರ' ಒತ್ತಕ್ಷರವನ್ನು ರ ಅಕ್ಷರದೊಡನೆ ಹೋಲಿಸಿದಾಗ ಮತ್ತು '್ಥ' ಒತ್ತಕ್ಷರವನ್ನು ಥ ಅಕ್ಷರದೊಡನೆ ಹೋಲಿಸಿದಾಗ, ರ ಕಾರದ ಒತ್ತಕ್ಷರವಾದ '್ರ' ಹಾಗೂ ಥ ಕಾರದ ಒತ್ತಕ್ಷರವಾದ '್ಥ' ಇವುಗಳಲ್ಲಿ ಸಮಾನವಾದ ಮತ್ತು ಬೇರೆ ಬೇರೆಯಾಗಿರುವ ಅಂಶಗಳು ಏನಾದರೂ ಇವೆಯೇ ?" ವಯಸ್ಕರು ತಾವಾಗಿಯೇ ಈ ಎರಡು ಒತ್ತಕ್ಷರಗಳಲ್ಲಿರುವ ವ್ಯತ್ಯಾಸವನ್ನು ಕಂಡು ಹಿಡಿಯಲು ಶಕ್ಯರು. ಎರಡೂ ಒತ್ತಕ್ಷರಗಳು ಇನ್ನೊಂದು ಅಕ್ಷರದ ಕೆಳಗೆ ಬರುವುವು ಮತ್ತು ಚಿಕ್ಕದಾಗಿರುವುವು. ಇದು ಸಮಾನವಾದ ಸಂಗತಿ. ಬೇರೆ ಬೇರೆ ಆಗಿರುವ ಅಂಶವೆಂದರೆ ಥ ಕಾರದ ಒತ್ತಕ್ಷರ ್ಥ ಮೂಲಾಕ್ಷರವನ್ನು ಹೆಚ್ಚಾಗಿ ಹೋಲುತ್ತದೆ. ಕೇವಲ ತಲೆಕಟ್ಟು ಹೋಗಿದೆ. ಆದರೆ ರ ಕಾರದ ಒತ್ತಕ್ಷರ '್ರ' ಮೂಲಾಕ್ಷರವನ್ನು ಹೆಚ್ಚು ಹೋಲುವುದಿಲ್ಲ. ಈ ಹಂತದಲ್ಲಿ ಪ್ರೇರಕನು '್ರ' ಮಾದರಿಯ ಉಳಿದ ಎಲ್ಲಾ ಒತ್ತಕ್ಷರಗಳನ್ನು ಅವುಗಳ ಮೂಲಾಕ್ಷರಗಳೊಡನೆ ಪಟ್ಟಿಮಾಡಿ ಬರೆದು ಇನ್ನೂ ಕೆಲವು ಹೊಸ ಜ್ಞಾನದ ಅರಿವು ಮೂಡಿಸುತ್ತಾನೆ. ಹೊಸ ಜ್ಞಾನವು ಸಮಸ್ಯೆಯನ್ನು ಬಗೆಹರಿಸುವುದರ ಮೂಲಕ ಬರುವುದರಿಂದ ಅದು ಪ್ರೇರಕನಿಂದ ಕೊಡಲ್ಪಟ್ಟ ಕಾಣಿಕೆಯಾಗಿ ಪರಿಣಮಿಸುವುದಿಲ್ಲ.

ಉದಾ : ರ ್ರ
ಲ ್ಲ
ಮ ್ಮ
ತ ್ತ
ನ ್ನ
ಯ ್ಯ

೧೫) ಮಹಾಪ್ರಾಣಗಳು :

ಅಮಲಗೊಂದಿಯ ಸೂತ್ರಮಾಲೆಯಲ್ಲಿ ೧೩ ನೇ ಜನಕ ಶಬ್ದ ಮೂಢನಂಬಿಕೆ ಇಲ್ಲಿ ಢ ಮಹಾಪ್ರಾಣ. ೨ ನೇ ಜನಕ ಶಬ್ದವಾದ ಕಾಡು ಪದದಲ್ಲಿ ಡ ಅಲ್ಪಪ್ರಾಣ ಬಂದಿದೆ. ಇದೇ ರೀತಿ ೧೩ ನೇ ಜನಕ ಶಬ್ದದ ಪರಿಚಯ ಆಗುವುದರೊಳಗೆ ಎಲ್ಲಾ ಅಲ್ಪಪ್ರಾಣಗಳ ಜ್ಞಾನವೂ ಬಂದಿರುತ್ತದೆ. ಪ್ರೇರಕನು ದ ಮತ್ತು ಧ ಅಕ್ಷರಗಳನ್ನು

ಕಪ್ಪು ಹಲಗೆಯ ಮೇಲೆ ಬರೆದು ಕೆಲವು ಪ್ರಶ್ನೆಗಳ ಮುಖಾಂತರ ಎಲ್ಲಾ ಮಹಾ ಪ್ರಾಣಗಳ ಅರಿವು ಬರುವಂತೆಯೂ ನೋಡಿಕೊಳ್ಳುತ್ತಾನೆ.

ದ ಧ

ಪ್ರೇರಕ : "ಈ ಎರಡು ಅಕ್ಷರಗಳಲ್ಲಿ ಏನಾದರೂ ಹೋಲಿಕೆ ಕಾಣುತ್ತಿರೋ ?"

ವಯಸ್ಕ : "ಎರಡೂ ಅಕ್ಷರಗಳು ಸಾಧಾರಣ ಒಂದೇ ರೀತಿ ಇವೆ. ಆದರೆ ಎರಡನೇ ಅಕ್ಷರಕ್ಕೆ ಬಾಲ ಒಂದು ಹೆಚ್ಚಿಗೆ ಇದೆ. "

ಪ್ರೇರಕ : " ಆ ಎರಡು ಅಕ್ಷರಗಳ ಉಚ್ಚಾರಣೆಯಲ್ಲಿ ಏನಾದರೂ ಹೋಲಿಕೆ ಇದೆಯೋ ?"

ವಯಸ್ಕ : "ಎರಡೂ ಅಕ್ಷರಗಳ ಉಚ್ಚಾರವೂ ಸಾಧಾರಣ ಒಂದೇ. ಆದರೆ ಬಲ ಗಡೆಯ ಅಕ್ಷರಕ್ಕೆ ಹೆಚ್ಚು ಒತ್ತನ್ನು ಕೊಡಬೇಕು."

ದ ಧ	ಜ ಝ
ಪ ಫ	ಟ ಠ
ಕ ಖ	ತ ಥ
ಗ ಘ	ಬ ಭ
ಚ ಛ	

ಈ ಎರಡು ಪಟ್ಟಿಗಳ ಮುಖಾಂತರ ಎಲ್ಲಾ ಮಹಾಪ್ರಾಣಗಳ ಜ್ಞಾನ ಬರುವಂತೆ ಮಾಡಬಹುದು. ವಯಸ್ಕರೇ ಆ ವಿಷಯಗಳನ್ನು ಕಂಡುಕೊಳ್ಳುತ್ತಾರೆ. ಕೆಲವು ಅಕ್ಷರಗಳಿಗೆ ಒತ್ತನ್ನು ಕೊಟ್ಟು ಅವನ್ನು ಮಹಾಪ್ರಾಣ ಮಾಡುವುದುಂಟು. ಒತ್ತನ್ನು ಕೊಡದಿದ್ದರೆ ಅವು ಅಲ್ಪಪ್ರಾಣವೆನಿಸುತ್ತವೆ. ಒತ್ತು ಅಥವಾ ಮಹಾ ಪ್ರಾಣವನ್ನು ತೋರಿಸಲು ಮೂಲಕ್ಷರಕ್ಕೆ ಅಥವಾ ಅಲ್ಪಪ್ರಾಣಕ್ಕೆ ಕೆಲವು ಸಾರಿ ಕೇವಲ ಬಾಲ ಕೊಡುವುದುಂಟು. ಕೆಲವು ಸಾರಿ ಬೇರೆಯೇ ಅಕ್ಷರವನ್ನು ಬಳಸುವುದುಂಟು.

೧೫) ಮೂಲಾಕ್ಷರವನ್ನು ಸಂಪೂರ್ಣವಾಗಿ ಹೋಲುವ ಒತ್ತಕ್ಷರಗಳು:—

ಸೂತ್ರಮಾಲೆಯ ೧೪ ನೇ ಜನಕ ಶಬ್ದ ಜ್ಞಾನ. ಇದರಲ್ಲಿ ಯ ಜಾ ಮತ್ತು ನ ಅಕ್ಷರಗಳ ಪರಿಚಯ ಈಗಾಗಲೇ ಆಗಿದೆ. 'ಞ' ಒಂದು ಒತ್ತಕ್ಷರವೆಂದು ವಯಸ್ಕರಿಗೆ ತಿಳಿಯುತ್ತದೆ. ಅದು ಮೂಲರೂಪದಲ್ಲಿ ಇನ್ನೂ ಬಂದಿಲ್ಲ. ಅದರ ಮೂಲಾಕ್ಷರವೂ ಅದೇ; ರೂಪದಲ್ಲಿ ಮಾತ್ರ ದೊಡ್ಡದಾಗಿ ಇರುತ್ತದೆ. ಈ ವಿಷಯವನ್ನು ವಯಸ್ಕರೇ ಕಂಡು ಹಿಡಿಯುವಂತೆ ಮಾಡಲು 'ಞ' ಅಕ್ಷರದ ಎರಡೂ ರೂಪಗಳನ್ನು ಬರೆದು ಅವುಗಳನ್ನು ಹೋಲಿಸಲು ಕೇಳುತ್ತಾನೆ.

ಞ ಞ

ನಂತರ ಅಕ್ಷರ ಜ್ಞಾ ಗಳ ಕೆಳಗೆ ಕ್ರಮವಾಗಿ ಖ–್ಖ, ಜ–್ಜ, ಬ–್ಬ, ವ–್ವ ಅಕ್ಷ

ರಗಳನ್ನು ಬರೆದು ಅವುಗಳ ಪರಿಚಯವಾಗುವಂತೆ ಪ್ರೇರಕನು ನೋಡಿಕೊಳ್ಳುತ್ತಾನೆ. ೧೬) ಸೂತ್ರಮಾಲೆಯ ೧೬ ನೇ ಶಬ್ದ ಶುಚಿತ್ವ. ಇಲ್ಲಿ ಹೊಸದಾಗಿ ಕಲಿಯ ಬೇಕಾದ ಅಕ್ಷರ ಶು. ಈ ಅಕ್ಷರದ ಪರಿಚಯವಾದರೆ ಕನ್ನಡದ ಎಲ್ಲಾ ಅಕ್ಷರಗಳ ಪರಿಚಯವಾದಂತೆ. ಶ ಅಕ್ಷರ ಕಲಿತ ಮೇಲೆ ಇಷ್ಟರವರೆಗೆ ಕಲಿತ ಎಲ್ಲಾ ವ್ಯಂಜನ ಗಳಿಗೆ ಒತ್ತಕ್ಷರಗಳನ್ನು ಬರೆಯುವಂತೆ ಪ್ರೇರಕನು ವಯಸ್ಕರನ್ನು ಕೇಳಬಹುದು.

೧೭) ಸೂತ್ರಮಾಲೆಯಲ್ಲಿ ಕೊನೆಯ ಶಬ್ದ ಐಶ್ವರ್ಯ. ಇದರಲ್ಲಿ ಕಲಿಯ ಬೇಕಾದ ಹೊಸ ಅಕ್ಷರ ಇಲ್ಲ. ಸಮಸ್ಯೆಯ ಬಗ್ಗೆ ಚರ್ಚೆ ನಡೆದ ಮೇಲೆ ಪ್ರೇರಕನು ಐಶ್ವರ್ಯ ಶಬ್ದದ ಕೆಳಗೆ ಐಶ್ವರ್ಯ ಎಂಬ ಪದದ ರೂಪ ಬರೆದು ಆ ಎರಡು ಪದಗಳನ್ನು ಹೋಲಿಸಲು ಕೇಳುತ್ತಾನೆ.

ಐಶ್ವರ‍್ಯ
ಐಶ್ವರ್ಯ

ಪ್ರೇರಕ : "ಈ ಎರಡು ಪದಗಳಲ್ಲಿ ನೀವೇನಾದರೂ ಹೋಲಿಕೆ ಕಾಣುತ್ತಿರೋ ?"
ವಯಸ್ಕ : "ಮೊದಲ ಶಬ್ದದ ಕೊನೆಯ ಅಕ್ಷರ—ರ; ಅದಕ್ಕೆ ಯ ಕಾರದ ಒತ್ತು –ೄ– ಬಂದಿದೆ. ಎರಡನೇ ಪದದ ಕೊನೆಯ ಅಕ್ಷರ ಯ ಮತ್ತು ಅದರ ನಂತರ ಏನೋ ಒಂದು ಚಿಹ್ನೆ ಬಂದಿದೆ."
ಪ್ರೇರಕ : "ಆ ಚಿಹ್ನೆ ಏನಾಗಬಹುದು ? ಪದವನ್ನು ಉಚ್ಚಾರ ಮಾಡಿ ನೋಡಿ ದಾಗ ಏನು ಗೊತ್ತಾಗುತ್ತದೆ. ?"
ವಯಸ್ಕ : ಪದದ ಉಚ್ಚಾರ ಮಾಡುವಾಗ ರ ಕಾರ ಇನ್ನು ಬಂದಿಲ್ಲ........ಬಹುಶಃ ಯ ದ ನಂತರ ಬರುವ ಚಿಹ್ನೆಯೇ ರ ಕಾರ ವಾಗಿರಬೇಕು....
ಪ್ರೇರಕ : ' ೯ ' ಚಿಹ್ನೆ ರ ಕಾರವಾದರೆ ಅದು ಯಾವ ಜಾಗದಲ್ಲಿದೆ ? ಉಚ್ಚಾರ ಮಾಡುವಾಗ ರ ಕಾರ ಯಾವ ಜಾಗದಲ್ಲಿ ಬರುತ್ತದೆ?
ವಯಸ್ಕ : ಉಚ್ಚಾರ ಮಾಡುವಾಗ ರ ಕಾರ ಯ ಕಾರದ ಮೊದಲು ಬರುತ್ತದೆ. ಆದರೆ ರಕಾರದ ' ೯ ' ಚಿಹ್ನೆಯ ಅಕ್ಷರದ ನಂತರ ಬರೆಯಲ್ಪಟ್ಟಿದೆ."

ಈ ಕ್ರಮಗಳನ್ನು ಅನುಸರಿಸಿ, ಕೇವಲ ೪೫–೫೦ ತಾಸುಗಳಲ್ಲಿ ವಯಸ್ಕರು ಕನ್ನಡ ಲಿಪಿಯ ಜ್ಞಾನವನ್ನು ಪಡೆಯುವರು. ಪ್ರೇರಕನು ವಯಸ್ಕರಲ್ಲಿ ಅಕ್ಷರ ಜ್ಞಾನವನ್ನು ಮೂಡಿಸುವಾಗ ಒಂದು ಸಂಗತಿಯನ್ನು ಮನಸ್ಸಿನಲ್ಲಿಟ್ಟರೆ ಉಚಿತ. ವಯಸ್ಕರಿಗೆ ಓದಲು ತಕ್ಕ ಮಟ್ಟಿಗೆ ಸುಲಭವಾಗಿದ್ದಂತೆ. ಬರೆಯಲು ಅಷ್ಟು ಸುಲಭ ವಾಗಿರುವುದಿಲ್ಲ. ಬರವಣಿಗೆಗೆ ಕೈಬೆರಳುಗಳು ಸುಲಭವಾಗಿ ಕೂಡಿ ಬರುವುದಿಲ್ಲ. ಮಾತ್ರವಲ್ಲದೇ ವಯಸ್ಕರರ ಜೀವನದಲ್ಲಿ ಓದುವಿಕೆಯ ಪ್ರಾಧಾನ್ಯವಿದ್ದಂತೆ ಬರೆಯು ವಿಕೆಯ ಪ್ರಾಧಾನ್ಯವಿರುವುದಿಲ್ಲ. ಆದ್ದರಿಂದ ವಯಸ್ಕರು ಅಕ್ಷರಗಳನ್ನು ಕಲಿಯು ವಾಗ ಓದುವಿಕೆಗೆ ಹೆಚ್ಚು ಮಹತ್ವ ಕೊಟ್ಟು, ಬರವಣಿಗೆಯನ್ನು ಸಾವಕಾಶವಾಗಿ ರೂಢಿಸಿಕೊಳ್ಳುವಂತೆ ಪ್ರೇರಕರು ನೋಡಿಕೊಳ್ಳಬಹುದು.

ಚರ್ಚಾ ಕೂಟವು ಯಶಸ್ವಿಯಾಗಿ ನಡೆದರೆ ವಯಸ್ಕರು ಅಕ್ಷರ ಜ್ಞಾನವನ್ನು ಪಡೆಯುತ್ತಿದ್ದಂತೆ, ತಮ್ಮ ಜೀವನದ ಕೆಲವು ಮುಖ್ಯ ಸಮಸ್ಯೆಗಳ ಮೇಲೂ ವಿವೇಚನೆ ನಡೆಸುವರು. ಕನ್ನಡ ಭಾಷೆಯನ್ನು ಓದಲು ಬರೆಯಲು ಕಲಿತಂತೆ ತಮ್ಮ ಜೀವನ ವನ್ನು ಕಾಡುತ್ತಿದ್ದ ಕೆಲವು ಸಮಸ್ಯೆಗಳನ್ನು ಬಗೆಹರಿಸಲು ಯೋಗ್ಯ ಕ್ರಮಗಳನ್ನು ಕೈಕೊಳ್ಳುವರು. ಅಕ್ಷರ ಜ್ಞಾನದ ಕೊನೆಯ ಹಂತಕ್ಕೆ ಬರುತ್ತಿರುವಾಗ, ತಾವು ಒಟ್ಟುಕೂಡಿ, ಸಂವಾದದ ಮೂಲಕ ತಮ್ಮ ಅವಶ್ಯಕತೆಗಳನ್ನು ಪೂರೈಸುವ ಔಚಿತ್ಯ ವನ್ನು ಅರಿಯುವರು ಮತ್ತು ತಾವಾಗಿಯೇ ಚರ್ಚಾ ಕೂಟವನ್ನು ಮುಂದುವರಿಸಲು ನಿರ್ಧರಿಸಬಹುದು. ಇಂತಹ ಚರ್ಚಾಕೂಟಗಳಲ್ಲಿ ತಮ್ಮ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆಯೇ ಎಂದು ಅವರು ನೋಡಿಕೊಳ್ಳುವರು ಹಾಗೂ ಹೊಸ ಸಮಸ್ಯೆಗಳು ತಲೆದೋರಿದ್ದರೆ, ಅವನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಲು ಕ್ರಮ ಕೈಗೊಳ್ಳುವರು. ಅದೇ ರೀತಿ ತಮ್ಮ ಅಕ್ಷರ ಜ್ಞಾನವನ್ನು ಬಲಪಡಿಸುವಂತೆಯೂ ಅವರು ನೋಡಿಕೊಳ್ಳಬಹುದು.

‘ಚಿತ್ರಾಂಗದೆ’ಯ ಕನಸುಗಳು- ಒಂದು ವಿಶ್ಲೇಷಣೆ

● ಎಂ. ಇಕ್ಬಾಲ

ವ್ಯಕ್ತಿಯ ಚೇತನಾವಸ್ಥೆಯ ಭಾವನೆಗಳು, ಆಸೆ ಆಕಾಂಕ್ಷೆಗಳು, ಸುಪ್ತಾವಸ್ಥೆಯಲ್ಲಿ ಮೂರ್ತಗೊಂಡು ರಂಜಿಸುತ್ತವೆ. ಅವೇ ಕನಸುಗಳು. ಈ ಕನಸುಗಳು ಭವಿಷ್ಯದ ಶುಭಾಶುಭಗಳನ್ನು ಧ್ವನಿಸುತ್ತವೆ. ಎಂಬುದು ನಮ್ಮ ಪರಂಪರೆಯಲ್ಲಿ ನೆಲೆ ನಿಂತ ನಂಬುಗೆ. * ಕಾರಣ ಪರಂಪರೆಯನ್ನೂ ತಮ್ಮ ಕಾವ್ಯದ ಒಂದು ಅಂಗವಾಗಿ ಆರಾಧಿಸುತ್ತಿರುವ ಕವಿ ಕುವೆಂಪುರವರ ಬಹಳಷ್ಟು ಪಾತ್ರಗಳು ಕನಸಿನ ನೆಲೆಗಟ್ಟಿನ ಮೇಲೆ ಭವಿಷ್ಯದ ಶುಭಾಶುಭಗಳನ್ನು ಕಾಣುತ್ತವೆ. ಕಾವ್ಯ ನಿರೂಪಣ ಮತ್ತು ಅವುಗಳ ನಿರ್ವಹಣೆಯಲ್ಲಿ ಬರುವ ಕಲ್ಪನೆಗೆ ಅತೀತವಾದ ಸಂದರ್ಭ, ಸಂಗತಿಗಳನ್ನು ಕನಸಿನ ಮಾಧ್ಯಮದಲ್ಲಿ ಚಿತ್ರಿಸುವುದು ಇವರ ವೈಶಿಷ್ಟ್ಯವೆನಿಸುತ್ತದೆ. ಅವರು ಸೃಷ್ಟಿಸಿರುವ ದೃಷ್ಟಿಯಲ್ಲಿ ಸಹಜತೆ ಎದ್ದು ಕಾಣುತ್ತದೆ. ಪಾತ್ರಗಳ ಸ್ವಭಾವದ ಸೂಕ್ಷ್ಮ ಸಂವೇದನೆಗಳಿಗೆ ಸಂವಾದಿಯಾಗಿ ಅವುಗಳಿಗೆ ತಕ್ಕಂತೆ ಸಂದರ್ಭೋಚಿತ ಕನಸುಗಳನ್ನು ಸೃಷ್ಟಿಸುತ್ತಾರೆ. ಸುಂದರವಾದ, ಸಂದರ್ಭಕ್ಕೆ ಉಚಿತವಾದ ಒಮ್ಮೊಮ್ಮೆ ಅತಿಶಯವೆನಿಸುವಂಥ ವರ್ಣನೆಗಳು ಕನಸುಗಳಲ್ಲಿ ಅಲ್ಲಲ್ಲಿ ಮಿನುಗಿ ಮಿಂಚಿ ಮರೆಯಾಗುತ್ತವೆ. ಇವು ಕವಿಯ ಸಹಜತೆಯ ಅನಿವಾರ್ಯತೆಯೆಂದೆನಿಸಿದರೂ ಧ್ವನಿಪೂರ್ಣವಾಗಿರುತ್ತವೆ ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ.

ಪ್ರಸ್ತುತ ಲೇಖನೋದ್ದೇಶ, ಕುವೆಂಪುರವರ “ಚಿತ್ರಾಂಗದಾ” ಖಂಡ ಕಾವ್ಯದಲ್ಲಿ ಮೂಡಿ ಬರುವ ನಾಯಕಿಯ ಕನಸುಗಳ ವಿಶ್ಲೇಷಣೆ ಮತ್ತು ಅವುಗಳ ವೈಶಿಷ್ಟ್ಯದ ಪರಿಶೀಲನೆಯಾಗಿದೆ. ವಾಗ್ದೇವಿಯ ಆರಾಧನಾನಂತರ ಪ್ರಾರಂಭವಾಗುವ ಕಥಾರಂಭದಲ್ಲಿ ನಾಯಕಿ ಕನಸನ್ನೇ ಕಾಣುತ್ತ ಓದುಗರಿಗೆ ಮೈದೋರುತ್ತಾಳೆ. ಈ ಕನಸಿನಲ್ಲಿ ಅವಳ ನವಯೌವನೋದಯವು ಚೆನ್ನಾಗಿ ಪ್ರತಿಬಿಂಬಿತವಾಗಿದೆ. ಈ ಕನಸು ಅವಳ ಅಂತರಂಗದ ಸುಪ್ತ ಬಯಕೆಯ ಪ್ರತಿಮೆಯಾಗಿ ಮೂಡಿ ಬಂದಿದೆ. ಭವಿಷ್ಯತ್ತನ್ನು

ಸ್ವಪ್ನಗಳಲ್ಲಿ ನಮ್ಮ ಜನರಿಗೆ ಎಷ್ಟು ನಂಬಿಕೆ ಇತ್ತೆಂದು ಪ್ರತಿಪಾದಿಸಲು, ಅನೇಕ ಕಥೆಗಳು ನಮ್ಮಲ್ಲಿ ರೂಢಿಯಲ್ಲಿವೆ.

ಬಾಣಾಸುರನ ಮಗಳಾದ ಚಿತ್ರಲೇಖೆಯು ಪ್ರದ್ಯುಮ್ನನಮಗನಾದ ಅನಿರುದ್ಧನನ್ನು ಸ್ವಪ್ನದಲ್ಲೇ ಮೊದಲ ಬಾರಿಗೆ ಕಂಡಂತೆ; ನಿದ್ರೆಯಲ್ಲಿದ್ದ ಅವಳ ಮನಸ್ಸಿನ ಮೇಲೆ ಆತನ ರೂಪ ಸಂಪೂರ್ಣ ಪರಿಣಾಮವನ್ನು ಮಾಡಿದಷ್ಟು ಆತನ ಚಿತ್ರವನ್ನು ಅವಳು ಯಥಾವತ್ತಾಗಿ ಚಿತ್ರಿಸಿ ತನ್ನ ಸಖಿಗೆ ತೋರಿಸಿದಳಂತೆ;

ಇಂಥ ಅನೇಕ ಆಖ್ಯಾನಗಳು ನಮ್ಮ ಪುರಾತನ ಶಾಸಗಳಲ್ಲಿ ಬರುತ್ತವೆ.

ಧ್ವನಿಸುವ, ಅಂದರೆ ಮುಂದೆ ಅವಳು ಅರ್ಜುನನನ್ನು ಕೂಡುತ್ತಾಳೆ ಎಂಬುದನ್ನೂ ಸೂಚಿಸುತ್ತದೆ. 'ಏಕಮಾತ್ರ ಪುತ್ರಿಯಾಗಿ ಗಂಡಿನಂತೆ ಬೆಳೆದ ಈ ಯುವತಿಯನ್ನು' 'ಮನ್ಮಥ ಅವಳ ಹೆಣ್ಣು ಹೃದಯವನ್ನು ಬಿಚ್ಚಿ ಎಚ್ಚರಿಸಿದನು' ಎಂಬುದೇ ಇಲ್ಲಿಯ ಕನಸಿನ ಸಾರ ಸಂಗತಿ. ಹೆಣ್ಣು ಬಾಲೆಯಾಗಿ ಎಷ್ಟು ದಿನ ತಾನೆ ಬದುಕಿರಲು ಸಾಧ್ಯ. 'ಋತು ಅವಳನ್ನು ತನ್ನ ನಿಯತಿಗೆ ಮಣಿಸುತ್ತದೆ' ಎಂಬುದರ ಸಂಪೂರ್ಣ ಅರ್ಥ ಕನಸಿನಲ್ಲಿಯೇ ವ್ಯಕ್ತವಾಗುತ್ತದೆ.

ದೃಶ್ಯಾರ್ಥದಲ್ಲಿ ಅರ್ಜುನನನ್ನು ಕಂಡ ಈಕೆ ವಾಸ್ತವದಲ್ಲಿಯೂ ಅವನನ್ನು ಕಾಣುತ್ತಾಳೆ ಎಂಬ ಮಾತು ನಿಜ; ಆದರೆ ಇಲ್ಲಿ ಒಂದು ಸಮಸ್ಯೆ ಉದ್ಭವಿಸುವುದು ಅನಿವಾರ್ಯವೆನಿಸುತ್ತದೆ. ಅದೇನೆಂದರೆ ಹುಟ್ಟಿನಿಂದಲೂ ಅರ್ಜುನನನ್ನು ಕಂಡರಿಯದ ಈಕೆ ಕನಸಿನಲ್ಲಿ ಹೇಗೆ ಸಂಧಿಸಿದಳು ಎಂಬುದು; ಹೌದು, ಅಪರಿಚಿತ ವಸ್ತು ವ್ಯಕ್ತಿಗಳನ್ನು ಕನಸಿನಲ್ಲಿ ಕಾಣುವುದು ಅಸಹಜವೇನಲ್ಲ. ಅಂತೆಯೇ ಅವಳನ್ನುವ ಒಂದು ಮಾತನ್ನು ಇಲ್ಲಿ ಸ್ಮರಣೆಗೆ ತಂದುಕೊಂಡಾಗ ಅದು ಇನ್ನೂ ಸಹಜವೆನಿಸುತ್ತದೆ. ತಾನು ಬಿಲ್ ವಿದ್ಯೆಯನ್ನು ಕಲಿಯುವಾಗ ಅರ್ಜುನನ ಹೆಸರನ್ನು ಹೇಳಿಕೊಂಡೇ ಕಲಿತಳಂತೆ,

> "....................ಬಾಲ್ಯ ಕಾಲದಲ್ಲಿ
> ಕಲಿಯಾದೆನಾನರ್ಜುನನ ನಾಮ ಜಪದಿಂದೆ" [1]

ಎಂದಾಗ ಅವನ ಬಗ್ಗೆ ಅವಳ ಆಸ್ಥೆ, ಭೆಟ್ಟಿಯ ಸಂಕಲ್ಪ ಬಹುಶಃ ಉತ್ಕಟವಾಗಿರಬಹುದು; ಹೆಣ್ತನದಿಂದ ಕೂಡುವಾಸೆ ಇರದಿದ್ದರೂ ಗಂಡಿನಂತೆ ಬೆಳೆದ ಈಕೆ ಪುರುಷೋಚಿತವಾಗಿ, ಕಲಿಯೊಡನೆ ಕಲಿ ಸಂಧಿಸುವಂತೆ ಸಂಧಿಸುವ ಆಸೆ ಇರಬಹುದು. ಆದರೆ ಅವಳು ಹೆಣ್ಣು ಎಂಬುದನ್ನು ಅವಳ ಅರಿವಿಗೆ ತರಲು 'ಮಧು ಮದನರ ಅಮರ ತೇಜ' ಕನಸಿನಲ್ಲಿ ಕಾರ್ಯರೂಪಕ್ಕಿಳಿದಿದೆ. ಆದ್ದರಿಂದಲೇ ಅವಳ ಮನೋಸಂಕಲ್ಪದಂತೆ ಅರ್ಜುನನನ್ನು ಸಂಧಿಸಿದ್ದು ಅನಿವಾರ್ಯವಾಗಿದೆ. ವಾಸ್ತವದಲ್ಲಿ ಅವಳು ಹೆಣ್ತನದ ಲಜ್ಜೆ ಅನುಭವಿಸಿದ್ದು ಈಗಲೇ.

> "....................ಸ್ಫುರಿಸಿತಾ ಗಂಡೆದೆಯ
> ಹೃದಯದಲಿ ತಾನು ಹೆಣ್ಣೆಂಬ ಲಜ್ಜೆಯ ಲಹರಿ
> ಮೊತ್ತ ಮೊದಲ್:.................... [2]

ಪುರುಷ ಸಂಪರ್ಕದ ಪ್ರಥಮ ಸ್ಪಂದನ ಸ್ಪಂದಿಸಿದ್ದೂ ಈಗಲೇ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸಂದರ್ಭಕ್ಕೆ ಉಚಿತವಾದ ಕನಸನ್ನಿಲ್ಲಿ ಚಿತ್ರಿಸಿದ್ದಾರೆ. ಇದೆಲ್ಲವನ್ನೂ ಭೌತಿಕಸ್ತರದಲ್ಲಿ ಕಂಡರೆ ಇದನ್ನು "ಮೀರಿದ ಆಧ್ಯಾತ್ಮಿಕ ಸ್ತರವೊಂದು ಅದಕ್ಕುಂಟು. ಈ ದೃಷ್ಟಿಯಿಂದ ಆ ಸ್ವಪ್ನ ಇಡೀ ಕಾವ್ಯಕ್ಕೆ, ಅದು ಒಳಗೊಂಡಿರುವ ದರ್ಶನಕ್ಕೆ

---

೧ ಚಿಂತ್ರಾಂಗದಾ ಪು -೭೫.
೨ " ಪು - ೭.

ಕೀಲಿ ಕೈಯಾಗಿದೆ ಚಿತ್ರಾಂಗದೆ ಕನಸಿನಲ್ಲಿ ಮರಿ ಜಿಂಕೆಯೊಂದನ್ನು ಬೆನ್ನಟ್ಟುತ್ತಾಳೆ; ಅದು ಕಾಮುವನ್ನು ಬೆನ್ನಟ್ಟುವುದರ ಸಂಕೇತವಾಗುತ್ತದೆ. ಆದರೆ "ಮುಟ್ಟ ಮುಟ್ಟದೇ ನೆಲಂ ಮೆಟ್ಟಿ ಮುಂಚುವ ಹರಿಣ ಶಿಶು" ಎಂಬ ವರ್ಣನೆಯಲ್ಲಿ ಕವಿ ಮರ್ತ್ಯಾಮರ್ತ್ಯಗಳ ಮಿಲನವನ್ನು ಧ್ವನಿಸುತ್ತಾರೆ. ಆ ಜಿಂಕೆಯನ್ನು ಅವಳು ಕೊಲ್ಲಬೇಕೆಂದುಕೊಂಡಾಗ "ಕಂಗೊಳಿಸಿದುದು ಮುಂದೆ ನಾಕ ವೈಕುಂಠ ಕೈಲಾಸಲೋಕಂಗಳನೇ ನಗುವೊಂದು ಚಾರುದೃಶ್ಯಂ" ಅವಳ ಕಾಮ ಮುಂದೆ ಶುಭಪರವಾಗುತ್ತದೆ; ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಪತಂಗದ ಉಪಮಾನವನ್ನು ಕೊಟ್ಟಿರುವ ಕವಿ "ತುದಿಗೆ ಮಂಗಳ ಮಾಯವಾದಪುದು" ಎಂದಿರುವುದನ್ನು ಗಮನಿಸಬಹುದು; ಅದು ಮಂಗಮಾಯವಲ್ಲ; ಮಂಗಳಮಾಯ. ಅದಕ್ಕಿಂತಲೂ ಧ್ವನಿಗಭೀರವಾದದ್ದು ಈ ಉಪಮೆ;

"...................ಮರಿ ಮಿಗುವೆ
ಬರಿದು ಹೊಂಬೊಳಲಾಯ್ತು, ಮದ್ದಿಡಿದ ಮಣ್ಮುಡಿಕೆ
ಕಿಡಿಗೊಂಡು ಸಿಡಿಯೆ ರಾತ್ರಿಯ ನಭೋಭೋಗದಲಿ,
ಕರೆವೊಂತೆವೊಲ್ ವರ್ಣಮಯ ನಕ್ಷತ್ರವೃಷ್ಟಿ ?''

ಮೃಣ್ಮಯ ಚಿನ್ಮಯವಾಗುವುದನ್ನು, ದೈಹಿಕ ಕಾಮ ತಪಸ್ಸಿನಿಂದ ಮುಂದೆ ಪವಿತ್ರವಾಗುವುದನ್ನು ಇದು ಹೇಳುತ್ತದೆ. (ಮದ್ದು ಸ್ಫೋಟಕ ಗುಣವುಳ್ಳ ಕಾಮವನ್ನು ಸಂಕೇತಿಸುತ್ತದೆ.)"[1]

ಕನಸಿನಲ್ಲಿ ಹೆಣ್ತನವನ್ನು ಅನುಭವಿಸಿದ ಅವಳು, ವಾಸ್ತವದಲ್ಲಿಯೂ ಅದನ್ನು ಕಂಡುಕೊಳ್ಳಬೇಕಾಗಿದೆ. ಕಾರಣ ಅರ್ಜುನನ ತಿರಸ್ಕಾರದ ವರ್ತನೆಯನ್ನು ಪ್ರೋಷಕವಾಗಿ ಕವಿ ತಂದಂತಿದೆ.* ವ್ಯಕ್ತಿ ವಾತಾವರಣದ ಶಿಶು ; ವಾತಾವರಣ ಕೊಟ್ಟ ಶಿಕ್ಷಣದಿಂದಾಗಿ ಚಿತ್ರಾಂಗದೆಯ ಹೆಣ್ತನದ ಸಕಲ ವಿಕಸನ ಪ್ರಕಾಶನಗಳಿಗೂ ಅಡ್ಡಿಯಾಗಿ, ಸ್ತ್ರೀ ಸ್ವಭಾವ ಪುರುಷರೂಪಿಯಾಗಿ ಬೆಳೆಯಲು ಕಾರಣವಾಯಿತು. ಅಂತೂ ಚಿತ್ರಾಂಗದೆಗಿದ್ದ ಬಾಲ್ಯದ ಪರಿಸರದಿಂದಲೇ ಸ್ತ್ರೀಸಹಜ ಸ್ವಭಾವದ ಭಾವಗಳಾದ ಲಜ್ಜೆ, ಕೋಮಲತೆ, ಸಂಯಮಗಳು ಪುರುಷ ಸ್ವಭಾವದ ದಾಷ್ಟ್ಯತೆ, ಕಠಿಣತೆಗಳಾಗಿ ರೂಪಿತವಾಗಲು ಕಾರಣವಾಯಿತು. ಆದ್ದರಿಂದ ಮೊದಲು ಈ ಭಾವನೈಪುಣ್ಯದ ಮಾರ್ಪಾಡು ಚಿತ್ರಾಂಗದೆಗೆ ನಡೆಯಬೇಕಾದುದು ಅಗತ್ಯವಾಗಿದೆ. ಇದಕ್ಕೆ ಅರ್ಜುನನ ತಿರಸ್ಕಾರದ ಘಟನೆ ನಿದರ್ಶನವಾಗುವಂತೆ ಮದನನ ಆಶೀರ್ವಾದದ ಕನಸು ಕೂಡಿ ಪ್ರತೀಕವಾಗುತ್ತದೆ.

---

1 ಸಿ. ಪಿ. ಕೆ. "ಚಿತ್ರಾಂಗದಾ ಸಮೀಕ್ಷೆ"ಯ ಮುನ್ನುಡಿಯಲ್ಲಿ

* ಈ ಕಾವ್ಯದಲ್ಲಿ ಬರುವ ಎಲ್ಲ ಪಾತ್ರಗಳು ಚಿತ್ರಾಂಗದೆಗೆ ಪೋಷಕ ಪಾತ್ರಗಳೇ ವಿನಃ ಅವುಗಳ ವೈಯಕ್ತಿಕ ನಿಲುವಿಗೆ ಇಲ್ಲಿ ಅವಕಾಶವಿಲ್ಲ. ಎಂಬುದನ್ನು ಮೊದಲೇ ಅರಿಯಬೇಕು

ಚಿತ್ರಾಂಗದೆಯ ಪುರುಷೋಚಿತ ವ್ಯಕ್ತಿತ್ವದ ಮಾರ್ಪಾಡಿಗೆ ಇಲ್ಲಿನ 'ಮದನ ದರ್ಶನ' ಅತಿ ಮಹತ್ವದ್ದಾಗಿದೆ. ಅದೂ ಕೂಡ ಸ್ವಪ್ನದರ್ಶನವಾಗಿ. ಇದೇ ಪ್ರಸಂಗ ವನ್ನು ರವೀಂದ್ರರು ತಮ್ಮ 'ಚಿತ್ರಾ' ನಾಟಕದಲ್ಲಿ ಮನ್ಮಥ ವಸಂತರನ್ನು ನೇರ ಪ್ರವೇಶ ಪ್ರತ್ಯಕ್ಷತೆಗಳಿಂದ ದರ್ಶಿಸಿದ್ದಾರೆ. ಆದರೆ ಅದು ಇಂದಿನ ಆಧುನಿಕ ಪ್ರಜ್ಞೆಗೆ ಒಗ್ಗದ ಮಾತು. ಆಧುನಿಕ ನಾಗರಿಕತೆಗೆ ಅದರಲ್ಲಿ ನಂಬುಗೆ ತಪ್ಪಿ ಹೋಗಿದೆ. ಅವೆಲ್ಲವೂ ಹಾಸ್ಯಾಸ್ಪದ ಪವಾಡಗಳೆನಿಸುತ್ತವೆ. ಕಾರಣ ಇಲ್ಲಿ ಕುವೆಂಪುರವರು ತಮ್ಮ ಕಲಾತ್ಮಕತೆ ಯಿಂದ ಮತ್ತು ಇಂದಿನ ಆಧುನಿಕ ಪ್ರಜ್ಞೆಯ ಅರಿವಿನಿಂದ ಇಲ್ಲಿ ಮದನನನ್ನು ಸ್ವಪ್ನ ದಲ್ಲಿ ದರ್ಶಿಸಿರುವರು. ಈ ದೃಷ್ಟಿಯಿಂದಲೂ ಇಲ್ಲಿಯ ಕನಸುಗಳು ಗಮನಾರ್ಹ. ಕನಸಿನ ಮಾಧ್ಯಮದಲ್ಲಾದ ಮದನನ ಸಾಕ್ಷಾತ್ಕಾರ ಚಿತ್ರೆಯ ಭಾವಪರಿಷ್ಕಾರಕ್ಕೆ ಉತ್ತಮ ನಿದರ್ಶನವಾಗಿದೆ.

> "..................ಕೈ ಮುಗಿದು ಮೈ ಚಾಚಿ
> ಬೇಡಿದಳ್ ಮದನ ಕೃಪೆಯಂ ನಾರಿ ತುಂಬೆದೆಯ
> ಭಕ್ತಿಯಿಂದುತ್ಕಂಠಿತಾತ್ಮದಾಕಾಂಕ್ಷೆಯಿಂದೆ.
> ....ಯೌವನದ ಕಂಗಳಿಗೆ
> ಮನ್ಮಥನಪರಿಚಿತನೆ ?................"[1]

"ಯೌವನದ ಕಂಗಳಿಗೆ ಮನ್ಮಥನಪರಿಚಿತನೆ ?" ಎಂದಾದರೆ ಅರ್ಜುನನಿಗೂ ಅದೇ ರೀತಿಯ ಮನ್ಮಥ ದರ್ಶನವಾಗಬೇಕಿತ್ತು. ಆದರೆ ಅವನಿಗದು ಅವಶ್ಯವಿಲ್ಲ. ಅವನು ಈಗಾಗಲೇ ಅವನ ಸಂಗದ ಪರಿವೆಯ ಅರಿವನ್ನು ಅನುಭವಿಸಿರುವನು. ಕಾರಣ ಮನ್ಮಥ ದರ್ಶನ ಚಿತ್ರಾಂಗದೆಗೆ ಮಾತ್ರ ಅನಿವಾರ್ಯವಾಗಿದೆ; ಅಂದಾಗ ಅವಳ ಮೊದಲಿನ ಘಟ್ಟದಿಂದ (ಪುರುಷತ್ವದ) ಎರಡನೆಯ ಘಟ್ಟಕ್ಕೆ (ಸ್ತ್ರೀತ್ವದ) ತರಲು ಸ್ವಪ್ನದರ್ಶನ ಇಲ್ಲಿ ಕಾರಣವಾಗುತ್ತದೆ. ಆದ್ದರಿಂದ,

> "..................ಚಿತ್ರಾಂಗದೆಯನೆತ್ತಿದಂ ಭಾವಜಂ
> ವರದ ಹಸ್ತದೊಳ್.................." [2]

ಎಂದಾಗ ಅದು ಅವಳ ಸುಪ್ತ ಆರ್ದ್ರ ಕಾಮಭಾವಕ್ಕೆ ತೀರ ಸಾಂಕೇತಿಕವಾಗಿದೆ. ಮುಂದೆ ಅವಳು ಸ್ತ್ರೀ ಸಹಜ ಸ್ವಭಾವದಿಂದ ಅರ್ಜುನನೊಂದಿಗೆ ಸಂಪರ್ಕಿಸುತ್ತಾಳೆ. ಅವಳ ಆಸೆ ಕೈಗೂಡುತ್ತದೆ.

---

1 ಕುವೆಂಪು "ಚಿತ್ರಾಂಗದಾ" ಪುಟ — ೨೫-೨೬
2 " " " — ೨೯.

"..................ನಳಿತೋಳ್ಗಳಂ
ನೀಡಿದಳಾ ಚಿತ್ರಾಂಗಿ, ಪ್ರೇಮದಾಲಿಂಗನದಿ
ಶೂನ್ಯವಾಯಿತೆಲ್ಲವಾನಂದ ವಿಸ್ಮೃತಿಯ
ಭೋಗ ನಿರ್ವಾಣದಲಿ................" 1

ಪ್ರಣಯ ಸಾಫಲ್ಯ ಹೊಂದಿದೆ. ಮುಂದೆ ಒಂದು ಪರ್ವಪೂರ್ಣ ಅವರ ಸುಖವಿಲಾಸದ, ಮನ್ಮಥರಾಟದ ರೋಮಾಂಚಕ ದೃಶ್ಯ ಹರಡಿಕೊಳ್ಳುತ್ತದೆ. ಆಗ ಅಲ್ಲಿ "ಸುಂದರಿ ನಿನ್ನ ಮನೆಯೆಲ್ಲಿ.........ನಿನ್ನ ಹೆಸರೇನದುಹು" ಎಂದು ಕೇಳಿದಾಗ ಅವಳು ಹೇಳುವ ಆ ಮಾತು ಈ ಸಂದರ್ಭಕ್ಕೆ ಉಚಿತವೆನಿಸುತ್ತದೆ.

"...................ಮನೆ ನನಗಿಲ್ಲ
ಹೆಸರಿಲ್ಲ ನಾನೊಂದು ಕನಸು ನಿನ್ನೆದೆಯೊಳ್ಕೆ
ಕಾಣುತಿಹ ಸವಿಗನಸು................" 2

ಕುವೆಂಪುರವರ ದರ್ಶನ ವಿಶಿಷ್ಟತೆಯ ಇನ್ನೊಂದು ಮುಖ ಇಂತಿದೆ-"ಪಶುತ್ವದಿಂದ ಮಾನವತ್ವಕ್ಕೆ, ಮಾನವತ್ವದಿಂದ; ದೇವತ್ವಕ್ಕೆ ಮೆಟ್ಟಿಲು ಮೆಟ್ಟಿಲಾಗಿ ಪಾತ್ರಗಳಿಗೆ ಸ್ಥಿತ್ಯಾವಕಾಶ ಒದಗಿಸುವುದು. ಇದನ್ನು ನಾವು ಅವರ ಅನೇಕ ಪಾತ್ರಗಳಲ್ಲಿ ಸಾಮಾನ್ಯ ನಾಗಿ ಕಾಣುತ್ತೇವೆ. ವ್ಯಕ್ತಿ ಮನುಷ್ಯ ಸಹಜ ಕಾಮನೆಗಳನ್ನು ಮೀರಿ ದೂರಗಾಮಿಯಾಗು ವುದೇ ಜೀವನದ ಸಾರ್ಥಕತೆಯೆಂದು ಇವರು ಬಗೆದಂತಿದೆ. ಒಂದೆಡೆ ಇವರೇ ಹೇಳು ವಂತೆ "ಎಷ್ಟೇ ಪರಿಶುದ್ಧವಾದುದಾಗಲಿ, ಎಷ್ಟೇ ಮುಗ್ಧವಾದುದಾಗಲಿ ತಪಸ್ಸಿನಿಂದ ಪರೀಕ್ಷಿತವಾಗಿ ಚಂಚಲತಾ ಮುಕ್ತವಾಗದಿದ್ದರೆ, ಪರಿಷ್ಕೃತವಾಗಿ ಪರಿಪಕ್ವವಾಗದಿದ್ದರೆ, ತಾರುಣ್ಯದ ತರಳ ಭೋಗಕ್ಕೆ ಚಿರಪ್ರೇಮದ ಮಹತ್ತಾಗಲಿ, ಗೌರವವಾಗಲಿ ದೊರೆ ಯುವುದಿಲ್ಲ. ಹೀಗೆಂಬುದು ನಮ್ಮ ಪ್ರಾಚೀನ ಕವಿದರ್ಶನದ ಕಾವ್ಯವಾಣಿ." 3 ಇದೇ ನೆಲೆಗಟ್ಟಿನ ಮೇಲೆ ಚಿತ್ರೆಯನ್ನು ತಪಸ್ವಿನಿಯಾಗಿ ಪರಿವರ್ತಿಸಿದ್ದಾರೆ. ಅದಕ್ಕೆ ಪೂರ್ವದಲ್ಲಿ ಸಮುದ್ರ ಮಾರುತಿಯ ಉಪದೇಶದಿಂದ ಪೀಠಿಕೆ ಹಾಕಿದ್ದಾರೆ. ನಿಜಕ್ಕೂ ಇಲ್ಲಿ ಸಮುದ್ರ ಮೂರ್ತಿ ಅವಾಸ್ತವ. ಅದು ಚಿತ್ರಾಂಗದೆಯ ಭಾವನೆ ಮಾತ್ರ. ಕಾದಲ ನನ್ನು ಕಾಣಲು ಕಾತರಿಸಿದ ಕಾದಲೆ ಅವನನ್ನು ಕಾಣದೇ ಹೋದಾಗ ಮನುಷ್ಯ ಸಹಜ ಅಸಹಾಯಕತೆಯಿಂದ ಉದ್ವಿಗ್ನತೆಯನ್ನು ತಾಳಲಾರದೇ ಆತ್ಮಹತ್ಯೆಗಳೆ ಸುತ್ತಾಳೆ. ಆಗ 'ಲಕ್ಷೋಪಲಕ್ಷ ಹೆಡೆಗಳನ್ನೆತ್ತಿ ಬುಸ್ಸೆಂಬ ಸಾಸಿರ ಶಿರದ ಮಹಾಫಣಿ ಯಂತೆ; ಸಾಗರ ತೆರೆಗಳು ಅವಳನ್ನು ದಂಡೆಗೆ ನೂಕುತ್ತವೆ ಎಂಬುದು ವಾಸ್ತವಾಂಶ. ಆಗಿನ ಸಂದರ್ಭದಲ್ಲಿ ಅವಳು ತನ್ನ ಬಾಹ್ಯ ಪ್ರಜ್ಞೆಯನ್ನು ಕಳೆದುಕೊಂಡಿರುತ್ತಾಳೆ

೧ ಕುವೆಂಪು 'ಚಿತ್ರಾಂಗದೆ' ಪುಟ—೪೧.
೨ " " "—೪೫.
೩ " 'ತಪೋನಂದನ' "—೭.

ಎಂಬುದು ಗಮನಾರ್ಹ. ಎಚ್ಚರಿಕೆಯಲ್ಲಿರುವಾಗಲೇ ಬಾಹ್ಯಜ್ಞಾನವಿಲ್ಲದೇ ಮನಸ್ಸಿನಲ್ಲಿ ಅನೇಕ ಚಿತ್ರಗಳನ್ನು ಕಾಣುವುದಕ್ಕೆ ಹಗಲುಗನಸು ಎನ್ನುತ್ತಾರೆ. ಆ ರೀತಿಯ ಒಂದು ಚಿತ್ರ ಈ ಶೃಂಗಾರದಂಬುಧಿಯ ಶ್ರೀಮೂರ್ತಿಯದು. ಇಲ್ಲಿಯ ಸಂದರ್ಭವನ್ನು ಕವಿ ಕನಸಿನ ಮಾಧ್ಯಮದಲ್ಲಿ ಚಿತ್ರಿಸಹೋಗಿಲ್ಲ. ಏಕೆಂದರೆ ಆತ್ಮಹತ್ಯೆಯ ಪ್ರಯತ್ನದಿಂದ ಸಾಮಾನ್ಯ ಮಾನವಳ ಅಂಶವನ್ನು ಚಿತ್ರೆಯಲ್ಲಿ ತುಂಬಬೇಕಾಗಿದೆ ಮತ್ತು ಆ ಹಂತ ದಿಂದ ಮೇಲಿನ ಹಂತಕ್ಕೆ ಅವಳನ್ನು ತಂದು ಕಂಡರಿಸಿ ನಿಲ್ಲಿಸಬೇಕಾಗಿದೆ. ಅಲ್ಲಿಂದಲೇ ಸಮುದ್ರ ಮೂರ್ತಿಯ ಉಪದೇಶದ ಬೀಜ ಮೊಳಿಕೆಯೊಡೆದು ಕಾವ್ಯದ ಸಾರ್ಥಕ್ಯವನ್ನು ಕೈಗೂಡಿಸಬೇಕಾಗಿದೆ.

“ ಈ ಸಾಹಸಂ ಬೇಡವಾ ಸಾಹಸಂಗೈದು
ಬದುಕುನಡೆ, ಕೀರ್ತಿವೆತ್ತಿರು ತಪಸ್ವಿನಿಯಾಗಿ ”

ಇನ್ನೊಂದು ನಿಟ್ಟಿನಿಂದ ಈ ಸಮುದ್ರ ಮೂರ್ತಿಯನ್ನು ನಿಟ್ಟಿಸಿದರೆ ಈ ಸಮುದ್ರ ಮೂರ್ತಿಯೆಂಬುದು ಅವಳ ಸುಪ್ತ ವಿವೇಕದ ಪ್ರತೀಕವಾಗಿ ಆವಿರ್ಭವಿಸಿದೆ. ಧೃತಿಗೆಟ್ಟ ಹೇಡಿಯಂತೆ ಆತ್ಮಹತ್ಯೆಗೆ ಯತ್ನಿಸಿದಾಗ, ತೆರೆಗಳ ಹೊಡೆತದಿಂದ ದಡಕ್ಕೆಸೆಯಲ್ಪಟ್ಟ ಅವಳು ಚೇತನಗೊಂಡು (ಎಚ್ಚತ್ತು) ತನ್ನ ವಿವೇಕದ ಅರಿವಿನಿಂದ ಪೂರ್ಣವಾಗಿ ಪ್ರಜ್ಞಾವಲಯಕ್ಕೆ ಬಂದಾಗ ಅವಳ ವಿವೇಕವೇ ಮೂರ್ತಗೊಂಡು ಅವಳ ಅಪ್ರಜ್ಞಾ ಪೂರಿತ ತರಳ ಭೋಗದ ಸಫಲೋದ್ದೇಶಕ್ಕೆ ಇಂತು ಬೋಧಿಸಿದೆ. *

“ ಮರಕೆ ಮಲರಲ್ಲದೆಯೆ ಹಣ್ಣು ಗುರಿಯಪ್ಪಂತೆ
ಪ್ರಣಯ ಸಾಧನೆಗೆ ಶಿಶುವಾತ್ಸಲ್ಯ ತಾಂ ಸಿದ್ಧಿ
ಮಿಡಿ ಬಂದ ಮಾವು ಹೂ ಹೋದುದೆಂದಳಲಹುದೇ ?
....
ವತ್ಸವಾತ್ಸಲ್ಯಮಿಲ್ಲದ ವಿವಾಹಂವ್ಯರ್ಥಮೌ; ”[1]

ಈ ವಿವೇಕದ ಹೊಂಗಿರಣಕ್ಕೆಯೇ ಅವಳ ಕಾಮದ ಮೋಹ ಮಂದಿರ ಹುಡಿ ಯಾಗಿ ಚಿರಪ್ರೇಮದ ಶಿಖರ ಸಾಕ್ಷಾತ್ಕಾರವಾಗಿದೆ. ಇದೇ ಸಾಕ್ಷಾತ್ಕಾರದಿಂದಲೇ ಅವಳು ಕೊನೆಯವರಿಗೂ ಅರ್ಜುನನನ್ನು ಕೂಡಲು ಬಯಸಿರಲಿಕ್ಕಿಲ್ಲ. (ಬೇಟದ ಬಯಕೆಯಿಂದ)

ಈ ಕಾವ್ಯದ ಕನಸಿನ ನಿರೂಪಣೆಗಳಲ್ಲಿ ಕಾಣುವ ವೈಶಿಷ್ಟ್ಯವೇನಂದರೆ, ಪೂರ್ವಾ ರ್ಧದ ಘಟನೆಗಳಿಗೆ ತಕ್ಕಂತೆ ಹರಿಣ ಶಿಶು, ಪತಂಗ, ಕಾಸಾರ, ದ್ವೀಪನಾವೆ ಮುಂತಾ ದವುಗಳನ್ನು ಮಧುಮಯ ತಟಾಕ ತಟಿಯಲ್ಲಿ ಅದ್ದಿ ತೆಗೆದಂತೆ ಬಿಂಬಿಸುತ್ತ ಹೋಗಿ, ಇವುಗಳ ಕೊನೆಯ ಮೆಟ್ಟಿಲೆನ್ನುವಂತೆ ಮದನನ ದರ್ಶನ ಮತ್ತು ಭರವಸೆಗಳನ್ನು ಚಂಚಲಗೊಂಡ ಮನಸ್ಸಿಗೆ ಭರವಸೆಯನ್ನೀಯ್ಯುವಂತೆ ನುಡಿಸಿ ಸಹಜ ಮಾನವಾ

---

* ವಾಸ್ತವದಲ್ಲಿ ಅದು ಕವಿಯ ಜೀವನಾನುಭವದ ದರ್ಶನವೂ ಹೌದು.

1 ಕುವೆಂಪು ‘ಚಿತ್ರಾಂಗದೆ’ ಪು—೬೭

ಕಾಂಕ್ಷೆಯ ಚಿತ್ರೆಗೆ ತೃಪ್ತಿಪಡಿಸಿದ್ದಾರೆ. ಮುಂದೆ ಅವೆಲ್ಲವನ್ನೂ ಲಯಗೊಳಿಸಿ ಆಧ್ಯಾತ್ಮಿಕದ ಮೆಟ್ಟಿಲುಗಳನ್ನು ಸೃಷ್ಟಿಸಿ, ಅದರ ತುದಿಗೆ ಅಮೃತ ಶಿಲಾಸ್ತೂಪವನ್ನೂ ನಿರ್ಮಿಸಿದ್ದಾರೆ. ಮತ್ತು ಅದನ್ನು ತಲುಪಲು ಚಿತ್ರೆಗೆ ಸಮುದ್ರದ ಶ್ರೀಮೂರ್ತಿಯಿಂದ ಮಾರ್ಗದರ್ಶನ ಕೊಡಿಸಿದ್ದಾರೆ.

ಇನ್ನು ಕೊನೆಯದಾಗಿ ಚಿತ್ರಾಂಗದೆ ಕಂಡ ದರ್ಶನ ಮೂರ್ತಿ ಕವಿ ಒಂದು ಕಡೆ ಹೇಳಿರುವಂತೆ "ಸ್ವಪ್ನವೋ, ದರ್ಶನವೋ, ಮೇಣ್ ಸ್ವಪ್ನದರ್ಶನವೊ ಹೇಳಬಲ್ಲ ವರಾರು ?" ಎಂಬಂತಾಗಿದೆ. ಏಕೆಂದರೆ ಅವಳು ಇಲ್ಲಿ ಕಂಡ ಕನಸು ಸಾಮಾನ್ಯರಂತೆ ತಮದ ನಿದ್ರೆಯಲ್ಲಲ್ಲ.

"................ತಮದ ನಿದ್ರೆಯನುಳಿದು
ಸಾತ್ವಿಕ ತುರೀಯ ನಿದ್ರಾ ಭಕ್ತಿರಸದಿಂದೆ.......
....
ಬೇಡುತಿರ್ದಳ್ ಬಿಡದೆ ಫಣಿಧರ ಪಿನಾಕಿಯಂ
ತನ್ನಭೀಷ್ಟಂ ಸಫಲಮಕ್ಕೆಂದು...................."

ಪುಟ ೮೨

ಇಲ್ಲಿಯ ಈ ಬಬ್ರುವಾಹನನ ಜನನಿ ಮೊದಲಿನ ಚಿತ್ರಾಂಗದೆಯಲ್ಲ, ಇವಳು ಜಗತ್ತಿನ ಬಾಹ್ಯ ಬಂಧನಗಳಾದ ಅರಮನೆ, ದಾಸಿಯರು, ಹಂಸತೂಲಿಕಾತಲ್ಪ, ಬಯಸಿದರೆ ಬರುವಂಥ ಏನೆಲ್ಲವನ್ನೂ ತ್ಯಜಿಸಿ ತೃಣ ಕುಟೀರದ ಮಧ್ಯ ತಪಸ್ವಿನಿಯಾಗಿ ರುವಳು. ತಪಸ್ವಿನಿಯಾದರೂ ಅವಳಲ್ಲಿ ಇನ್ನೂ ಅರ್ಜುನನ ಬಗ್ಗೆ ಮೋಹ ಬಿಟ್ಟಿಲ್ಲ.

"...................ಭಾರತಾರಂಭನುಂ
ಕೇಳ್ವಂದು ಮೊದಲ್ಗೊಂಡು ಪಾರ್ಥಂಗೆ ಗೆಲಮಕ್ಕೆ,
ಅರ್ಜುನಗೆ ಸೊಗಮಕ್ಕೆ, ಜಯವಧು ಸವತಿಯಕ್ಕೆ;
ಧರ್ಮಸಂಸ್ಥಾಪಕಂ ದೇವಕೀನಂದನಗೆ
ನಿತ್ಯಮಂಗಳಮಕ್ಕೆ, ಲೋಕಕ್ಕೆ ಶಾಂತಿಯಕ್ಕೆ;
ಎಂದು ನೋಂತಭವನಂ ಪ್ರಾರ್ಥಿಸಿದಳನುದಿನಂ "

ಪುಟ ೭೦

ಎಂಬುದು ಸ್ಥೂಲ ದೃಷ್ಟಿಗೇ ಗೋಚರಿಸುತ್ತದೆ.* ಬಾಹ್ಯ ಬಂಧನಗಳಿಂದ ಮುಕ್ತಿ

---

* ಹೇಗೆಂದರೆ ಕವಿ ಉಕ್ತಿಯಲ್ಲಿ ದ್ವಿರುಕ್ತಿಯ ಧ್ವನಿಯನ್ನು ಬಳಸಿದ್ದಾನೆ. ಅದನ್ನು ಗಮನಿಸಿದಾಗ ಈ ಮಾತು ಸ್ಪಷ್ಟಗೊಳ್ಳುತ್ತದೆ. "ಪಾರ್ಥಂಗೆ ಗೆಲಮಕ್ಕೆ, ಅರ್ಜುನಗೆ ಸೊಗಮಕ್ಕೆ." ಪಾರ್ಥಂಗೆ ಗೆಲಮಕ್ಕೆ ಎಂದಾಗ ಅದು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿ ದಂತೆ, ಅರ್ಜುನಗೆ ಸೊಗಮಕ್ಕೆ ಎಂಬುದು ತನ್ನ ವೈಯಕ್ತಿಕ ಬಯಕೆಯಿಂದ ಪ್ರಾರ್ಥಿಸಿ ರುವಳು. ವೈಯಕ್ತಿಕವಾಗಿ ಅವಳು ತನ್ನ ನಲ್ಲನ ಸೊಗಸನ್ನು ಬಯಸಿರುವಳು.

ಪಡೆದಿದ್ದರೂ ಕೂಡ ಮಾಯೆ ಅವಳನ್ನು ಇನ್ನೂ ಬಿಟ್ಟಿಲ್ಲ. ಇದಕ್ಕೆ ಪರಿಹಾರದ ವಶ್ಯಕತೆ ಇರಲೇಬೇಕು, ಇದೆ. ಅದಿರುವುದು ಅವಳ ಅವಸಾನದ ನಂತರವೇ, ವ್ಯಕ್ತಿಯ ಅವಸಾನದ ನಂತರವೇ, ಈ ಮಾಯೆ ಬಿರಿದವು. ಅಲ್ಲಿಯವರೆಗೆ ಅನವರತ ಇದರ ಬಂಧನ ಸಕಲ ಜೀವಾತ್ಮರಲ್ಲಿ ಬಂಧಿಸಿದ್ದೆ. ವ್ಯಕ್ತಿ ತನ್ನದಲ್ಲದ ಸ್ವಾರ್ಥಕ್ಕೆ ತನ್ನನ್ನು ತಾನು ಇಲ್ಲಗೈದುಕೊಳ್ಳುವುದೇ ತಪಸ್ಸು. ಅಂಥ ತಪಸ್ಸಿನಿಂದ ಸಿದ್ಧಿಸಿದ ಫಲವೇ ಬಾಳ್ಗೋಪುರಕೆ ಶಿಖರ. ಇಲ್ಲಿ ಚಿತ್ರಾಂಗದೆ ಕಂಡುಕೊಂಡ ಸಿದ್ಧಿಫಲವೂ ಅಂತಹುದೆ. ಅದನರುಹಲು 'ಪಿಂಗಲ ಜಟಾಧಾರಿ ಮಂಗಲ ವಿಭೂತಿಯೂ ತ್ರಿಶೂಲಿಯಾಣತಿಯಂತೆ' ದೇವದಾಸನೊಬ್ಬ ಪ್ರತ್ಯಕ್ಷನಾದ. ಇದು ನಿಜಕ್ಕೂ ಅವಳ ಸಾಧನೆಯ ಫಲವೇ; ಏಕೆಂದರೆ "ನನ್ನನಿಲ್ಲಿಗೆ ಕಳುಹಿದನ ಸುಧಾಕರ ಮೌಳಿ ನಿನ ಭಕ್ತಿಗೆ ಮೆಚ್ಚಿ" ಎಂದು ದೇವದೂತನೇ ಸ್ವತಃ ಹೇಳಿಕೊಳ್ಳುತ್ತಾನೆ. ಇಲ್ಲಿ ಸುಧಾಕರ ಮೌಳಿ ಆ ದೇವದೂತನಿಗೆ ನೇರವಾಗಿ ರಣಭೂಮಿಗೆ ಕಳಿಸಬಹುದಿತ್ತು. ಆದರೆ ಅದು ಹಾಗಾಗಲಿಲ್ಲ. ಆ ಪ್ರಜ್ಞೆಯ ಅರಿವು ಅಲ್ಲಿಯವರಿಗಿಲ್ಲವೆಂದಾಗ ಆ ದೂತ ಇವಳಲ್ಲಿ ಗೈತಂದುದು ಸಹಜವಾಗಿದೆ. ಇವಳಿಂದಲೇ ಆ ಕಾರ್ಯ ನಡೆಯಬೇಕಾದುದು ಮತ್ತು ಆಕೆಯ ಇಡೀ ಜೀವನದ ತ್ಯಾಗ ಬಲಿದಾನಗಳ ಕುರುಹಾಗಿ ಅಂತ್ಯದಲ್ಲಿ ಅವಳ ಬಲಿ ಅನಿವಾರ್ಯವಾಗಿದೆ.

" ನಿನ್ನ ಹೃದಯದ ಬಲಿಯನಿತ್ತು ರಣದೇವತೆಗೆ
ಕೆರಳ್ದ ಬದಿಯಂ ತಣಿಸಿ, ಪತಿಸುತರ್ಗಿವರ್ಗೆ
ನೀಂ ಶುಭಂಕರಿಯಾಗು ನಡೆ ಹೋಗು ಬೇಗದಲಿ " 1

ಇದು ಕುವೆಂಪುರವರ ಸಂಯೋಜಕ ಪ್ರತಿಭೆ ಹಾಗೂ ದಾರ್ಶನಿಕ ದೃಷ್ಟಿಗೆ ನಿಚ್ಚಳ ಸಾಕ್ಷಿಯಾಗಿದೆ.

ಗ್ರಂಥ ಋಣ

೧) ವಸಂತ ಕುಮಾರ (ಸಂ) "ಚಿತ್ರಾಂಗದಾ ಸಮೀಕ್ಷೆ"

೨) ಕುವೆಂಪು "ಚಿತ್ರಾಂಗದಾ'' ಮೈಸೂರು : ಉದಯರವಿ ಪ್ರಕಾಶನ ವಾಣೀವಿಲಾಸಪುರಂ; ೧೯೭೩.

೩) ಕುವೆಂಪು ''ತಪೋನಂದನ'' ಮೈಸೂರು: ಉದಯರವಿ ಪ್ರಕಾಶನ ವಾಣೀವಿಲಾಸಪುರಂ ೧೯೫೫.

೪) ದೇಜಗೌ (ಸಂ) "ಗಂಗೋತ್ರಿ" "ಕುವೆಂಪು ಅಭಿನಂದನ ಗ್ರಂಥ", ಮೈಸೂರು ಗೀತಾ ಬುಕ್ ಹೌಸ ೧೯೬೮.

೧ ಕುವೆಪು 'ಚಿತ್ರಾಂಗದೆ' ಪು—೪೪

ಭಾರತದ ಶಿಕ್ಷಣ—ಒಂದು ಸಮೀಕ್ಷೆ

● ವ್ಹಿ. ಜಿ. ಮಾರೀಹಾಳ

ಪೀಠಿಕೆ :

ಈ ದೇಶದಲ್ಲಿ ನಾವು ಈ ಶತಕದಲ್ಲಿ ಹಲವು ಶೈಕ್ಷಣಿಕ ಆಯೋಗಗಳನ್ನು ನಿಯಮಿಸಿದ್ದುಂಟು. ಅವು ಒಕ್ಕೊರಲಿನಿಂದ ಹೇಳಿದ ಮಾತುಗಳಲ್ಲಿ ಒಂದು ಮಾತು ಸಾರ್ವತ್ರಿಕ—ಸಾರ್ವಕಾಲಿಕವಾದುದು ; "ಈ ದೇಶದ ಸರ್ವತೋಮುಖ ಪ್ರಗತಿಗೆ ಈ ದೇಶದ ಶೈಕ್ಷಣಿಕ ಪ್ರಗತಿಯು ಮುಖ್ಯವಾದುದು" ಎಂಬ ಮಾತು. ಈ ದೇಶದ ಶೈಕ್ಷಣಿಕ ಗುರಿಗಳು, ದೇಶದ ಅಭಿವೃದ್ಧಿ ಗುರಿಗಳಲ್ಲಿ ಸ್ಪಂದಿಸದಿದ್ದುದೇ ಇಂದಿನ ತೊಂದರೆಗಳಿಗೆ ಕಾರಣವೆಂಬುದನ್ನು ಈಗ ತಿಳಿದುಕೊಂಡಂತಾಗಿದೆ. ನಮ್ಮ ಆರ್ಥಿಕ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ-ಆಧ್ಯಾತ್ಮಿಕ ಗುರಿಗಳು ನಮ್ಮ ಶಿಕ್ಷಣದ ಗುರಿಗಳಿಗೆ ಸಂವಾದಿಗಳಾಗಬೇಕು.

ಬರಲಿರುವ ೨೧ ನೆಯ ಶತಮಾನಕ್ಕಾಗಿ ಭಾರತವು ಸನ್ನದ್ಧವಾಗಿ ನಿಲ್ಲಬೇಕಾಗಿದೆ ಈಗಿನ ಸ್ಥಿತಿಯಲ್ಲಿ ಅದು ಸಂಶಯಾಸ್ಪದವಾಗುತ್ತಲಿದೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ೩೮ ವರ್ಷಗಳಾದವು; ನಮ್ಮ ಪ್ರಗತಿಯು ಯಾವ ತೆರನಾಗಿದೆ ? ಶೇಕಡ ೭೪% ಜನ ನಿರಕ್ಷರಿಗಳು; ಶೇಕಡ ೪೦ ಜನ ಕಡು ಬಡವರು; ಶೇಕಡ ೪೫ ಶಾಲೆಗಳು ಏಕೋಪಾಧ್ಯಾಯ ಶಾಲೆಗಳು; ಶೇಕಡ ೪೦ ಶಾಲೆಗಳಲ್ಲಿ ಕರಿಹಲಗೆ ಇಲ್ಲ! ; ಶೇಕಡ ೭೦% ಶಾಲೆಗಳಲ್ಲಿ ಕುಡಿಯುವ ನೀರಿಲ್ಲ; ನಮ್ಮ ಶಿಕ್ಷಣ ವ್ಯವಸ್ಥೆ ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗದೆ, ನಿರುದ್ಯೋಗ ಸಮಸ್ಯೆ ಉಲ್ಬಣಾವಸ್ಥೆಯಲ್ಲಿದೆ. ವರ್ಷ ಒಂದಕ್ಕೆ ಈ ದೇಶದಲ್ಲಿ ಇನ್ನೊಂದು ಆಸ್ಟ್ರೇಲಿಯಾವನ್ನು ಜನಸಂಖ್ಯೆಯಲ್ಲಿ ನಿರ್ಮಿಸುತ್ತಿರುವುದು ಯಾವ ದೇವರಿಗೆ ಪ್ರೀತಿ ? ಶೇಕಡ ೮೦ ಜನ ಗ್ರಾಮೀಣ ಪರಿಸರದಲ್ಲಿದ್ದಾರೆ. ಅವರಲ್ಲಿ ಶಾಲೆಗೆ ಹೋಗಲೇ ಇಲ್ಲದವರು ಬಹಳ. ಮೊದಲನೆಯ ವರ್ಗದಲ್ಲಿ ದಾಖಲಾದ ಮಕ್ಕಳು ೭ ನೆಯ ವರ್ಗಕ್ಕೆ ಹೋಗುವರದು ಕೇವಲ ೨೭ ಜನ ಮಾತ್ರ ಉಳಿಯುವರಲ್ಲ! ಕೇವಲ ೯% ಮಾತ್ರ ನಮ್ಮ ಮಕ್ಕಳು ಉಚ್ಚ ಶಿಕ್ಷಣದಲ್ಲಿ ಕಲಿಯುವಂತಾಗಿದೆ. ಇದು ನಮ್ಮ ಶಿಕ್ಷಣದ ಚಿತ್ರ.

ಐತಿಹಾಸಿಕವಾಗಿ :

ಈ ದೇಶದ ಆಧುನಿಕ ಶಿಕ್ಷಣವು ಮೂಲತಃ ಬ್ರಿಟಿಷರ ಕೊಡುಗೆ. ಬ್ರಿಟಿಷರು ಈ ದೇಶಕ್ಕೆ ತಂದ ಶಿಕ್ಷಣದ ಅಂದಿನ ಗುರಿಗಳು ಇಂದಿನ ಗುರಿಗಳಿಗಿಂತ ಭಿನ್ನವಾಗಿದ್ದ ವೆಂಬುದನ್ನು ನಾವು ಮರೆಯಬಾರದು. ಕೇವಲ 'ಆರ್ಟ್ಸ್' ವಿಷಯಗಳಿಗೇನೇ ಪ್ರಾಧಾನ್ಯತೆಯನ್ನು ಕೊಟ್ಟು 'ಕಾರಕೂನ' ಜಾತಿಯೊಂದು ಆಗ ನಿರ್ಮಾಣವಾಯಿತು. ಈ ದೇಶದ ನಿಜವಾದ ಶಿಕ್ಷಣಾಭಿವೃದ್ಧಿಯು ಪ್ರಾರಂಭವಾದದ್ದು—೧೯೫೦ ರಿಂದ ಈಚೆಗೆ. ನಮ್ಮ ಪಂಚವಾರ್ಷಿಕ ಯೋಜನೆಗಳ ಮುಖಾಂತರ ನಾವು ಇಂದು ನಮ್ಮ ಶಿಕ್ಷಣವನ್ನು ರೂಪಿಸಿಕೊಳ್ಳುತ್ತಿದ್ದೇವೆ. ಈ ಸಂದರ್ಭದಲ್ಲಿ ಮೊದಲನೆಯ ಪಂಚ ವಾರ್ಷಿಕ ಯೋಜನೆಯ ಕರಡು ನಿರ್ಮಾಣವಾಗುತ್ತಿದ್ದ ಸಮಯದಲ್ಲಿ ಒಂದು ಚೋದ್ಯ ನಡೆಯಿತು. ಅಂದಿನ ಯೋಜನಾ ಅಧ್ವರ್ಯುಗಳು ಎಲ್ಲ ಕ್ಷೇತ್ರಗಳ ಯೋಜನೆ ಮಾಡಿ ಶಿಕ್ಷಣದ ಯೋಜನೆಯನ್ನು ಕೈಬಿಟ್ಟಿದ್ದರು. ಅಂದಿನ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಮ್ ಆಝಾದರ ಒತ್ತಾಯದಿಂದ ಶಿಕ್ಷಣದ ಯೋಜನೆಯು ಅಸ್ತಿತ್ವಕ್ಕೆ ಬಂದುದನ್ನು ನಾವಾರೂ ಮರೆಯಕೂಡದು. ಈ ಮುಂದಿನ ಅವಧಿಗಳಲ್ಲಿ ಹಲವು ಶೈಕ್ಷಣಿಕ ಆಯೋಗಗಳ ಶಿಫಾರಸುಗಳು ಸ್ವೀಕರಿಸಲ್ಪಟ್ಟು ಅನುಷ್ಠಾನಕ್ಕೆ ತರಲ್ಪಟ್ಟಿವೆ; ಪಡುತ್ತಲಿವೆ.

ಒಂದು ಕಾಲದಲ್ಲಿ ಖಾಸಗಿ ಸಂಸ್ಥೆಗಳು ಶಿಕ್ಷಣದಲ್ಲಿ ಸಿಂಹಪಾಲನ್ನು ಪಡೆದ ದ್ದುಂಟು. ಇಂದು ಅವುಗಳ ಪಾತ್ರ ಕೇವಲ ಶೇಕಡ ೩% ರಷ್ಟು ಉಳಿದದ್ದನ್ನು ಒಂದು ವರದಿಯು ಸ್ಪಷ್ಟೀಕರಿಸುತ್ತದೆ.

೧೯೬೪ ರಿಂದೀಚೆಗೆ ಶಿಕ್ಷಣಕ್ಕೆ ನಿಜವಾದ ಒಂದು ನೀತಿ, ನಿಲುಮೆ, ಯೋಜನೆ, ಕಾರ್ಯಕ್ರಮಗಳು ಬಂದಿವೆಯೆಂದೇ ಹೇಳಬೇಕು. ೧೯೬೮ ರಲ್ಲಿ ಕೇಂದ್ರ ಸಂಸತ್ತಿನ ಒಂದು ಸಮಿತಿಯು ಶಿಕ್ಷಣಕ್ಕಾಗಿ ಸಾದರಪಡಿಸಿದ ಒಂದು ಶೈಕ್ಷಣಿಕ ಧೋರಣೆಯನ್ನು ಇಲ್ಲಿ ನಾವು ಸ್ಮರಿಸಬಹುದಾಗಿದೆ. ಆದರೆ ದುರ್ದೈವದಿಂದ ಇಂದಿನವರೆಗೂ ಒಂದು ರಾಷ್ಟ್ರೀಯ ಶೈಕ್ಷಣಿಕ ಧೋರಣೆ ಬಾರದಿರುವುದು ಶೋಚನೀಯ ಸಂಗತಿಯಾಗಿದೆ.

ನಮ್ಮ ತಪ್ಪುಗಳು :

ನಮ್ಮ ದೇಶದ ಅಭಿವೃದ್ಧಿಗೆ ಶಿಕ್ಷಣವು ಸನ್ನದ್ಧವಾಗಬೇಕಿತ್ತು; ಆಗಲಿಲ್ಲ. ಪರ್ಯಾಯವಾಗಿ ನಮ್ಮ ಪ್ರಗತಿಯು ಕುಂಠಿತವಾಯಿತು. ಅದಕ್ಕೆ ನಾವು ಮಾಡಿದ ತಪ್ಪುಗಳೇ ಕಾರಣವಾಗಬೇಕಾಯಿತು.

೧) ನಮ್ಮ ಶೈಕ್ಷಣಿಕ ಯೋಜನೆಯಲ್ಲಿ ಶಿಕ್ಷಣಕ್ಕೆ ಉಳಿದ ಕ್ಷೇತ್ರಗಳಿಗಿಂತ ಕಡಿಮೆ ಪ್ರಾಶಸ್ತ್ಯವಿದೆ.

೨) ನಮ್ಮ ಸರಕಾರಗಳ ಯಂತ್ರಗಳು (ಅಧಿಕಾರವರ್ಗ) ದೇಶದ ಆಶೆ-ಆಕಾಂಕ್ಷೆಗಳನ್ನು ಅರಿಯಲಿಲ್ಲ.

೩) ಶಿಕ್ಷಣದ ಸಂಶೋಧನೆಗಳು ಮುಂದಿನ ಪ್ರಗತಿಗೆ ಮಾರ್ಗದರ್ಶಕವಾಗಲಿಲ್ಲ.

೪) ಶಿಕ್ಷಣಕ್ಕಾಗಿ ದೇಶದ ಆದಾಯದಲ್ಲಿಯು ಕಡಿಮೆ ಹಣ ವ್ಯಯವಾಗಿದೆ.

೫) ನಮ್ಮ ಪರೀಕ್ಷಾ ಪದ್ಧತಿ ದೋಷಯುಕ್ತವಾಯಿತು.

೬) ನಮ್ಮ ಶಿಕ್ಷಣವು ನಿರುದ್ಯೋಗಕ್ಕೆ ಮೂಲಕಾರಣವಾಯಿತು.

೭) ದೇಶಕ್ಕೆ ಬೇಕಾಗುವ ಶಿಕ್ಷಣ ಹೊಂದಿದ ತರುಣರು ನಿರ್ಮಾಣವಾಗಲಿಲ್ಲ.

೮) ಶಿಕ್ಷಣ ಕ್ಷೇತ್ರವು—ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಶಿಕ್ಷಣ ಕ್ಷೇತ್ರಗಳು ಬೆಳೆದಿದ್ದುದೂ ನಿರರ್ಥಕವಾಗಿದೆ. ಈ ದೇಶದಲ್ಲಿ ಇಂದು ೧೪೦ ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದಿವೆ.

೯) ಆರ್ಥಿಕ-ಸಾಮಾಜಿಕ ತೊಂದರೆಗಳಿಂದಾಗಿ, ನಮ್ಮ ವಿದ್ಯಾರ್ಥಿಗಳು ಶಾಲೆಗಳಿಗೆ ದಾಖಲಾಗಲಿಲ್ಲ. ಹಾಳು-ಕೊಳೆಗಳು ಶಿಕ್ಷಣ ಕ್ಷೇತ್ರದಲ್ಲಿ ವಿಪರೀತ ಬೆಳೆದಿವೆ.

೧೦) ವೃತ್ತಿ ಶಿಕ್ಷಣಕ್ಕೆ ನಾವು ಪ್ರಾಶಸ್ತ್ಯ ಕೊಡಲಿಲ್ಲ.

೧೧) ಯಂತ್ರ ಕೈಗಾರಿಕೆಗೂ—ಶಿಕ್ಷಣಕ್ಕೂ ಸಂಬಂಧಗಳು ಏರ್ಪಡಲಿಲ್ಲ.

೧೨) ಶಿಕ್ಷಣದ ಬದಲಾವಣೆಯೊಡನೆ ಶಿಕ್ಷಕರ ತರಬೇತಿಯಲ್ಲಿಯೂ ಬದಲಾವಣೆಗಳು ಬರಬೇಕಿತ್ತು; ಬರಲಿಲ್ಲ.

೧೩) ಶಿಕ್ಷಣದ ಅಭಿವೃದ್ಧಿಗೆ ಬೇಕಾದ ಹಣ ವ್ಯಯವಾಗಲಿಲ್ಲ.

೧೪) ಒಂದು ಯೋಜನೆಯಿಂದ ಇನ್ನೊಂದು ಯೋಜನೆಗೆ ಬರುವ ನಮ್ಮ ಶಿಕ್ಷಣದ ಹಣ ಕಡಿಮೆಯಾಗುತ್ತಲೇ ಮುಂದುವರೆದಿದೆ.

III ಇತ್ತೀಚಿನ ರಾಷ್ಟ್ರೀಯ ಧೋರಣೆಗಳು :

ಈ ದೇಶವು 'ಪಾರ್ಲಿಮೆಂಟರಿ' ಪ್ರಜಾಪ್ರಭುತ್ವದೊಡನೆ ಗಣರಾಜ್ಯದ ಕೆಲವು ಅಂಶಗಳನ್ನೂ ಸಂವಿಧಾನಾತ್ಮಕವಾಗಿ ಸ್ವೀಕರಿಸಿದೆ. ಅದರ ರೀತ್ಯ ೧೯೭೬ ರ ವರೆಗೂ ಶಿಕ್ಷಣವು ರಾಜ್ಯಗಳ ಸ್ವೊತ್ತು. ಅಂತೆಯೇ, ಕೇಂದ್ರೀಯ ಯೋಜನಾ ವ್ಯವಸ್ಥೆಯಲ್ಲಿ ಶಿಕ್ಷಣವು ಯೋಜನೆಯ ಒಂದು ಅಂಗವಾಯಿತು. ಕೇಂದ್ರ-ರಾಜ್ಯಗಳ ಈ ಸಂಬಂಧದಿಂದ ಶಿಕ್ಷಣವು ತಿಳಿಯಬೇಕಾದುದರಿಂದ ಅನೇಕ ತೊಂದರೆಗಳನ್ನು ನಾವು ಎದುರಿಸಿದ್ದೇವೆ.

೧೯೪೫-೪೬ ರಲ್ಲಿ ಸಾರ್ಜಂಟ ವರದಿಯು ಒಂದು ರೀತಿಯಲ್ಲಿ ಅದು ದೇಶದ ಶೈಕ್ಷಣಿಕ ಧೋರಣೆಯಾಗಬೇಕಿತ್ತಾದರೂ, ದುರ್ದೈವದಿಂದ ಹಾಗಾಗಲಿಲ್ಲ. ೧೯೬೮ ರಲ್ಲಿ ಒಂದು ಸಂಸತ್ತಿನ ಸಮಿತಿಯು ದೇಶಕ್ಕೆ ಸಮಗ್ರವಾದ ಶೈಕ್ಷಣಿಕ ಧೋರಣೆಯನ್ನು ರೂಪಿಸಲು ಪ್ರಯತ್ನಿಸಿದೆ. ೧೯೭೯ ರಲ್ಲಿ ಈ ಹಿಂದಿನ ಧೋರಣೆಗೇನೇ ಹೊಸ ಸ್ವರೂಪವನ್ನು ಕೊಡುವ ಪ್ರಯತ್ನ ನಡೆದಿದೆ

ಅಂದಿನ ವ್ಯವಸ್ಥೆಯಂತೆ ನಮ್ಮ ಪದವಿಗಳನ್ನು ನೌಕರಿಗಳಿಗೆ ಹೊಂದಿಸಬಾರ

ದೆಂದಾಯಿತು. ಆದರೆ ಸಂಸತ್ತು ಒಪ್ಪಲಿಲ್ಲ. ಜನತಾ ಸರಕಾರವು ಪದಚ್ಯುತಿಗೊಂಡಿತು. ಮತ್ತೊಮ್ಮೆ ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬಂದು ಮತ್ತೊಮ್ಮೆ ಶೈಕ್ಷಣಿಕ ಧೋರಣೆಗಳ ಬದಲಾವಣೆಗಳಿಗೆ ಕಾರಣರಾದರೆಂದೇ ಹೇಳಬೇಕು. ತುರ್ತು ಪರಿಸ್ಥಿತಿಯ ಕಾಲದಲ್ಲಿ ೪೨ ನೆಯ ತಿದ್ದುಪಡಿಯಿಂದ ಶಿಕ್ಷಣವನ್ನು ಉಭಯ ಸೂಚಿಪಟ್ಟಿಯಲ್ಲಿ (Concurrent list) ಸೇರಿಸಲಾಯಿತು. (೧೯೭೬)

೧೯೬೮ರ ಶೈಕ್ಷಣಿಕ ಧೋರಣೆಯು ನಮ್ಮ ದೇಶದ ಮುಂದಿನ ಕಾರ್ಯಕ್ರಮಗಳಿಗೆ ಬುನಾದಿಯನ್ನು ಹಾಕಿದೆಯೆಂದೇ ಹೇಳಬೇಕು :

೧) ೬ ನೆಯ ಯೋಜನೆಗೆ ಅದು ತಳಪಾಯವನ್ನು ನೀಡಿದೆ.

೨) ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಬಂತು.

೩) ಪ್ರೌಢ ಶಿಕ್ಷಣಕ್ಕೆ ಪ್ರಾಶಸ್ತ್ಯ ಬಂತು.

೪) ಶಿಕ್ಷಣದ ಮೊತ್ತವು ಹೆಚ್ಚಾಯಿತು.

೫) ಶಿಕ್ಷಣವು—ಹಾಯಸ್ಕೂಲ ಶಿಕ್ಷಣದ ಮಟ್ಟದವರೆಗೂ ಉಚಿತವಾಗುತ್ತಿದೆ

೬) ವಿಶ್ವವಿದ್ಯಾಲಯದ ಅನುದಾನ ಆಯೋಗವು ಉಚ್ಚ ಶಿಕ್ಷಣದಲ್ಲಿ ಕ್ರೋಢೀಕರಣವನ್ನು ಚೆನ್ನಾಗಿ ಮಾಡುತ್ತಲಿದೆ.

IV ಇತ್ತೀಚಿನ ಶೈಕ್ಷಣಿಕ ಸಮೀಕ್ಷೆಗಳು :

ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರಕಾರದ ಪ್ರೋತ್ಸಾಹನೆಯಿಂದ ಹಲವು ಶೈಕ್ಷಣಿಕ ಸಮೀಕ್ಷೆಗಳು ಜರುಗಿವೆ. ಅವುಗಳ ವರದಿಗಳಿಂದ ಈ ವಿಚಿತ್ರಗಳನ್ನು ನಾವು ಕಂಡುಕೊಂಡಿದ್ದೇವೆ :

- ೫೩% ಪ್ರಾಥಮಿಕ ಶಾಲೆಗಳಿಗೆ ಪಕ್ಕಾ ಕಟ್ಟಡಗಳಿಲ್ಲ.
- ೯% ಶಾಲೆಗಳಿಗೆ ಕಟ್ಟಡಗಳೇ ಇಲ್ಲ.
- ೪೦% ಶಾಲೆಗಳಿಗೆ ಕರಿಹಲಿಗೆಗಳಿಲ್ಲ.
- ೩೩% ಶಾಲೆಗಳಿಗೆ ಕೂಡ್ರುವ ವ್ಯವಸ್ಥೆಯಿಲ್ಲ.
- ೭೦% ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ.
- ೭೧% ಶಾಲೆಗಳಿಗೆ ಗ್ರಂಥಾಲಯಗಳಿಲ್ಲ.
- ೮೫% ಶಾಲೆಗಳಿಗೆ ಕಕ್ಕಸು ವ್ಯವಸ್ಥೆಯಿಲ್ಲ.
- ೪೫% ಶಾಲೆಗಳು ಏಕೋಪಾಧ್ಯಾಯ ಶಾಲೆಗಳು.

(ಎನ್. ಸಿ. ಇ. ಆರ್. ಟಿ. ಮಾಡಿದ ಸಮೀಕ್ಷೆಯಿಂದ ದೊರೆತುದು)

ಕೇಂದ್ರೀಯ ವಿಶ್ವವಿದ್ಯಾಲಯದ ಅನುದಾನ ಆಯೋಗವು ಮಾಡಿದ ಒಂದು ಸಮೀಕ್ಷೆ ಇಂತಿದೆ :

	೧೯೫೦	೧೯೮೨
ವಿಶ್ವವಿದ್ಯಾಲಯಗಳು	೨೮	೧೪೦
ಕಾಲೇಜುಗಳು	೮೯೩	೫೦೩೯ (೭ ಪಟ್ಟು)
ಪಾಧ್ಯಾಪಕರು	೨೧೭೬೪	೨೧೧೭೫೧ (೧೦ ಪಟ್ಟು)
ವಿದ್ಯಾರ್ಥಿಗಳು	೧.೭ ಲಕ್ಷ	೩೧.೪ ಲಕ್ಷ (೧೮ ಪಟ್ಟು)

ಈ ಅಂಕಿಸಂಖ್ಯೆಗನುಗುಣವಾದ ಗುಣಾತ್ಮಕವಾದ ಸೃಜನಶೀಲ ಪ್ರಗತಿಯು ಬಾರದಿದ್ದುದು ದುಃಖದ ವಿಷಯವಾಗಿದೆ. ಶೇಕಡಾ ೧೮% ಹುಡುಗರು ೫೦% ಮಾರ್ಕ್ಸ್‌ಗಳನ್ನು ಪಡೆಯುತ್ತಾರೆ ! ಉಳಿದವರು ಮೂರನೆಯ ವರ್ಗದವರೋ, 'ನಪಾಸು' ಗಳೊ ಆಗಬೇಕು. ಶೇಕಡ ೮೫% ಹುಡುಗರು ತಿರಸ್ಕರಿಸಲ್ಪಡುವುದು ದೇಶದ ಅಭಿವೃದ್ಧಿ ಮಾರ್ಗದಲ್ಲಿ ದುಃಚಿನ್ಹವೇ ಆಗಿದೆ. ಪ್ರಾಥಮಿಕ ಕ್ಷೇತ್ರದಲ್ಲಿ ಹಾಳು(wastage)ಶೇಕಡ ೫೦% ಆದರೆ, ಮಾಧ್ಯಮಿಕ ಕ್ಷೇತ್ರಕ್ಕೆ ಅದು ಬರುವಲ್ಲಿ ಶೇಕಡ ೮೦ ಕ್ಕೆ ನಿಲ್ಲುತ್ತದೆ.

ಲಕ್ಷಾಂತರವಾಗಿ ಉತ್ಪಾದಿಸಲ್ಪಡುವ ನಮ್ಮ ಕಾಲೇಜು ಪದವೀಧರರು ನೌಕರಿಗಳಾಗಲಿ, ಉದ್ಯೋಗಗಳಾಗಲಿ ಇಲ್ಲದೇನೇ ಇರುತ್ತಾರೆ. ಇನ್ನು ಶೈಕ್ಷಣಿಕ ಖರ್ಚಿನ ಬಗ್ಗೆ ಬರೆಯದೆ ಇರುವುದೇ ಲೇಸು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ನಾವು ೭.೮% ಹಣವನ್ನು (ಒಟ್ಟು ಯೋಜನೆಯಲ್ಲಿ) ಶಿಕ್ಷಣಕ್ಕಾಗಿ ತೊಡಗಿಸಿದ್ದೆವು. ಈ ಮೊತ್ತವು ಯೋಜನೆಯಿಂದ ಯೋಜನೆಗೆ ಬರುವಲ್ಲಿ, ೬ ನೇ ಯೋಜನೆಗೆ ಅದು ೨.೬% ಕ್ಕೆ ನಿಂತಿದೆ. ೭ ನೆಯ ಯೋಜನೆಯಲ್ಲಿ, ಯಾರಿಗೆಗೊತ್ತು ಅದು ೨.೪% ಆದರೆ ಆಶ್ಚರ್ಯಪಡಬೇಕಿಲ್ಲ.

೧೦+೨+೩ ಪದ್ಧತಿಯನ್ನು ಈ ದೇಶದಲ್ಲಿ ತರಲು ಪ್ರಯತ್ನಗಳಿದ್ದರೂ. ಎಲ್ಲ ರಾಜ್ಯಗಳು ಇಂದಿಗೂ ಈ ಪದ್ಧತಿಯನ್ನು ತರಲು ಪ್ರಯತ್ನಿಸಿಲ್ಲವಲ್ಲ. ಹೀಗೇಕೆ ? ಮಾಧ್ಯಮಿಕ ಶಿಕ್ಷಣದ ಕೊನೆಯ ಹಂತದಲ್ಲಿ ನಮ್ಮ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಗಿಸಿ, ಒಂದು ವೃತ್ತಿಯಲ್ಲಿ ನಿರತರಾಗಿ ಉತ್ಪಾದನಾಶೀಲರಾಗಬೇಕು; ಹಾಗಾಗಲಿಲ್ಲ. ಈ ಕ್ಷೇತ್ರವು ಇನ್ನೂ ವ್ಯವಸ್ಥಿತಗೊಳ್ಳುವಂತೆ, ವಿಶ್ವವಿದ್ಯಾಲಯದ ಶಿಕ್ಷಣಕ್ಕಿರುವ 'ಗೀಳು' (Fad) ತೀವ್ರ ಬದಲಾಗಬೇಕು. ಅದು ಅನಿವಾರ್ಯವಾದುದಾಗಿದೆ.

V ಹೀಗೇಕಾಯಿತು ?

ನಮ್ಮ ಶಿಕ್ಷಣದ ದುರವಸ್ಥೆಗೆ ಅನೇಕ ಕಾರಣಗಳನ್ನು ನಾವು ಮುಂದುಮಾಡಬಹುದಾಗಿದೆ :

- ನಮ್ಮ ಕಾಲೇಜು–ವಿಶ್ವವಿದ್ಯಾಲಯದ ಶಿಕ್ಷಣವು ತನ್ನ ಗುರಿ–ಕರ್ತವ್ಯಗಳನ್ನು ನಿಲುಕಲಿಲ್ಲ.
- ವಿದ್ಯಾರ್ಥಿ–ಶಿಕ್ಷಕ ಸಂಬಂಧಗಳು ಕಳಪೆ ಸ್ಥಿತಿಗೆ ನಿಲುಕಿವೆ.

- ಶಿಕ್ಷಣದಲ್ಲಿ ರಾಜಕೀಯ ಬಂತು.
- ಶಿಕ್ಷಕರು ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸಲಿಲ್ಲ. ಅವರು ತಮ್ಮ ಸಂಬಳ ಉಳಿದ ಅನುಕೂಲತೆಗಳಲ್ಲಿ ನಿರತರಾದರು. 'ಟ್ರೇಡ್ ಯೂನಿಯನ್' ರೀತಿಯಲ್ಲಿ ಅವರ ಸಂಘಟನೆಯಾಯಿತು.
- ನಮ್ಮ ಶಿಕ್ಷಣವು ಕೇವಲ ಗ್ರಾಂಥಿಕವಾಯಿತು.
- ನಾಗರಿಕತೆಯ ಶಿಕ್ಷಣವೂ ನಮ್ಮ ಜನರಿಗೆ ಸರಿಯಾಗಿ ದೊರೆತಿಲ್ಲ.
- ನಮ್ಮ ಶಿಕ್ಷಣವು 'ತಲೆಭಾರ' ವಾಗಿ ನಿಂತಿದೆ.
- ಭಾರತೀಯ ಮೌಲ್ಯಗಳನ್ನು ನಮ್ಮ ಶಿಕ್ಷಣವು ತರುಣ ಪೀಳಿಗೆಗೆ ನಿಲುಕಿಸಲಿಲ್ಲ.
- ಭಾರತೀಯ ಸಂಸ್ಕೃತಿ- ಪರಂಪರೆಗಳ ಮೌಲ್ಯ ತರುಣ ಪೀಳಿಗೆಗೆ ಅರ್ಥವಾಗಲಿಲ್ಲ.
- ಶಿಕ್ಷಣ ವ್ಯವಸ್ಥೆಯಲ್ಲಿ 'ಶಿಸ್ತು' ಮಾಯವಾಯಿತು.
- ನಮ್ಮ ಶಿಕ್ಷಣ-ಕಲಿಸುವ ಪದ್ಧತಿ ಓಬೀರಾಯನ ಕಾಲದಂತೆಯೇ ಇನ್ನೂ ಉಳಿದುಕೊಂಡಿದೆ.
- ಗೈಡ ಪುಸ್ತಕಗಳು 'ಮಾರ್ಗದರ್ಶಿ ಕಾಲೇಜು' ಗಳು ನಮ್ಮ ಶಿಕ್ಷಣಕ್ಕೆ ವಿಪರೀತ ಅರ್ಥವನ್ನು ತರಲು ಕಾರಣವಾದವು.
- ನಮ್ಮ ಪರೀಕ್ಷಾ ಪದ್ಧತಿ ಬದಲಾಗಲಿಲ್ಲ.
- ವರ್ಗದ ಕಲಿಸುವಿಕೆ ಪರಿಣಾಮಕಾರಿಯಾಗಿಲ್ಲ.
- ಇಂದಿನ ನಮ್ಮ ಪರೀಕ್ಷಾ ಪದ್ಧತಿಯು ನಮ್ಮ ವಿಶ್ವಾಸಕ್ಕೆ ಪಾತ್ರವಾಗಲಿಲ್ಲ ಅದು ನಿಖರವಾಗಿಲ್ಲ; ಸೃಜನಶೀಲವೂ ಆಗಲಿಲ್ಲ; ವಸ್ತುನಿಷ್ಠವೂ ಆಗಲಿಲ್ಲ.
- ಗುರು-ಶಿಷ್ಯ ಸಂಬಂಧವು ನಮ್ಮ ವಿದ್ಯಾರ್ಥಿಗಳಲ್ಲಿ ಬರಲಿಲ್ಲ.
- ಶಿಕ್ಷಕರು 'ಗಳಿಕೆಗೆ' ಪ್ರಾಶಸ್ತ್ಯ ಕೊಡುತ್ತಿದ್ದಾರೆ.
- ಉಚ್ಚ ಶಿಕ್ಷಣವನ್ನು ಕೇವಲ ಪಾತ್ರತೆಯುಳ್ಳವರಿಗೆ ಮಾತ್ರ ಪರಿಸೀಮಿತಗೊಳಿಸಿಲ್ಲ.

VI ಹೊಸ ವ್ಯವಸ್ಥೆ :

ನಮ್ಮ ಶಿಕ್ಷಣವು ದೇಶದ ಆಶೋತ್ತರಗಳಿಗೆ, ಸ್ಪಂದಿಸದಿದ್ದರೆ ಅದು ನಿರುಪಯೋಗಿಯಾಗುತ್ತದೆ. ನಮ್ಮ ಶಿಕ್ಷಣವು ಈ ದೇಶಕ್ಕೆ ಬೇಕಾಗುವ ತರುಣರನ್ನು ಒದಗಿಸಬೇಕು ಬರಲಿರುವ ೨೧ ನೆಯ ಶತಕದ ವಿಜ್ಞಾನ-ತಂತ್ರಜ್ಞಾನಗಳನ್ನು ಅದು ಒದಗಿಸಬೇಕು. ಈವಿ ಜ್ಞಾನ ಶಿಕ್ಷಣವು ನಮ್ಮ ದೇಶದ ಭಾಂಡವಾಲು ಹೂಡಿಕೆ ಆಗಬೇಕು. ಅದು ತರಬೇತು ಹೊಂದಿದ ಮಾನವ ಶಕ್ತಿಯನ್ನು ಒದಗಿಸಬೇಕು. ರಸಿಯದ ಒಬ್ಬ ಶಿಕ್ಷಣ

ತಜ್ಞನನ್ನು ಕೇಳಿದಾಗ, ಅವನು ತನ್ನ ದೇಶದ ಶಿಕ್ಷಣದಿಂದ ತನ್ನ ದೇಶದ ಸೋವಿಯಟ್ ಮನುಷ್ಯನನ್ನು ನಿರ್ಮಿಸುತ್ತೇವೆ ಎಂದನಂತೆ! ಈ ದೇಶದ ಶಿಕ್ಷಣವು 'ಭಾರತೀಯ, ನನ್ನು ಉತ್ಪಾದಿಸಬೇಕು. ಅದಕ್ಕಾಗಿ ಶಿಕ್ಷಣವು ಸನ್ನದ್ಧವಾಗಬೇಕು.

ನಮ್ಮ ಹೊಸ ಶಿಕ್ಷಣವು ಹೊಸ ಮನುಷ್ಯರನ್ನೆ ಉತ್ಪಾದಿಸಬೇಕು :

- ಅವರು ಭಾರತೀಯರಾಗಿ ಬದುಕಬೇಕು.
- ಸಂಕುಚಿತತೆಯಿಂದ ದೂರವಾದವರಾಗಬೇಕು.
- ನಮ್ಮ ಉಚ್ಚ ಶಿಕ್ಷಣವು ದೇಶದ ಶಿಕ್ಷಣ ವ್ಯವಸ್ಥೆಗೆ ನೇತಾರವಾಗಬೇಕು.
- ದೇಶಕ್ಕೆ ಬೇಕಾಗುವ ತರಬೇತು ಹೊಂದಿದ ಮಾನವ ಶಕ್ತಿಯನ್ನು ನಮ್ಮ ಶಿಕ್ಷಣವು ಒದಗಿಸಬೇಕು.
- ವೃತ್ತಿ ಶಿಕ್ಷಣಕ್ಕೆ ಜರೂರಾದ ಆದ್ಯತೆಯು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ದೊರೆಯಬೇಕು.
- ಈ ವೃತ್ತಿ ಶಿಕ್ಷಣವು ಕೇವಲ ನೌಕರಿಗಳನ್ನು ಅವಲಂಬಿಸಬಾರದು. ದೇಶದ ೮೦% ಜನ ಒಕ್ಕಲುತನದಲ್ಲಿ ಇರುವಾಗ ಈ ವೃತ್ತಿಗೂ ಆದ್ಯತೆ ದೊರೆಯಬೇಕು. 'ಒಕ್ಕಲುತನದ ಪಾಲಿಟೆಕ್ನಿಕ್' ಗಳು ಈಗ ಊರೂರಿಗೆ ಮೇಲೇಳಬೇಕು.
- ನಮ್ಮ ಶೈಕ್ಷಣಿಕ ನೀತಿ, ಧೋರಣೆಗಳು ಶೈಕ್ಷಣಿಕ ಆಡಳಿತದ ಮುಖಾಂತರ ವ್ಯವಸ್ಥಿತವಾಗಿ ಜಾರಿಯಲ್ಲಿ ತರಲ್ಪಡಬೇಕು.

VII ನಮ್ಮ ಹೊಸ ವ್ಯವಸ್ಥೆಯ ಗುರಿಗಳು :

ಬರಲಿರುವ ಹೊಸ ನೀತಿ ನಿರೂಪಣೆಯಲ್ಲಿ ಅಡಕವಾಗಲು ಕೆಲವು ಅಂಶಗಳನ್ನು ಇಲ್ಲಿ ಪರಾಂಬರಿಸಬಹುದಾಗಿದೆ :

- ರಾಷ್ಟ್ರೀಯ ಭಾವೈಕ್ಯವನ್ನು ನಮ್ಮ ಶಿಕ್ಷಣವು ತರಬೇಕು.
- ಶಿಕ್ಷಣವು ಸಾರ್ವತ್ರೀಕರಣಗೊಳ್ಳಬೇಕು.
- ಒಂದು ಘಟ್ಟದ ನಂತರ ಶಿಕ್ಷಣಕ್ಕೆ ವಿವಿಧತೆ ಬರಬೇಕು; ಅದು ವಿವಿಧ ಕ್ಷೇತ್ರಗಳಿಗೆ ಪಡಿಲೊಡೆಯಬೇಕು.
- ವೃತ್ತಿಶಿಕ್ಷಣ–ಮತ್ತು ಉದ್ಯೋಗಗಳಲ್ಲಿ ಸಂಬಂಧ ಬರಬೇಕು.
- ಶಿಕ್ಷಣವು–ಆರ್ಥಿಕ ಅಭಿವೃದ್ಧಿಗೆ ಹೊಂದಿಕೊಳ್ಳಬೇಕು.
- ಶಿಕ್ಷಣವು ಮುಕ್ತವಾಗಿ ಎಲ್ಲರಿಗೂ ಎಲ್ಲ ಹಂತಗಳಲ್ಲಿ ದೊರೆಯಬೇಕು.
- ನಮ್ಮ ಡಿಗ್ರಿಗಳಿಗೂ–ನೌಕರಿಗಳಿಗೂ ಸಂಬಂಧವು ತೀವ್ರ ತೊಲಗಬೇಕು.
- ಶಿಕ್ಷಣವು ಆಧುನೀಕರಣವನ್ನು ತರಬೇಕು.
- ೨೧ ನೆಯ ಶತಮಾನಕ್ಕಾಗಿ ನಮ್ಮ ಜನರನ್ನು ಈ ಶಿಕ್ಷಣವು ಸನ್ನದ್ಧಗೊಳಿಸಬೇಕು.

- ತಾಂತ್ರಿಕ ಶಿಕ್ಷಣ ಮತ್ತು ಮಾನವ ಶಕ್ತಿಯ ಬೇಡಿಕೆಗಳಲ್ಲಿ ಅನ್ಯೋನ್ಯ ಸಂಬಂಧ ಏರ್ಪಡಬೇಕು.
- ಬರಲಿರುವ ೭ ನೆಯ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ೬೪ ಮಿಲಿಯನ್ ಹೆಚ್ಚಿನ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರವೇಶಿಸುವರು. ಅವರಿಗೆ ದೊರೆಯುವ ಸೌಲಭ್ಯಗಳ ಬಗ್ಗೆ ಈಗ ನಾವು ವಿಚಾರಿಸಬೇಕು. ಕೇವಲ ಶಾಲಾ ಅವಧಿಯಲ್ಲಿ ಶಿಕ್ಷಣಕ್ಕಿಂತ, ವಿದ್ಯಾರ್ಥಿಗಳ ಅನುಕೂಲ ಅವಧಿಯಲ್ಲಿ ಶಾಲಾ ಶಿಕ್ಷಣವನ್ನು ಏರ್ಪಡಿಸುವುದು ಈಗ ಅಗತ್ಯವಾಗಿದೆ. ಅದಕ್ಕಾಗಿ ಅನೌಪಚಾರಿಕ ಶಿಕ್ಷಣ, ಔಪಚಾರಿಕವಲ್ಲದ ಶಿಕ್ಷಣ ವ್ಯವಸ್ಥೆಗಳನ್ನು ಈಗ ತರಬಹುದಾಗಿದೆ.
- ಉಚ್ಚ ಶಿಕ್ಷಣವನ್ನು ಬಯಸುವವರಿಗಾಗಿ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದೆ. ದಿಲ್ಲಿಯಲ್ಲಿ ಸ್ಥಾಪಿಸಲ್ಪಟ್ಟ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಮಾದರಿಯ ಶಿಕ್ಷಣ ಸಂಸ್ಥೆಗಳು ಬರಬೇಕು.

ಕೆಲವು ತೊಂದರೆಗಳು :

ನಮ್ಮ ಶಿಕ್ಷಣ ವ್ಯವಸ್ಥೆಯು ಸರಿದಾರಿಯಲ್ಲಿ ನಡೆಯಲು ಹಲವು ತೊಂದರೆ-ತೊಡಕುಗಳಿವೆ;

- ಪರೀಕ್ಷಾ ಪದ್ಧತಿಯ ಬದಲಾವಣೆಗೆ ವಿರೋಧ ಬಂದೀತು.
- ಶಿಕ್ಷಣಕ್ಕಾಗಿ ಬರುವ ವಿದ್ಯಾರ್ಥಿಗಳ ಅಪಾರ ಸಂಖ್ಯೆ ನಮ್ಮನ್ನು ತೊಂದರೆಗಿಳಿಸೀತು.
- ನಮ್ಮ ಜನಸಂಖ್ಯಾ ಸಮಸ್ಯೆಯು ಶಿಕ್ಷಣ ಸಮಸ್ಯೆಯಿಂದ ದೂರವಾಗಿಲ್ಲ. ೨೧ ನೆಯ ಶತಮಾನದ ಆದಿಯಲ್ಲಿ ಈ ದೇಶದ ಜನಸಂಖ್ಯೆ ೧೦೦ ಕೋಟಿಯಾಗುವುದರಲ್ಲಿ ಯಾವ ಸಂದೇಹವಿಲ್ಲ.
- ಈ ಗಾತ್ರದ ಶಿಕ್ಷಣಕ್ಕೆ ಹಣದ ಒದಗಣೆಯೂ ಕಾಲಾನುಕ್ರಮದಲ್ಲಿ ತೊಂದರೆಗಳನ್ನು ತರಬಹುದು.
- ಶಿಕ್ಷಣದ ಬಗ್ಗೆ ಅಭಿಮಾನಿಗಳು ಖಾಸಗಿ ಕ್ಷೇತ್ರದಲ್ಲಿ ಹೇರಳವಾಗಿದ್ದಾರೆ. ಅವರ ಆರ್ಥಿಕ ನೆರವನ್ನು ನಾವು ಪಡೆಯುತ್ತಿಲ್ಲ. ವರ್ಷವರ್ಷಕ್ಕೆ ಖಾಸಗಿ ಸಂಸ್ಥೆಗಳ ಆರ್ಥಿಕ ಅವಲಂಬನೆ ಸರಕಾರದ ಮೇಲೆಯೇ ನಿಂತುಕೊಳ್ಳುತ್ತಲಿದೆ.

ಕೆಲವು ಸೂಚನೆಗಳು :

ನಮ್ಮ ಶಿಕ್ಷಣ ವ್ಯವಸ್ಥೆಯು ಸರಿದಾರಿಯಲ್ಲಿ ನಡೆಯಬೇಕು. ಮುಂಬರುವ ೨೧ ನೆಯ ಶತಕಕ್ಕೆ ಯೋಗ್ಯರಾದ ಮಾನವ ಸಂಪನ್ಮೂಲಗಳನ್ನು ಅದು ಒದಗಿಸಬೇಕು. ಆ ದಿಶೆಯಲ್ಲಿ ಕೆಲವು ಸೂಚನೆಗಳನ್ನು ಇಲ್ಲಿ ಪರಾಂಬರಿಸಬಹುದಾಗಿದೆ :

೧ ಪ್ರಚಲಿತ ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ರೀತಿಯ ದೋಷಗಳಿದ್ದು ಅವುಗಳ ನಿವಾರಣೆಯಾಗಬೇಕು.

೨) ಶಾಲೆ-ಕಾಲೇಜುಗಳಲ್ಲಿ ನಿರ್ಮಾಣವಾಗುತ್ತಿರುವ ಗಪ್ಪಲ ಕಡಿಮೆಯಾಗಬೇಕು. ಅವರಿಗೆ ಪ್ರವೇಶವು ವ್ಯವಸ್ಥಿತ ರೀತಿಯಲ್ಲಿ ದೊರೆಯುವಂತಾಗಬೇಕು. ಬೇಡವಾದವರಿಗೆ ಈ ಶಿಕ್ಷಣ ದೊರೆಯಕೂಡದು.

೩) ನಮ್ಮ ಶಿಕ್ಷಣವು ಯಾವುದೊಂದು ವೃತ್ತಿ ಮೂಲವಾಗಿ ದೊರೆಯುವಂತಾಗಬೇಕು.

೪) ನಿರುದ್ಯೋಗಿಗಳ ನಿರ್ಮಾಣಕ್ಕಾಗಿ ಶಿಕ್ಷಣ ಬಾರದೆ, ಯಾವುದೊಂದು ಉದ್ಯೋಗಕ್ಕಾಗಿ ಶಿಕ್ಷಣ ಬರಬೇಕು.

೫) ಆಧುನಿಕ ಭಾರತದ ನಿರ್ಮಾಣಕ್ಕಾಗಿ, ವಿಜ್ಞಾನದ ಶಿಕ್ಷಣವು ಚುರುಕುಗೊಳ್ಳಬೇಕು.

೬) ನಮ್ಮ ದೇಶದ ಆಶೋತ್ತರಗಳನ್ನು ಪ್ರತಿನಿಧಿಸುವ ಶಿಕ್ಷಣವು ನಮಗೆ ದೊರೆಯಬೇಕು.

೭) ನಮ್ಮ ತರುಣರಿಗೆ ನಾಗರಿಕತೆಯ ಶಿಕ್ಷಣ ದೊರೆಯಬೇಕು.

೮) ನಮ್ಮ ಶಿಕ್ಷಣವು ಗ್ರಾಮಾಭಿಮುಖವಾಗಿ ಬೆಳೆಯಬೇಕು. ದೇಶೀಯ ಭಾಷೆಗಳಲ್ಲಿಯೇ ನಡೆಯುವುದು ಸೂಕ್ತ.

ಉಪಸಂಹಾರ :

ಸುಮಾರು ೮ ಲಕ್ಷ ಹಳ್ಳಿಗಳಲ್ಲಿ ನಮ್ಮ ಭಾರತವು ಬದುಕುತ್ತಿದೆ. ಈ ಜನಾಂಗದ ಅಭಿವೃದ್ಧಿಯನ್ನು ಗಮನಿಸಿ ನಮ್ಮ ಶಿಕ್ಷಣವು ಅಭಿವೃದ್ಧಿಗೊಳ್ಳಬೇಕು. ಬರಲಿರುವ ೨೧ ನೆಯ ಶತಮಾನಕ್ಕಾಗಿ ಬೇರೆ ದೇಶಗಳು ಈಗಿನಿಂದಲೇ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವಾಗ, ನಾವು ಸುಮ್ಮನಿರಬಾರದು. ಬರುವ ೨೦ ವರ್ಷಗಳಲ್ಲಿ ನಮ್ಮ ಶಿಕ್ಷಣವು ಸಾಕಷ್ಟು ಅಭಿವೃದ್ಧಿ ಶೀಲವಾಗಿ ಬೆಳೆಯಬೇಕು. ಈ ಹಿಂದಿನ ೪೦ ವರ್ಷಗಳಲ್ಲಿ ನಾವು ಶೇಕಡ ೪೦% ಕಡುಬಡವರನ್ನು ಇಟ್ಟುಕೊಂಡು ಬದುಕುತ್ತಿದ್ದೇವೆ. ಅದು ಶೀಘ್ರವಾಗಿ ತೊಲಗಬೇಕು. ಸಮೃದ್ಧ ಭಾರತದ ನಮ್ಮ ಕನಸು ತ್ವರಿತಗತಿಯಲ್ಲಿ ನನಸಾಗಬೇಕು. ಬದಲಾಗುತ್ತಿರುವ ಶಿಕ್ಷಣ, ಇಪ್ಪತ್ತೊಂದನೆಯ ಶತಮಾನಕ್ಕೆ ಜನರನ್ನು ಸುಗಮವಾಗಿ ಕೊಂಡೊಯ್ಯುವಂತಾಗಬೇಕಾಗಿದೆ.

ಸ್ವಧರ್ಮ ಮತ್ತು ಪರಧರ್ಮ

● ವಿಲ್ಯಂ ಮಾಡ್ತ

ಭಾಷಾ ವೈಜ್ಞಾನಿಕ ವಿಶ್ಲೇಷಣೆಯ ಪ್ರಕಾರ 'ಧರ್ಮ' ಎಂಬ ಶಬ್ದ 'ಧೃ' ಎಂಬ ಮೂಲ ಪ್ರಕೃತಿ (Root) ಯಿಂದ ಹುಟ್ಟಿ ಬಂದ ಪದ. 'ಆಧಾರ' ಎಂಬುದೇ ಅದರ ಸ್ಥೂಲಾರ್ಥ. ಮಹಾಭಾರತದ ಕರ್ಣ ಪರ್ವದಲ್ಲಿ (೪೯,೫೦) ಧರ್ಮದ ಬಗೆಗೆ ಉಲ್ಲೇಖ ಹೀಗಿದೆ : "ಧಾರಣಾದ್ ಧರ್ಮಮ್ ಇತ್ಯಾಹುರ್ ಧರ್ಮೋ ಧಾರಯತಿ ಪ್ರಜಾಃ". ಮಹಾನಾರಾಯಣ ಉಪನಿಷತ್ತಿನಲ್ಲಿ "ಧರ್ಮೋ ವಿಶ್ವಸ್ಯಪ್ರತಿಷ್ಠಾ" ಎಂದು ಧರ್ಮದ ವ್ಯಾಖ್ಯೆ ಇದೆ. ಯಾವುದು ಸಕಲಕ್ಕೂ ಆಧಾರವಾಗಿದೆಯೋ ಅದೇ ಧರ್ಮ ಎಂಬ ಸಾಮಾನ್ಯ ವಿವರಣೆ ಈ ಹಿನ್ನೆಲೆಯಲ್ಲಿ ನೀಡಬಹುದು.

ಅಸ್ತಿತ್ವ (Being/Ens)ಕ್ಕೆ ಎರಡು ಪಾತಳಿ: ಒಂದು ಅಂತಃಸ್ತರ ಇನ್ನೊಂದು ಬಹಿಃಸ್ತರ. ಪರಮಾತ್ಮನೇ ಅಸ್ತಿತ್ವದ ಅಂತಃಸ್ತರ (Depth-dimension) ; ಅದರ ಅಭಿವ್ಯಕ್ತಿಯೇ ಬಹಿಃಸ್ತರ. ತತ್ತ್ವಶಾಸ್ತ್ರದಲ್ಲಿ ಪರಮಾತ್ಮನಿಗೆ ಈಶ್ವರತತ್ತ್ವ (*Christos*) ಅಥವಾ ಬ್ರಹ್ಮ ತತ್ತ್ವ ಸ್ಥಲ (Ground) ಎಂದೂ ಕರೆಯುವುದುಂಟು : ಪರಮಾತ್ಮನ ಅಭಿವ್ಯಕ್ತಿ ಪ್ರಕೃತಿಯಿಂದ ಮಾನವನ ತನಕ ವಿಕಸಿತ (evolve) ಗೊಂಡಿದೆ. ಈ ಒಟ್ಟಭಿವ್ಯಕ್ತಿ (total expression)ಯೇ ಸೃಷ್ಟಿ ಅಥವಾ ಪರಮಾತ್ಮನ ಬಹಿಃಸ್ತರ (Surface dimension). ಈ ಸೃಷಿಯ ಅರ್ಥಾತ್ ಜೀವಾತ್ಮನ ಹಾಗೂ ಪ್ರಕೃತಿಯ ಅಂತಃಸ್ತರ/ಆಧಾರ (Ground)ವೇ ಪರಮಾತ್ಮನೆಂಬ ಪ್ರಜ್ಞೆಯೇ ಸನಾತನ/ಮೂಲ ಮಾನವ ಧರ್ಮ. ಕಾಲ ಪ್ರವೇಶ ಹಾಗೂ ಸಂಸ್ಕೃತಿಗಳಿಗನುಗುಣವಾಗಿ ಈ ಧರ್ಮವನ್ನರಿತು ಧಾರ್ಮಿಕ ಜೀವನವನ್ನು ನಡೆಯಿಸುವುದಕ್ಕೋಸ್ಕರ ನಡೆದ ಹಲವು ಪ್ರಯತ್ನಗಳೇ ವಿವಿಧ ಮತ ಪಂಥಗಳು (Faiths) ಹಾಗೂ ಸಂಘಟಿತ ಧರ್ಮಗಳು (churches). ಈ ವಿವಿಧ ಮತಪಂಥಗಳ ಅನುಯಾಯಿಗಳು ತಂತಮ್ಮ ಪೈಪೋಟಿಯನ್ನು ಸಾಧಿಸುವುದಕ್ಕಿಂತ, ತಂತಮ್ಮ ಸ್ವಕಲ್ಪಿತ ಹಿರಿಮೆಯಪ್ರಚಾರಕ್ಕಿಂತ ಈ ಮತಗಳ ಮೂಲ ಹಾಗೂ ಗುರಿಗಳತ್ತ ತಮ್ಮ ಅವಲೋಕನವನ್ನು ಹರಿಯಿಸಿ ಸಹ ಯಾತ್ರಿಕರಂತೆ (Co-Pilgrims) ಸತ್ಯದ ಕಡೆಗೆ ಪರಸ್ಪರ ಸೌಹಾರ್ದತೆಯಿಂದ ಕೈ ಕೈ ಹಿಡಿದು ಮುನ್ನಡೆಯುವುದೇ ನಿಜ ಧಾರ್ಮಿಕ

ಪ್ರವೃತ್ತಿ ಹಾಗೂ ಇಂದಿನ ಮಟ್ಟಿಗೆ ಅತ್ಯಾವಶ್ಯಕವಾದ ಕ್ರಿಯಾತ್ಮಕ ಧರ್ಮ (functional religion) ಎಂಬ ಭಾವನೆ ಹಾಗೂ ಆಶೆ ಇತ್ತೀಚಿಗೆ ಮೂಡಿದೆ.

ಕೇವಲ ವೈಜ್ಞಾನಿಕ ಮನೋಭಾವದಿಂದ ಹಾಗೂ ಪ್ರಗತಿಯಿಂದ ಶಾಂತಿ ಹಾಗೂ ಭದ್ರತೆ ವ್ಯಷ್ಟಿ ಹಾಗೂ ಸಮಷ್ಟಿ ನೆಲೆಗಳಲ್ಲಿ ದೊರಕುತ್ತಿಲ್ಲ ಎಂಬ ಅರಿವು ಇಪ್ಪತ್ತನೆಯ ಶತಮಾನದಲ್ಲಿ ಜಾಗೃತಗೊಂಡಿದೆ. ಟಿವಿ ಸಂಸ್ಕೃತಿಯಲ್ಲಿ ಬೆಳೆದ, ಅಂತರ್‌ಗ್ರಹ ಜ್ಞಾನದಲ್ಲಿ ಮುಳುಗಿದ, ಆಸ್ತಿಕ ಹಾಗೂ ನಾಸ್ತಿಕ ವಿಚಾರಗಳಲ್ಲಿ ಬೇಸತ್ತ ಪಾಶ್ಚಾತ್ಯ ಹಾಗೂ ಮುಂದುವರೆದ ಇತರ ದೇಶಗಳ ಯುವಕ ಯುವತಿಯರು ನಿಜಧರ್ಮವನ್ನು (Authentic religion) ತಿಳಿಯಲು ಉತ್ಸುಕರಾಗಿದ್ದಾರೆ; ವಿನ್ಸೆಂಟ್ ಪೀಲ್, (Vincent Peale), ಬಿಲ್ ಗ್ರಾಹಂ, ಜೆ. ಕೃಷ್ಣಮೂರ್ತಿ ಮೊದಲಾದ ದಾರ್ಶನಿಕರ ತುಟಿಯಿಂದ ಬೀಳುವ ಪ್ರತಿಯೊಂದು ಮಾತನ್ನೂ ಅವರು ಮೆಲುಕು ಹಾಕುತ್ತಾರೆ; ಬೈಬಲ್, ಗೀತೆ ಹಾಗೂ ಶರಣ-ದಾಸ ಸಾಹಿತ್ಯಗಳನ್ನು ಓದುತ್ತಾರೆ. ಆದರೆ ಇನ್ನೆಷ್ಟೋ ಯುವಕ ಯುವತಿಯರು ಕಷ್ಟದ ಹಾದಿಯನ್ನು ಬಿಟ್ಟು ಸುಲಭ ಮುಕ್ತಿ-ಮಾರ್ಗವನ್ನು ಹಿಡಿಯಲು ಬಾಬಾಗಳ, ಭಗವಾನರುಗಳ, ಮಾಂತ್ರಿಕರ ಶಿಷ್ಯರಾಗಿ ತಮ್ಮ ಹಣವನ್ನೂ, ಆರೋಗ್ಯವನ್ನೂ ಮನೋಸ್ಥೈರ್ಯವನ್ನೂ ಕಳೆದು ಬಾಬಾಗಳ ವಿಲಾಸೀ ಜೀವನಕ್ಕೆ ಕಾರಣರಾಗಿರುತ್ತಾರೆ! ಸಾಧಕರು ಅಂತರ್ಮುಖಿಯಾಗಿ ಆತ್ಮಾವಲೋಕನದಿಂದ 'ಸ್ಥಲ' ವನ್ನರಿತರೆ, ಪರಸ್ಪರ ತಮ್ಮ ಸೇವಾಹಸ್ತಗಳನ್ನು ಚಾಚಿ ಸಮಾಜೋದ್ಧಾರದ ಮೂಲಕ ತಮ್ಮ ಅಭ್ಯುದಯವನ್ನು- ಮುಕ್ತಿಯನ್ನು- ಸಾಧಿಸುವುದು ಸಾಧ್ಯವಾಗುತ್ತದೆ. ಈ ನಿಜಧರ್ಮವನ್ನರಿತು ನಡೆಯುವುದು ಪ್ರಸ್ತುತ ಹಾಗೂ ಸಕಾಲಿಕವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ವಿಜ್ಞಾನದ ಪ್ರಕಾರ ಪ್ರಕೃತಿಯಿಂದ ವಿಕಸನಗೊಂಡಿದ್ದಾನೆ ವ್ಯಕ್ತಿ (Person). ಆತನಿಗೂ ಪ್ರಕೃತಿಗೂ ಸಂಬಂಧವಿದೆ. ಈ ಪ್ರಾಕೃತಿಕ ವ್ಯಕ್ತಿಗೆ ತತ್ತ್ವ ಶಾಸ್ತ್ರದಲ್ಲಿ 'ಜೀವಾತ್ಮ' ಎಂದು ಕರೆಯಲಾಗಿದೆ. ಇವೆರಡುಗಳ ನಡುವೆ ಸಂಬಂಧ (Relation) ಇದ್ದಂತೆ ಅವುಗಳ ನಡುವೆ ವ್ಯತ್ಯಾಸವೂ ಉಂಟು. ಪ್ರಕೃತಿ (Cosmic reality)ಗೆ ಅಹಂಭಾವ ಪ್ರಜ್ಞೆ (Ego-consciousness) ಇಲ್ಲ; ಜೀವಾತ್ಮಕ್ಕೆ ಅದು ಬಹಳಷ್ಟಿದೆ. ಈ ಕಾರಣದಿಂದ ಜೀವಾತ್ಮನು ಅಹಂಕೇಂದ್ರೀಯ (Ego-centerd) ವ್ಯಕ್ತಿಯಾಗಿ ಬೆಳೆಯುತ್ತಾನೆ. ಇದು ಆತನ ಸ್ವಭಾವ (nature)ವಾದರೂ ಸಂಸ್ಕೃತಿ (Culture)ಯಲ್ಲ. ಈ ಅಹಂಕೇಂದ್ರೀಯ ಪ್ರಜ್ಞೆಯೇ ಮಾನವನ ಸನಾತನ ಅಜ್ಞಾನ /ಅವಿದ್ಯಾ (Originl sin) ತನ್ನ ಹಾಗೂ ಸೃಷ್ಟಿಯ ಕೇಂದ್ರ ತಾನಲ್ಲ ; ಅದು ಪರಮಾತ್ಮನೆಂಬ ಜ್ಞಾನದ ದೀಕ್ಷೆ. ಅರಿವಿನ ಮೂಲಕ ಅನುಭಾವಕ್ಕೆ ಬರುವುದು ಮಾನವ ಜೀವಕ್ಕೆ ಅತ್ಯಾವಶ್ಯಕ. ಈ ಅಹಂಕೇಂದ್ರೀಯ ಪ್ರಜ್ಞೆಯ ಅಳಿಯುವಿಕೆ ಅರ್ಥಾತ್ ಪರಕೇಂದ್ರೀಯ ಪ್ರಜ್ಞೆಯ ಇರುವಿಕೆಯೇ ಧರ್ಮದ ಪ್ರತಿಷ್ಠಾಪನೆ ಹಾಗೂ ಪ್ರತಿಪಾದನೆ. ಈ ಧರ್ಮ ಜಾಗೃತಿಯೇ ನಿಜ ಪರಿವರ್ತನೆ (Conversion).

ಅವಿದ್ಯೆಯನ್ನು ಕಳೆದುಕೊಂಡಾಗ ಅರ್ಥಾತ್ ಜಿವಾತ್ಮನಲ್ಲಿ / ವ್ಯಕ್ತಿಯಲ್ಲಿ ಪರಿವರ್ತನೆಯುಂಟಾದಾಗ ಅಂದರೆ, ಧರ್ಮ ಜಾಗೃತಿಯಾದಾಗ ವ್ಯಕ್ತಿಯಲ್ಲಿ "ಅಹಂ ಬ್ರಹ್ಮಾಸ್ಮಿ 'My-Self is Brahman'" ಎಂಬ ಸ್ಥಾಯಿ ಪ್ರಜ್ಞೆ ಇರುತ್ತದೆ. ತಾನೆಂಬುದು ಅಳಿದಾಗ ಅಲ್ಲಿ ಉಳಿಯುವುದು ಕೇವಲ ಸ್ಥಲದರಿವು. ಈ ಕೈವಲ್ಯಭಾವ /ತಾದಾತ್ಮ್ಯತೆ (Integral union) ಯೇ ವ್ಯಷ್ಟಿ ನೆಲೆಯ ಅದ್ವೈತ. ಈ ಅದ್ವೈತ ಭಾವವೇ ಸ್ವಧರ್ಮ. ಸ್ಥಲ ಕೇಂದ್ರೀಕೃತ ಜ್ಞಾನ ಅಹಂಭಾವವನ್ನು / ಅಹಂ ಕೇಂದ್ರೀಯತೆಯನ್ನು ಹೋಗಲಾಡಿಸುತ್ತದೆ. ಇದರಿಂದಾಗಿ ಜೀವಾತ್ಮನ ಸಕಲ ಕರ್ಮ ಗಳೆಲ್ಲವೂ ನಿಷ್ಕಾಮ ಕರ್ಮಗಳಾಗುತ್ತವೆ. ಈ ಕರ್ಮಗಳ ಕರ್ತೃ ಹಾಗೂ ಫಲಗ ಳೆಲ್ಲವೂ ಅಹಂಕೇದ್ರೀಯಗಳಲ್ಲ. ಈ ರೀತಿಯಾಗಿ ಜೀವಾತ್ಮನನ್ನು ಅಹಂ-ಪ್ರಜ್ಞೆಯಿಂದ ಬಿಡುಗಡೆ ಮಾಡಿ ಬ್ರಹ್ಮ ಪ್ರಜ್ಞೆಯಲ್ಲಿ ಐಕ್ಯಗೊಳಿಸುವುದೇ ಆತನಿಗೆ ಮುಕ್ತಿ (Liberation/Salvation). "ನಾನು ಮತ್ತು ನನ್ನ ತಂದೆ ಅಭಿನ್ನರು" ಎಂಬ ಯೇಸುಸ್ವಾಮಿಯ ಮಾತಿನ ಮರ್ಮವೂ ಇದೇ.

ಸ್ವಧರ್ಮ ಲೌಕಿಕ ಸಂದರ್ಭದಲ್ಲಿ ಅರ್ಥವತ್ತಾಗಬೇಕಾದರೆ ಹಾಗೂ ಫಲ ದಾಯಕವಾಗಬೇಕಾದರೆ ಅದು ಸಾಮಾಜಿಕ / ಪರಧರ್ಮದೊಡನೆ ಸಂಬಂಧ ಕಲ್ಪಿಸಿ ಕೊಳ್ಳಬೇಕು; ಯಾಕೆಂದರೆ ವ್ಯಷ್ಟಿಯ ಪರಿಪೂರ್ಣತೆಯನ್ನು ನಾವು ಕಾಣುವುದು ಸಮಷ್ಟಿಯಲ್ಲಿ. ವ್ಯಕ್ತಿ ಸಮಾಜದ ಅವಿಭಾಜ್ಯ ಅಂಗವಾಗಿ ಅಥವಾ ಸದಸ್ಯನಾಗಿ ಇರುತ್ತಾನೆ. ಈ ಕಾರಣದಿಂದಾಗಿ ಸ್ವಧರ್ಮ ಪರಧರ್ಮವನ್ನು ಬಿಟ್ಟಿರಲಾರದು.

'ಅಹಂ ಬ್ರಹ್ಮಾಸ್ಮಿ' ಪ್ರಜ್ಞೆ ಸ್ವಧರ್ಮದ ಮೂಲವಾದರೆ "ತತ್ ತ್ವಂ ಅಸಿ ಪ್ರಜ್ಞೆ" ಸಾಮಾಜಿಕ ಧರ್ಮದ ನೆಲೆ. ಅಹಂವಿನ ಕೇಂದ್ರ, ಪರಮಾತ್ಮ / ಬ್ರಹ್ಮ ವಿದ್ದಂತೆ ತ್ವಂವಿನ, ಕೇಂದ್ರವೂ ಅದೇ ತತ್ತ್ವ. 'ನಾನು' ಮತ್ತು 'ನೀನು' ಅಂತಃಸ್ತರ ದಲ್ಲಿ ಅದ್ವೈತ. ಈ ಕಾರಣದಿಂದಲೇ "ನಿನ್ನಂತೆ ಪರರನ್ನೂ ಪ್ರೀತಿಸು" ಎಂದು ಬೈಬಲ್ ಉಪದೇಶಿಸುತ್ತದೆ. ಯಾಕೆಂದರೆ ಕೇಂದ್ರ ಒಂದೇ; ಹಲವುಗಳು ಅದರ ಅಭಿವ್ಯಕ್ತಿಗಳು ಮಾತ್ರ (Surface manifestations only).

'ಅಹಂ ಬ್ರಹ್ಮಾಸ್ಮಿ' ಮತ್ತು 'ತತ್ ತ್ವಂ ಅಸಿ' ಇವು ಪ್ರತ್ಯೇಕ (Separate) ಪ್ರಜ್ಞೆಗಳಲ್ಲ. ಅವೆರಡೂ ಒಂದೇ ಪ್ರಜ್ಞೆಯ ಎರಡು ಮುಖಗಳು. ಬಹಿಃಸ್ತರದಲ್ಲಿ ಅವುಗಳಲ್ಲಿ ವೈವಿಧ್ಯತೆ ಕಂಡು ಬಂದರೂ ಅಂತಃಸ್ತರದಲ್ಲಿ ಅವು ಒಂದೇ.

ವಿಭಿನ್ನ ಕಾಲ ದೇಶಗಳಿಗೆ ಸೇರಿದ ಋಷಿ, ಗುರು, ಆಚಾರ್ಯರು ಶ್ರುತಿ ತತ್ತ್ವಶಾಸ್ತ್ರ ಧರ್ಮಶಾಸ್ತ್ರಗಳ ಮುಖಾಂತರ ಈ ಸನಾತನ ಧರ್ಮದ ಭಾಷ್ಯವನ್ನು ಕೊಟ್ಟಾಗ ಅದು ವಿವಿಧ ಮತಗಳಾಗಿ ರೂಪುಗೊಂಡಿತು. ಈ ಮತಾಚರಣೆಗಳ ಸಾಧಕರು (Faithful) ತಂತಮ್ಮ ಮತಗಳ ಪರಿಚಯದೊಡನೆ ಇತರ ಮತಗಳನ್ನು ಸಮನ್ವಯ ದೃಷ್ಟಿಯಿಂದ

ಅರಿತು ಒಳಹೊಕ್ಕು ಆತ್ಮಾವಲೋಕನ ಮಾಡಿದಾಗ ಒಂದುಹೊಸ ಅವಲೋಕನ ಕಾಣುವ (World View) ಸಾಧ್ಯತೆ ಇದೆ. ಇದರಿಂದಾಗಿ ಹಳತದ್ದನ್ನು, ಕೆಟ್ಟದ್ದನ್ನು ಕಿತ್ತುಹಾಕಿ, ಕಂಡುಕೊಂಡ ಹೊಸತುದನ್ನು ಒಳ್ಳೆಯದನ್ನು ಜೀರ್ಣಿಸಿಕೊಂಡು ಸನಾತನ ಧರ್ಮವನ್ನು ಹೊಸತಾಗಿ ಸಕಾಲಿಕವಾಗಿ ಅರ್ಥಪೂರ್ಣವಾಗಿ ಆಚರಣೆಗೆ ತರುವುದು ಇಂದು ಅತ್ಯಾವಶ್ಯಕ.

ಈ ಹೊಸ ಧಾರ್ಮಿಕಾವಲೋಕನದಿಂದ ಹೊಸ ಮಾನವನನ್ನು ಹೊಸ ಸಮಾಜವನ್ನು ರೂಪಿಸಬೇಕಾಗಿದೆ. ಅಹಂಭಾವದ ಸ್ಥಾನದಲ್ಲಿ ಸ್ಥಲದರಿವನ್ನು ಸ್ಥಾಪಿಸಿ, ನಿಷ್ಕಾಮ ಕರ್ಮಿಯಾಗಿ ಲೋಕ ಸಂಗ್ರಹವನ್ನೇ ಗುರಿಯಾಗಿಟ್ಟುಕೊಂಡು ವೈಯಕ್ತಿಕ ಹಾಗೂ ಸಾಮಾಜಿಕ ಜೀವನವನ್ನು ಕ್ರಮ ಬದ್ಧಗೊಳಿಸಿದರೆ 'ರಾಮರಾಜ್ಯ', 'ಶಿವಲೋಕ' ದೇವರಾಜ್ಯ (God's Kingdom) ವೆಂಬ 'ಕನಸುಗಳು' / ಸಂಕೇತಗಳು ಚಾರಿತ್ರಿಕ ಘಟನೆಗಳಾಗುವುದರಲ್ಲಿ ಸಂದೇಹವಿಲ್ಲ; ಜಗತ್ತು ಆಶಿಸುತ್ತಿರುವ ಶಾಂತಿ ಹಾಗೂ ಅದರ ಮುಕ್ತಿ (Liberation) 'ಇಲ್ಲಿ' ಮತ್ತು 'ಇಂದು' (*Hic et nunc*) ಲಭಿಸುವುದರಲ್ಲಿ ಸಂಶಯವಿಲ್ಲ. ಈ ದೆಸೆಯಲ್ಲಿ ಜನಜಾಗೃತಿಯನ್ನುಂಟು ಮಾಡುವುದೇ ಧಾರ್ಮಿಕ ಶಿಕ್ಷಣ. ಈ ಶಿಕ್ಷಣಕ್ಕೆ ಸಾಮಾನ್ಯ ಶಿಕ್ಷಣದಲ್ಲಿ ಸ್ಥಾನ ಸಿಕ್ಕಿದಾಗ ಜನತೆಯಲ್ಲಿ ಸ್ವಧರ್ಮ ಹಾಗೂ ಸಾಮಾಜಿಕ ಧರ್ಮಗಳೆಂಬ ಮೌಲ್ಯಗಳಿಗೆ ಸ್ಥಾನ ಸಿಗಬಹುದಾಗಿದೆ.

ಆಧಾರ ಸಾಹಿತ್ಯ

Bhattacharya Haridass (Ed.) 1969 (Reprint). *The Cultural Heritage of India, Vol. IV* Calcutta: The Ramakrishna Mission Institute of Culture.

Dharma Research Association *Journal of Dharma* (Various numbers), Bangalore: Centre for the Study of World Religions, Dharmaram College.

Madtha, William 1976 "Veerasaivism and Christianity" *Journal of Karnataka University. Humanities Vol. XX* Dharwad: Karnatak University.

Panikkar, Raimundo 1983 *The Vedic Experience: Mantramanjari (An Anthology of the Vedas for Modern Man and Contemporary Celebration),* Pondicherry, India: All India Books

Theology Centre, *Jeevadhara* (Various numbers), Kottayam, Kerala.

ಕರ್ನಾಟಕ ಮತ್ತು ಆಂಧ್ರಗಳ ಸಂಬಂಧದಲ್ಲಿ ಜೈನ ಧರ್ಮದ ಪಾತ್ರ

● ಎಸ್. ವ್ಹಿ. ಪಿ. ಹಳಕಟ್ಟಿ

ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ದಕ್ಷಿಣ ಭಾರತದ ಎರಡು ದೊಡ್ಡ ರಾಜ್ಯಗಳು. ದಕ್ಷಿಣಭಾರತದ ಸಂಸ್ಕೃತಿಗೆ ಈ ಎರಡು ರಾಜ್ಯಗಳ ಕೊಡುಗೆ ಮಹತ್ವದ್ದು. ಎರಡೂ ರಾಜ್ಯಗಳು ಭೌಗೋಲಿಕವಾಗಿ ಅಕ್ಕಪಕ್ಕದಲ್ಲಿವೆ. ಈ ಕಾರಣದಿಂವಾಗಿ ಈ ಎರಡು ಪ್ರದೇಶಗಳು ಬಹುಪ್ರಾಚೀನ ಕಾಲದಿಂದಲೂ ಪರಸ್ಪರ ಸಂಬಂಧ ಹೊಂದಿದ್ದವು. ಕರ್ನಾಟಕ ಮತ್ತು ಆಂಧ್ರ ಎಂಬ ಪದಗಳು ಈಗಿನ ಭಾಷಾವಾರು ಪ್ರಾಂತಗಳನ್ನು ಸೂಚಿಸುತ್ತವೆಯಾದರೂ ಈಗಿನ ಆಂಧ್ರದ ರಾಯಲಸೀಮಾ ಮತ್ತು ತೆಲಿಂಗಾಣಾ ಪ್ರದೇಶಗಳು ಕನ್ನಡ ಸಾಮ್ರಾಜ್ಯಗಳ ಭಾಗಗಳಾಗಿದ್ದವು. ಪ್ರಾರಂಭದಲ್ಲಿ ರಾಜಕೀಯ ಕಾರಣಗಳಿಂದ ಎರಡು ಪ್ರದೇಶಗಳಲ್ಲಿ ಉಂಟಾದ ಸಂಪರ್ಕ ಕ್ರಮೇಣ ಸಾಂಸ್ಕೃತಿಕ ಕ್ಷೇತ್ರಕ್ಕೂ ಪಸರಿಸಿತು. ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೀಗೆ ಪರಸ್ಪರ ಸಂಪರ್ಕಕ್ಕೆ ಹಲವಾರು ಕಾರಣಗಳುಂಟು. ಇಂತಹ ಅನೇಕ ಕಾರಣಗಳಲ್ಲಿ ಜೈನಧರ್ಮವೂ ಒಂದು. ಈ ಲೇಖನದಲ್ಲಿ ಜೈನಧರ್ಮ ಕರ್ನಾಟಕ ಮತ್ತು ಆಂಧ್ರಗಳ ಮಧ್ಯೆ ಮಧುರವಾದ ಸಂಬಂಧ ಬೆಳೆಯಲು ಹೇಗೆ ಪರೋಕ್ಷವಾಗಿ/ಅಪರೋಕ್ಷವಾಗಿ ಸಹಾಯ ಮಾಡಿತು ಎಂಬುದನ್ನು ವಿವೇಚಿಸಲಾಗಿದೆ.

ಪ್ರಾಚೀನ ಕಾಲದಿಂದಲೂ, ಅಂದರೆ ಕ್ರಿ. ಪೂ. ೩ನೇ ಶತಮಾನದಿಂದಲೇ ಆಂಧ್ರ ಬೌದ್ಧರ ಬೀಡಾಗಿತ್ತು. ಅಲ್ಲಿ ಜೈನಧರ್ಮದ ಬೆಳವಣಿಗೆಗೆ ಅಷ್ಟಾಗಿ ಅವಕಾಶ ವಿರಲಿಲ್ಲ. ಆದರೆ ಕನ್ನಡ ನಾಡಿನಲ್ಲಿ ಮೊದಲಿನಿಂದಲೂ ಜೈನಧರ್ಮ ಸ್ಥಾನದಲ್ಲಿತ್ತು. ಇದಕ್ಕೆ ಮುಖ್ಯ ಕಾರಣ : ಕನ್ನಡನಾಡನ್ನಾಳಿದ ಅರಸುಮನೆತನಗಳ ಆಸಕ್ತಿ, ಸತತ ಪ್ರೋತ್ಸಾಹ ಮತ್ತು ಜನಸಾಮಾನ್ಯರ ಬೆಂಬಲ. ಅಷ್ಟೆ ಅಲ್ಲ, ಕೆಲವು ಅರಸರು, ಹಲವಾರು ಮಹಾಮಂಡಲೇಶ್ವರರು ಮತ್ತು ದಂಡನಾಯಕರು ಜೈನಧರ್ಮದವರಾಗಿದ್ದರು.

ಉದಾ : ರಾಷ್ಟ್ರಕೂಟ ಚಕ್ರವರ್ತಿ ಅಮೋಘ ವರ್ಷ, ನಾಲ್ಮಡಿ ಇಂದ್ರ, ರಠ್ಠರರು.... ಇತ್ಯಾದಿ.

ಇದರಿಂದಾಗಿ ಕರ್ನಾಟಕದಲ್ಲಿ ಜೈನಧರ್ಮ ಪ್ರಬಲವಾಗಿ ಬೆಳೆದು ಕನ್ನಡನಾಡು ಇಡಿ ದಕ್ಷಿಣಭಾರತದಲ್ಲೇ ಪ್ರಬಲ ಜೈನಕೇಂದ್ರವಾಗಿ ಬೆಳೆಯಿತು. ಇಲ್ಲಿಂದ ದಕ್ಷಿಣದ ಬೇರೆ ಬೇರೆ ಪ್ರದೇಶಗಳಿಗೆ ಜೈನಧರ್ಮ ಪ್ರಸಾರವಾಯಿತು. ಪ್ರಾಚೀನ ಆಂಧ್ರದ ಬಹು ಭಾಗ ಬಹುಕಾಲ ಕರ್ನಾಟಕದ ಭಾಗವಾಗಿದ್ದರಿಂದ ಕನ್ನಡನಾಡಿನ ಜೈನಧರ್ಮ ಆಂಧ್ರದ ಜೈನಧರ್ಮಕ್ಕೆ ಚೈತನ್ಯ ನೀಡುವಲ್ಲಿ ಸಹಕಾರಿಯಾಯಿತು.

ಆಂಧ್ರಕ್ಕೆ ಜೈನಧರ್ಮ ಎರಡು ಮೂಲಗಳಿಂದ ಪ್ರವೇಶವಾಯಿತೆನ್ನಬಹುದು. ಹಾಥಿಗುಂಫಾ ಮತ್ತು ಗುಂಟುಪಲ್ಲಿ [1] ಶಾಸನಗಳಿಂದ ನಮಗೆ ತಿಳಿದುಬರುವ ವಿಷಯವೆಂದರೆ ಈಗಿನ ಆಂಧ್ರದ ಉತ್ತರಭಾಗಗಳು ಓರಿಸ್ಸಾ ದೇಶದ ಜೈನಧರ್ಮ ದಿಂದ ಪ್ರಭಾವಿತರಾಗಿರುವ ಸಾಧ್ಯತೆಯಿದೆ. ಈ ಶಾಸನಗಳು ಕನಿಷ್ಠಪಕ್ಷ ಕ್ರಿ. ಪೂ. ೨ನೇ ಶತಮಾನದಷ್ಟು ಪ್ರಾಚೀನ ಕಾಲದಿಂದಲೇ ಕಲಿಂಗದೇಶದಲ್ಲಿ ಜೈನಧರ್ಮ ಪ್ರಚಲಿತವಿತ್ತೆಂಬುದನ್ನು ಖಚಿತ ಪಡಿಸುತ್ತವೆ. ಹಾಗೆಯೇ ಕರ್ನಾಟಕದಿಂದ ಜೈನಧರ್ಮವು ಈಗಿನ ದಕ್ಷಿಣದ ಆಂಧ್ರ ಭಾಗಗಳಾದ ರಾಯಲಸೀಮಾ ಮತ್ತು ತೆಲಿಂಗಾಣ ಪ್ರದೇಶಗಳಿಗೆ ಕಾಲಿಟ್ಟಿರುವ ಸಾಧ್ಯತೆಯಿದೆ. ಈ ಬಗ್ಗೆ ಖಚಿತವಾದ ಶಾಸನ ಗಳ ಆಧಾರವಿಲ್ಲದಿದ್ದರೂ ಆಗಿನ ಜೈನಧರ್ಮದ ಪ್ರಬಲತೆಯ ಆಧಾರದ ಮೇಲೆ ಮೇಲಿನ ನಿರ್ಣಯಕ್ಕೆ ಬರಬಹುದು. ಕ್ರಿ.ಪೂ. ೨ನೇ ಶತಮಾನದಷ್ಟು ಹಿಂದೆಯೇ ಕರ್ನಾಟಕ ದಲ್ಲಿ ಪ್ರಸಿದ್ಧ ಜೈನ ಕೇಂದ್ರಗಳಿದ್ದವು. ಇಂತಹ ಎರಡು ಪ್ರಮುಖ ಕೇಂದ್ರಗಳು ಉತ್ತರ ಕರ್ನಾಟಕದ ಕೊಪ್ಪಳ ಮತ್ತು ದಕ್ಷಿಣ ಕರ್ನಾಟಕದ ಶ್ರವಣಬೆಳಗೊಳ. ಇವೆರಡು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ಎರಡು ಜೈನ ಕೇಂದ್ರಗಳಾಗಿದ್ದವು. ಇಲ್ಲಿಂದ ಬೇರೆ ಬೇರೆ ಸ್ಥಳಗಳಿಗೆ ಜೈನ ಗುರುಗಳು ಹೋಗುತ್ತಿದ್ದರು. ಇದಲ್ಲದೆ, ಪ್ರಸಿದ್ಧ ಜೈನಾಚಾರ್ಯರಾದ ಕೊಂದಕುಂದಾಚಾರ್ಯರು ಜನ್ಮವೆತ್ತಿ ಪ್ರಸಿದ್ಧ ರಾದುದು ಈಗಿನ ಕರ್ನಾಟಕ- ಆಂಧ್ರದ ಗಡಿ ಪ್ರದೇಶವಾದ ಗುಂತಕಲ್ಲಿನಲ್ಲಿ. [2] ಆದ್ದರಿಂದ ಇಷ್ಟೆಲ್ಲಾ ಜೈನಕೇಂದ್ರಗಳು ಕನ್ನಡನಾಡಿನಲ್ಲಿ ಪ್ರಸಿದ್ಧವಾಗಿರುವಾಗ ಕರ್ನಾಟಕಕ್ಕೆ ಹೊಂದಿಕೊಂಡೇ ಇರುವ ಈಗಿನ ರಾಯಲಸೀಮಾ ಮತ್ತು ತೆಲಿಂಗಾಣಾ ಪ್ರದೇಶಗಳು ಕನ್ನಡನಾಡಿನ ಜೈನಧರ್ಮದಿಂದ ಪ್ರಭಾವಿತರಾಗಿರುವ ಸಾಧ್ಯತೆಯಿದೆ. ಈ ಊಹೆಗೆ ನಮಗೆ ಸಮರ್ಥನೆ ಸಿಕ್ಕುವುದು ತರುವಾಯ ಕಾಲದಲ್ಲಿ. ಇಡೀ ಆಂಧ್ರ ದಲ್ಲಿ ಜೈನಧರ್ಮ ಹೆಚ್ಚಾಗಿ ಬಾಳಿ ಬದುಕಿದ್ದು ಈಗಿನ ರಾಯಲಸೀಮಾ ಮತ್ತು ತೆಲಿಂಗಾಣಾದಲ್ಲಿ ಎಂಬ ವಿಷಯ ಇಲ್ಲಿ ಗಮನಾರ್ಹವಾದುದು. ಯಾವಾಗ ಕರ್ನಾಟಕ ದಿಂದ ಆಂಧ್ರಕ್ಕೆ ಜೈನ ಧರ್ಮ ಕಾಲಿಟ್ಟಿತು ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಈ ಬಗ್ಗೆ ಅತೀ ಪ್ರಾಚೀನ ಆಂಧ್ರದ ಶಾಸನಗಳಲ್ಲೂ ಪ್ರಸ್ತಾಪವಿಲ್ಲ. ಕ್ರಿ. ಪೂರ್ವದಿಂದಲೂ ಈ ಭಾಗದಲ್ಲಿ ಬೌದ್ಧರ ಪ್ರಭಾವ ತುಂಬಾ ಇತ್ತು. ರಾಜಮನೆ ತನಗಳಲ್ಲದೇ ಅತ್ಯಂತ ಶ್ರೀಮಂತ ವರ್ತಕರು ಮತ್ತು ಇತರ ಉಳ್ಳವರು ಬೌದ್ಧಧರ್ಮದ

ಅನುಯಾಯಿಗಳಾಗಿದ್ದರಿಂದ ಜೈನಧರ್ಮಕ್ಕೆ ಆಂಧ್ರದಲ್ಲಿ ಅಷ್ಟಾಗಿ ಪ್ರೋತ್ಸಾಹ ಸಿಕ್ಕಲಿಲ್ಲ. ಬಹುಶಃ ಈ ಕಾರಣದಿಂದಾಗಿ ನಾವು ಜೈನಧರ್ಮದ ಬಗ್ಗೆ ಪ್ರಾಚೀನ ಆಂಧ್ರದ ಶಾಸನಗಳಲ್ಲಿ ಅಷ್ಟಾಗಿ ಪ್ರಸ್ತಾಪವಾಗಿರಲಿಕ್ಕಿಲ್ಲವೆಂದು ಸದ್ಯಕ್ಕೆ ತರ್ಕಿಸ ಬಹದು.

ಶಾಸನಗಳಲ್ಲಿ ಬರುವ ಸಿಂಹನಂದಿ ಸಂಪ್ರದಾಯ ಕರ್ನಾಟಕ-ಆಂಧ್ರಗಳ ಸಂಬಂಧದಲ್ಲಿ ಜೈನ ಧರ್ಮದ ಪಾತ್ರ ಕುರಿತು ಬೆಳಕು ಚೆಲ್ಲುತ್ತದೆ. ಇಲ್ಲಿ ತಿಳಿದು ಬರುವಂತೆ ಸಿಂಹನಂದಿ ಎಂಬ ಜೈನಗುರುಗಳು ಈಗಿನ ಕಡಪ್ಪಾ ಜಿಲ್ಲೆಯ ಪೆರೂರು ಎಂಬಲ್ಲಿ ವಾಸವಾಗಿದ್ದರು. [3] ಅವರ ಸಲಹೆಯ ಮೇರೆಗೆ ದಡಿಗ ಮತ್ತು ಮಾಧವ ಎಂಬ ರಾಜಪುತ್ರರಿಬ್ಬರು ಕನ್ನಡ ನಾಡಿನಲ್ಲಿರುವ ತಲಕಾಡಿನಲ್ಲಿ ಗಂಗ ರಾಜ್ಯವನ್ನು ಸ್ಥಾಪಿಸಿದರು. ಸಿಂಹನಂದಿಗಳು ಆಂಧ್ರದಲ್ಲಿ ಹೊಸ ರಾಜ್ಯವನ್ನು ಸ್ಥಾಪಿಸಲು ಸಲಹೆ ನೀಡದೇ ಜೈನ ಧರ್ಮ ಪ್ರಬಲ ಕೇಂದ್ರವಾದ ತಲಕಾಡಿನಲ್ಲಿ ಸ್ಥಾಪಿಸಲು ಸಲಹೆ ನೀಡಿದುದು ಗಮನಾರ್ಹ. ಸಿಂಹ ನದಿಗಳಿಗೆ ತಲಕಾಡು ಮತ್ತು ಸುತ್ತಮುತ್ತಲಿನ ಪ್ರದೇಶದ ಪರಿಚಯವಿದ್ದಿರಬೇಕು ಅಥವಾ ಅವರು ಆ ಪ್ರದೇಶದಿಂದ ಆಂಧ್ರಕ್ಕೆ ಹೋದವರಾಗಿರಬೇಕು. ತಲಕಾಡಿನಲ್ಲಿ ಜೈನಧರ್ಮಕ್ಕೆ ಪ್ರೋತ್ಸಾಹ ಸಿಗುತ್ತಿದ್ದುದರಿಂದ ಅಲ್ಲಿ ಗಂಗರಾಜ್ಯವನ್ನು ಸ್ಥಾಪಿಸಲು ಸಿಂಹನಂದಿಗಳು ರಾಜಪುತ್ರರಿಗೆ ಸಲಹೆ ಮಾಡಿ ರಲು ಸಾಕು. ಇಲ್ಲಿ ನೆನಪಿಡಬೇಕಾದ ಅಂಶವೆಂದರೆ ಗಂಗರಾಜ್ಯ ತನ್ನ ಅಸ್ತಿತ್ವ ದುದ್ದಕ್ಕೂ ಜೈನಧರ್ಮಕ್ಕೆ ಬಹಳ ಪ್ರೋತ್ಸಾಹ ನೀಡಿತು.

ಇದಲ್ಲದೇ ಪೆರೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೈನಧರ್ಮ ಪ್ರಬಲವಾಗಿತ್ತು. ಜಡಪತ್ರಿ ಶಾಸನದಿಂದ [4] ನಮಗೆ ಸಿದ್ಧಾವತಮ್ ಮತ್ತು ಅವರ ಸಮೀಪದ ಜೈನಕೇಂದ್ರಗಳು ಶ್ರವಣ ಬೆಳಗೊಳದಿಂದ ಬಂದ ಜೈನ ಸನ್ಯಾಸಿಗಳಿಂದ ಸ್ಥಾಪಿಸಲ್ಪಟ್ಟಿದ್ದವು. ಹೀಗೆ ಜೈನ ಮುನಿಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಿ ಎರಡು ಪ್ರದೇಶಗಳ ಮಧ್ಯೆ ಪರಸ್ಪರ ಸಂಬಂಧ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಇದಕ್ಕೆ ಸಮರ್ಥನೆ ಚಿತ್ತೂರ ಜಿಲ್ಲೆಯಲ್ಲಿರುವ ವಲ್ಲಿಮಲೈ ಗುಡ್ಡದಲ್ಲಿ ಸಿಕ್ಕಿರುವ ಮೂರು ಶಾಸನಗಳಿಂದ ದೊರಕುತ್ತದೆ. ಸುಮಾರು ಕ್ರಿ. ಶ. ೮೦೦ರಲ್ಲಿ ಗಂಗರಾಜನಾದ ರಾಚಮಲ್ಲನು ವಲ್ಲಿಮಲೈ ಎಂಬಲ್ಲಿ ಒಂದು ಜೈನ ಕೇಂದ್ರ ಸ್ಥಾಪಿಸಿದನು. ಇಲ್ಲಿರುವ ಒಂದು ಗುಹೆಯ ಹಿಂದಿನ ಭಾಗದ ಮೇಲೆ ಜಿನ ತೀರ್ಥಂಕರ ಮತ್ತು ಜೈನಗುರುಗಳನ್ನು ಶಿಲೆಯಲ್ಲಿ ಕೆತ್ತಲಾಗಿದೆ. ಅಲ್ಲಿಯೇ ದೊರಕುವ ಮೂರು ಶಾಸನಗಳಿಂದ [5] ಅಜ್ಜನಂದಿ ಎಂಬ ಜೈನಯತಿಗಳು ತಮ್ಮ ಗುರುಗಳ ಮೂರ್ತಿ ಗಳನ್ನು ಕೆತ್ತಿಸಿದ ಬಗ್ಗೆ ಪ್ರಸ್ತಾಪ ಬರುತ್ತದೆ. ಆದ್ದರಿಂದ ಮೇಲೆ ಕಾಣಿಸಿದಂತೆ ಕಂಡು ಬರುವ ಮೂರ್ತಿಗಳು ಬಹುಶಃ ಅಜ್ಜನಂದಿಯಿಂದಲೇ ಕೆತ್ತಿಸಿದ್ದವಾಗಿರಬೇಕು. ಅಜ್ಜನಂದಿ ಎಂಬುದು ಕನ್ನಡ ಹೆಸರೆನ್ನಿಸುತ್ತದೆ. ಇದಲ್ಲದೆ ವಲ್ಲಿಮಲೈ ದಕ್ಷಿಣ ಕರ್ನಾ

ಟಕದ ಜೈನಕೇಂದ್ರಗಳಿಗೆ ಸಮೀಪದಲ್ಲಿದೆ. ಆದ್ದರಿಂದ ಅಜ್ಜನಂದಿ ಕನ್ನಡನಾಡಿನ ಈ
ಜೈನಕೇಂದ್ರಗಳಿಂದ ಇಲ್ಲಿಗೆ ಬಂದಿರಬಹುದೆಂದು ನಾವು ಊಹಿಸಬಹುದು. ಹೀಗೆ
ಗಂಗರಕಾಲದಲ್ಲಿ ಜೈನಧರ್ಮ ದಕ್ಷಿಣಭಾರತದ ಎರಡು ಪ್ರಮುಖ ಪ್ರದೇಶಗಳ ಮಧ್ಯೆ
ಉತ್ತಮ ಸಂಬಂಧ ಬೆಳೆಸುವಲ್ಲಿ ಸಹಾಯ ಮಾಡಿತು. ಬಾದಾಮಿ ಚಾಳುಕ್ಯರ ಆಳಿಕೆ
ಪ್ರಾರಂಭವಾದ ಮೇಲೆ ಮತ್ತು ಅವರ ಇನ್ನೊಂದು ಶಾಖೆ ವೆಂಗಿಯಲ್ಲಿ ಸ್ಥಾಪಿತವಾದ
ಮೇಲೆ ಆಂಧ್ರದಲ್ಲಿ ಜೈನಧರ್ಮ ಕರ್ನಾಟಕದ ಜೈನಧರ್ಮದಿಂದ ಹೊಸ ಚೈತನ್ಯ ಪಡೆಯಿ
ತೆನ್ನಬಹುದು. ರಾಜಕೀಯವಾಗಿಯೂ ಸಹ ಕರ್ನಾಟಕ-ಆಂಧ್ರ ಸಂಬಂಧಗಳು
ಹೊಸ ತಿರುವನ್ನು ಪಡೆಯುತ್ತವೆ. ಬಾದಾಮಿ ಚಾಲುಕ್ಯರಿಂದ ಕಲ್ಯಾಣಿ ಚಾಲುಕ್ಯರ
ವರೆಗೆ ಆಂಧ್ರದ ರಾಯಲಸೀಮಾ ಮತ್ತು ತೆಲಿಂಗಾಣಾ ಪ್ರದೇಶಗಳು ಕನ್ನಡ
ರಾಜಮನೆತನ ಆಳ್ವಿಕೆಗೆ ಒಳಪಟ್ಟಿದ್ದವು. ಹೀಗಾಗಿ ಆಂಧ್ರದ ಈ ಭಾಗಗಳು ಕನ್ನಡ
ನಾಡಿಗೆ ಇನ್ನೂ ಹತ್ತಿರವಾದವು. ಬಾದಾಮಿ ಚಾಳುಕ್ಯರು ಬೇರೆ ಧರ್ಮದ ಅನು
ಯಾಯಿಗಳಾಗಿದ್ದರೂ ಜೈನ ಧರ್ಮಕ್ಕೆ ವಿರೋಧಿಗಳೇನಾಗಿದ್ದಿಲ್ಲ. ಅವರು ಜೈನಧರ್ಮಕ್ಕೆ
ಕೊಟ್ಟ ಪ್ರೋತ್ಸಾಹ ಅಪಾರ. ಸುಪ್ರಸಿದ್ಧ ೨ನೇ ಪುಲಕೇಶಿಯ ರಾಜಕವಿಯ
ರವಿಕೀರ್ತಿ ಜೈನಧರ್ಮೀಯ. ಬಾದಾಮಿ, ಐಹೊಳೆ ಮುಂತಾದ ಸ್ಥಳಗಳಲ್ಲಿ ಜೈನ
ದೇವಾಲಯಗಳನ್ನು ಕಾಣಬಹುದು. ಚಾಳುಕ್ಯ ರಾಜಪುತ್ರ ಪುತ್ರಿಯರಿಗೆ ಜೈನಯತಿ
ಗಳು ಗುರುಗಳಾಗಿರಲುಬಹುದು. ಆದ್ದರಿಂದ ವೆಂಗಿಯಲ್ಲಿ ಪೂರ್ವ ಚಾಳುಕ್ಯರ ಶಾಖೆ
ಆರಂಭವಾದ ಮೇಲೆ ಇಲ್ಲಿಂದ ಎಲ್ಲರ ಸಂಗಡ ಜೈನರೂ ವೆಂಗಿಗೆ ಹೋಗಿರಬೇಕು. ಈ
ಜೈನಮುನಿಗಳು ಆಂಧ್ರದ ಜೈನಧರ್ಮಕ್ಕೆ ಹೊಸ ಚೈತನ್ಯ ಕೊಡುವುದರಲ್ಲಿ ಯಶಸ್ವಿ
ಯಾಗಿರಬೇಕು. ಇದನ್ನೇ ಪೂರ್ವಚಾಳುಕ್ಯರ ದೊರೆ ಮೂರನೇ ವಿಷ್ಣುವರ್ಧನನ
ಮುಸಿನಿಕೊಂಡ ಶಾಸನ [6] ಅಪರೋಕ್ಷವಾಗಿ ಸಮರ್ಥಿಸುತ್ತದೆ. ಈ ಶಾಸನ ನಡುಂಬಿ
ಬಸದಿ ಎಂಬ ಜೈನ ಬಸ್ತಿಯ ಬಗ್ಗೆ ಪ್ರಸ್ತಾಪ ಮಾಡುತ್ತದೆ. ಆದು ಮುಂದುವರೆ
ಯುತ್ತಾ ನಡುಂಬಿ ಬಸದಿಯನ್ನು ಕಟ್ಟಿದವರ ಹೆಸರು ಅಯ್ಯಣ ಮಹಾದೇವಿ
ಎಂದು ಉಲ್ಲೇಖಿಸುತ್ತದೆ. ಅಯ್ಯಣ ಮಹಾದೇವಿ ಪೂರ್ವಚಾಲುಕ್ಯ ವಂಶದ ಸ್ಥಾಪಕ
ನಾದ ಕುಬ್ಜ ವಿಷ್ಣುವರ್ಧನನ ಪಟ್ಟ ಮಹಾದೇವಿ. ಅಲ್ಲದೇ ಅವಳು ಬಾದಾಮಿಯಿಂದ
ಬಂದವಳು. ಆಗಿನ ಕಾಲದಲ್ಲಿ ರಾಣಿಯರು ತಮಗೆ ಬೇಕಾದ ಧರ್ಮವನ್ನು ಸ್ವೀಕರಿ
ಸಲು, ಪ್ರಚಾರ ಮಾಡಲು ಸ್ವಂತತ್ರರಿದ್ದರು. ಆದ್ದರಿಂದ ಅಯ್ಯಣ
ಮಹಾದೇವಿ ವೆಂಗಿಗೆ ಹೋದಾಗ ತನ್ನ ಜೊತೆ ಅನೇಕ ಜೈನ ಯತಿ
ಗಳನ್ನು ಕರೆದೊಯ್ದಿರಬೇಕು. ಈ ಜೈನರೇ ಸ್ಥಳೀಯ ಜೈನಧರ್ಮಕ್ಕೆ ಹೊಸ
ಚೈತನ್ಯ ಕೊಡುವಲ್ಲಿ ಯಶಸ್ವಿಯಾಗಿರಬೇಕು. ಎರಡನೇ ಅಮ್ಮರಾಜನ ಮಸಲಿಪಟ್ನಮ್
ತಾಮ್ರಶಾಸನವು [7] ಇದೇ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಇದು ಭೀಮ

ಮತ್ತು ನರವಾಹನ ಎಂಬ ದಂಡನಾಯಕರನ್ನು ಉಲ್ಲೇಖಿಸುತ್ತವೆ. ಈ ದಂಡನಾಯಕರ ವಿನಂತಿಯ ಮೇರೆಗೆ ಅಮ್ಮರಾಜನು ಎರಡು ಜೈನಗುಡಿಗಳನ್ನು ಕಟ್ಟಿಸುತ್ತಾನೆ. ಆದರೆ ಇಲ್ಲಿ ಗಮನಾರ್ಹವಾದ ವಿಷಯವೆಂದರೆ ಭೀಮ ಮತ್ತು ನರವಾಹನ ಸ್ವತಃ ಜೈನರಾಗಿದ್ದರಲ್ಲದೇ ಅವರ ಪೂರ್ವಜರು ಸಹ ತಲೆತಲಾಂತರದಿಂದ ಜೈನರಾಗಿದ್ದರಂತೆ. ಅಂದರೆ ಭೀಮ ಮತ್ತು ನರವಾಹನರ ಪೂರ್ವಜರು ಕುಬ್ಜ ವಿಷ್ಣುವರ್ಧನನ ಜೊತೆ ಬಾದಾಮಿಯಿಂದ ವೆಂಗಿಗೆ ಹೋಗಿರಬೇಕು. ಅವರ ವಂಶದವರು ದಂಡನಾಯಕರಾಗಿ ಪೂರ್ವ ಚಾಳುಕ್ಯರ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರಬೇಕು. ಹೀಗೆ ಜೈನಧರ್ಮ ಆಂಧ್ರ-ಕರ್ನಾಟಕಗಳ ಸಂಬಂಧವನ್ನು ಮತ್ತಷ್ಟು ನಿಕಟಗೊಳಿಸಿತು.

ರಾಷ್ಟ್ರಕೂಟರ ಆಳಿಕೆಯೊಂದಿಗೆ ಈ ಸಂಬಂಧ ಮತ್ತಷ್ಟು ಬೆಳೆಯಿತು. ರಾಷ್ಟ್ರಕೂಟರು ವೆಂಗಿ ಪ್ರದೇಶದ ಮೇಲೆ ತಮ್ಮ ಹಿಡಿತವನ್ನು ಮತ್ತಷ್ಟು ಬಲಪಡಿಸಿದರು. ಅನೇಕ ರಾಷ್ಟ್ರಕೂಟ ದೊರೆಗಳು ಸ್ವತಃ ಜೈನಧರ್ಮೀಯರಾಗಿದ್ದರಿಂದ ಜೈನಧರ್ಮಕ್ಕೆ ಅಪಾರ ರಾಜಕೀಯ ಬೆಂಬಲ ದೊರಕಿತು. ಈಗಿನ ರಾಯಲಸೀಮಾ ಮತ್ತು ತೆಲಿಂಗಾಣಾ ಪ್ರದೇಶಗಳಲ್ಲಿ ಅನೇಕ ರಾಷ್ಟ್ರಕೂಟ ಕನ್ನಡ ಶಾಸನಗಳು ಸಿಕ್ಕಿವೆ. ಈ ಶಾಸನಗಳೆಲ್ಲವೂ ಒಂದು ಸಂಗತಿ ಬಗ್ಗೆ ಬೆಳಕು ಚೆಲ್ಲುತ್ತವೆ. ಅದೇನೆಂದರೆ ಅನೇಕ ರಾಷ್ಟ್ರಕೂಟ ಅರಸರು, ಅರಸಿಯರು, ರಾಜಪುತ್ರರು, ದಂಡನಾಯಕರು ಮುಂತಾದವರು ಈ ಪ್ರದೇಶಗಳಲ್ಲಿ ಬಸದಿಗಳನ್ನು ಕಟ್ಟಿಸಿ, ಅದಕ್ಕೆ ದಾನದತ್ತಿಗಳನ್ನು ಬಿಟ್ಟ ಬಗ್ಗೆ ಉಲ್ಲೇಖ ಮಾಡುತ್ತವೆ. ಇದಲ್ಲದೇ, ಈ ಶಾಸನಗಳಿಂದ ಬೋದಾನ,[8] ಕೊಲನುಪಾಕ[9] ಎಂಬ ಜೈನ ಕೇಂದ್ರಗಳು ಕನ್ನಡನಾಡಿನ ಜೈನರಿಗೆ ಅತ್ಯಂತ ಪವಿತ್ರ ಸ್ಥಳಗಳಾಗಿದ್ದವು. ಈ ಸ್ಥಳಗಳಿಗೆ ಕನ್ನಡನಾಡಿನಿಂದ ಜೈನರು ಬಂದು ಸಲ್ಲೇಖನವ್ರತ ಕೈಗೊಳ್ಳುತ್ತಿದ್ದರು. ಈ ಶಾಸನಗಳು ಕನ್ನಡ ಭಾಷೆಯಲ್ಲಿ ಇರುವುದರಿಂದ ಇಲ್ಲಿಗೆ ಭೇಟಿ ನೀಡುರುವ ಜೈನರ ಮೂಲಸ್ಥಾನ ಕನ್ನಡ ನಾಡು ಎಂದು ತಿಳಿಯುವುದು. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ರಾಷ್ಟ್ರಕೂಟರು ಜೈನರನ್ನು ಆಂಧ್ರ ರಾಜಕೀಯದಲ್ಲಿ ತಮ್ಮ ರಾಜಕೀಯ ಪ್ರತಿನಿಗಳನ್ನಾಗಿ ಉಪಯೋಗಿಸಿದ್ದು ಒಂದು ಸಂಪ್ರದಾಯದಂತೆ ರಾಷ್ಟ್ರಕೂಟ ರಾಜನಾದ ,ಽನೇ ಕೃಷ್ಣನು ಜೈನರನ್ನು ತನ್ನ ರಾಜಕೀಯ ಪ್ರತಿನಿಧಿಗಳನ್ನಾಗಿ ಆಂಧ್ರದಲ್ಲಿ ನೇಮಿಸಿದನಂತೆ.[10] ಈ ಕೆಲಸಕ್ಕೆ ಜೈನರನ್ನು ಏಕೆ ನೇಮಿಸಿದ ಎಂಬ ಸಂಗತಿ ಕುತೂಹಲಕ್ಕೆ ಎಡೆಮಾಡಿದೆ. ಇಲ್ಲಿ ನಾವು ಮೂರು ಊಹೆಗಳನ್ನು ಮಾಡಬಹುದು :

೧) ಜೈನರು ಆಗಿನ ಆಂಧ್ರದ ರಾಜಕೀಯದಲ್ಲಿ ಬಹುಶಃ ಪ್ರಭಾವಶಾಲಿ ಮತ್ತು ನಂಬುಗೆಯ ಸ್ಥಾನವನ್ನು ಪಡೆದಿರಬಹುದು; ಎಂತಲೇ ರಾಷ್ಟ್ರಕೂಟರು ತಮ್ಮ ಕೆಲಸಕ್ಕಾಗಿ ಅವರನ್ನು ಅಲ್ಲಿ ನೇಮಿಸಿರಬಹುದು; ಅಥವಾ

೨) ಈ ಜೈನರು ಮೂಲತಃ ಕನ್ನಡನಾಡಿನವರಾಗಿದ್ದು ಆಂಧ್ರದಲ್ಲಿಯೇ ಬಹಳ ವರುಷಗಳಿಂದ ನೆಲಸಿದವರಾಗಿರಬೇಕು ; ಅಥವಾ

೩) ಈ ಕೆಲಸಕ್ಕೆಂದೇ ಕೃಷ್ಣನು ಜೈನರನ್ನು ಕನ್ನಡನಾಡಿನಿಂದ ಆಂಧ್ರಕ್ಕೆ ಕಳುಹಿಸಿರಬೇಕು.

ಹೀಗೆ ಈ ಸಂಪ್ರದಾಯ ಜೈನರು ಆಂಧ್ರ-ಕರ್ನಾಟಕ ರಾಜಕೀಯ ಸಂಬಂಧದಲ್ಲಿ ಹೇಗೆ ಮಹತ್ವದ ಪಾತ್ರ ವಹಿಸಿದ್ದರು ಎಂಬುದನ್ನು ಎತ್ತಿ ತೋರಿಸುತ್ತದೆ.

ಅನೇಕ ಆಂಧ್ರ ಜೈನ ಕವಿಗಳಿಗೆ ರಾಷ್ಟ್ರಕೂಟ ಅರಸರು ಪೋಷಿಸಿ, ಪ್ರೋತ್ಸಾಹ ನೀಡಿದ್ದಾರೆ. ಉದಾಹರಣೆಗೆ ಕನ್ನಡದಲ್ಲಿ ಶಾಂತಿಪುರಾಣವನ್ನು ಬರೆದ ಜೈನಕವಿ ಪೊನ್ನನ ಮೂಲ ಊರು ಕಮ್ಮನಾಡಿನಲ್ಲಿರು (ಈಗಿನ ಗುಂಟೂರು)ವ ಪುಂಗನೂರು.[11] ಇಲ್ಲಿಂದ ಪೊನ್ನನು ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡಕ್ಕೆ ಹೋಗಿ ರಾಷ್ಟ್ರಕೂಟ ೩ನೇ ಕೃಷ್ಣನಿಂದ ಪ್ರೋತ್ಸಾಹ ಪಡೆದನು. ರಾಷ್ಟ್ರಕೂಟರ ಸಾಮಂತರಾದ ವೇಮುಳವಾಡದ ಚಾಳುಕ್ಯರು ಸಹ ಈ ಸಂಪ್ರದಾಯವನ್ನು ಮುಂದುವರೆಸಿದರು. ಕನ್ನಡದ ಸುಪ್ರಸಿದ್ಧ ಜೈನ ಕವಿಯಾದ ಪಂಪನು ವೇಮುಳವಾಡ ಚಾಳುಕ್ಯರ ದೊರೆ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದನು.[12] ಪಂಪನ ವಂಶಜರು ಕನ್ನಡ ತಿರುಳ್ ಪ್ರದೇಶವಾಗಿದ್ದ ಅಣ್ಣಿಗೇರಿ ಪ್ರದೇಶದವರೆಂದು ಶಾಸನವೊಂದು ತಿಳಿಸುತ್ತದೆ.[13] ಕಲ್ಯಾಣಿ ಚಾಳುಕ್ಯರ ಕಾಲದಲ್ಲಂತೂ ಆಂಧ್ರ-ಕರ್ನಾಟದ ಸಂಬಂಧದಲ್ಲಿ ಜೈನರ ಪಾತ್ರ ಕುರಿತು ಅನೇಕ ಉದಾಹರಣೆ ದೊರಕುತ್ತವೆ.

ಮೇಲೆ ವಿವರಿಸಿದ ಕೆಲವು ಉದಾಹರಣೆಗಳು ಕರ್ನಾಟಕ ಮತ್ತು ಆಂಧ್ರ ಈ ಎರಡು ಪ್ರದೇಶಗಳ ನಡುವೆ ಸಂಬಂಧ ಬೆಳೆಸುವಲ್ಲಿ ಜೈನರ ಪಾತ್ರ ಅದೆಷ್ಟು ಮಹತ್ವದ್ದು ಎಂಬುದನ್ನು ದೃಢೀಕರಿಸುತ್ತವೆ. ಈ ಸಂಬಂಧ ರಾಜಕೀಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಎರಡು ಪ್ರದೇಶಗಳಲ್ಲಿ ಸಾಹಿತ್ಯದ ಬೆಳವಣಿಗೆಗೆ, ಧಾರ್ಮಿಕ ಸಮನ್ವಯತೆಗೆ, ಮತ್ತು ಕಲೆಯ ಕ್ಷೇತ್ರಕ್ಕೆ ಜೈನರ ಕೊಡುಗೆ ಅಷ್ಟೆ ಅಮೂಲ್ಯ ಈ ಲೇಖನದಲ್ಲಿ ವಿಷಯ ವಿವೇಚನೆ ತುಂಬಾ ಚಿಕ್ಕದಿದ್ದು ಪ್ರಾಸ್ತವಿಕವೆಂದೇ ಹೇಳಬಹುದು. ಆದ್ದರಿಂದ ಕರ್ನಾಟಕ-ಆಂಧ್ರಗಳ ಸಂಬಂಧಕ್ಕೆ ಜೈನರ ಕೊಡುಗೆಯ ಇತಿ-ಮಿತಿಯನ್ನು ಸರಿಯಾಗಿ ತಿಳಿಯಲು ಇನ್ನೂ ಆಳವಾದ ಅಧ್ಯಯನದ ಅವಶ್ಯಕತೆಯಿದೆ.

ಗ್ರಂಥ ಋಣ

೧. ಆರ್. ಸುಬ್ರಹ್ಮಣ್ಯಮ್, "ಗುಂಟುಪಲ್ಲಿ ಬ್ರಾಹ್ಮಿ ನಿಸ್ಕ್ರಿಪ್ಶನ್ ಆಫ ಖಾರವೇಲ
೨. ಪಿ. ಬಿ. ದೇಸಾಯಿ, "ಜೈನಿಸಮ್ ಇನ್ ಸೌಥ ಇಂಡಿಯಾ" ಪು. ೧೫೩.
೩. ಸಲೇಟೋರೆ, "ಮೀಡಿವ್ಹಲ್ ಜೈನಿಸಮ್" ಪು. ೮.
೪. ಎಸ್. ಗೋಪಾಲ ಕೃಷ್ಣಮೂರ್ತಿ, "ಜೈನ ವೆಸ್ಟಿಜಿಸ್ ಇನ್ ಆಂಧ್ರ" ಪು. ೧೬
೫. ಅದೇ, ಪು. ೨೪
೬. ಎನ್. ವೆಂಕಟರಮಣಯ್ಯ. "ದಿ ಚಾಳುಕ್ಯಾಸ ಆಫ ವೆಂಗಿ" ಪು. ೭೪
೭. ಎಪಿಗ್ರಾಫಿಯಾ ಇಂಡಿಕಾ, ಸಂಪುಟ XXIV, ಪು. ೨೬೮
೮. ಜವಹರಲಾಲ, "ಜೈನಿಸಮ್ ಇನ್ ಆಂಧ್ರ ಪ್ರದೇಶ" ಅಪ್ರಕಟಿತ ಪ್ರಬಂಧ, ೧೯೭೮, ಪು. ೧೯೫
೯. ಅದೇ, ಪು. ೨೦೮.
೧೦. ಹನುಮಂತರಾವ, "ರಿಲಿಜನ್ ಇನ್ ಆಂಧ್ರ"
೧೧. ಜಿ. ಎಸ್. ದಿಕ್ಷೀತ್, "ವೆಂಗಿ ಆ್ಯಂಡ್ ಕರ್ನಾಟಕ", ಪಿ.ಆ.ಹೆಚ್.ಸಿ. ೧೯೫೩, ಪು. ೧೫೧–೧೫೩.
೧೨. ಎನ್. ವೆಂಕಟರಾವ, "ಲೈವ್ಸ ಆಫ ತೆಲಗು ಪೋಯಟ್ಸ" ಪು. ೮೩.
೧೩. "ಎಪಿಗ್ರಾಫಿಯಾ ಆಂಧ್ರಿಕಾ", ೧೯೭೪, ಪು. ೨೨–೨೪.

ಇಂಗ್ಲಂಡದಲ್ಲಿ ಕನ್ನಡ ಹಸ್ತಪ್ರತಿಗಳು.

● ಎಂ. ಎಂ. ಕಲಬುರ್ಗಿ

ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ೧೯೮೨ರ ಅಕ್ಟೋಬರ ೧೪ರಿಂದ ನವೆಂಬರ ೨೬ರ ವರೆಗೆ, ೬ ವಾರಗಳ ಕಾಲ ಕನ್ನಡ ಹಸ್ತಪ್ರತಿಗಳ ಅನ್ವೇಷಣೆ- ಅಧ್ಯಯನಕ್ಕೋಸುಗ ಇಂಗ್ಲಂಡಕ್ಕೆ ಹೋಗುವ ಅವಕಾಶ ನನಗೆ ಪ್ರಾಪ್ತವಾಗಿದ್ದಿತು. ಈ ಅವಧಿಯಲ್ಲಿ ನಾನು ಲಂಡನ್, ಆಕ್ಸಫರ್ಡ ಮತ್ತು ಕೆಂಬ್ರಿಜ್‌ಗಳಲ್ಲಿ ಶೋಧಿಸಿದ ಕನ್ನಡ ಹಸ್ತಪ್ರತಿಗಳ ವಿವರ ಹೀಗಿದೆ :

ಲಂಡನ್

ಇಂಗ್ಲಂಡದೇಶದ ರಾಜಧಾನಿಯಾದ ಲಂಡನ್ ಒಂದು ಸಾಂಸ್ಕೃತಿಕ ಪಟ್ಟಣ. ಕನ್ನಡ ಹಸ್ತ ಪ್ರತಿಗಳಿಗಾಗಿ ನಾನು ಇಲ್ಲಿಯ ೧. ಇಂಡಿಯಾ ಆಫೀಸ್ ಲೈಬ್ರರಿ ೨. ಬ್ರಿಟಿಷ್ ಲೈಬ್ರರಿ ೩. ಬ್ರಿಟಿಷ್ ಮ್ಯುಜಿಯಂ. ೪. ಸ್ಕೂಲ್ ಆಫ್ ಓರಿಯಂಟಲ್ ಆ್ಯಂಡ್ ಆಫ್ರಿಕನ್ ಸ್ಟಡೀಜ್ ೫ ವೆಲ್‌ಕಮ್ ಇನ್‌ಸ್ಟಿಟ್ಯೂಟ ಆಫ್ ಹಿಸ್ಟರಿ ಆಫ್ ಮೆಡಿಶನ್ ೬. ರಾಯಲ್ ಏಸಿಯಾಟಿಕ್ ಸೊಸೈಟಿ ೭. ಬೈಬಲ್ ಸೊಸೈಟಿ–ಹೀಗೆ ಏಳು ಸಂಸ್ಥೆಗಳನ್ನು ಸಂದರ್ಶಿಸಿದೆನು.

ಇಂಡಿಯಾ ಆಫೀಸ್ ಲೈಬ್ರರಿ :

ಲಂಡನ್‌ದ ವಾಟರ್‌ಲೂ ಟ್ಯೂಬ್ ಸ್ಟೇಶನ್ ಸಮೀಪದಲ್ಲಿ ಬ್ಲಾಕ್ ಫ್ರೇಯರ್ ಮಾರ್ಗದ ಮೇಲೆ ಈ ಗ್ರಂಥಾಲಯವಿದೆ. ಭಾರತೀಯ ಎಲ್ಲ ಪ್ರಾಂತಗಳಿಗೆ ಸಂಬಂಧಿಸಿದ ಪ್ರಾಚೀನ ಗ್ರಂಥ, ದಾಖಲೆಗಳನ್ನೊಳಗೊಂಡ ಅಪೂರ್ವ ಭಾಂಡರವಿದು. ಆಯಾ ಪ್ರಾಂತಗಳ ಆಧುನಿಕ ಗ್ರಂಥಗಳೂ ಇಲ್ಲಿ ಕೆಲವು ಸಂಖ್ಯೆಯಲ್ಲಿವೆ.

ಇಲ್ಲಿಯ ಕನ್ನಡ ಭಾಷೆಯ ಸಂಪತ್ತನ್ನು ಮುದ್ರಿತಗ್ರಂಥಗಳು, ಹಸ್ತಪ್ರತಿಗಳು, ದಾಖಲೆಗಳು ಎಂದು ವರ್ಗೀಕರಿಸಬಹುದು. ದ್ರಾವಿಡ ಭಾಷೆಗಳಾದ ತಮಿಳು, ತೆಲಗು ಹಸ್ತಪ್ರತಿಗಳ ಯಾದಿಯನ್ನು ರೋಮನ್‌ಲಿಪಿಯಲ್ಲಿ ಟೈಪ್‌ಮಾಡಿ ಇಡಲಾಗಿದೆ. ಆದರೆ ಇದೇ ಫೈಲಿನಲ್ಲಿರುವ ಸುಮಾರು ೧೪ ಕನ್ನಡ ಹಸ್ತಪ್ರತಿಗಳ ಯಾದಿ ಮಾತ್ರ ಕೈಬರೆಹದ್ದಿದೆ. ಕನ್ನಡ ಬಲ್ಲ, ಆದರೆ ಪ್ರಾಚೀನ ಹಸ್ತಪ್ರತಿ ಓದಲು ಬಾರದ ಕನ್ನಡಿಗನ ನೆರವಿನಿಂದ ರೋಮನ್‌ಲಿಪಿಯಲ್ಲಿ ಇದನ್ನು ಬರೆಯಿಸಲಾಗಿದೆ. ಹೀಗಾಗಿ ಈ ಯಾದಿ ದೋಷಪೂರ್ಣವಾಗಿದೆ.

ಇಂಗ್ಲಿಷ್‌ವ್ಯಕ್ತಿಯನ್ನು ಮದುವೆಯಾದ, ತಮಿಳು ಮಾತೃಭಾಷೆಯ ಶ್ರೀಮತಿ ಮೀರಾ ಡಾಸನ್ ಇಲ್ಲಿಯ ದ್ರಾವಿಡ ಭಾಷಾವರ್ಗದ ಗ್ರಂಥಗಳನ್ನು ನೋಡಿಕೊಳ್ಳುತ್ತಾಳೆ. ಇವಳಿಗೆ ಕನ್ನಡ ಲಿಪಿ ಪರಿಚಯ ಅಲ್ಪ, ಭಾಷಾ ಪರಿಚಯ ಇನ್ನೂ ಅಲ್ಪ. ಹೀಗಾಗಿ ಇವಳಿಗೆ ಆಸಕ್ತಿಯಿದ್ದರೂ ಇಲ್ಲಿಯ ಕನ್ನಡ ಹಸ್ತಪ್ರತಿಗಳ ಸಮಗ್ರ ಯಾದಿ ಇನ್ನೂ ಸಿದ್ಧವಾಗಿಲ್ಲ. ಕನ್ನಡ ಹಸ್ತಪ್ರತಿಗಳನ್ನು ಇಲ್ಲಿ ಒಂದೇ ಕಡೆಗೆ ಇಟ್ಟಿಲ್ಲ. ಅಲ್ಲೊಂದ ಇಲ್ಲೊಂದು ಸೇರಿ ಹೋಗಿವೆ. ಸಂಸ್ಕೃತಕೃತಿಗಳಿಗಿರುವ ಕನ್ನಡ ಟೀಕಾ ಗ್ರಂಥಗಳು ಸಂಸ್ಕೃತ ವಿಭಾಗದಲ್ಲಿ ಸೇರಿಕೊಂಡಿವೆ. ಲಿಪಿಸಾಮ್ಯ ಕಾರಣವಾಗಿ ಕೆಲವು ಕನ್ನಡ ಗ್ರಂಥಗಳು ತೆಲುಗು ವಿಭಾಗದಲ್ಲಿ ಸೇರಿಕೊಂಡಿವೆ. ಕನ್ನಡ ಲಿಪಿಯಲ್ಲಿ ಬರೆದ ಸಂಸ್ಕೃತ ಗ್ರಂಥಗಳು ಕನ್ನಡ ವಿಭಾಗದಲ್ಲಿ ಸೇರಿಬಿಟ್ಟಿವೆ. ಹೀಗೆ ಅಸ್ತವ್ಯಸ್ತವಿರುವ ಈ ರಾಶಿಯನ್ನು ನಾನು ಶೋಧಿಸಲಾಗಿ ಬೆಳಕಿಗೆ ಬಂದಿರುವ ಇಲ್ಲಿಯ ತಾಳೆಗರಿ, ಕೋರಿ ಕಾಗದ, ಕಡತ, ಆಧುನಿಕ ಕಾಗದಗಳ ಮೇಲೆ ಬರೆದ ಹಸ್ತಪ್ರತಿಗಳು ಹೀಗಿದೆ:

I. ತಾಳೆಗರಿ ಹಸ್ತಪ್ರತಿಗಳು :

೧. ನಂಜರಾಜವಾಣೀವಿಲಾಸ ಅಥವಾ ಹರಿವಂಶ-ಕಳಲೆ ನಂಜರಾಜ
Mss. Kan. PL-1; ಆಕಾರ: 49"×2½"; ಗರಿ:1-380; ಗದ್ಯ.

೨. ಬಸವಪುರಾಣ-ಭೀಮಕವಿ.
Mss. Kan. PL-5; ಆಕಾರ: 17"×2"; ಗರಿ: 1-175; ಭಾಮಿನಿ ಷಟ್ಪದಿ.

೩. i ತೊರವೆಯ ರಾಮಾಯಣ—ಕುಮಾರ ವಾಲ್ಮೀಕಿ.
Mss. Kan. PL-3; ಆಕಾರ: 13 "×2"; ಗರಿ: 1-235; ಭಾಮಿನಿ ಷಟ್ಪದಿ.
ii ಉತ್ತರ ರಾಮಾಯಣ-ತಿರುಮಲೆ ವೈದ್ಯ.
Mss. Kan; PL-3; ಆಕಾರ: 13 "×2"; ಗರಿ; 1-14; ಭಾಮಿನಿ ಷಟ್ಪದಿ.

೪. ಭಗವದ್ಗೀತಾರ್ಥದ ವಿವರಣ-ಕರ್ತೃ ?
Mss. Kan. PL-4; ಆಕಾರ: 8½ "×1½"; ಗರಿ: 1-28; (ಅಪೂರ್ಣ) ಸಂಸ್ಕೃತ ಶ್ಲೋಕ+ಕನ್ನಡ ವಿವರಣೆ.

೫. ಶಬ್ದಾನುಶಾಸನವೃತ್ತಿ-ಭಟ್ಟಾಕಳಂಕ.
Mss. T.O.3541; ಆಕಾರ: 14"×1¼"; ಗರಿ: 1-220; (ಅಪೂರ್ಣ, ದೇವನಾಗರಿ ಲಿಪಿ) ಸಂಸ್ಕೃತ ಸೂತ್ರ + ವ್ಯಾಖ್ಯಾನ.

೬. ಗೀತಗೆ ಟೀಕು—ರಾಮಚಂದ್ರಾರ್ಯ.
Mss T.O. 3710; ಆಕಾರ: 12"×1¼"; ಗರಿ: 1-160; ಸಂಸ್ಕೃತ ಶ್ಲೋಕ + ಕನ್ನಡ ಟೀಕೆ.

೭. ಪಾಠ್ಯಾ ಗಣಿತಸಾರ—ಶ್ರೀಧರಾಚಾರ್ಯ
Mss. Mack II35a; ಆಕಾರ: 16″×1½″, ಗರಿ: 1–63; (ದೇವನಾಗರಿ ಲಿಪಿ) ಸಂಸ್ಕೃತ ಶ್ಲೋಕ+ಕನ್ನಡ ವ್ಯಾಖ್ಯಾನ.

೮. ಗೀತಾ ಸಾರಸಂಗ್ರಹ—ಕರ್ತೃ ?
Mss. Mack II10a; ಆಕಾರ: 21″×2¼″; ಗರಿ: 1–13; ಸಂಸ್ಕೃತ ಶ್ಲೋಕ+ಕನ್ನಡ ಟೀಕೆ.

೯. ಕೌಶಿಕ ಪುರಾಣೇ ವರಾಹಾವತಾರ ಮಹಾತ್ಮೆ—ಕರ್ತೃ?
Mas. Mack V. 10c. 6967; ಆಕಾರ: 21″×2¼″; ಗರಿ: 1–6;

೧೦. ಭಗವದ್ಗೀತೆಯ ವ್ಯಾಖ್ಯಾನ—ಕರ್ತೃ ?
Mss. Mack V 12a; ಆಕಾರ: 15″×1½″ ಗರಿ: 1–15 (ಅಪೂರ್ಣ) ಸಂಸ್ಕೃತ ಶ್ಲೋಕ+ಭಾಮಿನಿ ಷಟ್ಪದಿ.

೧೧. ವ್ಯಾಕರಣ—ಕರ್ತೃ ?
Mss. Mack–15. 6908; ಆಕಾರ: 15″×1⅛″; ಗರಿ: 1–64; (ಜೈನ ಜ್ಯೋತಿಷ್ಯಗ್ರಂಥ) ಸಂಸ್ಕೃತ ಶ್ಲೋಕ+ಕನ್ನಡ ಟೀಕೆ.

೧೨. ಜ್ಯೋತಿಷ್ಯ—ಕರ್ತೃ ?
Mss. Mack V 18.6386; ಆಕಾರ: 10″1⅜″; ಗರಿ: 1–126; (ಜೈನ ಕೃತಿ). ಸಂಸ್ಕೃತ ಶ್ಲೋಕ+ಕನ್ನಡ ಟೀಕೆ. ಫಲಕದ ಮೇಲೆ 'ಜ್ಯೋತಿಷಸಂಗ್ರಹ' ಎಂದಿದೆ.

೧೩. ಗಣಿತ ಸಾರಸಂಗ್ರಹ—ಮಹಾವೀರಾಚಾರ್ಯ.
Mss. Mack V. 19; ಆಕಾರ: 10″×1″; ಗರಿ: 1–76; ಸಂಸ್ಕೃತ ಶ್ಲೋಕ+ಕನ್ನಡ ಟೀಕೆ.

೧೪. ಮಾನಸಾರ ಟೀಕೆ—ಕರ್ತೃ ?
Mss. Mack V. 26a. 6474 ಆಕಾರ: 19¼″×1⅝″; ಗರಿ: 1–85; ಸಂಸ್ಕೃತ ಶ್ಲೋಕ+ಕನ್ನಡ. ಫಲಕದ ಮೇಲೆ 'ಶಿಲ್ಪಶಾಸ್ತ್ರ ಸಂಗ್ರಹ' ಎಂದು ಬರೆಯಲಾಗಿದೆ.

೧೫. ದ್ವಾದಶಾನುಪ್ರೇಕ್ಷೆ— ವಿಜಯಣ್ಣ.
Mss. Mack V. 29; ಆಕಾರ: 11″×1½″; ಗರಿ: 1–103; ಸಾಂಗತ್ಯ.

೧೬. ಆಯುರ್ವೇದೋಕ್ತಸಾರ ?—ಕರ್ತೃ ?
Mss. Mack XII 7; 6254; ಆಕಾರ: 19″×2″ ಗರಿ: 1-33;
ಸಂಸ್ಕೃತ ಪದ್ಯ+ಕನ್ನಡ ಟೀಕೆ. ಫಲಕದ ಮೇಲೆ 'ಆಯುರ್ವೇದ' ಎಂದಿದೆ.

೧೭. ಗಣಿತಸಾರ—ಮಹಾವೀರಾಚಾರ್ಯ.
Mss. Mack XII 9a; ಆಕಾರ: $12\frac{1}{2}$″×1″; ಗರಿ: 1-89;

೧೮. ಪರಂಜ್ಯೋತಿ ಮಂತ್ರ—ಕರ್ತೃ ?
Mss. 3682g; ಆಕಾರ : $8\frac{7}{8}$″×$1\frac{3}{8}$″; ಗರಿ : 1-3;
ಸಂಸ್ಕೃತ+ಕನ್ನಡ.

II ಕೋರಿ ಕಾಗದ ಹಸ್ತಪ್ರತಿಗಳು :

೧೯. ಸಿಬಿರಾಯನ ಚರಿತ್ರೆ : ಪಂಚಯ್ಯ
Mss. B2; ಆಕಾರ: 9″×7″; ಹಾಳೆ 1-28;
ತ್ರಿಪದಿ.

೨೦. ಕರಿಯಂಟನ ಕಾಳಗ—ಶಂಕ್ರೈಯ್ಯ.
Mss. B3; ಆಕಾರ: 9″×7″; ಹಾಳೆ 1-23;
ಯಕ್ಷಗಾನ.

೨೧. ವಡೇರಪಟ್ಟು—ಕರ್ತೃ ?
Mss. B4; ಆಕಾರ: $6\frac{7}{8}$″×$4\frac{3}{8}$″; ಪು. 1-145;
ಗದ್ಯ. ಮೈಸೂರ ಒಡೆಯರ ಚರಿತ್ರೆ.

೨೨. ವಿವೇಕ ಚಿಂತಾಮಣಿ—ನಿಜಗುಣ ಶಿವಯೋಗಿ.
Mss. C1; ಆಕಾರ: 6″×10″; ಹಾಳೆ 1-142;
ಗದ್ಯ.

೨೩. ಬಸವಪುರಾಣ—ಭೀಮಕವಿ.
Mss. C3; ಆಕಾರ: 13″×10″; ಹಾಳೆ 1-110 & 1-227;
ಭಾಮಿನಿ ಷಟ್ಪದಿ.

೨೪. ಜೈಮಿನಿ ಭಾರತ : ಲಕ್ಷ್ಮೀಶ.
Mss. D1; ಆಕಾರ: 12″×$8\frac{1}{2}$″; ಹಾಳೆ 1-81;
ವಾರ್ಧಕ ಷಟ್ಪದಿ

೨೫. ಪಂಚತಂತ್ರ—ಕರ್ತೃ ?
Mss. D2; ಆಕಾರ: 12″×8″; ಹಾಳೆ 1-96;
ಗದ್ಯ.

೨೬. ಭಾಗವತ : ನಿತ್ಯಾತ್ಮಶುಕಯೋಗಿ.
Mss. D3; ಆಕಾರ: 9″×12″; ಹಾಳೆ 154;
ಭಾಮಿನಿ ಷಟ್ಪದಿ.

೨೭. ಜೈಮಿನಿ ಭಾರತ-I-ಲಕ್ಷ್ಮೀಶ.
Mss. D4; ಆಕಾರ: 12″×8″; ಹಾಳೆ 1-104;
ವಾರ್ಧಕ ಷಟ್ಪದಿ.

೨೮. ಜೈಮಿನಿ ಭಾರತ-II-ಲಕ್ಷ್ಮೀಶ.
Mss. D5. ಆಕಾರ: 12″×8″; ಹಾಳೆ 1-72;
ವಾರ್ಧಕ ಷಟ್ಪದಿ.

೨೯. ಹಮ್ಮೀರ ಕಾವ್ಯ : ಮುರಿಗೆದೇಶಿಕೇಂದ್ರ.
Mss. D6; ಆಕಾರ: $8'' \times 11\frac{1}{2}''$; ಹಾಳೆ 1-38;
ಚಂಪೂ.

೩೦. ವಿವೇಕ ಚಿಂತಾಮಣಿ—ನಿಜಗುಣ ಶಿವಯೋಗಿ.
Mss. D7; ಆಕಾರ: 12″×18″; ಹಾಳೆ 1-324
ಗದ್ಯ.

೩೧. ಅನುಭವ ಶಿಖಾಮಣಿ—ನಾರಸಿಂಹ.
Mss. D8. ಆಕಾರ: 8″×12″; ಹಾಳೆ 1-99;
ಭಾಮಿನಿ+ವಾರ್ಧಕ+ಶರಷಟ್ಪದಿ

೩೨. ಮಹಿಶೂರ ದೊರೆಗಳ ಪೂರ್ವಾಭ್ಯುದಯ—ಕರ್ತೃ ?
Mss. I.O. 2914; ಆಕಾರ: $7\frac{1}{2}'' \times 4\frac{1}{2}''$; ಪುಟ 1-129;
ಗದ್ಯ.

೩೩. ರತ್ನಕರಂಡಕದ ವ್ಯಾಖ್ಯಾನ—ಕರ್ತೃ ?
Mss. B. 433a; ಆಕಾರ: $8\frac{1}{2}'' \times 11''$; ಪುಟ 1-37;
ಸಂಸ್ಕೃತ+ಕನ್ನಡ ವ್ಯಾಖ್ಯಾನ.

೩೪. ಸಿದ್ಧಾಂತ ಸಾರ—ಕರ್ತೃ ?
Mss. B. 430b; ಆಕಾರ: $8'' \times 6\frac{1}{2}''$; ಹಾಳೆ 1-46;
ಪ್ರಾಕೃತ+ಕನ್ನಡ ಟೀಕೆ.

೩೫. ಪ್ರಕೃತಿಸತ್ಯ—ಕರ್ತೃ ?
Mss. B. 430c; ಆಕಾರ: $8'' \times 6\frac{1}{2}''$ ಹಾಳೆ 47-80;
ಪ್ರಾಕೃತ+ಕನ್ನಡ ಟೀಕೆ.

III ಕಡತಗಳು :

೩೬. ಕಡತ—ಕರ್ತೃ ?
Mss. B. 1. ಆಕಾರ: 7″×8″ ಮಡಿಕೆ 57
ಗದ್ಯ. ಬಡಿಗತನದ ಖರ್ಚಿನ ವಿವರ.

೩೭. ಕುಂಬಟೆ ಮಾಗಣಿ ವಕಲು ವರ್ಗದ ಕಡತ—ಧಾರೇಶ್ವರದ ಹಾಲಯ್ಯ.
Mss. C2 ಆಕಾರ: 10″×9½″; ಮಡಿಕೆ 77.
ಗದ್ಯ.

IV ಆಧುನಿಕ ಕಾಗದ ಹಸ್ತಪ್ರತಿ :

೩೮. ಕನ್ನಡ ಹಸ್ತಪ್ರತಿಗಳ ಪಟ್ಟಿ – ಕರ್ತೃ ?
Mss. Io. 2907. ಆಕಾರ: 9″×7½″; ಪುಟ 1–32.
ಗದ್ಯ. ಸುಮಾರು ೫೦೦ರಷ್ಟು ಸಂಸ್ಕೃತ, ಕನ್ನಡ, ತೆಲಗು ಹಸ್ತ ಪ್ರತಿಗಳ ಯಾದಿ.

೩೯. i. ನಳಚಕ್ರವರ್ತಿಯ ಕಥೆ ii. ಹಿತೋಪದೇಶ
iii. ನಳ ಚಕ್ರವರ್ತಿಯ ಕಥೆ iv. ಹರಿಶ್ಚಂದ್ರ ಕಥೆ.
Mss. Io. 3140. ಆಕಾರ: 8½″×6″; ಪುಟ: 1–33, 33–151, 153–242, 243–388. ಗದ್ಯ.

೪೦. ಹುಕುಂನಾಮಾ—ಕರ್ತೃ ?
Mss. Io. 4537; ಆಕಾರ: 12″×8½″; ಹಾಳೆ 1–9;
ಗದ್ಯ. ರೆವಿನ್ಯೂ ವಿಷಯ.

೪೧. ಆನೆಗೊಂದಿ ಅರಸು ತಿಮ್ಮಪ್ಪನವರ ಪೂರ್ವದ ಕೈಫಿಯತ್ತು–ಬೋರಯ್ಯ.
Mss. Mack General X; ಆಕಾರ: 9″×14″; ಪುಟ 91–93;
ಗದ್ಯ.

V ಇಂಗ್ಲಿಷ್ ಕನ್ನಡ ಭಾಷೆಯ ಆಧುನಿಕ ಕಾಗದ ಹಸ್ತಪ್ರತಿಗಳು :

೪೨.′ Kanarese Revenue terms—ಕರ್ತೃ ?
Mss. Eng. D–138; ಆಕಾರ: 13″×9″; ಹಾಳೆ 520–538.
ಕನ್ನಡ ರೆವಿನ್ಯೂ ಶಬ್ದಗಳಿಗೆ ಇಂಗ್ಲೀಷಿನಲ್ಲಿ ಅರ್ಥ;
ರೋಮನ್ ಲಿಪಿ

೪೩. Glossary of South Indian terms –ಕರ್ತೃ ?
Mss. Eur. D 270; ಆಕಾರ: 11″×10″; ಪುಟ 181–196 & 197–230; ಕನ್ನಡ ರೆವಿನ್ಯೂ ಶಬ್ದಗಳಿಗೆ ಇಂಗ್ಲೀಷಿನಲ್ಲಿ ಅರ್ಥ.

೪೪. Tables of Karnatak Cronology–C. P. Brown.
Mss. Eur. D. 297; ಆಕಾರ: 8″×12½″; ಹಾಳೆ: 3–106.
ಕ್ರಿ. ಶ. 967 ರಿಂದ 1847ರ ವರೆಗಿನ ಸಂವತ್ಸರಗಳನ್ನು, ಆ ಕಾಲದಲ್ಲಿ ಆಗಿಹೋದ ಅರಸರ ಹೆಸರುಗಳನ್ನು ಬರೆಯಲಾಗಿದೆ.

೪೫ Index to the manuscripts in Telugu, Kannada, Tamil, Malayalam and Odhra – C. P. Brown.
Mss. Tel D. 10; ಆಕಾರ: 8½″×13″; ಪುಟ 65–88.
ಹಸ್ತಪ್ರತಿಗಳ ಯಾದಿ, ಸುಮಾರು ೮೦೦ ಕನ್ನಡ ಕೃತಿಗಳ ಉಲ್ಲೇಖ.

೪೬. Polyglotal of Vocabulary Volume–I—ಕೋಲಬ್ರುಕ್.
Mss. Io. 156; ಆಕಾರ: 13″×9½″; ಹಾಳೆ: 1–189;
ಅಮರಕೋಶಕ್ಕೆ ಸಂಸ್ಕೃತ, ಮರಾಠಿ, ಗುಜರಾಥಿ, ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಬರೆದ ಸಮಾನಾರ್ಥ ಪದಕೋಶ.

೪೭. Polyglotal of Vocabulary Volume–II—ಕೋಲಬ್ರುಕ್.
Mss. Io. 157; ಆಕಾರ: 13″×9½″; ಹಾಳೆ: 1–185;
ನಂ. 46ರ ಮುಂದುವರಿಕೆ.

ಜೆ. ಬಿ. ಪಿಯರ್‌ಸನ್ ಅವರು ತಮ್ಮ "Oriental Manuscripts in Europe and North America" ಎಂಬ ಗ್ರಂಥದಲ್ಲಿ ಇಂಡಿಯಾ ಆಫೀಸ್ ಲೈಬ್ರರಿಯ ಹಸ್ತಪ್ರತಿಗಳನ್ನು ಕುರಿತು "The remaining Dravidian Mss. include Kanarase 14, Tamil 34 and Telugu 12...." ಎಂದು ಹೇಳಿದ್ದಾರೆ(ಪುಟ 387). ಬಹುಶಃ ಈ ೧೪ ಹಸ್ತಪ್ರತಿಗಳು ಮೇಲೆವಿವರಿಸಿದ ೪೭ ಹಸ್ತಪ್ರತಿಗಳಲ್ಲಿ ಸೇರ್ಪಡೆಯಾಗಿವೆ.

೧೮೭೮ ರಲ್ಲಿ ಡಾ. ಫ್ಲೀಟ್ ಸಿದ್ಧಪಡಿಸಿದ Pali Sanskrit and old Canarese inscriptions from the Bombay presidency and part of Madras presidency and Maisur" ಎಂಬ ಗ್ರಂಥವು ಶಾಸನಗಳ ಪಾಠ (Text) ವನ್ನೊಳಗೊಂಡಿದೆಯೆಂದು ಈ ವರೆಗೆ ನನ್ನ ಮತ್ತು ಅನೇಕರ ಭಾವನೆಯಾಗಿತ್ತು. ಆದರೆ ಇದು ೨೮೬ ಶಾಸನಗಳ ಫೋಟೋ ಮತ್ತು ಇಂಗ್ಲಿಷ್ ಸಾರವಾಗಿದೆ. ಈ ಗ್ರಂಥದ ಎರಡು ಪ್ರತಿಗಳು (W. 4826, W. 4827) ಇಲ್ಲಿವೆ.

ಬ್ರಿಟಿಶ್ ಲೈಬ್ರರಿ :

ಇದು ಸ್ಟೋರ್ ಸ್ಟ್ರೀಟ್ ಮೇಲಿರುವ ಗ್ರಂಥಭಾಂಡಾರ. ಇಲ್ಲಿ ೯೩ ಭಾಷೆಗಳ ಮುದ್ರಿತ ಮತ್ತು ಹಸ್ತಲಿಖಿತ ಗ್ರಂಥಗಳಿವೆ. ಇಲ್ಲಿಯ ಕನ್ನಡ ವಿಭಾಗ ನೋಡಿ

ಕೊಳ್ಳುವವರು ಭಾರತೀಯನನ್ನು ಮದುವೆಯಾಗಿದ್ದ ಇಂಗ್ಲಿಷ್ ಮಹಿಳೆ ಶ್ರೀಮತಿ ಆಲ್ಬರ್ಟಿನ್ ಗೌರ್.

ಈ ಮೊದಲು ಎಲ್. ಡಿ. ಬಾರ್ನೆಟ್ ಅವರು "A catalogue of the Kannada, Badaga and Kurg Books in the library of British Musium" (1910)ಗ್ರಂಥವನ್ನು ಪ್ರಕಟಿಸಿದುದು ತಿಳಿದ ವಿಷಯವೇ ಆಗಿದೆ. ಆಮೇಲೆ ಸಂಗ್ರಹಗೊಂಡ 1910 ರಿಂದ 1970ರ ಅವಧಿಯ ಮುದ್ರಿತ ಕನ್ನಡ ಗ್ರಂಥಗಳ ಸೂಚಿಯನ್ನು ಶ್ರೀಮತಿ ಗೌರ್ ಸಿದ್ಧಪಡಿಸಿದ್ದಾರೆ. ಇಂಡಿಯಾ ಆಫೀಸ್ ಲೈಬ್ರರಿಯಲ್ಲಿರುವ ೧೯೭೦ರ ಹಿಂದಿನ ಮುದ್ರಿತ ಕನ್ನಡ ಗ್ರಂಥಗಳ ಸೂಚಿಯನ್ನು ಶ್ರೀ ಶ್ರೀನಿವಾಸ ಹಾವನೂರ ಸಿದ್ಧಪಡಿಸಿದ್ದು, ಇವೆರಡನ್ನೂ ಸೇರಿಸಿ ಸಿದ್ಧಪಡಿಸಿದ "Supplementary catalogue of Kannada Books in the British Library" ಹೆಸರಿನ ಗ್ರಂಥಸೂಚಿ ೧೯೮೫ ರಲ್ಲಿ ಪ್ರಕಟವಾಗಿದೆ. ಇದರ ಸಂಪಾದಕರು ಶ್ರೀಮತಿ ಆಲ್ಬರ್ಟಿನ ಗೌರ. ಸಹಾಯಕರು ಶ್ರೀನಿವಾಸ ಹಾವನೂರ.

ಇಲ್ಲಿರುವ ಕನ್ನಡ ಹಸ್ತಪ್ರತಿಗಳ ಒಂದು ಯಾದಿಯನ್ನು ರೋಮನ್ ಲಿಪಿಯಲ್ಲಿ ಬೆರಳಚ್ಚು ಗೊಳಿಸಿದ್ದಾರೆ. ಹಸ್ತಪ್ರತಿ ಓದುವಲ್ಲಿ ಪರಿಣತನಲ್ಲದ ಕನ್ನಡಿಗನ ಸಹಾಯದಿಂದ ಸಿದ್ಧಪಡಿಸಿರುವ ಈ ಯಾದಿ ದೋಷಪೂರ್ಣವಾಗಿದೆ ನನ್ನ ಪ್ರಯತ್ನದಿಂದ ಇಲ್ಲಿ ಲಭ್ಯವಾದ ಹಸ್ತಪ್ರತಿಗಳ ವಿವರ ಹೀಗಿದೆ :

I ತಾಳೆಗರಿ ಹಸ್ತಪ್ರತಿಗಳು :

೧. ಅಶ್ವಮೇಧ— ಕರ್ತೃ ?
Add. 12088; ಆಕಾರ: 11"×1"; ಗರಿ: 8.
ಯಕ್ಷಗಾನ.

೨. ಇಂದ್ರಕೀಲ ಪ್ರಸಂಗ— ಕರ್ತೃ ?
Add. 14370; ಆಕಾರ: 16½"×1½"; ಗರಿ: 1–34.
ಯಕ್ಷಗಾನ.

೩. ಅತಿಕಾಯನ ಕಾಳಗ— ಕರ್ತೃ ?
Add. 14371; ಆಕಾರ: 16½"×1½"; ಗರಿ: 7–31.
ಯಕ್ಷಗಾನ.

೪. i) ಮಂತ್ರಗೋಪ್ಯ—ಮೂಲ: ಅಲ್ಲಮಪ್ರಭು, ವ್ಯಾಖ್ಯಾನ: ಕಲ್ಲುಮಠದ ಪ್ರಭುದೇವ. or 9656. ಆಕಾರ: 10"×1¾"; ಗರಿ: 1–32.
ವೀರಶೈವ ಧಾರ್ಮಿಕ ಕೃತಿ. ಇಲ್ಲಿ ಇವನು ತನ್ನನ್ನು ಕಲ್ಲುಮಂಟಪದ ಪ್ರಭುದೇವ ಎಂದು ಕರೆದುಕೊಂಡಿದ್ದಾನೆ.

ii. ಕರಣಹಸಿಗೆ—ಚನ್ನಬಸವಣ್ಣ.
or. 9656; ಆಕಾರ: 10″×1$\frac{3}{4}$″; ಗರಿ: 33–42.
ವೀರಶೈವಕೃತಿ.

iii. ಮಿಶ್ರಾರ್ಪಣ—ಕರ್ತೃ ?
or. 9656; ಆಕಾರ: 10″×1$\frac{3}{4}$″; ಗರಿ: 43-48.
ವೀರಶೈವಕೃತಿ.

iv. ಪಂಚೀಕರಣದ ವ್ಯಾಖ್ಯಾನ—ಕರ್ತೃ ?
or. 9656; ಆಕಾರ: 10″×1$\frac{3}{4}$″; ಗರಿ: 48–57.
ವೀರಶೈವಕೃತಿ.

v. ಷಡಸ್ಥಲಕೋವೆ—ಕರ್ತೃ ?
or. 9656; ಆಕಾರ: 10″×1$\frac{3}{4}$″; ಗರಿ: 57–58.
ವೀರಶೈವಕೃತಿ.

೫. ಅಶ್ವಮೇಧ ಪರ್ವ (ಜೈಮಿನಿ ಭಾರತ) —ಲಕ್ಷ್ಮೀಶ.
or. 6812; ಆಕಾರ: 15$\frac{1}{2}$″×2″; ಗರಿ: 1–163.
ಸಾರ್ಥಕ.

೬. ಮಹಾಭಾರತ ತಾತ್ಪರ್ಯ—ಕಳಲೆ ನಂಜರಾಜ.
or. 1006; ಆಕಾರ: 25$\frac{1}{2}$″×2″; ಗರಿ: 1-227.
ಗದ್ಯ.

೭. ಬಾಣಾಸುರ ಪ್ರಸಂಗ— ಕರ್ತೃ ?
or. 6813; ಆಕಾರ: 11″×2″; ಗರಿ: 1–31.
ಯಕ್ಷಗಾನ.

೮. ತುಂಡು ಗರಿಗಳು— ಕರ್ತೃ ?
Add. 12092. ಯಾವುದೋ ಪತ್ರವಿರುವಂತಿದೆ.

II ಕಡತ :

೯. ರಾಮಾಯಣ ಪದ್ಯ, ದಾಸರ ಹಾಡು, ಸಂವತ್ಸರದ ಯಾದಿ ಇತ್ಯಾದಿ.
or. 13343; ಆಕಾರ: 11″×6″; ಹಾಳೆ 1–18.

III ಆಧುನಿಕ ಕಾಗದ ಹಸ್ತಪ್ರತಿ :

೧೦. Canarese and Marathi Ballads— ಜೆ. ಎಫ್. ಫ್ಲೀಟ್.
or. 8179; ಆಕಾರ: 13″×9″; ಹಾಳೆ 1-242.
ಇದರ ಫೋಟೋಸ್ಟ್ಯಾಟ್ ಪ್ರತಿ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿದೆ. ಮೈಕ್ರೋಫಿಲ್ಮ್ ಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಶ್ರೀನಿವಾಸ ಹಾವನೂರ ಅವರು ಈ ಹಸ್ತಪ್ರತಿಯನ್ನು ಕುರಿತು 'ಬೆಳವಲ' (ಬೆಟಗೇರಿ ಕೃಷ್ಣಶರ್ಮರ ಅಭಿನಂದನ ಗ್ರಂಥ) ದಲ್ಲಿ ಲೇಖನ ಬರೆದಿದ್ದಾರೆ.

೧೧. A letter of Haidar Ali.
Add. 5358.
ಇದರಲ್ಲಿ ೬ ಸಾಲಿನ ಒಂದು ಕನ್ನಡ ಪತ್ರವಿದೆ.

೧೨. ಬೆಳಗಾವಿಯ ಎರಡು ಶಾಸನಗಳು :
Add. 14387—iiic.
ಬೆಳಗಾವಿಗೆ ಸಂಬಂಧಪಟ್ಟ ೨ ಜೈನ ಶಾಸನಗಳ ಪಠ್ಯ.

೧೩. M. S. H. Thompson ಅವರ ನೋಟಬುಕ್.
or. 13080 (11)
ಅಭ್ಯಾಸಕ್ಕೆ ಬರೆದುಕೊಂಡ ಕನ್ನಡ-ಇಂಗ್ಲಿಷ್ ಬರವಣಿಗೆ.

೧೪. M. S. H. Thompson ಅವರ ನೋಟಬುಕ್.
or. 13080 (15)
ಅಭ್ಯಾಸಕ್ಕೆ ಬರೆದುಕೊಂಡ ಕನ್ನಡ-ಇಂಗ್ಲೀಷ ಬರವಣಿಗೆ.

ಬ್ರಿಟಿಶ್ ಮ್ಯೂಜಿಯಂ :

ಇದು ಒಂದು ಭವ್ಯ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ. ಜೆ. ಬಿ. ಪಿಯರಸನ್ ಅವರ "Oriental manuscripts in Europe and North America" ಎಂಬ ಗ್ರಂಥದಲ್ಲಿ "The British Musium has not yet produced any catalogue of its Mss. in Dravidian Languages, which it possesses in some quantity : Brahui 1, Kannada (Canarese) 14 ...." ಎಂದು ಮುಂತಾಗಿ ಹೇಳಲಾಗಿದೆ (ಪು. 384). ಈಗ ಬ್ರಿಟಿಶ್ ಮ್ಯೂಜಿಯಂದಲ್ಲಿ ಯುರೋಪಿಯನ್ ಭಾಷೆ ಹೊರತಾಗಿ ಬೇರೆ ಭಾಷೆಯ ಹಸ್ತಪ್ರತಿಗಳಿಲ್ಲ. ಬಹುಶಃ ಇಲ್ಲಿ ಮೊದಲು ಇದ್ದ 14 ಹಸ್ತಪ್ರತಿಗಳನ್ನು ಮೇಲೆ ಸೂಚಿಸಿದ ಬ್ರಿಟಿಶ್ ಲೈಬ್ರರಿಗೆ ಸ್ಥಳಾಂತರಿಸಿದ್ದಾರೆ. ಇವುಗಳನ್ನೇ ಪೀಯರ್‌ಸನ್ ಸೂಚಿಸಿದಂತಿದೆ.

ರಾಯಲ್ ಏಸಿಯಾಟಿಕ್ ಸೊಸೈಟಿ :

ಇದು ಕ್ವೀನ್ ಆ್ಯನ್ ರಸ್ತೆಯ ಮೇಲಿರುವ ಒಂದು ಸುಪ್ರಸಿದ್ಧ ಹಳೆಯ ಸಂಶೋಧನ ಸಂಸ್ಥೆ. ಆದರೆ ಇದು ಈಗ ತೀರ ಶೋಚನೀಯ ಸ್ಥಿತಿಯಲ್ಲಿದೆ. ಸರ್ ವಾಲ್ಟರ್ ಇಲಿಯಟ್ ಸಿದ್ಧಪಡಿಸಿದ "Karnatak Desh Inscriptions" ಸಂಪುಟದ ಒಂದು ಪ್ರತಿ ಈ ಸಂಸ್ಥೆಯಲ್ಲಿದೆಯೆಂದು ಡಾ. ಫ್ಲೀಟ್ ಒಂದೆಡೆ ಸೂಚಿಸಿದ್ದಾರೆ. ಡಾ. ನಂದಿಮಠ ಅವರು ಲಂಡನ್‌ದಲ್ಲಿದ್ದಾಗ ಇದನ್ನು ಅಭ್ಯಾಸ ಮಾಡಿ ಕೆಲವು ಶಾಸನಗಳನ್ನು "ಶಿವಾನುಭವ" ಪತ್ರಿಕೆಯ ಮೂಲಕ ಪ್ರಕಟಿಸಿದ್ದರು. ೫೯೫ ಕನ್ನಡ ಶಾಸನಗಳ ಈ ಸಂಪುಟವನ್ನು ಅಭ್ಯಸಿಸಲು, ಸಾಧ್ಯವಾದರೆ ಇಡೀ ಸಂಪುಟವನ್ನು ಝಿರಾಕ್ಸ ಮಾಡಿಸಿಕೊಂಡು ಬರಲು ಈ ಸಂಸ್ಥೆಗೆ ಹೋದೆನು. ಆದರೆ ಇಲ್ಲಿಯ ಗ್ರಂಥಪಾಲಕ ಈ ಬಗ್ಗೆ ಆಸಕ್ತಿ ತೋರಿಸಲಿಲ್ಲ. ನಾನೇ ಕ್ಯಾಟಲಾಗ್ ನೋಡಿ, ಕಪಾಟು ತೆರೆದು ಹುಡುಕಿದೆ, ಸಿಗಲಿಲ್ಲ. ಕನಕದಾಸರ ಮೋಹನ ತರಂಗಿಣಿಯ ಒಂದು ತಾಳೆಪ್ರತಿ ಮಾತ್ರ ಸಿಕ್ಕಿತು. ವಿಂಟರ್‌ನಿಝ್ ಅವರು ತಮ್ಮ "A catalogue of South Indian Manuscripts" (1902)ದಲ್ಲಿ ಒಂದು ಕನ್ನಡ ಹಸ್ತಪ್ರತಿ ಈ ಸಂಸ್ಥೆಯಲ್ಲಿರುವುದಾಗಿ ಸೂಚಿಸಿರುವರೆಂದು ಜೆ. ಬಿ. ಪೀಯರ್‌ಸನ್ ತಮ್ಮ "Oriental Manuscripts in Europe and North America" ಗ್ರಂಥದಲ್ಲಿ ಹೇಳಿದ್ದಾರೆ (ಪುಟ 387). ಈ ಹಸ್ತಪ್ರತಿ ಮೇಲೆ ಸೂಚಿಸಿದ ಮೋಹನ ತರಂಗಿಣಿಯೇ ಆಗಿರಬೇಕು. ಇದಕ್ಕೆ ನಂಬರ್ ಹಾಕಿಲ್ಲ; ಆಕಾರ: $8\frac{1}{2}'' \times 2''$; ಗರಿ: 1–157.

ಸ್ಕೂಲ್ ಆಫ್ ಓರಿಯಂಟಲ್ ಆ್ಯಂಡ ಆಫ್ರಿಕನ್ ಸ್ಟಡೀಜ :

ಇದು ಲಂಡನ್ ವಿಶ್ವವಿದ್ಯಾಲಯದ ಒಂದು ಶಾಖೆ. ಇಲ್ಲಿ ದ್ರಾವಿಡ ಭಾಷೆಗಳಲ್ಲಿ ತಮಿಳು ಅಧ್ಯಯನಕ್ಕೆ ಮಾತ್ರ ಅವಕಾಶವಿದೆ. ಪ್ರೊ. ಮಾರ್ ಅವರು ಇಲ್ಲಿ ತಮಿಳು ಪ್ರಾಧ್ಯಾಪಕರು. ಈ ಶಾಖೆಯ ಅಸಿಸ್ಟಂಟ ಗ್ರಂಥಪಾಲಕ ಶ್ರೀ ಆರ್. ಸಿ. ಡೋಗ್ರಾ ಭಾರತೀಯ (ಕಾಶ್ಮೀರಿ). ಈ ಗ್ರಂಥಾಲಯದ ಕ್ಯಾಟಲಾಗದಲ್ಲಿ ೪ ಕನ್ನಡ ಹಸ್ತಪ್ರತಿಗಳ ಸೂಚನೆಯಿದೆ. ನನಗೆ ಮಾತ್ರ ೩ ಲಭ್ಯವಾದವು.

I ತಾಳೆಗರಿ ಹಸ್ತಪ್ರತಿ :

೧. ಲೀಲಾವತಿ— ನೇಮಿಚಂದ್ರ
41908; ಆಕಾರ: $16'' \times 1\frac{1}{6}''$; ಗರಿ: 1–207.
ಚಂಪೂಕೃತಿ.

II ಆಧುನಿಕ ಕಾಗದ ಹಸ್ತಪ್ರತಿಗಳು :

೨. Religious writings in Canarese.
7078; ಆಕಾರ: 13"×7"; ಹಾಳೆ: 1+137+1.
ಕ್ರೈಸ್ತಧರ್ಮದ ಗದ್ಯಗ್ರಂಥ.

೩. Catholic tracts in Canarese.
2909; ಆಕಾರ: 7"×10"; ಹಾಳೆ: 80.
ಕ್ರೈಸ್ತಧರ್ಮದ ಗದ್ಯಗ್ರಂಥ.

ಈ ಎರಡು ಕೃತಿಗಳ ಬಗ್ಗೆ ಡಾ. ಶ್ರೀನಿವಾಸ ಹಾವನೂರ ಅವರು "೧೮ ನೆಯ ಶತಮಾನದ ಕೆಥೊಲಿಕರ ಅಪೂರ್ವ ಕನ್ನಡ ಕೃತಿಗಳು" ಎಂಬ ಲೇಖನ ಬರೆದಿರುವರು (ಸಾಧನೆ 2-8).

ಬೈಬಲ್ ಸೊಸೈಟಿ :

ಕ್ವೀನ್ ವಿಕ್ಟೋರಿಯಾ ರಸ್ತೆಯ ಮೇಲಿರುವ ಇದು ಬೈಬಲ್ ಸಾಹಿತ್ಯವನ್ನು ಪ್ರಕಟಿಸುವ, ಪ್ರಸಾರಮಾಡುವ ಸಂಸ್ಥೆ. ಇಲ್ಲಿ ಆಧುನಿಕ ಕಾಗದದ ಮೇಲೆ ಬರೆದ ಕೆಲವು ಹಸ್ತಪ್ರತಿಗಳಿವೆ.

೧. Browns Kannada Bible.
೨. " " "
೩. " " "
ನಂಬರ್ ಕೊಟ್ಟಿಲ್ಲ; ಆಕಾರ: 8½"×13"; ಪಾನು ಕ್ರಮವಾಗಿ 1-117; 1-95, 1-202.
ಗದ್ಯ. ಈ ಮೂರು ಚೋಪಡಿಗಳು "Reference libraray of the Madras auxiliry bible Society" ಯಿಂದ ಇಲ್ಲಿಗೆ ಬಂದಿವೆ.

೪. A Cannodi translation of the Gospel according to St. Mark.
ನಂಬರ ಕೊಟ್ಟಿಲ್ಲ; ಆಕಾರ: 8½"×13"; ಹಾಳೆ 1-72.
ಕ್ರೈಸ್ತ ಧರ್ಮದ ಗದ್ಯಗ್ರಂಥ.

೫. The Gospel according to St. Luke.
ನಂಬರ್ ಕೊಟ್ಟಿಲ್ಲ; ಆಕಾರ: 8½"×13"; ಹಾಳೆ 1-108.
ಕ್ರೈಸ್ತಧರ್ಮದ ಗದ್ಯ ಗ್ರಂಥ.

೬. ? ?

BFBS. Mss. 508. ಆಕಾರ: $12\frac{1}{2}'' \times 9\frac{1}{2}''$; ಹಾಳೆ 1–4.

ಇದರ ಕೆಂಪು ಕವ್ಹರ್ ಮೇಲೆ "part of the new testament in the Kurnataka Language, Spoken by Seven millions of people" ಎಂದು ಬರೆಯಲಾಗಿದೆ. ಇದು ಬೈಬಲ್ ಸಾಹಿತ್ಯ ಕೃತಿ.

ವೆಲ್‌ಕಮ್ ಇನ್‌ಸ್ಟಿಟ್ಯೂಟ ಆಫ್ ದಿ ಹಿಸ್ಟರಿ ಆಫ್ ಮೆಡಿಶನ್ :

ಊಸ್ಟನ್ ರಸ್ತೆಯ ಮೇಲಿರುವ ಈ ಸಂಸ್ಥೆಯಲ್ಲಿ ಔಷಧಶಾಸ್ತ್ರಕ್ಕೆ ಸಂಬಂಧ ಪಟ್ಟ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹವಿದೆ. ಹಿಬ್ರು ಭಾಷೆಯ ವಿದ್ವಾಂಸಅ್ಯಲನ್ ಇಲ್ಲಿಯ ಅಧಿಕಾರಿಗಳಲ್ಲಿ ಒಬ್ಬ. ಈತನ ಸಹಾಯದಿಂದ ಈ ಸಂಸ್ಥೆಯಲ್ಲಿ ಎರಡು ಕನ್ನಡ ಕೈಬರಹ ಪ್ರತಿಗಳನ್ನು ಶೋಧಿಸಲಾಯಿತು.

೧. ಅಷ್ಟಾವರಣ ಸ್ತೋತ್ರ—ಸಂಪಾದನೆಯ ಸಣ್ಣ ಬರಹದ ಗುರುಬಸವರಾಜದೇವರು

Well Kan–1. ಆಕಾರ: $10'' \times 2''$; ಗರಿ: 1–37.

ವೀರಶೈವ ಕೃತಿ. ಸಂಸ್ಕೃತ ಶ್ಲೋಕ + ಕನ್ನಡ ಟೀಕೆ.

ಇದನ್ನು Steven's ductioneers London ಅವರಿಂದ ೧೨ ಶಿಲಿಂಗ್‌ಗಳಿಗೆ ಖರೀದಿಸಿದೆ.

೨. ಪತ್ರ ?

Well Kan–2. ಆಕಾರ: $13'' \times 17''$; ಹಾಳೆ 1

ಇದು ಬಿದಿರಿನ ಕೊಳವೆ (ಹಿತ್ತಾಳೆ ಕಟ್ಟು)ಯಲ್ಲಿದೆ. ಸಕಲೇಶಪುರದ 'ದಕ್ಷಿಣ ಮಹಿಸೂರ ನೇಟಿವ್ಹ ಪ್ಲಾಂಟರ್‍ಸ ಅಸೋಸಿಯೇಶನ್' ದವರು ಮೈಸೂರ ಸೀಮೆಯ ಬ್ರಿಟಿಶ್ ರೆಸಿಡೆಂಟ್ ಮ್ಯಾಕ್ವರ್ಥ ಯಂಗ ಎಸ್ಕ್ವೈರ್ ಅವರಿಗೆ ಬರೆದ ಪತ್ರ.

× × × × ×

ಲಂಡನ್ ಪಟ್ಟಣವನ್ನು ಬಿಟ್ಟರೆ ಇಂಗ್ಲಂಡ ದೇಶದ ಇತರೆಡೆಗಳಲ್ಲಿಯೂ ಕನ್ನಡ ಹಸ್ತಪ್ರತಿಗಳಿವೆ. ಅವುಗಳಲ್ಲಿ ನಾನು ನೋಡಿದ ಕೆಂಬ್ರಿಜ್ ಮತ್ತು ಆಕ್ಸಫರ್ಡಗಳಲ್ಲಿಯ ಹಸ್ತಪ್ರತಿ ವಿವರ ಹೀಗಿದೆ :

ಕೆಂಬ್ರಿಜ್ ವಿಶ್ವವಿದ್ಯಾಲಯ

ಇಲ್ಲಿ ೩ ತೆಲಗು, ೧ ತೆಲುಗು-ಕನ್ನಡ ಮಿಶ್ರಿತ ಹಸ್ತಪ್ರತಿಗಳಿವೆ. ಈ ತೆಲುಗು-ಕನ್ನಡ ಮಿಶ್ರಿತ ಹಸ್ತಪ್ರತಿಯನ್ನೇ ಗಮನಿಸಿ ಜೆ. ಬಿ. ಪಿಯರ್‌ಸನ್ ಅವರು ತಮ್ಮ "Oriental manuscripts in Europe and North America"

ಗ್ರಂಥದಲ್ಲಿ "Mss. in the Dravidian Languages number 69 (Tamil-40, Telugu-2, Malayalam-17, Canarese-1........" ಎಂದು ಹೇಳಿದಂತಿದೆ (ಪುಟ 385).

ಆಕ್ಸಫರ್ಡ ವಿಶ್ವವಿದ್ಯಾಲಯ

ಈ ವಿಶ್ವವಿದ್ಯಾಲಯದ ಬಾಡ್ಲಿಯನ್ ಲೈಬ್ರರಿಯ ಇಂಡಿಯನ್ ಇನ್‌ಸ್ಟಿಟ್ಯೂಟದ ಅಧಿಕಾರಿ ಜೋನಾಥನ್ ಕ್ಯಾತ್. ಈತನ ಹೆಂಡತಿ ಕನ್ನಡಿತಿ; ಬಿಜಾಪುರದವಳು. ಈ ಇನ್‌ಸ್ಟಿಟ್ಯೂಟದಲ್ಲಿರುವ ಕನ್ನಡ ಹಸ್ತಪ್ರತಿಗಳ ವಿವರ ಹೀಗಿದೆ :

I **ತಾಳೆಗರಿ ಹಸ್ತಪ್ರತಿ :**

೧. ರಾಜಶೇಖರ ವಿಳಾಸ— ಷಡಕ್ಷರದೇವ.
Ms. Ind. Misc. b5(R); ಆಕಾರ: 19" 2"; ಗರಿ: 1-124
ವೀರಶೈವ ಚಂಪೂಕೃತಿ.

೨. ? ?
Ms. Ind. Misc. d2; ಆಕಾರ: 10" 1¼" ಗರಿ: 1
ಯಂತ್ರ, ಔಷಧ, ಮಂತ್ರಗಳ ಗದ್ಯಗ್ರಂಥ.

೩. ಯಂತ್ರದ ಪುಸ್ತಕ—ಕರ್ತೃ ?
Ms. Ind. Misc. e3(R). ಆಕಾರ: 8" ½"; ಗರಿ: 1-27.

II **ಕಡತ :**

೪. ? ?
Ms. Kennicott. 18; ಆಕಾರ: 8"×7½"; ಒಟ್ಟು 94 ಮಡಿಕೆ
ಜಮಾಖರ್ಚು ಇದೆ.

೫. ? ?
Ms. Ind. Misc; ಆಕಾರ : 7"×7½"; ಒಟ್ಟು 46 ಮಡಿಕೆ.
ಜಮಾಖರ್ಚು ಇದೆ.

ಜೆ. ಬಿ. ಪಿಯರ್‌ಸನ್ ಅವರ "Oriental manuscripts in Europe and North America" ಎಂಬ ಗ್ರಂಥದಲ್ಲಿ ಈ ಬಾಡ್ಲಿಯನ್ ಲೈಬ್ರರಿಯನ್ನು ಕುರಿತು ಬರೆಯುತ್ತ ಡಾ. ಜಿ. ಯು. ಪೋಪ ಅವರ ಸೂಚಿಯನ್ನು ಆಧರಿಸಿ "The catalogue contains Inscriptions of 130 Tamil Mss. 20 Telugu (including Sanskrit Mss. written in the Telugu characters), 3 Canarese........ ಎಂದೂ (ಪುಟ 385), "Mss. Ind. Misc. reffered to above enumerates 1 Malto, 4 Canarises......."

ಎಂದೂ (ಪುಟ 385) ಹೇಳುತ್ತಾರೆ. ಈ ಎರಡೂ ಉಲ್ಲೇಖಗಳಲ್ಲಿ ಬಂದಿರುವ ಒಟ್ಟು ೭ ಕನ್ನಡ ಹಸ್ತಪ್ರತಿಗಳೂ ಮೇಲೆ ವಿವರಿಸಿದ ಹಸ್ತಪ್ರತಿಗಳೂ ಒಂದೇ ಆಗಿರಬಹುದು.

ಇಂಗ್ಲಂಡ್, ಕೆಂಬ್ರಿಜ್, ಆಕ್ಸಫರ್ಡಗಳಲ್ಲಿ ನಾನು ಶೋಧಿಸಿದ, ಅಭ್ಯಸಿಸಿದ ಹಸ್ತಪ್ರತಿ ಸಾಮಗ್ರಿಯಿದು. ಇದನ್ನು ಬಿಟ್ಟರೆ ಅಬರ್ಡೀನ್ ವಿಶ್ವವಿದ್ಯಾಲಯದಲ್ಲಿ ೧, ಮೆಂಚೆಸ್ಟರದ ದಿ ಜಾನ್ ರೇಲ್ಯಾಂಡ್ಸ ಲೈಬ್ರರಿಯಲ್ಲಿ ೩ ಕನ್ನಡ ಹಸ್ತಪ್ರತಿಗಳಿವೆಯೆಂದು ಜೆ. ಬಿ. ಪಿಯರ್‌ಸನ್ ಅವರ "Oriental manuscripts in Europe and North America" ಎಂಬ ಗ್ರಂಥದಿಂದ ತಿಳಿದುಬರುತ್ತದೆ (ಪುಟ 388).

ಎಡಿನ್‌ಬರ್ಗ ವಿಶ್ವವಿದ್ಯಾಲಯದಲ್ಲಿರುವ ಸರ್ ವಾಲ್ಟರ್ ಇಲಿಯಟ್ ಸಂಕಲಿಸಿದ "Karnataka Desh inscriptions" ಗ್ರಂಥವನ್ನು ತಾವು ಅಭ್ಯಾಸಕ್ಕೆ ಬಳಸಿಕೊಂಡಿರುವುದಾಗಿ ಡಾ. ಫ್ಲೀಟ್ ಹೇಳುತ್ತಾರೆ.

× × × × ×

ಒಟ್ಟಾರೆ—೧. ಕರ್ನಾಟಕಕ್ಕೆ ಸಂಬಂಧಿಸಿದ ಕೈಬರಹದ ಸಂಪತ್ತನ್ನು ಸಾಹಿತ್ಯ ಕೃತಿ ಮತ್ತು ಚರಿತ್ರೆಯ ದಾಖಲೆಯೆಂದು ವರ್ಗೀಕರಿಸಿದರೆ ಇಂಗ್ಲಂಡ ದೇಶದಲ್ಲಿ ಚರಿತ್ರೆಯ ದಾಖಲೆಗಳೇ ಅಧಿಕ. ೨. ಎಲ್ಲಾ ಸಂಸ್ಥೆಗಳಿಗಿಂತ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿಯೇ ಈ ಎರಡೂ ಬಗೆಯ ಸಾಮಗ್ರಿ ಹೆಚ್ಚು. ೩. ಹಳೆಯ ಮುದ್ರಿತ ಕನ್ನಡ ಗ್ರಂಥಗಳು ಈ ಎಲ್ಲ ಸಂಸ್ಥೆಗಳಲ್ಲಿದ್ದರೂ ಬ್ರಿಟಿಶ್ ಲೈಬ್ರರಿಯಲ್ಲಿ ಈ ಸಂಖ್ಯೆ ಅಧಿಕವಾಗಿದೆ. ಆದುದರಿಂದ ಇಲ್ಲಿಯ ಚರಿತ್ರೆಯ ದಾಖಲೆಗಳನ್ನೂ (ಕನ್ನಡ, ಇಂಗ್ಲಿಷ್), ಹಳೆಯ ಮುದ್ರಿತ ಗ್ರಂಥಗಳನ್ನೂ ಅಭ್ಯಸಿಸುವುದು ಅವಶ್ಯವಿದೆ.


ವಿಜಯನಗರ ಬುಕ್ಕರಾಯನ ಭಾವೀಕೇರಿ ಶಾಸನ

—ಒಂದು ಸಂಶೋಧನೆ

● ಎಚ್. ಆರ್. ರಘುನಾಥ ಭಟ್

ವಿಜಯನಗರ ಕಾಲದ ಸಮಾಜೋ-ಸಾಂಸ್ಕೃತಿಕ ಅಧ್ಯಯನಗಳಲ್ಲಿ ವಿದ್ವಾಂಸರು ಈಚೆಗೆ ಇನ್ನೂ ಹೆಚ್ಚಿನ ಆಸಕ್ತಿ ತೋರುತ್ತಿರುವುದು ಪ್ರಶಂಸನೀಯ ಸಂಗತಿ. ಈ ದಿಶೆಯಲ್ಲಿ ಹೊಸ ಹೊಸ ಶಾಸನಗಳು ಸಂಶೋಧನೆಯಾದಷ್ಟೂ ಸ್ವಾಗತಾರ್ಹ, ಉಚಿ ಯುಕ್ತ. ಕಾರಣ, ಪ್ರಾಚೀನ-ಮಧ್ಯಕಾಲೀನ ಜನಜೀವನದ ಹಲವು ಮುಖಗಳಿಗೆ ಹಿಡಿದ ಕೈಗನ್ನಡಿಯಂತಿರುವ ಶಾಸನಗಳು ಅಧಿಕೃತ ಸಮಕಾಲೀನ ದಾಖಲೆಗಳಾಗಿದ್ದು, ಹಲವು ವೇಳೆ ಸಾಹಿತ್ಯಕ ಗ್ರಂಥಾಕರಗಳಿಗಿಂತ ಹೆಚ್ಚು ನಂಬಲರ್ಹ ಹಾಗೂ ವಸ್ತುನಿಷ್ಠವಾಗಿರುತ್ತವೆ. ಅಂತೆಯೇ ಈ ಬಗೆಯ ಗಟ್ಟಿ ದಾಖಲೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಇತ್ತೀಚಿನ ನನ್ನ ಕ್ಷೇತ್ರ ಕಾರ್ಯದಲ್ಲಿ ಸಂಶೋಧಿಸಲಾದ ವಿಜಯನಗರ ಬುಕ್ಕರಾಯನ ಭಾವೀಕೇರಿ ಶಿಲಾಶಾಸನದ ಬಗೆಗೆ ಒಂದು ಟಿಪ್ಪಣಿಯನ್ನಿಲ್ಲಿ ಮೊದಲ ಬಾರಿಗೆ ನೀಡಲಾಗಿದೆ.[1]

ಇದು ವಿಜಯನಗರ ಸಾಮ್ರಾಟ ಬುಕ್ಕರಾಯನ ಕಾಲದ (೧೩೫೬-೭೭) ಒಂದು ಪ್ರಾಚೀನತಮ ಶಿಲಾಶಾಸನವಾಗಿದ್ದು, ಉತ್ತರ ಕನ್ನಡ ಜಿಲ್ಲೆಯ ಅಂಕೋಲೆ ತಾಲೂಕಿನ ಭಾವೀಕೇರಿಯಲ್ಲಿ ಬೆಳಕಿಗೆ ಬಂತು. ಆ ಊರಿನ ಕನ್ನಡ ಶಾಲೆಯ ಎಡ ಬದಿಯ ಬಯಲಲ್ಲಿರುವ ಕೆಂಡದ ಮಾಸ್ತಿಗುಡಿಯ ಬಲಬದಿಯಲ್ಲಿ ಈಗ ನೆಟ್ಟಿರುವ ಈ ಶಾಸನ ಶಿಲೆಯು ಬಹುಕಾಲ ಉಸುಕಿನ ಮುಸುಕಿನಲ್ಲಿತ್ತು. ಬಳಪದ ಕಲ್ಲಿನ ಹಲಗೆಯ (೧೧೫×೭೩.೫×೧೧ ಸೆಂ.ಮೀ) ಮೇಲೆ ಇಪ್ಪತ್ತೈದು ಸಾಲುಗಳಲ್ಲಿ ಬರಹವನ್ನು ಕಂಡರಿಸಿದೆ. ಫಲಕದ ಮೇಲ್ತುದಿ ಅರ್ಧವೃತ್ತಾಕಾರವಾಗಿದ್ದು ಅದರ ಮೇಲೆ ಅರ್ಧಚಂದ್ರ (ಬಲಕ್ಕೆ) ಹಾಗೂ ಸೂರ್ಯ (ಎಡಕ್ಕೆ). ಮಧ್ಯದಲ್ಲಿ ಶಿವಲಿಂಗ, ಅದರ ಬಲಕ್ಕೆ ಧೂಪಾರತಿ ಗೈಯುವ ಶಿವಾಚಾರ್ಯ ಹಾಗೂ ನಂದಿವಾಹನ ಮತ್ತು ಎಡಬದಿಗೆ ಹಸುಕರುಗಳ ಚಿತ್ರಗಳನ್ನು ಕೇವಲ ರೇಖಿಸಲಾಗಿದೆ. ಈ ರೇಖಾ ಚಿತ್ರಗಳು ನೋಡಲು ಅಷ್ಟೇನು ಸುಂದರವಾಗಿಲ್ಲವಾದರೂ ಅಂದಿನ ಧಾರ್ಮಿಕ ಅಥವಾ ಮತೀಯ ನಂಬಿಕೆಗಳನ್ನು ತಿಳಿಯಬಯಸುವವರಿಗೆ ಹಾಗೂ ಶಿಲಾಶಾಸನ ಲೇಖನ ಚಿತ್ರ ಸಂಪ್ರದಾಯವನ್ನು ಅರಿಯಲು ಇಷ್ಟಪಟ್ಟವರಿಗೆ ಉಪಯುಕ್ತವಾಗಿವೆ.



ಭಾವೀಕೇರಿ ಶಾಸನದ ಪಡಿಯಚ್ಚು

ಶಾಸನ ಲೇಖನವು ಸಾಕಷ್ಟು ಸುಂದರವಾಗಿದೆ; ಅನಂತರದ ವಿಜಯನಗರ ಶಾಸನಗಳಲ್ಲಿ ಕಂಡು ಬರುವಷ್ಟು ವಕ್ರವಾಗಿಲ್ಲ. ಲಿಪಿಕಾರ ಮೊದಲಿಗೆ ದೊಡ್ಡ ಅಕ್ಷರಗಳಲ್ಲಿ ಬರಹವನ್ನು ಕಂಡರಿಸಲು ಆರಂಭಿಸಿದ್ದು, ಆರು ಸಾಲುಗಳ ನಂತರ ಮಧ್ಯಭಾಗದಲ್ಲಿ ಆ ಅಕ್ಷರ ಪ್ರಮಾಣವನ್ನು ಚಿಕ್ಕದಾಗಿಸಿ, ಮತ್ತೆ ಕೊನೆಯಲ್ಲಿ ದೊಡ್ಡ ಅಕ್ಷರಗಳಲ್ಲೇ ಬರಹವನ್ನು ಮುಗಿಸಿದ್ದಾನೆ. ಇಪ್ಪತ್ತೆರಡು ಮತ್ತು ಇಪ್ಪತ್ತಮೂರನೆಯ ಸಾಲುಗಳು ಸವೆದಿವೆ. ಈ ಶಾಸನದ ಲಿಪಿ ಮತ್ತು ಭಾಷೆ ಕನ್ನಡ. ಆರಂಭದ ಶಿವಸ್ತುತಿ ಹಾಗೂ ಕೊನೆಯ ಶಾಪಾಶಯ ಪದ್ಯ ಭಾಗಗಳಲ್ಲಿ ಮಾತ್ರ ಸಂಸ್ಕೃತವನ್ನು ಬಳಸಲಾಗಿದೆ. ಶಾಸನ ಪಾಠವು ಗದ್ಯಶೈಲಿಯಲ್ಲಿದೆ. ಇವರಲ್ಲಿ ಕೆಲಮಟ್ಟಿಗೆ ಲೇಖನದೋಷಗಳೂ ನುಸುಳಿಕೊಂಡಿವೆ.

ಪ್ರಸ್ತುತ ಶಾಸನದಲ್ಲಿ ತೇದಿ ವಿವರಗಳು ಸ್ಪಷ್ಟವಾಗಿವೆ. ೧೩೬೨ ನೆಯ ಇಸವಿಯ ನವೆಂಬರ ತಿಂಗಳ ಹದಿನೆಂಟನೆಯ ದಿವಸ ದಾಖಲಿಸಿದ ಈ ದಾನಶಾಸನದಲ್ಲಿ ನಮೂದಿತವಾದ ವಾರ ಮಾತ್ರ ಶುಕ್ರವಾರ (ರವಿವಾರವಲ್ಲ) ವೆಂದಾಗಬೇಕಾಗಿದೆ.

ಭಾವೀಕೇರಿ ಶಿಲಾಶಾಸನದ ಪ್ರಕಾರ ಅಂಕೋಲೆನಾಡಿನ ಭಾವೀಕೇರಿ ಗ್ರಾಮವನ್ನು ಅಲ್ಲಿಯ ಮಹಾಪ್ರಧಾನ ಬಸವಯ್ಯ ದಂಡನಾಯಕನು ಆಳುತ್ತಿದ್ದ ಪ್ರಭು ವೀರ ಬುಕ್ಕರಾಯನ ಅಪ್ಪಣೆ ಪಡೆದುಕೊಂಡು ಅದನ್ನು ರಾಜಗುರು ಕ್ರಿಯಾಶಕ್ತಿ ಯತೀಶ್ವರರಿಗೆ ಧಾರಾಪೂರ್ವಕವಾಗಿ ದಾನಕೊಟ್ಟನು; ಆ ಯತೀಶ್ವರರು ಆ ಗ್ರಾಮವನ್ನು ಪ್ರತಿಷ್ಠಾಪಿಸಿ ಶ್ರೀಕ್ಷೇತ್ರ ಗೋಕರ್ಣದ ಮಹಾಬಲದೇವರ ಪೂಜಾರ್ಥವಾಗಿಯೂ ಅಲ್ಲಿಯ ಛತ್ರದ ಬ್ರಾಹ್ಮಣರ ಭೋಜನಕ್ಕಾಗಿಯೂ ಧಾರಾಪೂರ್ವಕವಾಗಿ ನೀಡಿದರು-

ಈ ಶಾಸನದಲ್ಲಿ ದಾನ ನೀಡಿದ ಭಾವೀಕೇರಿ ಗ್ರಾಮದ ಚತುಸ್ಸೀಮೆಯನ್ನೂ ಸ್ಪಷ್ಟಪಡಿಸಲಾಗಿದೆ: ಇದರ ಪೂರ್ವಕ್ಕೆ ಸೆಳೆಹಳ್ಳ, ಪಶ್ಚಿಮಕ್ಕೆ (ಅರಬಿ) ಸಮುದ್ರ, ಉತ್ತರ ದಕ್ಷಿಣ ದಿಕ್ಕುಗಳಲ್ಲಿ ನೆಟ್ಟಕಲ್ಲು (ಗಡಿಕಲ್ಲು ?) ಗಳೂ ತ್ರಿಕೋಣಕಲ್ಲೂ ಇವೆ.

ಇದುವರೆಗೆ ಗೊತ್ತಿರುವಂತೆ, ಭಾವೀಕೇರಿ ಶಿಲಾಶಾಸನವು ವೀರಬುಕ್ಕರಾಯನ ಪ್ರಾಚೀನತಮ ಶಾಸನಗಳಲ್ಲಿ ಒಂದಾಗಿದೆ; ಉತ್ತರ ಕನ್ನಡದ ಮಟ್ಟಿಗೆ ಸಧ್ಯಕ್ಕೆ ಇದೇ ಮೊದಲನೆಯ ವಿಜಯನಗರ ಶಾಸನವಾಗಿದೆ.[2] ಈ ದಾಖಲೆಯನ್ನಾಧರಿಸಿ ಹೇಳುವುದಾದರೆ ವಿಜಯನಗರದ ಬುಕ್ಕರಾಯನ ಕಾಲದಲ್ಲಿ ಉತ್ತರ ಕನ್ನಡದ ಅಂಕೋಲೆಯನ್ನೊಳಗೊಂಡಂತೆ ದಕ್ಷಿಣ ಭಾಗವು ಆ ಸಾಮ್ರಾಜ್ಯದ ಅಂಕಿತದಲ್ಲಿತ್ತು.

ಶಾಸನೋಕ್ತ ಕ್ರಿಯಾಶಕ್ತಿ ಯತೀಶ್ವರರನ್ನು 'ನಮ್ಮ ಶ್ರೀಗುರು' (ರಾಜಗುರು) ಎಂದು ಸಂಬೋಧಿಸಲಾಗಿದೆ. ಇವರು ಸೊರಬ [3] ಹಾಗೂ ಶಿಕಾರಿಪುರ [4] ಶಾಸನಗಳಲ್ಲಿ ಉಲ್ಲೇಖಿತಗೊಂಡ ಕಾಶಿವಿಲಾಸ ಕ್ರಿಯಾಶಕ್ತಿ ಯತೀಶ್ವರರಾಗಿರಬಹುದು. ಬಳ್ಳಿಗಾವೆ ಪ್ರದೇಶದಲ್ಲಿ ಕಾಳಾಮುಖ ಶೈವಮುನಿಗಳ ಒಂದು ದೊಡ್ಡ ಪರಂಪರೆಯೇ ಇತ್ತೆಂದು ಇಲ್ಲಿ ಸ್ಮರಿಸಿಕೊಳ್ಳಬೇಕು.[5] ಭಾವೀಕೇರಿ ಶಿಲಾಶಾಸನ ತಿಳಿಸುವಂತೆ ಕ್ರಿಯಾಶಕ್ತಿಗಳ ಪರಂಪರೆ ಮತ್ತು ಪ್ರಭಾವವು ವಿಜಯನಗರ ಬುಕ್ಕರಾಯನ ಕಾಲದಲ್ಲೂ ಮುಂದುವರೆಯಿತು. ಇವರು ರುದ್ರನ ಹನ್ನೊಂದು ರೂಪಗಳಲ್ಲಿ ಒಂದಾದ ಸ್ವಯಂಭೂ ತ್ರಿಯಂಬಕನ ಆರಾಧಕರಾಗಿದ್ದರು [6]

ಭಾವೀಕೇರಿ ಶಾಸನದಲ್ಲಿ ಪ್ರಾಯಶಃ ಮೊದಲ ಬಾರಿಗೆ ಅಲ್ಲಿಯ ಮಹಾ ಪ್ರಧಾನನಾಗಿದ್ದ ಬಸವಯ್ಯ ದಂಡನಾಯಕನನ್ನೂ ಉಲ್ಲೇಖಿಸಲಾಗಿದೆ. ಆತನ ಕಾಲದ ಅಂಕೋಲೆನಾಡು ಬೇಲೆಕೇರಿಯಂಥ ಬಂದರುಗಳನ್ನೊಳಗೊಂಡಿದ್ದು ವಿದೇಶಿ ವ್ಯಾಪಾರ ವಾಣಿಜ್ಯದ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದಿತ್ತು. ಬುಕ್ಕರಾಯನ ಆಡಳಿತದಲ್ಲಿ ಉತ್ತರ ಕನ್ನಡ ಭಾಗದಲ್ಲಿ ಆಳಿದ ದಂಡನಾಯಕರಲ್ಲಿ ಈತ ಮೊದಲಿಗನೂ,

ಪ್ರಮುಖನೂ ಆಗಿದ್ದಿರಬಹುದು. ಇಮ್ಮಡಿ ಹರಿಹರನ ದಂಡನಾಯಕನಿಗಿಂತ ಕನಿಷ್ಠ ಹದಿನಾರು ವರ್ಷಗಳ ಹಿಂದೆಯೇ ಈತ ಅಂಕೋಲೆ ನಾಡಿನಲ್ಲಿ ಆಳುತ್ತಿದ್ದ.[7]

ಈ ಶಾಸನದಲ್ಲಿ ನಮೂದಿತವಾದ ಗೋಕರ್ಣ ಕ್ಷೇತ್ರ, ಅಂಕೋಲೆನಾಡು ಹಾಗೂ ಭಾವಿಕೇರಿ ಊರುಗಳೆಲ್ಲ ಅದೇ ಹೆಸರಿನಲ್ಲಿ ಕರೆಯಲಾದ ಸ್ಥಳಗಳಾಗಿದ್ದು, ಇಂದಿಗೂ ಹೆಸರುವಾಸಿಯಾಗಿವೆ. ಬುಕ್ಕರಾಯನು ತನ್ನ ರಾಣಿಯಾಗಿದ್ದ ಹೊನ್ನಾದೇವಿಯ ಜೊತೆಗೂಡಿ ಗೋಕರ್ಣಕ್ಕೆ ೧೩೭೪ ರಲ್ಲಿ ತೀರ್ಥಯಾತ್ರೆಗೆ ಬಂದಿದ್ದ. ಆಗ ರಾಣಿಯವರು ಅಲ್ಲಿಯ ಛತ್ರಕ್ಕೆ ದತ್ತಿ ನೀಡಿದ್ದುಂಟು. ಇದೇ ರೀತಿ ಅಂಕೋಲೆ ನಾಡಿನ ಇನ್ನೂ ಹಲವು ಶಾಸನಗಳು ಈ ಬಗೆಯ ದತ್ತಿಯ ವಿವರಗಳನ್ನು ನೀಡುತ್ತವೆ.[8]

ಅಂಕೋಲೆಯಿಂದ ಸುಮಾರು ಮೂರು ಕಿ. ಮೀ. ದೂರದಲ್ಲಿರುವಭಾವಿಕೇರಿ ಆ ತಾಲೂಕಿನಲ್ಲೇ ಅತಿದೊಡ್ಡ ಗ್ರಾಮವಾಗಿದೆ. ಅಲ್ಲಿರುವ ಹಲವು ಭಾವಿಗಳಿಂದಾಗಿ ಆ ಊರಿಗೆ ಆ ಹೆಸರು ಅನ್ವರ್ಥವಾಗಿ ಬಂದಿರಬೇಕು. ಈ ಊರಲ್ಲಿ ಗೋವೆ ಕದಂಬರ ಕಾಲದ ಸ್ವಾರಸ್ಯಕರವಾದ ವೀರಗಲ್ಲುಗಳೂ, ಮಹಾಸತಿಕಲ್ಲುಗಳೂ ನೋಡಸಿಗುತ್ತವೆ.[9] ಈಗಿನ ಅಂಕೋಲೆ ವಿಜಯನಗರ ಕಾಲದಲ್ಲಿ "ಅಂಕೊಲೆ ನಾಡು" ಆಗಿತ್ತು. ಕದಂಬ-ಚಾಳುಕ್ಯರ ಕಾಲಕ್ಕಾಗಲೇ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದ ಈ ಊರು ವಿಜಯನಗರ ಅರಸರ ಆಡಳಿತದಲ್ಲಿ ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಿತು. ಈ ಊರ ಹೆಸರು ಮೂಲತಃ ಸಸ್ಯವಾಚಕವಾಗಿದ್ದು, **ಅಂಕೊಲೆ (ಆಲಂಗಿಯಂ ಲಮೆರಕು)** ಎಂಬ ಸಸ್ಯದಿಂದ ಬಂದಿದೆ. ಇದನ್ನು ಬಳಿಯಾಗಿ (ಟೋಟೆಂ) ಸ್ಥಳೀಯ ಹಾಲಕ್ಕಿ ಒಕ್ಕಲಿಗರು ಆರಾಧಿಸುತ್ತಾರೆ. ಭಾವಿಕೇರಿಯಲ್ಲಿ ಪತ್ತೆಯಾದ ಹನ್ನೊಂದನೆಯ ಶತಮಾನದ ಒಂದು ವೀರಗಲ್ಲು ಶಾಸನದಲ್ಲಿ ಇದರ ಪ್ರಾಚೀನತಮ ಉಲ್ಲೇಖ (ಅಂಕೊಲೆ) ಬಂದಿದೆ.[10] ಭಾವಿಕೇರಿಯ ಪೂರ್ವಕ್ಕಿರುವ ಸೆಳೆಯ ಹಳ್ಳವನ್ನು ಈಗ 'ಚಳ್ಳಿಹಳ್ಳ', 'ಶಳೆ ಹಳ್ಳ' ಎಂದೂ ಕರೆಯುತ್ತಾರೆ.[11]

ಒಟ್ಟಿನಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಇದುವರೆಗೆ ದೊರೆತ ಎಪ್ಪತ್ತೊಂದು ವಿಜಯನಗರ ಶಾಸನಗಳಲ್ಲಿ ಭಾವಿಕೇರಿ ಶಿಲಾಶಾಸನವು ಮೊದಲನೆಯದೆಂದು ಸದ್ಯಕ್ಕೆ ಹೇಳಬಹುದು. ಇದರ ಶೋಧನೆಯಿಂದ ಬುಕ್ಕರಾಯನ ಕಾಲದಲ್ಲಿ ಅಂಕೋಲೆ ನಾಡಿನಲ್ಲಿ ಆಳುತ್ತಿದ್ದ ಮಹಾಪ್ರಧಾನ ಬಸವಯ್ಯ ದಂಡನಾಯಕ ಬೆಳಕಿಗೆ ಬಂದಂತಾಯಿತು. ಅಲ್ಲದೆ ಆತನು ಅವನ ರಾಜಗುರು ಕ್ರಿಯಾಶಕ್ತಿ ಯತೀಶ್ವರರಿಗೆ ಭಾವಿಕೇರಿ ಗ್ರಾಮ ದಾನ ನೀಡಿದ್ದು ಅದರ ಆದಾಯವು ನಂತರ ಗೋಕರ್ಣದ ಮಹಾಬಲೇಶ್ವರ ದೇವರ ಪೂಜೆಗಾಗಿ ಹಾಗೂ ಅಲ್ಲಿನ ಛತ್ರದಲ್ಲಿ ಭೋಜನಕ್ಕಾಗಿ ವಿನಿಯೋಗವಾಗಿದ್ದ ವಿಷಯವೂ ಈ ಶಾಸನದಿಂದ ಮೊದಲ ಬಾರಿಗೆ ತಿಳಿದು ಬರುತ್ತದೆ. ಅಂಕೋಲೆ ತಾಲೂಕಿನಲ್ಲಿ ಇದುವರೆಗೆ ದೊರೆತ ಹತ್ತು ವಿಜಯನಗರ ಶಾಸನಗಳಲ್ಲಿ ಕೂಡ ಇದೇ ಪ್ರಾಚೀನತಮವಾದ (ಬುಕ್ಕರಾಯನಕಾಲದ) ಶಿಲಾ ಶಾಸನವೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಶಾಸನಪಾಠ 12

೧. ಓಂ ಶ್ರೀ ಗಣಾಧಿಪತಯೇ ನಮಃ। ನಮಸ್ತುಂಗ ಶಿರಶ್ಚುಂ
೨. ಬಿ ಚಂದ್ರ ಚಾಮರ ಚಾರವೇ। ತ್ರಯಿಲೋಕ್ಯ ನಗರಾರಂ
೩. ಭಂ ಮೂಲಸ್ತಂಭಾಯ ಶಂಭವೇ ॥ ಸ್ವಸ್ತಿ ವಿಜಯಾಭ್ಯು
೪. ದಯ ಸಕ ವರುಷ ೧೨೮೪ ನೆಯ ಪ್ಲವ ಸಂವತ್ಸರದ ಕಾ
೫. ರ್ತಿಕ ಶು ೧ ಆ ಶ್ರೀ ಮನು ಮಹಾಮಂಡಲೇಶ್ವರಂ ಶ್ರೀ ವೀರ ಬು
೬. ಕ್ಕರಾಯನ ವಿಜಯರಾಜ್ಯಾಭ್ಯುದಯಕಾಲ ಶ್ರೀ ಮನು ಮಹಾ ಪ್ರ
೭. ದಾನಂ ಬಸವೆಯ ದಣ್ಣಾಯಕರು ಆ ಬುಕ್ಕರಾಯನ ಕಯಿಯ್ಯಲು
೮. ಪ್ರಿತ್ಯರ್ಥ. ಧಾರಾಪೂರ್ವಕವಾಗಿ ಕೊಂಡು ಅಂಕೊಲೆನಾಡಪ್ರೊಳ್ಗಣ ಬಾವಿಯ
೯. ಕೇರಿಯ ಶಾಸನದ ಕ್ರಮವೆಂತೆಂದಡೆ ಆ ಊರ ಚತುಸ್ಸಿಮೆಯ ವಿವ
೧೦. ರ ಮೂಡ ಸೆಳೆಯ ಹಳ್ಳ। ತೆಂಕ ಬಡಗಡಿಯ ನಟ್ಟಕಲ್ಲು। ಪಡುವ
೧೧. ಸಮುದ್ರ ಮತ್ತು ತ್ರಿಕೋಣನಟ್ಟಕಲ್ಲು। ಯಿಂತೀ ಚತುಸ್ಸೀಮೆ ಸಮನ್ವಿತ ವ
೧೨. ಹ ಗ್ರಾಮವನು। ನಮ್ಮ ಶ್ರೀಗುರು ಕ್ರಿಯಾಶಕ್ತಿ ಯತೀಶ್ವರ ಶ್ರೀಪಾದ (ಪದ್ಮ) ಪ್ರಿ
೧೩. ತ್ಯರ್ಥ ಧಾರಾಪೂರ್ವಕವಾಗಿ ಕೊಟ್ಟೆಉ। ಇಂತಪ್ಪುದಕ್ಕೆ ಆ ಬಸವೆಯ
೧೪. ದಣಾಯ (ಕ) ರ ಪೊಪ್ಪ। ಶ್ರೀ ತ್ರಿಯಂಬಕ। ಶ್ರೀ ಕ್ರಿಯಾಶಕ್ತಿ ಯತೀಶ್ವರರು
೧೫. ಈ ಗ್ರಾಮವನು ಪ್ರತಿಷ್ಠಾ(ಪಿ)ಸಿ ಶ್ರೀ ಗೋಕರ್ನ ಕ್ಷೇತ್ರದಲು ಮಹಾಬಲ ದೇ
೧೬. ವರ ಪೂಜಾರ್ಥವಾಗಿಊ। ಅಲ್ಲಿಯ ಛತ್ರದ ಬ್ರಾಹ್ಮ (ಣ)ರ ಭೋಜನಕ್ಕೆ
೧೭. ವೂ ದಾರಾಪೂರ್ವಕವಾಗಿ ಕೊಟ್ಟೆಉ। ಯಿಂತಪ್ಪುದಕ್ಕೆ ಕ್ರಿಯಾ ಶ
೧೮. ಕ್ತಿ ಯತೀಶ್ವರರ ಪೊಪ್ಪ। ಶ್ರೀ ತ್ರಿಯಂಬಕ। ಸ್ವದತ್ತಾಂಪರದತ್ತಾಂ ವಯೊ
೧೯. ಹರೇತ ವಸುಂದರಾಂ। ಷಷ್ಟಿರ್ವರುಷ ಸಹಸ್ರಾಣಿ ವಿಷ್ಟಾಯಾಂ
೨೦. ಜಾಯತೇ ಕ್ರಿಮಿಃ। ದಾನಂ ವಾ ಪಾಲನಂಯೋ ವೇತಿ ದಾನಾತ್ ಶ್ರೇಯೋನ
೨೧. ಪಾಲನಂ। ದಾನಾತ್ ಸ್ವರ್ಗಮವಾಪ್ನೋತಿ ಪಾಲನದಚ್ಯುತಪ
೨೨. ದಂ। ಸಮನ್ಯೋಯಂ ಧರ್ಮಸೇತು ನೃಪಾನಾಂ ಕಾಲೆ ಕಾಲೇ
೨೩. ಪಲನಿಯೋಭವದ್ಭಿಃ॥ ಸರ್ವನೇತಾನ್ಭವಿನಃ ಪಾರ್ಥಿವೇನ್ದ್ರಾನ್
೨೪. ಬೂಯೋ ಬೂಯೋ ಯಾಚತೇ ರಾಮಚಂದ್ರಃ ಮಂಗ
೨೫. ಳ ಮಹಾ ಶ್ರೀ ಶ್ರೀ ಶ್ರೀ ॥

ಅಡಿಟಿಪ್ಪಣಿಗಳು

1. ಈ ಶಾಸನ ವ್ಯಾಸಂಗದಲ್ಲಿ ಸೂಕ್ತ ಸಲಹೆಗಳನ್ನು ನೀಡಿ ಉಪಕರಿಸಿದ ಪ್ರೊ|| ಶ್ರೀನಿವಾಸ ರಿತ್ತಿಯವರಿಗೆ ಕೃತಜ್ಞತೆಗಳು. ಶಾಸನ ಶೋಧನೆಯಲ್ಲಿ ನೆರವು ನೀಡಿ ಪ್ರೋತ್ಸಾಹಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಹಾಗೆಯೇ ಭಾವಿಕೇರಿಯ ಎಲ್ಲ ಗ್ರಾಮಸ್ಥರಿಗೆ, ಮುಖ್ಯವಾಗಿ ತಿಮ್ಮಣ್ಣನಾಯಕ, ಕೆ. ಕೆ. ನಾಯಕರಿಗೆ,ನನ್ನ ನಮಸ್ಕಾರಗಳನ್ನು ತಿಳಿಸಬೇಕು.
2. ನೋಡಿ, ಗುರವ, ಆರ್. ಎನ್., **ಕಾರವಾರ ಜಿಲ್ಲೆಯ ಶಾಸನಗಳು,** ಧಾರವಾಡ, ೧೯೭೫, ಪು. ೭
3. ಎಕ **VIII,** ಸೊರಬ–೩೭೫ (೧೩೪೭)
4. ಎಕ **VII,** ಶಿಕಾರಿಪುರ–೨೮೧ (೧೩೬೮)
5. ಬಳ್ಳಿಗಾವೆ ಹನ್ನೆರಡು–ಹದಿಮೂರನೆಯ ಶತಮಾನಗಳಲ್ಲಿ ಒಂದು ಖ್ಯಾತ ಕಾಳಾಮುಖ ಶೈವ ಕೇಂದ್ರವಾಗಿತ್ತೆಂಬುದು ಅಲ್ಲಿಯ ಕೇದಾರಮಠ (ಕೋಡಿಮಠ) ಹಾಗೂ ಇತರೆಡೆಗಳಲ್ಲಿರುವ ಹಲವು ಶಾಸನಗಳು ರುಜುವಾತುಪಡಿಸುತ್ತವೆ.
6. ವಾಸ್ತವಿಕವಾಗಿ ಈ ಕ್ರಿಯಾಶಕ್ತಿ ಯತೀಶ್ವರರಿಗೆ ನೀಡಿದ ದತ್ತಿ ಗ್ರಾಮಗಳಲ್ಲಿ ಒಂದಕ್ಕಂತೂ "ತ್ರ್ಯಯಂಬಕಪುರ" ಎಂದೇ ಹೆಸರಿರುವುದೂ ಸ್ವಾರಸ್ಯಕರವಾಗಿದೆ. **ನೋಡಿ, ಎಆರ್ಎಂಎಡಿ,** ೧೯೪೧, ಪು. ೧೫೭–೭೦.
7. ನೋಡಿ, ಸೂರ್ಯನಾಥ ಕಾಮತ್, ಯು, (ಸಂ) **ಉತ್ತರ ಕನ್ನಡ ಜಿಲ್ಲೆ ಗೆಝೆಟಿಯರ್,** ಬೆಂಗಳೂರು, ೧೯೮೫, ಪು. ೧೨೫
8. ಅದೇ
9. ಇಲ್ಲಿ ದೊರೆತ ವೀರಗಲ್ಲು ಮಹಾಸತಿಕಲ್ಲುಗಳನ್ನು ಕುರಿತು ವಿಶೇಷ ವ್ಯಾಸಂಗ ನಡೆಸಿದ್ದು ಅವುಗಳ ವಿವರಗಳು ಬೇರೊಂದು ಲೇಖನದಲ್ಲಿ ಬರುತ್ತವೆ.
10. ಈ ವೀರಗಲ್ಲು ಶಾಸನದಲ್ಲಿ ಗೋವೆ ಕದಂಬ ಅರಸ ಮೊದಲನೆಯ ಜಯಕೇಶಿಯ ಉಲ್ಲೇಖವಿದೆ.
11. ಈ ಮಾಹಿತಿಯನ್ನು ನೀಡಿದ ಶ್ರೀ ಎಸ್.ಬಿ. ನಾಯಕರಿಗೆ ಕೃತಜ್ಞತೆಗಳು ಸಲ್ಲುತ್ತವೆ.
12. ಶಾಯಿಯಿಂದ ತೆಗೆದ ಶಾಸನದ ಪಡಿಯಚ್ಚನ್ನು ಆಧರಿಸಿ ಪಾಠವನ್ನು ಓದಲಾಗಿದೆ.

ಸನ್ನತಿಯ ೨೦೦೦ ವರ್ಷದ ಕೋಟಿ

● ಎಸ್. ಕೆ. ಜೋಶಿ

ಗುಲಬರ್ಗಾ ಜಿಲ್ಲೆಯ ಚಿತಾಪುರ ತಾಲೂಕಿನ ಸನ್ನತಿಯು ಈಗ ಒಂದು ಕುಗ್ರಾಮವಾಗಿ ತೋರಿದರೂ, ಅದು ಪ್ರಾಚೀನ ಕರ್ನಾಟಕದಲ್ಲಿ ಬೌದ್ಧ ಪರಂಪರೆಯ ಅದ್ವಿತೀಯ ಸ್ಥಾನವಾಗಿತ್ತೆಂದು ಅಲ್ಲಿ ಇತ್ತೀಚೆಗೆ ಕಂಡು ಹಿಡಿದ ಬೌದ್ಧ ಸಂಪ್ರದಾಯದ ಶಿಲಾಲೇಖನಗಳಿಂದಲೂ, ಭಗ್ನ ಶಿಲಾ ಮೂರ್ತಿಗಳಿಂದಲೂ, ಸ್ತೂಪಗಳೆಂದು ಸಂಭೋಧಿಸಲ್ಪಡುವ ಎತ್ತರದ ಹಾಗೂ ವಿಸ್ತಾರವಾದ ದಿಬ್ಬಗಳಿಂದಲೂ ಬೆಳಕಿಗೆ ಬಂದಿದೆ. ಈ ಹಿಂದೆ, ಮೊಟ್ಟ ಮೊದಲಾಗಿ ಅಂದರೆ ಕ್ರಿ. ಶ 1956 ರಲ್ಲಿ ಬೌದ್ಧ ಪರಂಪರೆಯ ಶಿಲಾಲೇಖನಗಳ ಹಾಗೂ ಸಾಂಸ್ಕೃತಿಕ ಅವಶೇಷಗಳ ಬಗ್ಗೆ ಗುಲಬರ್ಗಾ ಹಾಗೂ ಅದರ ಸುತ್ತಲಿನ ಪರಿಸರದಲ್ಲಿ ಸರ್ವೇಕ್ಷಣೆಯನ್ನು ಕೈಕೊಂಡಾಗ, ಶ್ರೀ ಕಪಟ್ರಾಳ್ ಕೃಷ್ಣರಾವ ಅವರಿಂದ ಈ ಬೌದ್ಧ ಪರಂಪರೆಯ ನೆಲೆಯು ಕಂಡು ಹಿಡಿಯಲ್ಪಟ್ಟಿತು. ತದನಂತರ ಕ್ರಿ. ಶ. 1964 ರಲ್ಲಿ, ಡಾ. ಎಸ್. ನಾಗರಾಜು ಅವರು ಈ ಪ್ರದೇಶದ ವಿಶೇಷವಾದ ಶೋಧನೆಗೈದು, ಸನ್ನತಿಯ ಅವಶೇಷಗಳ ಮಹತಿಯನ್ನು ಕುರಿತಾದ ಲೇಖನವೊಂದನ್ನು ಪ್ರಕಟಿಸಿದರು. ತದನಂತರ ಸುಮಾರು ಕಾಲದಲ್ಲಿ ಈ ನೆಲೆಯನ್ನು ಎಷ್ಟೋ ಪ್ರಾಚ್ಯ ವಿದ್ವಾಂಸರು ಸರ್ವೇಕ್ಷಿಸಿ, ಬೇರೆ ಬೇರೆ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇಣುಕಿ ನೋಡಿ ಅದನ್ನು ಸಂಪನ್ನಗೊಳಿಸಿದ್ದಾರೆ. ಅಂಥವರಲ್ಲಿ ಡಾ. ಎಮ್. ಶೇಷಾದ್ರಿ ಹಾಗೂ ಡಾ. ಪಿ. ಬಿ. ದೇಸಾಯಿ[1] ಯವರನ್ನು ಹೆಸರಿಸಬಹುದು. ಆದಾಗಿ ಈ ಸನ್ನತಿಯು ಬೌದ್ಧನೆಲೆಯ ಮಹತ್ತರ ತಾಣವಾಗಿದ್ದು ಅದರ ಪರಂಪರೆಗೆ ಸಂಬಂಧಿಸಿದ ಶಿಲಾಮೂರ್ತಿಗಳಿಂದಲೂ, ಶಿಲಾಲೇಖನಗಳಿಂದಲೂ, ಸ್ತೂಪಗಳ ಅವಶೇಷಗಳಿಂದಲೂ, ಹಮ್ಮಿಕೊಂಡು, ಕರ್ನಾಟಕದಲ್ಲಿಯೇ ಅದಕ್ಕೆ ಸರಿಸಾಟಿಯಾದ ಬುದ್ಧ ಸಾಂಸ್ಕೃತಿಯ ಸ್ಥಾನ ಬೇರಾವುದೂ ಇಲ್ಲವೆಂದು ಹೇಳಿಕೊಳ್ಳುವಂತಾಗಿದೆ. ಬಹುಶಃ ದಕ್ಷಿಣ ಭಾರತದಲ್ಲಿ, ಆಂಧ್ರದ ಅಮರಾವತಿಯನ್ನು ಪ್ರಥಮ ಗಣನೆಗೆ ತೆಗೆದುಕೊಂಡರೆ, ಸನ್ನತಿಯು ದ್ವಿತೀಯ ಸ್ಥಾನವನ್ನು ಗಳಿಸುತ್ತದೆ.

---

1. ದೇಸಾಯಿ, ಪಿ. ಬಿ.; 1968 : "ಎ ನ್ಯೂ ಬುದ್ಧಿಸ್ಟ್ ಸೆಂಟರ್", ಜರ್ನಲ್ ಕರ್ನಾಟಕ ಯುನಿವ್ಹರ್ಸಿಟಿ (ಸೋಷಿಯಲ್ ಸೈನ್ಸ್) ಸಂಪುಟ IV ಪುಟಗಳು 158—163.


ಸನ್ನತಿಯ ಪರಿಸರದಲ್ಲಿ ಹವ್ಮಿಕೊಂಡ ಪ್ರಾಚ್ಯ ಅವಶೇಷಗಳಲ್ಲಿ ಅಲ್ಲಿಯ ರಕ್ಷಣಾ ಕೋಟೆಯ ಗೋಡೆಗಳೂ ಕೂಡ ಎದ್ದು ಕಾಣುತ್ತವೆ. ಅವುಗಳ ಬಗ್ಗೆ ಈ ವರೆಗೂ ಯಾವ ವಿದ್ವಾಂಸರ ಗಮನವೂ ಹರಿದಿರಲಿಲ್ಲ. ಈ ಹಿನ್ನೆಲೆಯಲ್ಲಿ, ನಾನು 1980 ಎಪ್ರಿಲ್ ತಿಂಗಳಲ್ಲಿ ಅದರ ರಕ್ಷಣಾ ಗೋಡೆಗಳ ಸರ್ವೀಕ್ಷೆ ಕೈಕೊಂಡು ವಿಶಧವಾಗಿ ಅಭ್ಯಸಿಸಿದೆ.

ಸನ್ನತಿಯ ಪರಿಸರವು ಸಮಪಾತಳಿಯ ಪ್ರದೇಶವಾಗಿದ್ದು, ಪದರು ಕಲ್ಲು ಹಾಗೂ ಸುಣ್ಣದ ಕಲ್ಲುಗಳ ಸ್ತರಗಳ ಮೇಲೆ ಮುಚ್ಚಲ್ಪಟ್ಟ ಕಪ್ಪು ಎರೆಯ ಮಣ್ಣಿನಿಂದ ಕೂಡಿದೆ. ಪಕ್ಕದಲ್ಲಿ ಹರಿದ ಭೀಮೆಯು ಮೊದಲು ದಕ್ಷಿಣವಾಹಿನಿಯಾಗಿದ್ದು ಕೂಡಲೇ ಅರ್ಧವೃತ್ತಾಕಾರವಾಗಿ ಮುಂದುವರಿದು ದಕ್ಷಿಣ–ಪೂರ್ವಾಭಿಮುಖವಾಗಿ, ಆಮೇಲೆ ಪೂರ್ವದಿಸೆಯಲ್ಲಿ ಇಲ್ಲಿ ಹರಿಯುತ್ತಾಳೆ. ಈ ಅರ್ಧ ವರ್ತುಲದ ಕ್ಷೇತ್ರದಲ್ಲಿ, ಎರಡು ಅರ್ಧವೃತ್ತಗಳ ಕೋಟೆಯ ಗೋಡೆಗಳು ನಿರ್ಮಾಣಗೊಂಡಿದ್ದು, ಈ ಎರಡೂ ರಕ್ಷಕ ಗೋಡೆಗಳ ಮಧ್ಯದ ಎತ್ತರ ಪ್ರದೇಶದಲ್ಲಿ, ಸನ್ನತಿ ಗ್ರಾಮವು ಇದೆ. ಈ ಅರ್ಧ ವರ್ತುಳಾಕಾರದ ಪ್ರದೇಶವು ಈ ಭಾಗದಲ್ಲಿ ಅತೀ ಎತ್ತರದ ಪಾತಳಿಯನ್ನು ಹೊಂದಿದೆ. ನದಿಯು ಈ ಭಾಗದಲ್ಲಿ ಪ್ರವಹಿಸಿ ನಿರ್ಮಿಸಿದ ಕೊಳ್ಳವನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ, ಅದರ ದಕ್ಷಿಣದ ಚಲನೆಯು ನೇರವಾಗಿರದೆಯೇ, ಅಂಶತಃ ದಕ್ಷಿಣ ಹಾಗೂ ದಕ್ಷಿಣ–ಪಶ್ಚಿಮಾಭಿಮುಖವಾಗಿದ್ದು, ತದನಂತರದ ದಕ್ಷಿಣಕ್ಕೆ ತಿರುಗಿ, ತದನಂತರ ಅರ್ಧವರ್ತುಲಾಕಾರದಲ್ಲಿ ತಿರುಗಿ ಮುಂದೆ ಪೂರ್ವಗಾಮಿಯಾಗುತ್ತದೆ. ಈ ತಿರುವಿನಲ್ಲಿ, ನದಿಯು ಬಹಳ ಆಳವಾಗಿದ್ದು, ತಿರುಗುಣಿಯ ಮಡುಗಳೂ ಹಾಗೂ ಅವುಗಳಲ್ಲಿ ಮೊಸಳೆಗಳು ಇವೆ. ಈ ರೀತಿ ಸ್ವಾಭಾವಿಕವಾಗಿ ಲಭ್ಯವಾಗಿರುವ ನಿಸರ್ಗದ ಕೊಡುಗೆಯಾಗಿರುವ ರಕ್ಷಣಾ ಅನುಕೂಲತೆಗಳ ಅಂಶಗಳ ಲಾಭ ನಿರೀಕ್ಷಿಸಿ ಅರ್ಧ ಚಂದ್ರಾಕೃತಿಯ ವಿನ್ಯಾಸದಲ್ಲಿ, ದಕ್ಷಿಣ ಹಾಗು ಪೂರ್ವ ಭಾಗದ ನದಿಯ ಕಂಸುಗಳನ್ನು ಜೋಡಿಸುವಂತೆ, ರಕ್ಷಣಾ ಕೋಟೆಯ ಗೋಡೆಯನ್ನು ನಿರ್ಮಿಸಲಾಗಿದೆ. ಈ ರೀತಿ ಸೀಮಿತವಾಗಿ ರಕ್ಷಣಾ ಬಂಧನಕ್ಕೆ ಒಳಗಾದ ಕ್ಷೇತ್ರವು ಮಹಾಪೂರಗಳಿಂದ ಧಕ್ಕೆ ತಗಲದಂತೆ ಇದೆ. ಇಂಥ ಸ್ವಾಭಾವಿಕ ರಕ್ಷಣೆಗೆ, ಮೇಲೆ ಹೇಳಿದಂತೆ, ನದಿಯ ಪ್ರವಾಹದ ದಕ್ಷಿಣ ಹಾಗೂ ದಕ್ಷಿಣ–ಪಶ್ಚಿಮ ದಿಸೆಗಳ ನೆಗೆತ, ಹಾಗೂ ತದನಂತರದ ಪೂರ್ವದ ನುಸುಳು ಮತ್ತು ಎತ್ತರವಾದ ನಿರ್ಭೀತ ಪ್ರದೇಶಗಳೇ ದೃಢವಾದ ಸಾಕ್ಷಿಯಾಗಿವೆ. ಈ ತರಹ, ಸವಕಳಿ ಹಾಗೂ ಭರತಿಗಳೆಂಬ ನದಿಯ ನೈಸರ್ಗಿಕ ಕ್ರಿಯೆಯನ್ನು, ಅದರ ಆಚೆಯ ದಡದ ಮೇಲಾಗುವ ಪ್ರತಿಯಾದ ಪರಿಣಾಮವನ್ನು ನಿರೀಕ್ಷಿಸಿದರೆ, ನದಿಯ ಆಚೆಯ ಬಲದಂಡೆಯು ತುಲನಾತ್ಮಕವಾಗಿ ಕೆಳಗಿನ ಪಾತಳಿಯಲ್ಲಿ ಇದ್ದು, ಅದರ ಅಂಚೆಯನ್ನು ಸದಾಕಾಲವೂ ಕೊರೆಯುತ್ತ ಹೋಗಿ ಸವಕಳಿಯನ್ನು ಮಾಡಿದೆ. ಅದಾಗಿ ರಕ್ಷಣಾ ದೃಷ್ಟಿಯಿಂದ ಅದು ಅಭದ್ರ

ಹಾಗೂ ಅಸುರಕ್ಷಿತ. ಆದರೆ ನದಿಯ ಎಡದಂಡೆಯು ಸ್ವಾಭಾವಿಕವಾಗಿ ಸಾಕಷ್ಟು ಎತ್ತರವಿರುವದರಿಂದ, ನದಿಯು ಮಹಾಪೂರದಲ್ಲಿ ಎಷ್ಟೇ ಹೆದ್ದೆರೆಯಾಗಿ ಏರಿ ಬಂದರೂ ಅದರ ಯಾವದೇ ಭಾಗಕ್ಕೆ ಧಕ್ಕೆ ತಗಲುವದಿಲ್ಲ. ಅಲ್ಲದೆ ಆಳವಾದ ನದಿಯು ಈ ಭಾಗಕ್ಕೆ ನೈಸರ್ಗಿಕವಾದ ನೀರಿನ ಕಂದಕವಾಗಿ ಪರಿಣಮಿಸಿರುವದರಿಂದ, ಹಾಗೂ ಮೊಸಳೆಗಳಂಥ ಭಯಾನಕ ಜಲಚರ ಪ್ರಾಣಿಗಳ ವಾಸಸ್ಥಾನವಾಗಿರುವದರಿಂದ, ಎಷ್ಟೇ ಬೇಸಿಗೆಯ ಪ್ರಭಾವವಾದರೂ, ನೀರಿನ ಆಳಮಾತ್ರ ಎಂದಿಗೂ ಕಡಿಮೆಯಾಗ ದಿರುವದರಿಂದ, ಮತ್ತು ಈ ಪ್ರದೇಶವು ವೈರಿಗಳ ದಾಳಿಯನ್ನು ಅಂಕಿತದಲ್ಲಿ ಇಟ್ಟು ಕೊಳ್ಳುವಂಥ ಅಂಶದಿಂದ ಕೂಡಿರುವದರಿಂದ, ದುರ್ಗ ರಚನಾ ಅಭಿಯಂತರು ಇಂಥ ಆಯಕಟ್ಟಿನ ಸ್ಥಳವನ್ನು ಕೋಟೆ ನಿರ್ಮಾಣಕ್ಕಾಗಿ ಪ್ರಶಾವಾಸ್ತುವ್ಯಕ್ಕೆ ಈ ಸ್ಥಳವನ್ನು ಆಯ್ಕೆ ಮಾಡಲಾಯಿತು.

ಈ ಪ್ರದೇಶದಿಂದ ಎಷ್ಟೋ ಶಿಲಾಲೇಖನಗಳು ದೊರೆತರೂ ಕೂಡ, ಅವುಗಳಲ್ಲಿ ಒಂದಾದರೂ ಕೂಡ ಈ ವಿಭಾಗದ ರಾಜಕೀಯ ವೈಭವದ, ಅಧಿಕಾರ ವ್ಯಾಪ್ತಿಯ ಭಾಗ, ಅಥವಾ ರಾಜಮನೆತನಗಳ ಬಗ್ಗೆ ಸ್ಪಷ್ಟವಾಗಿ ಯಾವದೇ ಅಂಶವನ್ನು ಸಾರುವದಿಲ್ಲ. ಸನ್ನತಿಯ ಪೂರ್ವಕ್ಕಿರುವ ಆಂಧ್ರ ಪ್ರದೇಶದ ಸ್ಥಳಗಳಾದ ಅಮ ರಾವತಿ ಹಾಗೂ ನಾಗಾರ್ಜುನ ಕೊಂಡಗಳಲ್ಲಿಯ, ಹಾಗೂ ಪಶ್ಚಿಮ-ದಕ್ಷಿಣಕ್ಕಿರುವ ಬನವಾಸಿಯಲ್ಲಿಯ ಶಿಲಾಲೇಖನಗಳು ಕೂಡ, ಸನ್ನತಿಯು ರಾಜಕೀಯ ಕೇಂದ್ರವಾಗಿ ತ್ತೆಂದು ಅಪ್ಪಿತಪ್ಪಿಯಾಗಿ ವಿವರಿಸಿಲ್ಲ. ಈವರೆಗೆ ಸನ್ನತಿ ಪರಿಸರದಲ್ಲಿ ದೊರೆತ ಶಿಲಾ ಲೇಖನಗಳು, ಇಲ್ಲಿಯ ಮಹಾಚೈತನ್ಯಕ್ಕೆ ಸಮರ್ಪಿಸಿದ ಬಹುಶಃ ದತ್ತಿ ದಾನಗಳ, ಉಂಬಳಿಗಳ, ಸ್ಮೃತಿಗಳ ಅಂಶಗಳಾಗಿವೆಯೇ ಹೊರತು, ಆಳಿದ ರಾಜ ಹಾಗೂ ರಾಜ್ಯಗಳ ಬಗ್ಗೆ ಕಿಂಚಿತ್ತಾದರೂ ಸ್ಮರಿಸಿಲ್ಲ. ಮಾಂಡಲೀಕರ ಆಡಳಿತೆಯ ಕೇಂದ್ರ ವಾಗಿತ್ತೆಂಬ ಬಗ್ಗೆಯೂ ಒಂದು ಮಾತಿಲ್ಲ, ಆದರೆ ಇಲ್ಲಿ ದೊರೆತ ಕೆಲವು ಶಿಲಾ ಲೇಖನಗಳು, ಕೆಲ ಧಾರ್ಮಿಕ ಕ್ರಿಯೆಗಳಿಗೆ ಹಾಗೂ ರಚನಾ ಕ್ರಮಗಳಿಗೆ ದಾನ ದತ್ತಿಗಳನ್ನು ಕೆಲವು ಹೆಂಗಳೆಯರೂ ಕೊಟ್ಟ ಬಗ್ಗೆ ಸೂಚಿಸುತ್ತವೆ. ಆ ಮಹಿಳೆ ಯರು ಅಧಿಕೃತ, ರಾಜಪ್ರತಿನಿಧಿತ ಅಧಿನಾಮ (designations)ಗಳನ್ನು ಹೊಂದಿದ್ದ ರೆಂಬುದನ್ನು ಹೇಳಬಹುದು. ಅಂಥ ಅಧಿಕೃತ ಅಧಿನಾಮಗಳಲ್ಲಿ **'ಅಮಾತ್ಯಾ'**, **'ರಾಜಾ ಅಮಾತ್ಯಾ'** ಮುಂತಾದವುಗಳನ್ನು ಹೆಸರಿಸಬಹುದು. ಉದಾಹರಣೆಗಾಗಿ ಇಬ್ಬರು ಮಹಿಳೆಯರು ಕ್ರಮವಾಗಿ, ನಾಗನಿಕಾ (ನಾಗನಿಕಾ) ಹಾಗೂ ಸಘನಿಕಾ (ಸಂಘನಿಕಾ) ಎಂದು ವೈಯಕ್ತಿಕವಾಗಿ ಹೆಸರಿಸಿಕೊಂಡು, ರಾಜಪ್ರಾತಿನಿಧಿತ್ವದಲ್ಲಿ **ಅಮಾತ್ಯ** ಎಂಬ ಬಿರುದನ್ನು ಹೊಂದಿದ್ದರು. ಅಲ್ಲದೇ ಮತ್ತೊಬ್ಬ ಮಹಿಳೆಯು ಒಬ್ಬ **ರಾಜಮಾತ್ಯನ** ಪತ್ನಿಯಾಗಿದ್ದು, **ರಾಜಾಮಾತ್ಯಾ** ಎಂದು ಅಧಿಕೃತ ವಾಗಿ ಕರೆಯಿಸಿಕೊಂಡಿದ್ದಾಳೆ. ಈ ಮೇಲಣ ವಿಷಯವು ತಿಳಿಯಪಡಿಸುವದೇನೆಂದರೆ

ಈ ಪ್ರದೇಶದಲ್ಲಿ ಅಥವಾ ಇದರ ನೆರೆಹೊರೆಯ ಸ್ಥಳಗಳಲ್ಲಿ ಈ ಪ್ರದೇಶದ ಆಡಳಿತ ನಿರ್ವಹಣೆಗಾಗಿ, ಕೆಲವು ಸ್ಥಾನಿಕ ಅಧಿಕಾರಿಗಳಿದ್ದರೆಂದು ಸೂಚಿಸುತ್ತದೆ. ಆದುದರಿಂದ, ಈ ಎಲ್ಲ ಕಾರಣಗಳಿಂದ ತಿಳಿಯುವದೇನೆಂದರೆ, ಸನ್ನತಿಯು ಮೂಲಭೂತವಾಗಿ ಒಂದು ಮಹತ್ವದ ಧಾರ್ಮಿಕ ಕೇಂದ್ರವಾಗಿತ್ತೇ ವಿನಃ ರಾಜಕೀಯ ನಗರವಾಗಲೀ ರಾಜಧಾನಿಯಾಗಲೀ ಆಗಿರಲಿಲ್ಲ. ಸನ್ನತಿಯ ಈ ಸಂದಿಗ್ಧ ಪರಿಸ್ಥಿತಿಯು, ಈ ಸ್ಥಳವನ್ನು ಸರಳ ಹಾಗೂ ಸಾಮಾನ್ಯ ಮಾನವ ವಸತಿ ಪ್ರದೇಶವನ್ನಾಗಿ ನಿರ್ಮಾಣ ಮಾಡಿ, ಸರಳ ಹಾಗೂ ಚಿಕ್ಕ ಪ್ರಮಾಣದ ರಕ್ಷಣಾ ಕೋಟೆಯ ಗೋಡೆಗಳಿಂದ ಆವರಿಸಲ್ಪಟ್ಟಿತು. ಅಲ್ಲಿಯ ವಸ್ತು ಸ್ಥಿತಿಯೇ ವಿಷಯವನ್ನು ಸ್ಪಷ್ಟಪಡಿಸುವಂತೆ, ಸನ್ನತಿಯನ್ನು ಸುತ್ತುವರಿಯಲ್ಪಟ್ಟ ರಕ್ಷಣಾ ಗೋಡೆಗಳು ತೀರ ಸರಳವಾದ ನಿರ್ಮಿತ ಶೈಲಿಯೊಂದಿಗೆ, ಎರಡು ಅರ್ಧ ವರ್ತುಲಗಳಲ್ಲಿ, ಒಂದರೊಳಗೊಂದರಂತೆ ಹಮ್ಮಿಕೊಂಡಿವೆ. ಹೀಗಾಗಿ, ಆ ರಕ್ಷಣಾ ಗೋಡೆಗಳ ಮುಖ್ಯ ಉದ್ದೇಶವು ಸರ್ವೇಸಾಮಾನ್ಯವಾದ ಮಾನವ ಬದುಕನ್ನು ರಕ್ಷಿಸುವ ಪರಿಖಗಳಾಗಿ ನಿರ್ಮಾಣಗೊಳಿಸುವದಿತ್ತೇ ಹೊರತು, ಆಕ್ರಮಣವನ್ನು ಎದುರಿಸುವ ಹಾಗೂ ವೈರಿ ಸೈನ್ಯವನ್ನು ಹಿಮ್ಮೆಟ್ಟಿಸುವ ಯುದ್ಧ ಕಲೆಯ ಅಭಿಯಾಂತ್ರಿಕತೆಯ ಶಾಸ್ತ್ರೀಯ ಆಧಾರ ನಿಯಮಗಳಿಂದ ನಿರ್ಮಿಸಿದ ದುರ್ಗ ರಚನಾ ವಾಸ್ತುಶಿಲ್ಪದ ಕಕ್ಷೆಗೊಳಪಟ್ಟಿಲ್ಲ.



ಸನ್ನತಿಯ ಬಾಹ್ಯ ರಕ್ಷಣಾ ಗೋಡೆ ದಕ್ಷಿಣ-ಪೂರ್ವ ನೋಟ

ಬಾಹ್ಯ ಗೋಡೆಯು ಅರ್ಧವರ್ತುಲಾಕಾರವಾಗಿದ್ದು, ತನ್ನ 600 ಮೀಟರ ಉದ್ದಳತೆ 12–15 ಮೀಟರುಗಳ ಅಡಿಯಲ್ಲಿಯ ಅಗಲಳತೆ, 4 ಮೀಟರುಗಳವರೆಗೆ

ಮೇಲಭಾಗದಲ್ಲಿ ಅಗಲ, ಮತ್ತು 5 ರಿಂದ $5\frac{1}{2}$ ಮೀಟರುಗಳ ಒಳಎತ್ತರದ ಹಾಗೂ 3 ರಿಂದ $3\frac{1}{2}$ ಮೀಟರುಗಳ ಹೊರಎತ್ತರಗಳೊಂದಿಗೆ ಸಾಕಷ್ಟು ವಿಸ್ತಾರವಾದ ಭೂಪ್ರದೇಶ ವನ್ನು ಆಕ್ರಮಿಸಿಕೊಂಡಿದೆ. ಈ ಗೋಡೆಯಲ್ಲಿ, ಸಮಾನ ವಿನ್ಯಾಸ ಹಾಗೂ ರಚನೆ ಗಳಿರುವ ಸುಮಾರು 5 ಮೀಟರುಗಳವರೆಗೆ ಅಗಲವಾಗಿರುವ ಪ್ರದೇಶಗಳಿದ್ದು, ನದಿಯ ದಂಡೆಯಿಂದ ಅವೆರಡೂ ಸಮಾನಾಂತರದಲ್ಲಿ ನಿರ್ಮಿಸಲ್ಪಟ್ಟಿವೆ. ಈ ಪ್ರದೇಶಗಳು ಕೇವಲ ಪ್ರದೇಶಗಳಾಗಿ ಗೋಡೆಯಲ್ಲಿ ಹರಿದುಕೊಂಡು ಹೋಗಿವೆ. ಹೀಗಾಗಿ, ಹೊರ ಬದಿಯಿಂದ ಸಹಜವಾಗಿ ನೋಡಬಹುದು. ಈ ಪ್ರದೇಶಗಳು ತೀರ ಸಾಮಾನ್ಯ ವಾಗಿದ್ದು, ವೈರಿಗಳ ಮುತ್ತಿಗೆಯ ಕಾಲದಲ್ಲಿ ಯಾವದೇ ರೀತಿಯ ರಕ್ಷಣಾ ಚಾಕ ಚಕ್ಯತೆಯ ನಿಯಮಗಳಿಂದ ಕಟ್ಟಲ್ಪಟ್ಟಿಲ್ಲ. ಅವು ಕೇವಲ ಪ್ರದೇಶಗಳು ಮಾತ್ರ.

ಇನ್ನು ಗೋಡೆಯ ಗರ್ಭ ಭಾಗವನ್ನು ವೀಕ್ಷಿಸಿದರೆ, ಅದು ಸುಟ್ಟ ಇಟ್ಟಿಗೆ ಗಳಿಂದ ಮಾಡಲ್ಪಟ್ಟಿದೆ. ಗರ್ಭಭಾಗದ ಈ ಇಟ್ಟಿಗೆಯ ಗೋಡೆಯು, ಅದರ ಬುನಾದಿಯಿಂದ ಮೇಲಣ ತುದಿಯವರೆಗೂ ಪೂರ್ತಿಯಾಗಿ ಇಟ್ಟಿಗೆಗಳಿಂದಲೇ ಮಾಡ ಲ್ಪಟ್ಟಿದೆಯೇ ? ಎಂಬ ವಿಷಯವು ತಿಳಿಯುವುದಿಲ್ಲ. ಆದರೆ ಅದರ ಮೇಲಣ ಭಾಗದ ಇಟ್ಟಿಗೆಗಳ ಜೋಡನೆಯ ಶೈಲಿಯು ಆ ಗೋಡೆಯು ಪೂರ್ತಿಯಾಗಿ ಇಟ್ಟಿಗೆ ನಿರ್ಮಿತ ಗರ್ಭ ಭಾಗವನ್ನು ಹೊಂದಿರಬಹುದೆಂದು ದೃಢಪಡಿಸುತ್ತದೆ. ಗೋಡೆಯ ಹೊರಬದಿ ಹಾಗು ಒಳಬದಿಗಳಿಗೆ ನಿಧಾನವಾಗಿ ಏರಿಸಿದ ರೇವೆಯ ಮಣ್ಣಿನ ಇಳಕಲು ಗಳಿವೆ. ಹೊರಭಾಗದ ಇಳಕಲಿನ ಆಚೆಗೆ ನೀರಿನ ಕಂದಕವಿರಬಹುದಾಗಿತ್ತೆಂಬ ವಿಷಯಕ್ಕೆ ಯಾವ ಪುಷ್ಟಿಕರವಾದ ಆಧಾರಗಳೂ ಇಲ್ಲ ಈ ಪ್ರದೇಶದ ಮೊದಲ ವೀಕ್ಷಣೆಯಲ್ಲಿಯೇ ಕಲ್ಪನೆಯಲ್ಲಿ ಸುಳಿದಂತೆ ದಕ್ಷಿಣ ದಕ್ಷಿಣ-ಪಶ್ಚಿಮ ದಿಸೆಯಲ್ಲಿ ಭೀಮೆಯ ತಿರುವಿನಲ್ಲಿ ಒಂದು ಕಾಲುವೆಯನ್ನು ತೋಡಿ ಸುತ್ತಲಿನ ಕಂದಕಕ್ಕೆ ನೀರನ್ನು ಪ್ರವಹಿಸಬಹುದಾಗಿತ್ತು. ಈ ತರಹದ ಕಾಲುವೆಯ ವ್ಯವಸ್ಥೆಯು ರಕ್ಷಣಾ ಗೋಡೆಗಳ ಭದ್ರತೆಗೆ ಆತಂಕವನ್ನೇನೂ ಒಡ್ಡುತ್ತಿರಲಿಲ್ಲ. ಈ ಪ್ರಕಾರದ ಕಂದಕದ ನಿರ್ಮಾಣಕ್ಕೆ ಸಾಧ್ಯತೆಯಿದ್ದರೂ ಅದರ ರಚನೆಯ ಬಗ್ಗೆ ಯಾವುದೇ ಸುಳಿವೂ ದೊರೆ ಯುವದಿಲ್ಲ ' ಈ ತರಹದ ಕಲ್ಪನೆಯು ಸಾಕಾರವಾದುದನ್ನು ಬನವಾಸಿ ಕೋಟೆ ಹಾಗೂ ಅದರ ಸುತ್ತಲೂ ವರದಾ ನದಿಯ ಕಾಲುವೆಯಿಂದ ನೀರು ಪೂರೈಸಲ್ಪಡುವ ಕಂದಕದಲ್ಲಿ ನೋಡ ಸಿಗುತ್ತದೆ.

ಇನ್ನು ಗೋಡೆಯನ್ನು ಇಡಿಯಾಗಿ ನೋಡಿದಾಗ ಗೋಡೆಯ ತುದಿಯ ಮೇಲ್ ಭಾಗದಲ್ಲಿ ಎರಡೂ ಬದಿಗೆ ಇಟ್ಟಿಗೆಯಿಂದ ಸಮಾಂತರವಾಗಿ ಕಟ್ಟಲ್ಪಟ್ಟ ಮುಂಚಾಚಿದ ಪಟ್ಟಿಗಳು ಕಂಡುಬರುತ್ತವೆ. ಈ ತರಹದ ಪಟ್ಟಿಗಳು ಗೋಡೆಯ ಒಳಗಡೆಯ ಮೇಲಣ ಅಂಚಿಗೆ ಜೋಡಿಸಿದ್ದು ಸಮಂಜಸವೆನ್ನಿಸಿದರೂ ಹೊರಗಡೆ ಅಂಚಿಗೆ ಅಳವಡಿ

ಸಿದ್ದು ಅಷ್ಟಾಗಿ ವ್ಯವಹಾರಿಕವಾಗಿ ಅರ್ಥಪೂರ್ಣವಾಗಿಲ್ಲ. ಏಕೆಂದರೆ ಇಂಥ ಪಟ್ಟಿಗಳು ಹೊರಬದಿಯಿಂದ ವೈರಿಗಳಿಗೆ ಗೋಡೆಯನ್ನೇರಿ ಬರಲು ಬಹಳೇ ಸಹಾಯಕವಾಗುತ್ತವೆ.

ನದಿಯ ಉತ್ತರ ದಂಡೆಯ ಗೋಡೆಯ ಅಂತ್ಯಭಾಗದಲ್ಲಿ, ಇಟ್ಟಿಗೆಯಿಂದ ನಿರ್ಮಿತವಾದ ಗರ್ಭಭಾಗದ ಗೋಡೆಯು ತೋರುತ್ತದೆ. ಈ ಸ್ಥಳದಲ್ಲಿ ನದಿಯ ಅಂಚೆಯು ಬುಡದಿಂದ ಬುನಾದಿಯೊಂದಿಗೆ ಇಳಿಜಾರಾಗಿ ಮೇಲೇರಿದ, ಪ್ರವಾಹದ ಹೊಡೆತದಿಂದ ಉಂಟಾಗುವ ಬದಿಯ ಸವಕಳಿಯನ್ನು ತಡೆಹಿಡಿಯಲು ಆಧಾರ ಗೋಡೆಯನ್ನು ಕಾಣಬಹುದು. ಇದು ಕೂಡ ಇಟ್ಟಿಗೆಯಿಂದ ಕಟ್ಟಲ್ಪಟ್ಟಿದೆ. ಈ ಆಧಾರ ಗೋಡೆಯು ದಡದ ಎತ್ತರದ ಅರ್ಧಭಾಗದವರೆಗೆ ಹೋಗಿದ್ದು, ಮಹಾಪೂರ ದಲ್ಲಿಯೂ ಕೂಡ ಈ ದಂಡೆಯ ತಲೆಯ ಮೇಲೆಯೇ ನಿರ್ಮಿಸಿದ ರಕ್ಷಣಾ ಗೋಡೆ ಯನ್ನೂ ಸಂರಕ್ಷಿಸುತ್ತದೆ. ಆದ್ದರಿಂದ ಈ ನದಿಯ ತಿರುವಿನ ಭಾಗದಲ್ಲಿ ದಂಡೆಯನ್ನು ಸಂರಕ್ಷಿಸುವ ಆಧಾರ ಗೋಡೆಯ ಅವಶ್ಯಕತೆಯನ್ನು ಪೂರೈಸಲಾಗಿದೆ. ಈ ಪ್ರಕಾರ ವಾಗಿಯೇ, ನದಿಯ ಆಚೆಯ ದಂಡೆಯಲ್ಲಿ ಪ್ರವಾಹದ ರಭಸವು ಅಪ್ಪಳಿಸುವಿಕೆ ಯೊಂದಿಗೆ ಮುನ್ನುಗ್ಗಿ, ವಿನಾಶಕ್ಕೆ ಕಾರಣವಾಗದಿರಲೆಂದು ತಿಳಿದು, ಅದರಂಚಿನಲ್ಲಿ ಇಟ್ಟಿಗೆಯ ಘಾಟವನ್ನು ನಿರ್ಮಿಸಲಾಗಿದೆ.

ಅರ್ಧ ವರ್ತುಲಾಕಾರದ ಒಳಗೋಡೆಯನ್ನು ಅಭ್ಯಸಿಸಿದರೆ, ಅದು ಸಾಮಾನ್ಯ ವಾಗಿ ಅದರ ರಚನಾ ಕ್ರಮದಲ್ಲಿ ಹೊರ ಅರ್ಧವರ್ತುಲಾಕಾರದ ಗೋಡೆಯ ರಚನಾ ವಿಧಾನವನ್ನೇ ಹೋಲುತ್ತಿದ್ದು, ತನ್ನ ಉದ್ದಗಲಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸ ವನ್ನು ಹೊಂದಿದೆ. ಇದು ತನ್ನ ಉದ್ದಳತೆಯಲ್ಲಿ 450 ಮೀಟರುಗಳಿದ್ದು, ವಿನ್ಯಾಸದಲ್ಲಿ ಅಸಮಪ್ರಮಾಣದಿಂದ ಕೂಡಿದ್ದು, ಹೊರಗೋಡೆಯಂತೆ ಅರ್ಧಚಂದ್ರಾಕೃತಿಯಾಗಿ ಇಲ್ಲ. ಇದಕ್ಕೆ ಒಂದೇ ಒಂದು ಪ್ರವೇಶವಿದೆ.

ಈ ಇಟ್ಟಿಗೆಯ ರಕ್ಷಣಾ ಗೋಡೆಯು ಬುಡದಲ್ಲಿ 12 ಮೀಟರಗಳಷ್ಟು ಅಗಲ ವಾಗಿದ್ದು, ಆದರೆ ಮೇಲೆ ತುದಿಯಲ್ಲಿ 3 ಮೀಟರುಗಳಷ್ಟು ಮಾತ್ರ ಅಗಲವಾಗಿದೆ. ಅಲ್ಲದೆ ಅದು ಒಳ ಹಾಗೂ ಹೊರಭಾಗಗಳಲ್ಲಿ ಕ್ರಮವಾಗಿ 3 ಮೀ. ಹಾಗೂ 1.70 ಮೀ. ಎತ್ತರವನ್ನು ಅಳವಡಿಸಿಕೊಂಡಿದೆ. ಈ ಗೋಡೆಯ ಇಕ್ಕೆಲಗಳಲ್ಲಿ ರೇವೆಯ ಮಣ್ಣಿನ ಇಳಿಜಾರಾದ, ಆಧಾರದ ದಿಮ್ಮೆಗಳಿದ್ದು, ಅವು ಹೊರಗೋಡೆಯ ಆಧಾರ ದಿಮ್ಮೆಗಳಿಗಿಂತ ನಿಧಾನವಾಗಿ ಮೇಲೇರುತ್ತವೆ. ಈ ಗೋಡೆಯೊಳಗೆ ಅಳವಡಿಸಿದ ಇಟ್ಟಿಗೆಯ ಗರ್ಭಗೋಡೆಯು ತನ್ನ ಮೇಲೆ ತುದಿಯ ಎರಡೂ ಅಂಚುಗಳಲ್ಲಿ ಭೂ-ಸಮಾಂತರದ ಇಟ್ಟಿಗೆಯ ಪಟ್ಟಿಗಳನ್ನು ಅಳವಡಿಸಿಕೊಂಡಿದೆ. ಅದಾಗಿ, ಈ ಒಳ ಭಾಗದ ರಕ್ಷಣಾ ಗೋಡೆಯು ಹೊರಭಾಗದ ಗೋಡೆಗಳಿಗಿಂತ ಉದ್ದ ಅಗಲಳತೆಗಳಲ್ಲಿ ಚಿಕ್ಕದಾಗಿದೆ.




ಸನ್ನತಿಯ ಒಳ ರಕ್ಷಣಾ ಗೋಡೆ ದಕ್ಷಿಣ-ಪೂರ್ವ ನೋಟ

ಈ ಒಳ ರಕ್ಷಣಾ ಗೋಡೆಗೆ ಒಂದೇ ಒಂದು ಪ್ರವೇಶವಿದ್ದು, ಅದು ನದಿಯ ಪೂರ್ವದಂಡೆಯ ಹೊರಭಾಗದ ಪ್ರವೇಶಕ್ಕೆ ನೇರವಾಗಿದೆ. ಈ ಎರಡೂ ಅರ್ಧ ಚಂದ್ರಾಕೃತಿಯ ರಕ್ಷಣಾ ಗೋಡೆಗಳ ಮಧ್ಯಾಂತರವು ಸುಮಾರು 100–200 ಮೀಟರುಗಳವರೆಗೆ ವ್ಯಾಪಿಸಿದೆ.

ಇಲ್ಲಿ ಉಪಯೋಗಿಸಲಾದ ಇಟ್ಟಿಗೆಗಳು ಮಧ್ಯಮ ಹಾಗೂ ದೊಡ್ಡ ಗಾತ್ರಗಳುಳ್ಳವಾಗಿವೆ (ಮಧ್ಯಮ ತರದ ಇಟ್ಟಿಗೆ: 30×30×10 ಸೆ. ಮೀ. ಹಾಗೂ ದೊಡ್ಡ ಗಾತ್ರದ ಇಟ್ಟಿಗೆ: 60×30×10 ಸೆ. ಮೀ.) ದೊಡ್ಡ ಗಾತ್ರದ ಇಟ್ಟಿಗೆಗಳನ್ನು ಗೋಡೆಯ ತಳಭಾಗದಲ್ಲಿಯೂ ಹಾಗೂ ಮಧ್ಯಮ ಗಾತ್ರದವುಗಳನ್ನು ಮೇಲ್ ಭಾಗದಲ್ಲಿಯೂ ಉಪಯೋಗಿಸಲಾಗಿದೆ.

ಪ್ರಥಮತಃ, ಈ ಪ್ರದೇಶದಲ್ಲಿ ಜನವಸತಿಯು ವಿರಲವಾಗಿದ್ದಾಗ, ಈ ಒಳಗಣ ಅರ್ಧ ಚಂದ್ರಾಕೃತಿಯ ರಕ್ಷಣಾ ಗೋಡೆಯು ನಿರ್ಮಾಣವಾಗಿದ್ದು, ಜನವಸತಿಯು ತದನಂತರ ಹೆಚ್ಚಾದಂತೆ, ಈ ಪ್ರಥಮ ಗೋಡೆಯ ಸೀಮೆಯನ್ನೂ ಮೀರಿ, ಹೊರಬದಿಗೆ ಹಬ್ಬಿಕೊಂಡಾಗ, ಅದನ್ನು ತನ್ನಲ್ಲಿ ಅಳವಡಿಸಿಕೊಳ್ಳಲು ಮತ್ತೊಂದು ಹೊರಗಿನ ಅರ್ಧ ಚಂದ್ರಾಕೃತಿಯ ಗೋಡೆಯನ್ನು ನಿರ್ಮಿಸುವ ಅವಶ್ಯಕತೆ ಉಂಟಾಗಿರಲು ಸಾಕು. ಆದರೆ, ಈ ಒಳಗಣ ಹಾಗೂ ಹೊರಗಣ ಗೋಡೆಗಳ ನಿರ್ಮಾಣದ ಶೈಲಿಯನ್ನೂ ಹಾಗೂ ಅವುಗಳಲ್ಲಿ ಉಪಯೋಗಿಸಲಾದ ಇಟ್ಟಿಗೆಗಳ ಆಕತಿಗಳನ್ನೂ ಅಭ್ಯಸಿಸಿದರೆ, ಈ ಎರಡೂ ಗೋಡೆಗಳ ನಿರ್ಮಾಣಗಳ ಕಾಲಾಂತರವು ಬಹಳವಾಗಿಲ್ಲ.


ಸ್ತೂಪ ನಂ.3
ಸ್ತೂಪ ನಂ.2
ಉ
0 100 300 500 ಮೀ.
ಪ್ರವೇಶ : 1
ಪ್ರವೇಶ : 2
ಹೊರ ರಕ್ಷಣಾ ಗೋಡೆ, (600 ಮೀ)
ಒಳ ರಕ್ಷಣಾ ಗೋಡೆ, (450 ಮೀ).
ಸ್ತೂಪ ನಂ 1
ವಿವರಣೆ:
ಅ – ಸೋಮೇಶ್ವರ ಮಂದಿರ
ಕ – ಬಂಟ್ಟಿ ಬಸವಣ್ಣನ ಮಂದಿರ
ಡ – ಚಂದ್ರಲಾಂಬಾ ಮಂದಿರ
ಇ – ದುರ್ಗಾ ಮಂದಿರ
ಸನ್ನತಿ — ರಕ್ಷಣಾ ಗೋಡೆಗಳು
(ಜಿ. ಗುಲಬರ್ಗಾ) (2000 ವರುಷಗಳಷ್ಟು
ಪ್ರಾಚೀನವಾದವುಗಳು)

ಅಂತಾಗಿ, ಈ ಮೇಲೆ ಅಭ್ಯಸಿಸಿದಂತೆ, ಸನ್ನತಿಯ ಈ ರಕ್ಷಕ ಗೋಡೆಗಳು ರಕ್ಷಣಾ ವಾಸ್ತುಶಿಲ್ಪದ ದೃಷ್ಟಿಯಿಂದ ಅಷ್ಟೊಂದು ಮಹತ್ತರವಾದ ರಕ್ಷಕ ಅಂಗಗಳನ್ನು ಅಳವಡಿಸಿಕೊಳ್ಳದೆಯೇ, ಕೇವಲ ಪೌರರಕ್ಷಕ ಹಾಗೂ ಧರ್ಮರಕ್ಷಕ ಗೋಡೆಗಳಾಗಿ ಈವರೆಗೂ ನಿಂತಿವೆ.

ಕೃತಜ್ಞತೆ

ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ನ್ಯೂ ಡೆಲ್ಲಿ, ಇವರು ಕೊಟ್ಟ ಧನ ಸಹಾಯದಿಂದ ಸನ್ನತಿ ಮತ್ತು ಇತರೆಡೆಗಳಲ್ಲಿಯ ಪ್ರಾಚೀನ ಕೋಟೆಗಳನ್ನು ಸ್ಥಳಗಳಲ್ಲಿಯೇ ಪರೀಕ್ಷಿಸಿ ಅಭ್ಯಸಿಸಿದ್ದೇನೆ. ಈ ಲೇಖನವನ್ನು ಸಿದ್ಧಪಡಿಸಲು ಡಾ. ಅ. ಸುಂದರ, ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಅವರು ಮಾರ್ಗದರ್ಶನ ಮಾಡಿ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ತುಮಕೂರು ಜಿಲ್ಲೆಯ ಶಾಸನಗಳು : ಒಂದು ಅಧ್ಯಯನ

● ಕೆ. ಬಿ. ಶಿವತಾರಕ್

ಕರ್ನಾಟಕದ ಹಳೆ ಮೈಸೂರು ಪ್ರಾಂತ್ಯದಲ್ಲಿ ತುಮಕೂರು ಜಿಲ್ಲೆ ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿದೆ. ಇಲ್ಲಿ ಪೂರ್ವೇತಿಹಾಸ (ಪ್ರಾಗಿತಿಹಾಸ) ದ ನೆಲೆಗಳು ಕಿಬ್ಬನ ಹಳ್ಳಿ, ಬಿಳಿಗೆರೆ, ಜಕ್ಕನಹಳ್ಳಿ, ಹಿರೀಗುಂಡಗಲ್ಲು ಹಾಗೂ ಮತ್ತಿತರ ಸ್ಥಳಗಳಲ್ಲಿ ದೊರೆತಿವೆ. ಈ ಸ್ಥಳಗಳಲ್ಲಿ ಪ್ರಾಚೀನ ಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗಕ್ಕೆ ಸೇರಿದ ಆಯುಧಗಳು ಮತ್ತು ಅವಶೇಷಗಳು ದೊರೆತಿವೆ.

ತುಮಕೂರು ಜಿಲ್ಲೆಯಲ್ಲಿ ಒಟ್ಟು ಇಪ್ಪತ್ತೆರಡು ಅರಸು ಮನೆತನಗಳು ರಾಜ್ಯವಾಳಿದ್ದು ಈ ಎಲ್ಲಾ ರಾಜಮನೆತನಗಳ ಪ್ರಾಮುಖ್ಯತೆಯನ್ನು ಅರಿಯಲು ಮುಖ್ಯವಾಗಿ ಈ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳೇ ಮುಖ್ಯ ಸಾಕ್ಷಿ. ಈ ಎಲ್ಲಾ ಶಾಸನಗಳು ದತ್ತಿ, ದಾನ, ಧರ್ಮ ಮತ್ತು ವೀರತ್ವದ ಬಗ್ಗೆ ಹೇಳುತ್ತದಾದರೂ ಜೊತೆಯಲ್ಲಿ ರಾಜಕೀಯ, ಆಡಳಿತ, ಸಾಮಾಜಿಕ ಸ್ಥಿತಿ, ಧಾರ್ಮಿಕ ನೀತಿ ಆರ್ಥಿಕ ವ್ಯವಸ್ಥೆಗಳ ಮೇಲೆ ಬೆಳಕನ್ನು ಬೀರುತ್ತವೆ.

ಕುವಳಾಲಪುರ (ಕೋಲಾರ) ತಲಕಾಡು, ಮಾನ್ಯಪುರ (ಮಣ್ಣೆ) ಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಒಂದು ಸಾವಿರ ವರುಷಗಳವರೆಗೆ ಆಳಿದಂತಹ ಗಂಗರು ಈ ಜಿಲ್ಲಯ ಮೊದಲ ಅರಸು ಮನೆತನದವರಾಗಿದ್ದಾರೆ. ಈವರೆಗೆ ಗಂಗರ ಶಾಸನಗಳು ಈ ಜಿಲ್ಲೆಯಲ್ಲಿ ಒಟ್ಟು ನಲವತ್ತೇಳು (47) ಪ್ರಕಟಿತವಾಗಿವೆ. ಇವರ ಇಲ್ಲಿಯ ಪ್ರಥಮ ಶಾಸನವು ತಾಮ್ರಪಟದಲ್ಲಿದ್ದು ಅದು ತುಮಕೂರು ನಗರದ ಹೊರ ವಲಯದಲ್ಲಿರುವ ಮೆಳೆಕೋಟೆ ಎಂಬಲ್ಲಿ ದೊರೆತಿದ್ದು, ಅದರ ಕಾಲ ಕ್ರಿ. ಶ. ಸುಮಾರು 400 ಎಂದು ನಿರ್ಧರಿಸಿದ್ದು, ಇದು ಈ ಮನೆತನದ ದೊರೆಯಾದ ಮುಮ್ಮಡಿ ಮಾಧವ ವರ್ಮನದ್ದಾಗಿದೆ. ಈ ಮನೆತನದ ಒಟ್ಟು ಶಾಸನಗಳನ್ನು ಹೀಗೆ ವರ್ಗೀಕರಿಸಬಹುದು. ನಾಲ್ಕು ಗುಂಡಿನ ಮೇಲಿರುವ ಶಾಸನಗಳಾದರೆ ಏಳು ಶಿಲಾಶಾಸನಗಳಾಗಿರುವುವು. ಇಪ್ಪತ್ತೊಂಬತ್ತು ವೀರಗಲ್ಲುಗಳಾದರೆ ಉಳಿದ ಏಳು ತಾಮ್ರಪಟಗಳಾಗಿವೆ.

ಇವರ ಜೊತೆಗೆ ಆಳಿದಂತಹ ಇನ್ನೊಂದು ಮನೆತನವೆಂದರೆ ರಾಷ್ಟ್ರಕೂಟರು. ಇವರು ಮಾನ್ಯ ಪೇಟವನ್ನು ರಾಜಧಾನಿಯನ್ನಾಗಿ ಹೊಂದಿದ್ದರೂ ತುಮಕೂರು

ಪ್ರಾಂತ್ಯವು ಇವರ ವಶದಲ್ಲಿದ್ದಿತೆಂಬುದಕ್ಕೆ ದೊರೆತಿರುವ 3 ಶಾಸನಗಳೇ ಸಾಕ್ಷಿ. ಇವುಗಳಲ್ಲಿ ಒಂದು ತಾಮ್ರಪಟವಾದರೆ ಇನ್ನೆರಡು ಶಿಲಾಶಾಸನಗಳಾಗಿವೆ. ಈ ಶಾಸನಗಳ ಕಾಲ ಕ್ರಿ. ಶ. 812, 903 ಮತ್ತು 982 ಆಗಿವೆ.

ಇದೇ ತಲೆಮಾರಿನಲ್ಲಿ ಆಳಿದ ಮತ್ತೊಂದು ಪ್ರಾಮುಖ್ಯ ಮನೆತನವೆಂದರೆ ನೊಳಂಬರು. ಇದೇ ಜಿಲ್ಲೆಗೆ ಹತ್ತಿರವಾಗಿರುವ ಹೇಮಾವತಿ ಅಥವಾ ಹೆಂಜೇರು— ಈಗ ಅನಂತಪುರ ಜಿಲ್ಲೆಯ ಮಡಕ ಶಿರಾ ಬಳಿ ಇದೆ. ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು 500 ವರ್ಷಗಳವರೆಗೆ ಆಳಿದ ಕೀರ್ತಿ ಈ ಮನೆತನಕ್ಕೆ ಸಲ್ಲುತ್ತದೆ. ಈ ಮನೆತನದ ಶಾಸನಗಳು ಹೆಚ್ಚು ಶಿರಾ, ಮಧುಗಿರಿ, ಪಾವುಗಡ ಮತ್ತು ತುಮಕೂರು ತಾಲೂಕುಗಳಲ್ಲದೆ ಬೆಂಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲೂ ಮತ್ತು ಆಂಧ್ರ ಮತ್ತು ತಮಿಳುನಾಡಿನಲ್ಲೂ ಇವೆ. ತುಮಕೂರು ಜಿಲ್ಲೆಯಲ್ಲಿ ಒಟ್ಟು 23 ಶಾಸನಗಳು ಲಭ್ಯವಿವೆ.

ಬನವಾಸಿಯ ಕದಂಬರಿಗೆ ಸೇರಿದ ಒಂದೇ ಒಂದು ತಾಮ್ರ ಶಾಸನವು ಕೋಟಾ ಗ್ರಾಮದಲ್ಲಿ ದೊರೆತಿದೆ. ಇದು ಈ ಮನೆತನದ ವಿಷ್ಣುವರ್ಮನದ್ದಾಗಿದೆ.

ತಮಿಳುನಾಡಿನಲ್ಲಿ ಪ್ರಾಮುಖ್ಯವಾಗಿ ಆಳಿದ ಚೋಳ ಮನೆತನದ ಒಂದು ಶಾಖೆ ಈ ಜಿಲ್ಲೆಯ ನಿಡಗಲ್ಲನ್ನು (ಪಾವುಗಡ ತಾಲ್ಲೂಕು) ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿತು. ಇವರನ್ನು "ನಿಡುಗಲ್ಲಿನ ಚೋಳ"ರೆಂದೇ ಕರೆಯುತ್ತಾರೆ. ಈ ಮನೆತನಕ್ಕೆ ಸೇರಿದ ಶಾಸನಗಳು ಕ್ರಿ. ಶ. 750 ರಿಂದ ಪ್ರಾರಂಭವಾಗಿ ಕ್ರಿ. ಶ. 1481ಕ್ಕೆ ಕೊನೆಗೊಳ್ಳುತ್ತವೆ. ಇವರ ಒಟ್ಟು ಶಾಸನಗಳು ಮೂವತ್ತಾರು (36).

ಹೊಯ್ಸಳರು ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಕಾಲದ ಈ ಮನೆತನದ ಒಟ್ಟು ಶಾಸನಗಳು ಇಪ್ಪತ್ತೈದು ಇದ್ದು, ಅವು ಕ್ರಿ. ಶ. 1040 ರಿಂದ ಪ್ರಾರಂಭವಾಗಿ ಕ್ರಿ. ಶ. 1200 ಕ್ಕೆ ಅಂತ್ಯಗೊಳ್ಳುತ್ತವೆ.

ಆರಂಭದಲ್ಲಿ ಚಾಲುಕ್ಯರ ಅಧೀನರಾಗಿ ಹೊಯ್ಸಳರು, ಹಲವಾರು ಬಿರುದುಗಳಿಗೆ ಪಾತ್ರರಾಗಿ ಅಂತ್ಯದಲ್ಲಿ ಸಾರ್ವಭೌಮತ್ವವನ್ನು ಮೆರಗಿಸಿ ಅತ್ಯಂತ ಉನ್ನತಿಗೆ ಬಂದರು. ನಮ್ಮ ಜಿಲ್ಲೆಗೆ ಅತಿಹೆಚ್ಚು ಶಾಸನಗಳನ್ನು ಕೊಟ್ಟವರು ಇವರು. ಒಟ್ಟು 157 ಶಾಸನಗಳು ಇವರ ಕಾಣಿಕೆಯಾಗಿವೆ. ನಮ್ಮ ಜಿಲ್ಲೆಯಲ್ಲಿ ಇವರ ಉನ್ನತ ಶೈಲಿಯ ದೇವಾಲಯಗಳನ್ನು ಹರಳಗುಪ್ಪೆ, ಕಿಟ್ಟಿಕೆರೆ, ತಂಡಗ, ವಿಘ್ನಸಂತೆ, ನೊಣವಿನಕೆರೆ, ಕೈದಾಳ, ನಿಟ್ಟೂರು, ತುರುವೇಕೆರೆ ಮತ್ತು ನಾಗಪುರಗಳಲ್ಲಿ ಕಾಣಬಹುದು. ಇವರ ಅತಿ ಪ್ರಾಚೀನ ಶಾಸನವು ತಿಪಟೂರು ತಾಲೂಕಿನ ಹಟ್ನ (ಕ್ರಿ.ಶ. 1078) ದ್ದಾಗಿದ್ದು ಇವರ ಶಾಸನಗಳು ಸುಮಾರು 12 ನೇ ಶತಮಾನಗಳವರೆಗೆ ಲಭ್ಯವಿವೆ. ಈ ಒಟ್ಟು ಶಾಸನಗಳ ಪೈಕಿ ಎರಡು ಮಾತ್ರ ತಾಮ್ರ ಪಟದ್ದಾಗಿವೆ.

ಹೊಯ್ಸಳರ ನಂತರ ಹೆಚ್ಚು ಶಾಸನಗಳನ್ನು ಹೊರಡಿಸುವಲ್ಲಿ ಎರಡನೇ ಸ್ಥಾನವು ವಿಜಯನಗರದರಸರಿಗೆ ಸಲ್ಲುತ್ತದೆ. ತಾವು ರಾಜಧಾನಿಯನ್ನಾಗಿ ಮಾಡಿಕೊಂಡ ವಿಜಯನಗರವಲ್ಲದೆ ಉಳಿದ ರಾಜಧಾನಿಗಳಿಂದಲೂ ಹೊರಡಿಸಿದ ಶಾಸನಗಳನ್ನು ನಾವು ಇಲ್ಲಿ ಕಾಣಬಹುದಾಗಿದೆ. ನಮ್ಮ ಜಿಲ್ಲೆಯ ಭಾಗಗಳು ಪೆನುಗೊಂಡೆ ಹೊನ್ನವಳ್ಳಿ ಮತ್ತು ಆನೆಬಿದ್ದಸರಿ ರಾಜ್ಯಗಳಿಗೆ ಸೇರಿದ್ದವು. ಈ ಮನೆತನದ ಮೊದಲನೆ ಶಾಸನವು 1354 ರ ಬುಕ್ಕರಾಯನದ್ದಾದರೆ ಕೊನೆಯ ಶಾಸನವು ಕ್ರಿ. ಶ. 1745 ರ ಪೆನುಗೊಂಡೆಯ ರಾಮರಾಯನದ್ದಾಗಿದೆ. ಈ ಮನೆತನದ ಹೆಚ್ಚಿನ ಎಲ್ಲಾ ರಾಜರ ಶಾಸನಗಳನ್ನೂ ನಮ್ಮ ಜಿಲ್ಲೆಯಲ್ಲಿ ಕಾಣಬಹುದಾಗಿದೆ. ಒಟ್ಟು ಶಾಸನಗಳ ಸಂಖ್ಯೆ 146 ಆಗಿದೆ.

ಓರಂಗಲ್ಲಿನ ಕಾಕತೀಯರ ಒಂದು ಶಾಸನ, ನಿಡುಗಲ್ಲಿನ ನಾಯಕರ ಏಳು ಶಾಸನಗಳು, ಹರತಿ ಪ್ರಭುಗಳ ಹದಿಮೂರು ಶಾಸನಗಳು, ಯಲಹಂಕನಾಯಕರ ಒಂದು ಶಾಸನ, ಸಂತೆ ಬೆನ್ನೂರು ಪ್ರಭುಗಳ ಒಂದು ಶಾಸನ, ಹೊಳವನಹಳ್ಳಿ ಪ್ರಮುಖರ ಐದು ಶಾಸನಗಳು, ಹಾಗಲವಾಡಿ ಪಾಳೇಗಾರರ ಐದು ಶಾಸನಗಳು, ಕುಂದರ್ಪಿ ಮನೆತನದ ಒಂದು ಶಾಸನ, ಗುಬ್ಬಿ ಹೊಸಳ್ಳಿಯವರ ಒಂದು ಶಾಸನ, ಬಿಜ್ಜಾವರದೊಡೆಯರ ಎರಡು ಶಾಸನಗಳು ದೊರೆತಿವೆ. ಈ ಪಾಳೆಯಗಾರ ವಂಶದವರಲ್ಲಿ ಹೆಚ್ಚಿನವರು ಇದೇ ಜಿಲ್ಲೆಯ ಮೂಲ ಮನೆತನದವರಾಗಿದ್ದರು.

ಹದಿನೇಳನೇ ಶತಮಾನದಲ್ಲಿ ಮುಸ್ಲಿಮರು ಶಿರಾವನ್ನು ಇವರ ಅಧಿಪತ್ಯದಲ್ಲಿರಿಸಿಕೊಂಡಿದ್ದರು. ಇದನ್ನು ಒಂದು ಪ್ರಮುಖ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಮೊಗಲ್ ಸಾಮ್ರಾಜ್ಯದ ಎಂಟು ಶಾಸನಗಳು ಮತ್ತು ಬಿಜಾಪುರದ ಸುಲ್ತಾನರ ಆರು ಶಾಸನಗಳು ದೊರೆತಿವೆ.

ಹದಿನೇಳನೇ ಶತಮಾನದ ಅವಧಿಯಲ್ಲಿ ಆಳಿದ ಮರಾಠರ ಶಾಸನಗಳು ಕೇವಲ ಮೂರಾದರೆ, ಹದಿನಾಲ್ಕನೇ ಶತಮಾನದಿಂದ ಇಪ್ಪತ್ತನೇ ಶತಮಾನದವರೆಗೆ ಆಳಿದ ಮೈಸೂರಿನೊಡೆಯರ ಶಾಸನಗಳ ಸಂಖ್ಯೆ ಮೂವತ್ತೆಂಟು. ಒಡೆಯರ ಮೊದಲ ಶಾಸನವು ದೇವರಾಜ ಒಡೆಯರ 1662 ರದ್ದಾದರೆ ಕೊನೆಯ ಶಾಸನವು 1881ರ ಹತ್ತನೇ ಚಾಮರಾಜ ಒಡೆಯರದ್ದಾಗಿದೆ.

ಹೀಗೆ ತುಮಕೂರು ಜಿಲ್ಲೆಯು ಹಲವು ಅರಸು ಮನೆತನಗಳ ಆಳ್ವಿಕೆಯಿಂದಲೂ ಮತ್ತು ರಾಜ್ಯಕ್ಕೆ ಹಲವು ಅರಸು ಮನೆತನಗಳನ್ನು ನೀಡಿ ಐತಿಹಾಸಿಕವಾಗಿ ಪ್ರಮುಖ ಸ್ಥಾನವನ್ನು ಗಳಿಸಿದೆ.

ಕನ್ನಡೇತರರಿಗೆ ಕನ್ನಡ ಕಲಿಸುವ ಕ್ರಮ

● ಎಸ್. ಎಲ್. ಸಣ್ಣೆಲ್ಲಪ್ಪನವರ

ಕನ್ನಡ ಭಾಷೆಯ ಅಕ್ಷರಗಳು ಇತರ ಭಾಷೆಯ ಅಕ್ಷರಗಳಿಗಿಂತ ನೋಡಲು ದುಂಡು ದುಂಡಾಗಿದ್ದು, ಸುಂದರವಾಗಿವೆ.[1] ಕಾರಣ ಹೆಚ್ಚು ಅಕ್ಷರಗಳ ಆಕಾರ ಗೋಲಾಕಾರದಲ್ಲಿದ್ದು ಇವುಗಳನ್ನು ಬರೆಯುವಾಗ ಬೆರಳುಗಳನ್ನು ಮೇಲಿಂದ ಮೇಲೆ ವೃತ್ತಾಕಾರದಲ್ಲಿ ತಿರುಗಿಸಬೇಕಾಗುತ್ತದೆ.[2] (ಇಂಗ್ಲೀಷ ಅಕ್ಷರಗಳನ್ನು ಬರೆಯುವಾಗ ಬೆರಳುಗಳು ಹೆಚ್ಚಾಗಿ ಮೇಲೆ-ಕೆಳಗೆ ಮತ್ತು ಅಡ್ಡವಾಗಿ ಚಲಿಸುವದನ್ನು ಗಮನಿಸ ಬಹುದು.)

ಪ್ರಥಮವಾಗಿ ದ್ವಿತೀಯ ಭಾಷಾ ಅಧ್ಯಾಪಕರು ಕನ್ನಡೇತರರಿಗೆ ಕನ್ನಡ ವರ್ಣಮಾಲೆಯನ್ನು ಕಲಿಸುವ ಪೂರ್ವದಲ್ಲಿ ಅವರಿಗೆ ಕನ್ನಡಭಾಷೆಯ ಬಗೆಗೆ ಆಸಕ್ತಿಯನ್ನು ಹುಟ್ಟಿಸುವ ಸಲುವಾಗಿ ಕನ್ನಡದ ಸಂಕ್ಷಿಪ್ತ ಪರಿಚಯವನ್ನು ಇಂಗ್ಲೀಷಿನ ಮೂಲಕ ಮಾಡಿಕೊಡಬೇಕಾದುದು ಅವಶ್ಯವಾಗಿದೆ. ಕಾರಣ ಇಲ್ಲಿ ಮಾದರಿಗಾಗಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ರೂವಾರಿಗಳಾದ ಡಾ. ಆರ್. ಸಿ. ಹಿರೇಮಠರವರು ಕನ್ನಡೇತರರಿಗೆ ಕನ್ನಡವನ್ನು ಪರಿಚಯಿಸಿದ ಕೆಲವು ಮಾತುಗಳನ್ನು ನೋಡಬಹುದು :

"Kannada is one of the fourteen major languages of India that have been recognised by the Indian Constitution. From the point of view of antiquity and richness of literature, Kannada comes third in number, the first two being Sanskrit and Tamil respectively. Kannada literature dates back from the 5th Century A. D. and possesses several indigenous forms. Vachana literature is an outstanding feature of Kannada literature and it may be claimed that it is one of the unique forms of literature in the world on account of the higher values of life, the Vachanas advocate...... Linguistically Kannada is one of the major lauguages of Dravidian family.........etc.[3]


---

1. ಕನ್ನಡ ಲಿಪಿಯನ್ನು ಇತರ ಭಾಷಾ ಲಿಪಿಗಳೊಡನೆ ಹೋಲಿಸಿ ನೋಡಿದಾಗ ಈ ವಿಚಾರವು ಸ್ಪಷ್ಟವಾಗುವುದು.
2. ಈ ಅಭಿಪ್ರಾಯವು ಕನ್ನಡೇತರ ವಿದ್ಯಾರ್ಥಿಗಳಿಂದಲೂ ವ್ಯಕ್ತವಾಗಿದೆ. ಬೆರಳುಗಳನ್ನು ಮೇಲಿಂದ ಮೇಲೆ ವರ್ತುಲಾಕಾರದಲ್ಲಿ ತಿರುಗಿಸುವುದು ಸ್ವಲ್ಪ ಕಷ್ಟವೂ ಆಗುವದೆನ್ನುತ್ತಾರೆ.
3. Dr. R. C. Hiremath -- The structure of Kannada.

ಹೀಗೆ ಅಧ್ಯಾಪಕರು ವಿವರಣೆ ನೀಡಿ ಕನ್ನಡದ ಬಗೆಗೆ ಕನ್ನಡೇತರರಲ್ಲಿ ಅಭಿರುಚಿ ಮೂಡಿಸಬೇಕು.

ಒಂದು ಭಾಷೆಯನ್ನು ಕಲಿಯುವದೆಂದರೆ ಕೆಲವರು ಕೇವಲ ಆ ಭಾಷೆಯ ಅಕ್ಷರಗಳನ್ನು ಕಲಿಯುವದೆಂದು, ಮತ್ತೆ ಕೆಲವರು ಕೇವಲ ಶಬ್ದ ಸಂಗ್ರಹವೆಂದು, ಇನ್ನು ಕೆಲವರು ವ್ಯಾಕರಣದ ಅಭ್ಯಾಸವೆಂದು, ಕೆಲವರು ಕೇವಲ ಓದಲು, ಬರೆಯಲು ಕಲಿಯುವದೆಂದು ಮುಂತಾಗಿ ತಿಳಿದಿರುತ್ತಾರೆ. ಆದರೆ ಇವೆಲ್ಲ ಭಾಷೆಯ ವಿವಿಧ ಅಂಗಗಳು. ಒಂದು ಭಾಷೆಯನ್ನು ಪೂರ್ಣವಾಗಿ ಕಲಿಯಬೇಕಾದರೆ ಕೆಳಗೆ ವಿಂಗಡಿಸಿ ತೋರಿಸಿದ ಎಲ್ಲ ಅಂಶಗಳನ್ನು ಕಲಿಯುವದು ಅನಿವಾರ್ಯ. ಕಾರಣ ಕನ್ನಡ ಅಧ್ಯಾಪಕರು ಕನ್ನಡೇತರರಿಗೆ ಕನ್ನಡ ಕಲಿಸುವಾಗ ಅದರ ಎಲ್ಲ ಭಾಗಗಳನ್ನು ಕ್ರಮ ಕ್ರಮವಾಗಿ ಕಲಿಸಬೇಕಾಗುವದು.

ಇಲ್ಲಿ ಕಲಿಸುವ ಅನುಕೂಲತೆಗಾಗಿ ಈ ವಿಷಯವನ್ನು ಕೆಳಗಿನಂತೆ ವಿಭಾಗಿಸಲಾಗಿದೆ.



ಈ ಎಲ್ಲ ಅಂಶಗಳನ್ನು ಹಂತ ಹಂತವಾಗಿ ಕಲಿಸಬೇಕು. ಇದಕ್ಕಾಗಿ ಅಧ್ಯಾಪಕರು ಕೈಕೊಳ್ಳಬೇಕಾದ ಮೊದಲನೆಯ ಕ್ರಮವೆಂದರೆ ಕನ್ನಡದ ಎಲ್ಲ ಮೂಲಾಕ್ಷರಗಳ ಬೋಧನೆ.

ಒಟ್ಟು ಮೂಲಾಕ್ಷರಗಳು 52.[1] (ಇವುಗಳನ್ನು ಮುಂದೆ ಹೇಳಲಾಗಿದೆ.) ಇವುಗಳನ್ನು ಕನ್ನಡೇತರರಿಗೆ ಆರು ಪ್ರಕಾರದಿಂದ ಪರಿಚಯ ಮಾಡಿಕೊಡಲು ಸಾಧ್ಯವಿದೆ.

೧. ಕಪ್ಪು ಹಲಗೆ (black board) ಯ ಮೇಲೆ ಬರೆಯುವ ಮೂಲಕ.
೨. ಬಾಯಿಂದ ಹೇಳುವ ಮೂಲಕ.
೩. ವಿವಿಧ ಚಿತ್ರಪಟ (chart) ಗಳನ್ನು ತೋರಿಸುವ ಮೂಲಕ.
೪. ಕನ್ನಡ ಪ್ರಾರಂಭಿಕ ಪುಸ್ತಕಗಳ ಮೂಲಕ.
೫. ದರ್ಶಿ (slide show) ಯ ಯಂತ್ರದ ಮುಖಾಂತರ.
೬. ಭಾಷಾ ಪ್ರಯೋಗ ಶಾಲೆಯ (language laboratory) ಮೂಲಕ.

ಕನ್ನಡದ 52 ಮೂಲಾಕ್ಷರಗಳು ಈ ಕೆಳಗಿನಂತಿವೆ :

ಸ್ವರಗಳು (vowel)—

ಅ	ಆ	ಇ	ಈ	ಉ	ಊ	
ā	a	i	ī	u	ū	
ಋ	ೠ	ಎ	ಏ	ಐ		
r	r̄	e	ē	ai		
ಒ	ಓ	ಔ	ಅಂ	ಅಃ		= 16
o	ō	au	am	ah		

ವ್ಯಂಜನಗಳು (consonants)—

ಕ	ಖ	ಗ	ಘ	ಙ	
ka	kha	ga	gha	na	
ಚ	ಛ	ಜ	ಝ	ಞ	
ca	cha	ja	jha	na	
ಟ	ಠ	ಡ	ಢ	ಣ	
ta	tha	da	dha	na	
ತ	ಥ	ದ	ಧ	ನ	
ta	tha	da	dha	na	
ಪ	ಫ	ಬ	ಭ	ಮ	= 25
pa	pha	ba	bha	ma	

1. ಈ ಬಗೆಗೆ ಭಿನ್ನಾಭಿಪ್ರಾಯಗಳಿವೆ.

ಯ	ರ	ಲ	ವ	ಶ		
ya	ra	la	va (wa)	sa		
ಷ	ಸ	ಹ	ಳ	ಕ್ಷ	ಜ್ಞ	=11
sa	sa	ha	la	ksa	jna	
					ಒಟ್ಟು	52

ಈ ಮೂಲಾಕ್ಷರಗಳು ರೂಪ ಸಾಮ್ಯವಿರುವ ವರ್ಣಗಳ ಬೇರೆ ಬೇರೆ ಗುಂಪು ಮಾಡಿಯೂ ಕಲಿಸಬೇಕು. ಉದಾ—ರ ಠ ಈ ಕ ಮುಂತಾಗಿ.

ಇವುಗಳ ನಂತರ ಗುಣಿತಾಕ್ಷರಗಳನ್ನು ಕಲಿಸಬೇಕು.

ಕ	ಕಾ	ಕಿ	ಕೀ	ಕು	ಕೂ	ಕೃ	ಕೄ
ka	kā	ki	kī	ku	kū	kṛ	kṝ
ಕೆ	ಕೇ	ಕೈ	ಕೊ	ಕೋ	ಕೌ	ಕಂ	ಕಃ
ke	kē	kai	ko	kō	kau	kaṃ	kaḥ


ಮೂಲ ವ್ಯಂಜನಾಕ್ಷರಗಳಿಗೆ ಗುಣಿತಾಕ್ಷರ ಸಂಜ್ಞೆಗಳಾದ—

ಾ, ಿ, ೀ, ು, ೂ, ೃ, ೄ, ೆ, ೇ, ೈ, ೊ, ೋ, ೌ, ಂ, ಃ ಇವುಗಳನ್ನು ಸೇರಿಸಿ ಎಲ್ಲ ಗುಣಿತಾಕ್ಷರಗಳನ್ನು ಬರೆಯುವ ಪದ್ಧತಿಯನ್ನು ಹಾಗೂ ಸ್ವರ ಮತ್ತು ವ್ಯಂಜ ಸೇರಿ ಪೂರ್ಣಾಕ್ಷರ ಆಗುವ ರೀತಿಯನ್ನು ತಿಳಿಸಬೇಕು. ಅಲ್ಲದೆ ಈ ಗುಣಿತಾಕ್ಷರಗಳ ಉಪಯೋಗವನ್ನೂ ಶಬ್ದಗಳ ಮೂಲಕ ತೋರಿಸಿಕೊಡಬೇಕು.

ಇವುಗಳಲ್ಲಿ ಕೆಲವು ಅಕ್ಷರಗಳು ಕೈಬರಹದಲ್ಲಿ ಒಂದು ರೀತಿಯಾಗಿದ್ದರೆ ಮುದ್ರಿತ ರೂಪದಲ್ಲಿ ಮತ್ತೊಂದು ಆಕಾರ (ಅಲ್ಪ ಬದಲಾವಣೆಯೊಂದಿಗೆ) ಪಡೆಯುತ್ತವೆ.[1] ಆದ್ದರಿಂದ ವಿದ್ಯಾರ್ಥಿಗಳು ಈ ಎರಡೂ ಅಕ್ಷರಗಳನ್ನು ಬೇರೆ ಬೇರೆಯೆಂದೇ ತಿಳಿಯುವ ಸಂಭವವುಂಟು. ಕಾರಣ ಇಂತಹ ಒಂದೇ ಅಕ್ಷರದ ಎರಡು ರೂಪಗಳ ಬಗ್ಗೆ ಅಧ್ಯಾಪಕರು ಆರಂಭದಲ್ಲಿಯೇ ಸ್ಪಷ್ಟ ತಿಳಿವಳಿಕೆ ನೀಡಬೇಕು. (ಇದು ಸೂಕ್ಷ್ಮವಾದ ಅಂಶವಾಗಿದೆ.)

1. ಮುದ್ರಣದ ಅಕ್ಷರಗಳನ್ನು ಗಮನಿಸಿರಿ. (ಈ ವ್ಯತ್ಯಾಸವನ್ನು ಹೋಗಲಾಡಿಸಿ ಮುದ್ರಣದ ಅಕ್ಷರಗಳೂ ಕೈಬರಹದಂತೆ ಆಗಲು ಪ್ರಯತ್ನಿಸಬೇಕು.)

ಉದಾ —



ಮೇಲಿನ ಉದಾಹರಣೆಯಲ್ಲಿನ ಮೊದಲ ಸಾಲು 'ಕೈಬರಹದ ರೂಪ'; ಎರಡನೆಯ ಸಾಲು 'ಮುದ್ರಣದ ರೂಪ'1

ವಿದ್ಯಾರ್ಥಿಗಳಿಗೆ ಮೂರು ಪ್ರಕಾರದ ಒತ್ತಕ್ಷರಗಳನ್ನು ವಿವಿಧ ಶಬ್ದಗಳ ಉದಾಹರಣೆ ಕೊಟ್ಟು ಮನನವಾಗುವಂತೆ ಪುನಃ ಪುನಃ ರೂಢಿಸಬೇಕು. ಉದಾ—

೧. ಮೂಲಾಕ್ಷರದಂತಿರುವ ಒತ್ತಕ್ಷರಗಳು—ಹಬ್ಬ, ಅಜ್ಜ.

೨. ತಲೆಕಟ್ಟು ಇಲ್ಲದ ಒತ್ತಕ್ಷರಗಳು —ಹಗ್ಗ, ಅಪ್ಪ.

೩. ವಿಕಾರ ಹೊಂದುವ ಒತ್ತಕ್ಷರಗಳು —ಅಮ್ಮ, ಅನ್ನ.

ಸಂಯುಕ್ತಾಕ್ಷರಗಳನ್ನು ಬಿಡಿಸಿ ಬೇರೆ ಬೇರೆಯಾಗಿ ಬರೆದು ತೋರಿಸಬೇಕು. ಉದಾ — ಕ್ + ಷ್ + ಅ = ಕ್ಷ.


ಕನ್ನಡ ಅಕ್ಷರಗಳು ದುಂಡಾಗಿರುವುದರಿಂದ ಸಾಮಾನ್ಯವಾಗಿ ಹೆಚ್ಚು ಅಕ್ಷರಗಳು ವೃತ್ತಾಕಾರವನ್ನು ಒಳಗೊಂಡಿವೆ. ಇನ್ನು ಕೆಲವು ಅಕ್ಷರಗಳು ಅರ್ಧವರ್ತುಲಾಕಾರದಲ್ಲಿಯೂ ಇವೆ. ೧ ರಿಂದ ೧೦ ರ ವರೆಗಿನ ಎಲ್ಲ ಅಂಕಿಗಳು ಸಹ ದುಂಡಗಿನ ವೃತ್ತದಿಂದಲೇ ಆರಂಭವಾಗುತ್ತವೆ. ಈ ಸಂಗತಿಯನ್ನು ಅವರ ಗಮನಕ್ಕೆ ತಂದಲ್ಲಿ, ನೆನಪಿನಲ್ಲಿಟ್ಟುಕೊಂಡು ಅಕ್ಷರಗಳನ್ನು, ಅಂಕಿಗಳನ್ನು ಕಲಿಯಲು ಸುಲಭವಾಗುವದು.

ಇದಲ್ಲದೆ ಪ್ರಾರಂಭದಲ್ಲಿ ಮೂಲಾಕ್ಷರಗಳನ್ನು ಕಲಿಸುವಾಗ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಬೆರಳಿನ ಚಲನ-ವಲನೆಯನ್ನು ಸೂಕ್ಷ್ಮವಾಗಿ ಗಮನಿಸಲು ತಿಳಿಸಬೇಕು. ಅಕ್ಷರಗಳು ಗೋಲಾಕಾರವಾಗಿರುವದರಿಂದ ಬರೆಯುವಾಗ ಬೆರಳುಗಳು ಕ್ಷಣ-ಕ್ಷಣಕ್ಕೆ ದಿಕ್ಕನ್ನು ಬದಲಾಯಿಸುತ್ತಿರುತ್ತವೆ. ವಿದ್ಯಾರ್ಥಿಗಳು ಅಕ್ಷರದ ಒಟ್ಟು ಆಕಾರವನ್ನು ಹೇಗಾದರೂ (ತಪ್ಪು ರೀತಿಯಿಂದ) ಬರೆಯಲು ಕಲಿಯುವದ

1. ಹಲವು ಮುದ್ರಣದ ಪುಸ್ತಕಗಳ ಮತ್ತು ವಿದ್ಯಾರ್ಥಿಗಳು ತಿಳಿಸಿದ ತೊಡಕಿನ ಆಧಾರ.

ಕ್ಕಿಂತ ಹಂತ-ಹಂತವಾಗಿ ಪದ್ಧತಿಪೂರ್ವಕವಾಗಿ ಕಲಿಯುವದು ಮುಖ್ಯವಾಗಿದೆ ಆದ್ದರಿಂದ ಅಧ್ಯಾಪಕರು ಬರೆಯುವಾಗ ಅವರ ಬೆರಳುಗಳ ಚಲನೆಯನ್ನು ವಿದ್ಯಾರ್ಥಿಗಳು ತಾವು ಕಲಿಯುವದಕ್ಕಾಗಿ ಗಮನಿಸುವುದು ಮತ್ತು ವಿದ್ಯಾರ್ಥಿಗಳು ಬರೆಯುವಾಗ ಅವರಿಗೆ ಕಲಿಸುವದಕ್ಕಾಗಿ ತಿದ್ದುವದಕ್ಕಾಗಿ ಅವರ ಬೆರಳುಗಳ ಚಲನೆಯನ್ನು ಅಧ್ಯಾಪಕರು ನಿರೀಕ್ಷಿಸುವುದು ಅತ್ಯಗತ್ಯವಾಗಿದೆ. ಇರದಿದ್ದರೆ ವಿದ್ಯಾರ್ಥಿಗಳು ತಪ್ಪು ಕ್ರಮದಿಂದ ಅಕ್ಷರಗಳನ್ನು ಬರೆಯಲು ಕಲಿಯುವ ಸಾಧ್ಯತೆಯಿದೆ. ಕನ್ನಡೇತರರು ಸೌಲಭ್ಯಾಕಾಂಕ್ಷೆಯಿಂದ ಪ್ರತಿಯೊಂದು ಅಕ್ಷರವನ್ನು ಸಾಧ್ಯವಾದಷ್ಟು ಭಾಗಗಳಲ್ಲಿ ಬಿಡಿಸಿ ಬರೆಯುವರು. ಅವರು ಹೀಗೆ ಬಿಡಿಸಿ ಬರೆಯುವ ಪದ್ಧತಿಯನ್ನಯ ಉದಾಹರಣೆಗಾಗಿ ಕೆಳಗೆ ಎರಡು ಅಕ್ಷರಗಳನ್ನು ವಿಂಗಡಿಸಿ ತೋರಿಸಲಾಗಿದೆ.

ಉದಾ—



ಅಕ್ಷರಗಳನ್ನು ಬರೆಯುವಾಗ ಮಧ್ಯ ಮಧ್ಯ ಸಿಕ್ಕಲ್ಲಿ ಬರವಣಿಗೆಯ ದಿಕ್ಕನ್ನು ಬದಲಿಸುವುದು ಹಾಗೂ ಅವುಗಳನ್ನು ಬಹು ಭಾಗಗಳಲ್ಲಿ ಬಿಡಿಸುವುದು ಸರಿಯಲ್ಲ. ಆದರೆ ಕನ್ನಡೇತರರಿಗೆ ಬರೆಯುವ ಅನುಕೂಲಕ್ಕಾಗಿ ಅಕ್ಷರಗಳನ್ನು ಕೇವಲ 'ಮುಖ್ಯ ಅಂಗ' 'ಉಗಅಂಗ'ಗಳಾಗಿ ಮಾಡಿ, ನಡುವೆ ಒಂದು (ಅಥವಾ ಎರಡು) ಸಲ ಮಾತ್ರ ಬೆರಳನ್ನು ನಿಲ್ಲಿಸಿ ಪುನಃ ಮುಂದುವರೆಸಿ ಬರೆಯುವ ಸರಿಯಾದ ಪದ್ಧತಿಯನ್ನು ಕಲಿಸಬೇಕು. ಅಕ್ಷರಗಳ ಆರಂಭದ ಸ್ಥಾನವನ್ನು, ಬದಲಾಗುವ ತಿರುವುಗಳನ್ನು ಮತ್ತು ಕೊನೆಯ ಸ್ಥಾನವನ್ನು ವಿವಿಧ ಚಿಹ್ನೆಗಳೊಂದಿಗೆ ತೋರಿಸಬೇಕು. ಹಾಗೂ ಕನ್ನಡ ಅಕ್ಷರಗಳು ಎಡಗಡೆಯಿಂದ ಆರಂಭವಾಗಿ ಬಲಗಡೆಗೆ ಮುಂದುವರಿದು ಅಂತ್ಯಗೊಳ್ಳುವುವು ಎಂಬುದನ್ನೂ ತಿಳಿಸಬೇಕು.

ಉದಾ : ೧. ಅ

ಮೊದಲು 'ಅ' ದ 'ಮುಖ್ಯಅಂಗ' 'ಲಿ' ಇದನ್ನು ನಂತರ 'ಉಪಅಂಗ'ವಾದ ಅದರೊಳಗಿನ ಅಡ್ಡಗೆರೆ (–) ಯನ್ನು ಬರೆಯಿಸಬೇಕು.

ಬಾಣದ ಗುರುತುಗಳು ಬರೆಯುವ ದಿಕ್ಕನ್ನು ಸೂಚಿಸುತ್ತವೆ.

೧—'ಅ' ಅಕ್ಷರದ ಆರಂಭದ ಮತ್ತು ಮುಕ್ತಾಯದ ಸ್ಥಾನ, (ಮುಖ್ಯ ಅಂಗ 'ಲಿ')

೨— 'ಮುಖ್ಯಅಂಗ' ವನ್ನು ಬರೆದ ನಂತರ 'ಉಪಅಂಗ' ವನ್ನು (ಅಡ್ಡಗೆರೆ '–') ಪ್ರಾರಂಭಿಸುವ ಸ್ಥಾನ. ಈ ಅಡ್ಡಗೆರೆಯನ್ನು ಬಲಗಡೆಯಿಂದ ಎಡಗಡೆಗೆ ಎಳೆದು 'ಮುಖ್ಯಅಂಗ'ವನ್ನು ಆರಂಭಿಸಿದ (೧) ಸ್ಥಾನಕ್ಕೆ ಕೂಡಿಸಬೇಕು.

ಉದಾ ೨ : ಈ

ಮೊದಲು 'ಈ' ಅಕ್ಷರದ 'ಮುಖ್ಯಅಂಗ'ವಾದ ದೊಡ್ಡ ಸೊನ್ನೆ (ಇಂಗ್ಲೀಷಿನ 'o' ದಂತೆ) ಬರೆಯಿಸಿ, ಆಮೇಲೆ ಅದರ ಎರಡು 'ಉಪಅಂಗ'ಗಳಾದ ತಲೆಕಟ್ಟು (⁻) ಹಾಗೂ ಮಧ್ಯದ ಅಡ್ಡಗೆರೆ (~) ಯನ್ನು ಬರೆಯಿಸಬೇಕು.

ಬಾಣದ ಚಿಹ್ನೆಗಳು ಅಕ್ಷರವನ್ನು ಬರೆಯುವ ಮಾರ್ಗವನ್ನು ತೋರಿಸುತ್ತವೆ.


೧. 'ಈ' ಯನ್ನು ಮೊದಲನೆಯ ಸಲ ಬರೆಯಲು ಪ್ರಾರಂಭಿಸುವ ಹಾಗೂ ಮುಕ್ತಾಯದ ಸ್ಥಾನ ('ಮುಖ್ಯಅಂಗ'— 'o')

೨. 'ಉಪಅಂಗ'ದ ಆರಂಭದ ಸ್ಥಾನ (ತಲೆಕಟ್ಟು '⁻')

೩. ಎರಡನೆಯ 'ಉಪಅಂಗ' ವನ್ನು ಪ್ರಾರಂಭಿಸುವ ಸ್ಥಾನ, (ಮಧ್ಯದ ಅಡ್ಡಗೆರೆ '~')


ಇನ್ನೊಂದು ಮಹತ್ವದ ಅಂಶವೆಂದರೆ ಅಕ್ಷರಗಳು ಅಂದ ಮತ್ತು ಆಕರ್ಷಕವಾಗಿರಬೇಕಾದರೆ ಅಧ್ಯಾಪಕರು ಅವುಗಳ ಮೈಕಟ್ಟಿನ ಸಮಪ್ರಮಾಣ (proportion) ಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು. ಪ್ರತಿಯೊಂದು ಅಕ್ಷರಗಳಿಗೆ ಮುಖ್ಯಅಂಗ, ಉಪಅಂಗಗಳಿದ್ದು, ಅವುಗಳಿಗೆ ತಮ್ಮದೇ ಆದ ಪರಿಮಿತಿಯೂ ಇದೆ, ಕಾರಣ ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇರದಿದ್ದರೆ ಅಕ್ಷರಗಳು ಸೌಂದರ್ಯವನ್ನು ಕಳೆದುಕೊಂಡು ಕೈಕಾಲು ಸಣ್ಣ ಹೊಟ್ಟೆದುಮ್ಮ ಆಗಿ ರಿಕೆಟ್ಸ್ ರೋಗದಿಂದ ಬಳಲುವ ಮಕ್ಕಳಂತೆ ಕಾಣಬಹುದು.

ಉದಾ :



ವಿದ್ಯಾರ್ಥಿಗಳ ಈ ದೋಷವನ್ನು ನಿವಾರಿಸಲು ಅಧ್ಯಾಪಕರು ಅವರಿಗೆ ಮೂರು ಗೆರೆಯ ಎಕ್ಸರ್‌ಸಾಯಿಸ್ ಪುಸ್ತಕಗಳಲ್ಲಿ ಪ್ರಮಾಣಬದ್ಧ (ಸಮಪ್ರಮಾಣ-proportion) ವಾದ ಅಕ್ಷರಗಳನ್ನು ರೂಢಿ (practice) ಮಾಡಿಸುವ ಅವಶ್ಯಕತೆಯಿದೆ.

ಇನ್ನು ಕೆಲವು ಅಕ್ಷರಗಳು ತಮ್ಮ ರೂಪ ಸಾಮ್ಯದಿಂದ ಕನ್ನಡೇತರರಿಗೆ ಗೊಂದಲವನ್ನುಂಟು ಮಾಡುತ್ತವೆ. ಆದ್ದರಿಂದ ಅಧ್ಯಾಪಕರು ಸಾಕಷ್ಟು ಉದಾಹರಣೆ ಹಾಗೂ ರೂಢಿಯ ಮೂಲಕ ಈ ಗೊಂದಲವನ್ನು ಪರಿಹರಿಸಲು ಸಾಧ್ಯವಿದೆ. ಸಂಶಯಕ್ಕೆ ಆಸ್ಪದವಾದ ವರ್ಣಗಳು ಕೆಳಗಿನಂತಿವೆ.



(ಈ ಚಿತ್ರದ ಮೂರನೆಯ ಸಾಲಿನಲ್ಲಿ 'ಪು'ದ ಬದಲು 'ಮ' ಎಂದು ಓದಿಕೊಳ್ಳಿರಿ)

ವಿದ್ಯಾರ್ಥಿಗಳು ಈ ಅಕ್ಷರಗಳನ್ನು ಬರೆಯುವಾಗ, ಓದುವಾಗ ತಪ್ಪುವ ಸಂಭವವಿದೆ. ಇದನ್ನು ಅಧ್ಯಾಪಕರು ಸೂಕ್ಷ್ಮವಾಗಿ ಗಮನಿಸಿ, ಆ ಅಕ್ಷರಗಳ ನಡುವಿನ ವ್ಯತ್ಯಾಸವನ್ನು ಅವರಿಗೆ ಮನನವಾಗುವಂತೆ ಸ್ಪಷ್ಟಪಡಿಸಬೇಕು. ಇದು ಲಿಪಿಯ ಸಾಮ್ಯದಿಂದಾಗುವ ತೊಡಕಾದರೆ, ಉಚ್ಚಾರದ ಸಾಮ್ಯದಿಂದ ಉಂಟಾಗಬಹುದಾದ ದೋಷಗಳನ್ನು ಕೆಳಗಿನ ಪದಗಳಲ್ಲಿ ಗುರುತಿಸಬಹುದು.

ಉದಾ—ತಾಯಿ-ತಾಇ, ಅಣ್ಣ-ಅನ್ನ, ಋಣ-ರುಣ, ಸೀತೆ-ಶೀತೆ, ಔಷಧ-ಅವುಸದ, ಧರ್ಮ-ಧರಮ, ಚಂದ್ರ-ಚಂದರ, ಕರ್ನಾಟಕ-ಕರನಾಟಕ, ಸರ್ವೋದಯ-ಸರ್ಒದಯ, ಒಣ-ವಣ, ಔರಂಗಾಬಾದ-ಅವುರಂಗಾಬಾದ, ಹೌದು-ಹವುದು, ಗೃಹ-ಗ್ರಹ, ಮಾತೃ-ಮಾತ್ರು ಮುಂತಾದವು.

ಕನ್ನಡೇತರ ವಿದ್ಯಾರ್ಥಿಗಳಿಗೆ ಅಧ್ಯಾಪಕರು "ಶುದ್ಧಬರಹ" ಬರೆಯಲು (dictation) ಹೇಳಿದಾಗ ಮೇಲಿನಂತಹ ದೋಷಗಳು ಸಾಕಷ್ಟು ಕಂಡುಬರುತ್ತವೆ. ಇದು ಉಚ್ಚಾರದ ಸಾಮ್ಯತೆಯ ತೊಡಕಾಗಿದೆ. ಇಂತಹವುಗಳನ್ನು ಮೇಲಿಂದ ಮೇಲೆ ಬರೆಯಿಸುವ ರೂಢಿಯಿಂದ ಮತ್ತು ಸ್ಪಷ್ಟವಾದ ತಿಳುವಳಿಕೆಯಿಂದ ನಿವಾರಿಸಬಹುದು.

ಉಚ್ಚಾರಣೆಯ ಅಭ್ಯಾಸದ ಕುರಿತಾದ ಎರಡು ಮಾತುಗಳು ಹೀಗಿವೆ : "Drills play a vital role in the acquisition and testing of listening and speaking skilis and exercises in reading and writing skills".[1]

"The teacher must be very attentive in administering the drills and exercises in view of their vital role in the language acquisition".[2]

ವಿದ್ಯಾರ್ಥಿಗಳ ಮಾತನಾಡುವಿಕೆ ಓದುವಿಕೆ ಮತ್ತು ಕೇಳುವಿಕೆಯನ್ನು ಪರೀಕ್ಷಿಸಲು ರೂಢೀಕರಣ (ಡ್ರಿಲ್ಲಿಂಗ) ಉತ್ತಮ ಮಾಧ್ಯಮವಾಗಿದೆ. ಡ್ರಿಲ್ಲಿಂಗ ಮಾಡಿಸುವಾಗ ಅಧ್ಯಾಪಕರು ಅವರತ್ತ ಸಂಪೂರ್ಣ ಗಮನವನ್ನಿತ್ತು ಮಾರ್ಗದರ್ಶನ ಮಾಡಬೇಕು. ಇದರ ವಿವಿಧ ಪ್ರಕಾರಗಳ ಅಭ್ಯಾಸದಿಂದ ವಿದ್ಯಾರ್ಥಿಗಳನ್ನು ಪಳಗಿಸಬೇಕು.

'ಒ' ಈ ಸ್ವರಾಕ್ಷರದ ಸಮಸ್ಯೆ ಇನ್ನೊಂದು ರೀತಿಯಾಗಿದೆ. ಇದು ಸ್ವರಗಳ ಸಾಲಿನಲ್ಲಿ ಬಂದಾಗ, ಸ್ವತಂತ್ರವಾಗಿರುವ ಇಂಗ್ಲೀಷಿನ 'o' ದಂತೆ ಉಚ್ಚಾರವಾದರೆ, ಶಬ್ದಗಳ ಆದಿಯಲ್ಲಿ ಬಂದಾಗ 'ವ' ದ ಛಾಯೆ ಕೂಡಿಕೊಂಡು ಇಂಗ್ಲೀಷಿನ w (va) ಉಚ್ಚರಿಸಲ್ಪಡುವದು.

ಉದಾ—ಒಟ್ಟು, ಒಬ್ಬ, ಒಪ್ಪು, ಒನಕೆ

ಒಣ, ಒಂದು, ಒಂಟೆ ಮುಂತಾದ ಕಡೆಗಳಲ್ಲಿ 'ಒ'ನ್ನು ಸಹಜವಾಗಿ 'ವ' ಎಂದು ಓದಲಾಗುವದು. ಇದರಂತೆ 'ಎ' ಸಹ ಸ್ವರಗಳ ಸಾಲಿನಲ್ಲಿ 'e' ದಂತೆ ಉಚ್ಚರಿಸಲ್ಪಟ್ಟರೆ ಶಬ್ದಗಳ ಪ್ರಾರಂಭದಲ್ಲಿ ಬಂದಾಗ 'ya'ದಂತೆ ಉತ್ತರಿಸಲ್ಪಡುವದು.

ಅಧ್ಯಾಪಕರಿಗೆ ಎದುರಾಗುವ ಇನ್ನೊಂದು ಮುಖ್ಯ ಸಮಸ್ಯೆಯೆಂದರೆ ಕನ್ನಡೇತರರಿಗೆ ಕನ್ನಡ ಕಲಿಸುವಾಗ ಮಾಧ್ಯಮವಾಗಿ ಮತ್ತೊಂದು ಭಾಷೆ (medium language) ಯನ್ನು ಉಪಯೋಗಿಸಬೇಕೋ ಉಪಯೋಗಿಸಬಾರದೋ ಎಂಬುದಾಗಿದೆ.[3] ಆದರೆ ಬಳಸುವದು ಅವಶ್ಯವೆನಿಸುತ್ತದೆ. ಬಹುಜನ ವಿದ್ಯಾರ್ಥಿಗಳಿಗೆ ಪರಿಚಯವಿರುವ ಮತ್ತೊಂದು ಭಾಷೆಯ (ಉದಾ—ಇಂಗ್ಲೀಷ, ಹಿಂದಿ) ನೆರವು ಇಲ್ಲದೆ ಸರಿಯಾಗಿ ಕಲಿಸಲು ಸಾಧ್ಯವಿಲ್ಲ. ಮಾಧ್ಯಮ ಭಾಷೆಯೊಂದನ್ನು ಬಳಸುವುದರಿಂದ ಅವರಿಗೆ ಕನ್ನಡವು ಹೆಚ್ಚಿನ ಮಟ್ಟದಲ್ಲಿ ಅರ್ಥವಾಗುವುದಲ್ಲವೆ ಬೇಗನೆ ಗ್ರಹಿಸಲು ಸಹಾಯಕವಾಗುವದು. ಆದ್ದರಿಂದ ದ್ವಿತೀಯ ಭಾಷಾ ಅಧ್ಯಾಪಕರು ಮಾಧ್ಯಮ ಭಾಷೆಯಾಗಿ ಇಂಗ್ಲೀಷ, ಹಿಂದಿಯನ್ನು ಉಪಯೋಗಿಸುವದು ಅವಶ್ಯವಾಗಿದೆ.

---

1. ಕನ್ನಡ ನುಡಿ ಘಟ್ಟ– 2. ಲೇಖಕರು : ಶ್ರೀ ಕೆ. ಪಿ. ಆಚಾರ್ಯ.
2. — ಅದೇ —
3. ಇದರ ಕುರಿತು ಭಿನ್ನಾಭಿಪ್ರಾಯಗಳಿವೆ.

ಅಕ್ಷರಗಳ ಉಚ್ಚಾರದ ಕ್ರಮವನ್ನು ಅಧ್ಯಾಪಕರು ಹಲವು ಬಾರಿ ವಿದ್ಯಾರ್ಥಿಗಳಿಗೆ ಹೇಳಿದರೂ ಅವರಿಂದ ಸರಿಯಾದ, ತೃಪ್ತಿದಾಯಕ ಉಚ್ಚಾರವನ್ನು ಹೊರಡಿಸುವದು ಕಷ್ಟವಾಗುತ್ತದೆ.[1] ಉಚ್ಚಾರದ ಧ್ವನಿಯು ಅವರ ಬಾಯಿಯ ಅಂತರ್ಭಾಗದಲ್ಲಿ ಹೊರಡಬೇಕಾದ ಸರಿಯಾದ ಸ್ಥಳದಿಂದ ಹೊರಡಲಾರದು. ಇಂತಹ ಪ್ರಸಂಗದಲ್ಲಿ ಮಾಧ್ಯಮ ಭಾಷೆಯು ಅನಿವಾರ್ಯವಾಗುತ್ತದೆ.

ಉದಾ— 'ಅ' ಇದನ್ನು ಸರಿಯಾಗಿ ಉಚ್ಚರಿಸದೆ ಒಮ್ಮೊಮ್ಮೆ 'ಆ'ದ ಧ್ವನಿಯನ್ನೋ ಅಥವಾ ಅದನ್ನು ಹೋಲುವ ಬೇರೆ ಇನ್ನಾವುದೊ ಧ್ವನಿಯನ್ನು ತಪ್ಪಾಗಿ ಉಚ್ಚರಿಸುವುದುಂಟು. ಆಗ 'ಅ'ದ ಸರಿಯಾದ ಉಚ್ಚಾರವನ್ನು ಕಲಿಸುವದಕ್ಕಾಗಿ about, apart, arrange, around ಮುಂತಾದ ಶಬ್ದಗಳನ್ನು ಸಹಾಯಕ್ಕಾಗಿ ಹೇಳಿ, ಈ ಶಬ್ದಗಳ ಉಚ್ಚಾರಣೆಯ ಮೊದಲ ಅಕ್ಷರದ ಉಚ್ಚಾರವೇ 'ಅ' ದ ಉಚ್ಚಾರಣೆಯೆಂದು ಸ್ಪಷ್ಟಪಡಿಸಬೇಕು.

'ಆ'	ಕ್ಕೆ	are, car, bar
'ಇ'	ಗೆ	in, it, if, ink
'ಈ'	ಗೆ	eagle, eager, easy, east
'ಕ'	ಕ್ಕೆ	correct, correspond
'ಗ'	ಕ್ಕೆ	gun, gum, gutter

ಹೀಗೆ ಕನ್ನಡದ ವಿವಿಧ ಅಕ್ಷರಗಳಿಗೆ ಮಾಧ್ಯಮ ಭಾಷೆಯ ಸಮವಾದ ಉಚ್ಚಾರಣೆಯ ಅಕ್ಷರಗಳನ್ನು ಬರೆದು ತಿಳಿಸಬೇಕು. ಇಂತಹ ಸಮಸ್ಯೆ ಹೆಚ್ಚಾಗಿ ಒತ್ತಕ್ಷರ, ಸಂಯುಕ್ತಾಕ್ಷರ ಮುಂತಾದೆಡೆಗೆ ಕಾಣುವದು. ಆಗಲೂ ಇದೇ ಪದ್ಧತಿಯನ್ನು ಬಳಸುವದು ಸೂಕ್ತವಾಗಿದೆ. ಕನ್ನಡದ ಶಬ್ದಗಳಲ್ಲಿ ಕನ್ನಡೇತರರಿಗೆ ಮುಖ್ಯವಾಗಿ ತೊಡಕಾಗುವವುಗಳೆಂದರೆ ಶ, ಷ, ಸ ಹಾಗೂ ಮಹಾಪ್ರಾಣ ಅಕ್ಷರಗಳ ಉಚ್ಚಾರ ಮತ್ತು ಬರವಣಿಗೆ. ಇವುಗಳನ್ನು ಸಹ

shepherd	ಶೆಪರ್ಡ್,	shed	ಶೆಡ್
shallot	ಷಲಾಟ್,	shutter	ಷಟರ್
sun	ಸನ್	subject	ಸಬ್ಜೆಕ್ಟ್ ಮುಂತಾದ ಶಬ್ದ

1. ಅವರ ತಾಯ್ನುಡಿಯ ಪ್ರಭಾವವೂ ಇದಕ್ಕೆ ಕಾರಣವೆನ್ನಬಹುದು.

ಗಳ ಉದಾಹರಣೆಯಿಂದ ಕಲಿಸಬೇಕಾಗುವದು. ಆಗ ಕೆಳಗೆ ಗೆರೆ ಹಾಕಿದ ಅಕ್ಷರಗಳ ಉಚ್ಚಾರವನ್ನು ಗಮನಿಸಲು ತಿಳಿಸಬೇಕು. ಇದಲ್ಲದೆ ಅವರಿಗೆ ಕಲಿಸುವ ಪ್ರತಿಯೊಂದು ಶಬ್ದಗಳಿಗೆ ಕೆಳಗಿನ ಕ್ರಮವು ಸುಲಭವಾದುದಾಗಿದೆ.

ಮನೆ (mane) — home, house
ಶಾಲೆ (shāle) — school
ಭಾಷೆ (bhāse) — language
ಮರ (mara) — tree
ನದಿ (nadi) — river
ಮಳೆ (male) — rain
ಚಿಕ್ಕ (chikka) — small
ದೊಡ್ಡ (dodda) — big
ತಿಂಗಳು (tingalu) — month
ತಂದೆ (tande) — father
ಆಟ (āta) — play
ಊಟ (ūta) — meal
ಜಗ್ಗು (jaggu) — pull
ಹೋಗು (hōgu) — go
ಬಾ (bā) — come

ಇದೇ ರೀತಿ ಮಾದರಿಗಾಗಿ ಒಂದೆರಡು ವಾಕ್ಯಗಳನ್ನು ಕೆಳಗೆ ಕೊಡಲಾಗಿದೆ.

ನಿನ್ನ ಹೆಸರು ಏನು ?

ninna hesaru ēnu ?
What is your name ?

ನನ್ನ ಹೆಸರು ರಾಮ

nanna hesaru rāma

My name is Rāma.

ನಾನು ಶಾಲೆಗೆ ಹೋಗುವೆನು.

nanu shalege hoguvenu
I go to school.
ಇದು ಸುಂದರವಾದ ಹೂ ತೋಟ

idu sundarawada hu tota
This is beautiful flower garden.

(ಈ ವಾಕ್ಯದಲ್ಲಿಯ 'ಇದು' ಇದನ್ನು 'ಇಡು' ಎಂದು ಹಾಗೂ 'ತೋಟ' ಇದನ್ನು 'ಟೋಟ' ಎಂದು ಉಚ್ಚಾರಿಸುವ ಸಂಭವವಿದೆ. ಕಾರಣ ಅಧ್ಯಾಪಕರು ಅವರ ಧ್ವನಿಯನ್ನು ಸೂಕ್ಷ್ಮವಾಗಿ ಗಮನಿಸಬೇಕು.) ಕನ್ನಡವನ್ನು ಕಲಿಸುವಲ್ಲಿ ಇದು ಉಪಯುಕ್ತ ಹಾಗೂ ಸುಲಭ ಗ್ರಾಹ್ಯ ಕ್ರಮವಾಗಿದೆ.

ಹೀಗೆ ಅಧ್ಯಾಪಕರು ನಿತ್ಯವೂ ವ್ಯವಹಾರದಲ್ಲಿ ಬಳಕೆಯಾಗುವ ಹಾಗೂ ಪಠ್ಯಪುಸ್ತಕದಲ್ಲಿ ಬರುವ ಶಬ್ದಗಳನ್ನು ಇಂಗ್ಲೀಷ ಅರ್ಥಗಳ ಮೂಲಕ ಮತ್ತು ಕನ್ನಡ ಉಚ್ಚಾರವನ್ನು ಇಂಗ್ಲೀಷ ಲಿಪಿಯ ಸಹಾಯದಿಂದ ಕಲಿಸುವದು ಹೆಚ್ಚು ಪರಿಣಾಮಕಾರಿಯಾಗಿದೆ. ಅಲ್ಲದೆ ಸಾಂದರ್ಭಿಕವಾಗಿ ಬರುವ ಕನ್ನಡದ ಕೆಲವು ಒಂದೇ ಶಬ್ದಗಳಿಗಿರುವ ಬೇರೆ ಬೇರೆ ಅರ್ಥಗಳನ್ನೂ ಮತ್ತು ಒಂದೇ ಅರ್ಥಕೊಡುವ ಇತರ ಪದಗಳನ್ನೂ ತಿಳಿಸಬೇಕು.

ಅಧ್ಯಾಪಕರ ಕಲಿಸುವ ಕ್ರಮದ ಕುರಿತಾದ ಒಂದು ಮಾತು ಇಂತಿದೆ : "The teacher is expected to read the lesson carefully and understand it and the structures used therein before attempting to teach it in the class."[1]

ಕನ್ನಡೇತರರಿಗೆ ಕಲಿಸುವ ಅಕ್ಷರ ಅಭ್ಯಾಸವಾಗಲಿ, ಶಬ್ದಸಂಗ್ರಹವಾಗಲಿ, ಪಾಠಬೋಧನೆಯಾಗಲಿ ಕ್ರಮೇಣವಾಗಿ, ನಿಧಾನವಾಗಿ, ಹಂತ-ಹಂತವಾಗಿ ಮುಂದುವರಿಸಬೇಕು. ಇಂತಹ ಉಪಕ್ರಮ ಸ್ಪಷ್ಟವಾಗಿದ್ದು ಸರಳತೆಯಿಂದ ಕಠಿಣದತ್ತ ಸಾಗಬೇಕು. ಕಲಿಸುವ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರಬೇಕು. ಒಮ್ಮೆ ಕಲಿಸಿದ ಅಕ್ಷರ, ಶಬ್ದ ಮುಂತಾದವುಗಳನ್ನು ಅವರಿಗೆ ಮರೆಯಗೊಡಬಾರದು. ಆ ಜ್ಞಾನ ಅವರ ಸ್ಮೃತಿ ಪಟಲದಿಂದ ಅಳಿಕಿಸಿ ಹೋಗದೆ, ಸದಾ ನೆನಪಿನಲ್ಲಿ ಉಳಿಯುವದಕ್ಕಾಗಿ ಅವರಿಗೆ ಆಗಾಗ ರೂಢಿ (ಡ್ರಿಲ್ಲಿಂಗ) ಮಾಡಿಸಬೇಕು. ಶುದ್ಧ ಮತ್ತು

1. ಕನ್ನಡ ನುಡಿ ಘಟ್ಟ—1. ಲೇಖಕರು : ಶ್ರೀ ಭ. ಮಲ್ಲಿಕಾರ್ಜುನ

ಸ್ಪಷ್ಟವಾದ ಬರವಣಿಗೆ ಹಾಗೂ ಉಚ್ಚಾರಗಳಿಗಾಗಿ ತುಂಬಾ ರೂಢಿ ಮಾಡಿಸುವದು ಅವಶ್ಯವಾಗಿದೆ. ಇದಕ್ಕಾಗಿ ಅಧ್ಯಾಪಕರು ಅವರನ್ನು ಕನ್ನಡ ಮಾತನಾಡುವ ಜನರು, ಸ್ಥಳ (ಪೇಟೆ. ದೇವಾಲಯ, ಜಾತ್ರೆ ಇತ್ಯಾದಿ), ವಿಚಾರಗೋಷ್ಠಿ, ನಾಟಕ ಮುಂತಾದ ಕಡೆಗೆ ಕರೆದುಕೊಂಡೂ ಹೋಗಬೇಕು. ಇದರಿಂದ ಅವರಿಗೆ ಪ್ರಾಯೋಗಿಕ ಜ್ಞಾನ, ಅನುಭವ (practical knowledge, experience) ವೂ ಒದಗುವದಲ್ಲದೆ, ಸುತ್ತಲೂ ಕನ್ನಡ ವಾತಾವರಣವಿರುವದರಿಂದ ಕನ್ನಡ ಭಾಷಾಗ್ರಹಣ ಶಕ್ತಿಯು ತೀವ್ರತರವಾಗುವದು.

ಒಟ್ಟಿನಲ್ಲಿ ಹೇಳುವದಾದರೆ ಕನ್ನಡೇತರರು ಕನ್ನಡದ ಈ ಕೋರ್ಸನ್ನು ಮುಗಿಸಿದಾಗ ಕೆಳಗೆ ತಿಳಿಸಿದ ಸಾಮರ್ಥ್ಯವನ್ನು ಹೊಂದಿರಬೇಕು.

1) ಕನ್ನಡಿಗರು ಆಡಿದ ಮಾತು ಇವರಿಗೆ ಅರ್ಥವಾಗಬೇಕು. ಹಾಗೂ ಕನ್ನಡಿಗರೊಡನೆ ಯಾವ ಅಡೆತಡೆಯಿಲ್ಲದೆ ಮಾತನಾಡಬೇಕು.

2) ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡಬೇಕು.

3) ಕನ್ನಡವನ್ನು ಯಾವ ತೊಂದರೆಯಿಲ್ಲದೆ ಸರಿಯಾಗಿ ಓದಬೇಕು, ಬರೆಯಬೇಕು.

4) ಗದ್ಯ ಖಂಡಗಳನ್ನು, ಸರಳವಾದ ಸಣ್ಣ ಸಣ್ಣ ಕಥೆಗಳನ್ನು ತಾಯ್ನುಡಿಯಿಂದ ಕನ್ನಡಕ್ಕೆ, ಕನ್ನಡದಿಂದ ತಾಯ್ನುಡಿಗೆ ಅನುವಾದಿಸಬೇಕು.

5) ಯಾವುದಾದರೂ ವಿಷಯದ ಮೇಲೆ ಸ್ವತಃ ಬರೆಯಬೇಕು. ಇತ್ಯಾದಿ.

ದ್ವಿತೀಯ ಭಾಷಾ ಅಧ್ಯಾಪಕರು ಕನ್ನಡೇತರರಿಗೆ ಸರಿಯಾಗಿ ಕನ್ನಡವನ್ನು ಕಲಿಸಲು ಕೆಳಗಿನ ಸಾಮಗ್ರಿಗಳ ಅವಶ್ಯಕತೆಯಿದೆ.

1) ಮೊದಲು ಅಧ್ಯಾಪಕರಿಗೇ ತರಬೇತಿಯ ವ್ಯವಸ್ಥೆ.
2) ಸರಿಯಾದ ಪಠ್ಯಪುಸ್ತಕಗಳು.
3) ಸುಸಜ್ಜಿತ ಪ್ರಯೋಗಾಲಯ.
4) ಇತರ ಸಾಧನಗಳು.

ಕೊನೆಯದಾಗಿ ಕನ್ನಡೇತರರಿಗೆ ಕನ್ನಡವನ್ನು ಕಲಿಸುವ ಅಧ್ಯಾಪಕರು ತಿಳಿದಿರಬೇಕಾದ ಕೆಲವು ಮಾತುಗಳು ಕೆಳಗಿನಂತಿವೆ.

ಪರಭಾಷೆಯವರಿಗೆ ನಮ್ಮ ಭಾಷೆಯನ್ನು ತಿಳಿಯುವಂತೆ ಕಲಿಸುವದು ಒಂದು ಕಲೆಯಾಗಿದೆ. ಇಂತಹ ಅಧ್ಯಾಪಕರಲ್ಲಿರಬೇಕಾದ ಮುಖ್ಯ ಗುಣಗಳೆಂದರೆ ತನ್ನ ಭಾಷೆಯ ಬಗ್ಗೆ, ಗೌರವ, ಸೂಕ್ಷ್ಮ ಬುದ್ಧಿ ನಿರೀಕ್ಷೆ— ಪರೀಕ್ಷೆಯ ಚತುರತೆ, ಸದಾ ಜಾಗೃತ ಸ್ಥಿತಿ (ವಿದ್ಯಾರ್ಥಿಗಳು ಬರೆಯುವಾಗ, ಓದುವಾಗ ಪೂರ್ಣ ಲಕ್ಷ ಕೊಡವದು)

ಸಂಯಮ (ಅವರು ಒಮ್ಮೊಮ್ಮೆ ಅಪಾರ್ಥವಾಗುವಂತೆ ಓದಬಹುದು. ಅಂತಹ ಸಮಯದಲ್ಲಿ ನಗು, ಕೋಪ ಸರಿಯಲ್ಲ) ಹಾಗೂ ಕಲಿಸುವಲ್ಲಿ ಶ್ರದ್ಧೆಯಿರಬೇಕು.

ಅಧ್ಯಾಪಕರಲ್ಲಿ ತಾವು ಕಲಿಸುತ್ತಿರುವದು ಕನ್ನಡೇತರರಿಗೆ, ಮತ್ತು ಅವರು ಕನ್ನಡವನ್ನು ಕಲಿಯುವಾಗ ತಮ್ಮ ತಾಯ್ನುಡಿಯ ಪ್ರಭಾವಕ್ಕೆ ಒಳಗಾಗುವದೂ ಸಹಜ ಎಂಬ ಪ್ರಜ್ಞೆಯೂ ಇರಬೇಕು. ಕಲಿಸುವ ಕ್ರಮವು ಪ್ರೇರಣಾತ್ಮಕವೂ-ಪ್ರೋತ್ಸಾಹದಾಯಕವೂ ಹಾಗೂ ಸರಳವೂ, ಸ್ಪಷ್ಟವೂ ಆಗಿರಬೇಕು. ಕಲಿಸುವ ಈ ಪದ್ಧತಿಯು ಕನ್ನಡೇತರರ ಮಾತೃಭಾಷೆ, ಶಿಕ್ಷಣ ಉದ್ಯೋಗ, ವಯಸ್ಸಿಗೆ ತಕ್ಕಂತೆ ಸ್ವಲ್ಪ ಬದಲಾವಣೆಯಾಗುವದು. (ಕನ್ನಡೇತರರಿಗೆ ಕನ್ನಡ ಕಲಿಸುವ ಕ್ರಮ ಬೇರೆ, ಅಶಿಕ್ಷಿತ ಕನ್ನಡಿಗರಿಗೆ ಕನ್ನಡ ಕಲಿಸುವ ಕ್ರಮ ಬೇರೆ.)

ಅಧ್ಯಾಪಕರು ಪರಭಾಷೆಯವರ ಎದುರಿಗೆ ತಮ್ಮ 'ತಾಯ್ನುಡಿ'ಯ ಪ್ರತಿನಿಧಿಯಾಗಿ ನಿಲ್ಲಬೇಕಾಗುವದರಿಂದ ಅವರ ಕರ್ತವ್ಯ ಬಹು ಜವಾಬ್ದಾರಿಯದಾಗಿರುತ್ತದೆ. ವಿದ್ಯಾರ್ಥಿಗಳಿಗೆ ತಾವು ಕಲಿಯಲಿರುವ ಭಾಷೆಯ ಬಗ್ಗೆ ಏನೂ ಗೊತ್ತಿರುವದಿಲ್ಲ. ಕಾರಣ ಈ ಅಧ್ಯಾಪಕರು ಕಲಿಸುವದೆಲ್ಲ 'ವೇದ ವಾಕ್ಯ'ವೆಂದೇ ತಿಳಿದು ಅದನ್ನು ಅವರು ತಮ್ಮ ತಲೆ ಮತ್ತು ಕಾಗದಗಳಲ್ಲಿ ತುಂಬಿಕೊಳ್ಳುತ್ತಾರೆ. ಆದ್ದರಿಂದ ಅಧ್ಯಾಪಕರು ಅತ್ಯಂತ ಜಾಗರೂಕರಾಗಿರಬೇಕು. ಕನ್ನಡ ಭಾಷೆಯ ಪ್ರತಿಯೊಂದು ಅಕ್ಷರವನ್ನು ಬಾಯಿಯಿಂದ ಹೊರಗೆ ಬಿಡುವ ಮುಂಚೆ ಹಾಗೂ ಕೈಯಿಂದ ಬರೆಯುವ ಮುಂಚೆ ಸರಿಯಾಗಿ ಯೋಚಿಸಬೇಕು. ಇಲ್ಲಿ 'Every letter is science, use them cautiously' ಎಂಬಂತೆ ಅಧ್ಯಾಪನ ಮಾಡಬೇಕು. ಒಮ್ಮೊಮ್ಮೆ ಅಕ್ಷರಗಳ ಅತ್ಯಲ್ಪ ತಪ್ಪುಗಳು ಅಪಾರ್ಥಕ್ಕೆಡೆಯಾಗುವ ಸಂಭವವಿದ್ದು, ಅದರಿಂದ ಕನ್ನಡಕ್ಕೆ ದ್ರೋಹ ಬಗೆದಂತಾಗುವದು. ಆದ್ದರಿಂದ ಕನ್ನಡೇತರರಿಗೆ ಕನ್ನಡ ಕಲಿಸುವ ಅಧ್ಯಾಪಕರ ಬಗ್ಗೆ ಹೇಳಿರುವ "The teacher should come to class well prepared for this purpose"[1] ಎಂಬ ಮಾತು ಸೂಕ್ತವಾಗಿದೆ.

1. ಕನ್ನಡ ನುಡಿ ಘಟ್ಟ-2. ಲೇಖಕರು : ಶ್ರೀ ಕೆ. ಪಿ. ಆಚಾರ್ಯ.

‘ ಹರಳಯ್ಯಗಳ ವಾದ ಖಂಡನ ’
(ಚೌಪದನ)
ಕವಿ ಚನ್ನಮಲ್ಲನ ಮೇಲೆ ಒಂದು ಬೆಳಕು

● ವ್ಹಿ. ಶಿವಾನಂದ

ಹೈದರಾಬಾದು ಕನ್ನಡ ಪ್ರದೇಶದ ಮನೆ-ಮಠಗಳಲ್ಲಿ ಆಗಾಗ್ಗೆ ಸಂಗ್ರಹಿಸುತ್ತ ಬಂದಿರುವ ನನ್ನ ಸ್ವಂತ ಸಂಗ್ರಹದಲ್ಲಿ ಕಾಗದದ ಮೇಲೆ ಉಪಲಬ್ಧವಾಗಿರುವ “ಹರಳಯ್ಯಗಳ ವಾದ ಖಂಡನ” ಇಲ್ಲಿದೆ.* ಇದರ ಕರ್ತೃವಾದ ಚನ್ನಮಲ್ಲ ಇದೇ ಪ್ರದೇಶಕ್ಕೆ ಸೇರಿದವನಿದ್ದು ಪಾರಂಪರಿಕ ವಸ್ತುವನ್ನಾಧರಿಸಿ ಜನಪದ ಶೈಲಿಯಲ್ಲಿ ಇನ್ನೂ ಹಲವಾರು ಕೃತಿಗಳನ್ನು ರಚಿಸಿದ್ದಾನೆ. ಕವಿಚರಿತೆಕಾರರು ಇವನ ಒಂದೆರಡು ಕೃತಿಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ. ಇತರ ವಿದ್ವಾಂಸರಿಗೆ ಇನ್ನೂ ಕೆಲವು ಕೃತಿಗಳ ಮೂಲ ತಿಳಿದಂತಿದೆ. ಆದರೆ ಇಲ್ಲಿ ನಮಗೆ ದೊರಕುವ ಪ್ರತಿಯ ಉಲ್ಲೇಖವಾಗಲಿ ಆದರ ಪ್ರಕಟಣೆಯ ವಿಷಯವಾಗಲಿ ಅಚ್ಚ ಹೊಸತು. ಈ ದೃಷ್ಟಿಯಿಂದ ಇದು ಬೆಳಕು ಕಾಣುತ್ತಿರುವದು ಇದೇ ಮೊದಲು. ಪ್ರಾದೇಶಿಕ ಸಾಮಿಪ್ಯದಿಂದಾಗಿ ಈ ಕವಿಯ ವಂಶಜರನ್ನೂ ಸಹ ಪ್ರತ್ಯಕ್ಷ ಕಂಡು ಕವಿ ವಂಶಮೂಲದ ಬಗೆಗೂ ತಿಳಿಯುವದು ನನಗೆ ಸಾಧ್ಯವಾಗಿದೆ.

ಕೃತಿಕಾರ—ಕವಿಚನ್ನಮಲ್ಲ. ಸ್ಥಳ-ಕಾಲ :

ಕವಿಚರಿತೆಕಾರರು ಕ. ಚ ಭಾ. ೨ ರಲ್ಲಿ ಚನ್ನಮಲ್ಲನ ಸ್ಥಳವನ್ನು ಕಲಬುರಿಗಿ ದೇಶದ ‘ಎಂಬಲಿಗೆ’ ಎಂದಿದ್ದಾರೆ. ಇದು ‘ಎಂಬಲಿಗೆ’ ಯೆಂದಾಗದೆ “ಅಂಬಲಿಗೆ” ಎಂದಾಗಬೇಕು. ಏಕೆಂದರೆ ಕಲಬುರ್ಗಿ ಜಿಲ್ಲೆಯಲ್ಲಿ ‘ಎಂಬಲಿಗೆ’ ಹೆಸರಿನ ಗ್ರಾಮ ಒಂದೂ ಇಲ್ಲ. ಇರುವದು ‘ಅಂಬಲಿಗೆ’. ಅಲ್ಲಿ ಕವಿಯ ಸಮಾಧಿ ಹಾಗೂ ಮನೆತನದ ಇನ್ನಿತರ ಕುರುಹುಗಳನ್ನು ನಾವು ಕಾಣಬಹುದಾಗಿದೆ ಇಂದಿನ ಮಹಾಗಾವ್ ಹತ್ತಿರದ ಮುಗಳಿಗೆ ಈ ಅಂಬಲಿಗೆ ಕೂಗಳತೆಯಲ್ಲಿರುವದರಿಂದ ಇದನ್ನು ‘ಮುಗಳಿ ಅಂಬಲಿಗೆ’ ಎಂದು ಕರೆವುದೂ ವಾಡಿಕೆಯಾಗಿದೆ. ಅಂಬಲಿಗೆಯಲ್ಲಿ ಕವಿಚನ್ನಮಲ್ಲನ ಗದ್ದುಗೆ

---

* ೧೯೮೩ ರ ಚಳಿಗಾಲ ರಜೆಯಲ್ಲಿ ಕಮಲಾಪುರ ಸಿದ್ಧರಾಮೇಶ್ವರ ಮಠದ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಿದ್ದಾಗ ಸಿಕ್ಕ ಪ್ರತಿ! ೬"x೩" ಆಕಾರ ಸಾಮಗ್ರಿ ಕಾಗದ ಬರವಣಿಗೆ ಅಶುದ್ಧ ಪ್ರತಿ: ಏಕೈಕ

ಹಾಗೂ ಅವನಿಂದ ಪ್ರಭಾವಿತನಾಗಿ ವೀರಶೈವ ದೀಕ್ಷೆಯನ್ನು ಅವನಿಂದಲೇ ಕೈಕೊಂಡಿದ್ದ 'ಶೇಷಭಟ್ಟ' ನೆಂಬ ಬ್ರಾಹ್ಮಣ ಭಕ್ತನ ಸಮಾಧಿಯೂ ನಮಗೆ ನೋಡಲು ದೊರೆಯುತ್ತವೆ.

ಕವಿ ವಂಶ ವಿಚಾರ :

ಇವನ ವಂಶಜರೇ ಆದ 'ತೀರ್ಥರಾಜಸ್ವಾಮಿ ಬೇಲೂರು ಬೃಹನ್ಮಠ' ಇವರಲ್ಲಿನ ಒಂದು ದಪ್ಪು ಕಾಗದದ ಮೇಲೆ ಉಲ್ಲಿಖಿತನಾದ ವಂಶ ಸೂತ್ರದಲ್ಲಿ ಒಟ್ಟು ಈ ಕೆಳಗಿನಂತೆ ನಮಗೆ ಹೆಸರುಗಳು ದೊರೆಯುತ್ತವೆ.

ಮಲ್ಲಯ್ಯ—ಭ್ರಮರಾಂಬೆ
↓
ಚನ್ನಮಲ್ಲೇಶ (ಕವಿ)
↓
ಚನ್ನಬಸವಯ್ಯ
↓
ಸಿದ್ಧಯ್ಯ
↓
ವೀರಭದ್ರಯ್ಯ
↓
ರೇವಣಸಿದ್ಧಯ್ಯ
↓
ಚನ್ನಬಸವಯ್ಯ
↓
ಸಿದ್ಧಯ್ಯ
↓
ಚನ್ನಬಸವಯ್ಯ
↓

ರೇವಣಸಿದ್ಧಯ್ಯ — ವೀರಭವ್ರಯ್ಯ

ರೇವಣಸಿದ್ಧಯ್ಯ ↓ ಷಣ್ಮುಖಸ್ವಾಮಿ — ಬಸವಾರ್ಯ — ಶಿವಾನಂದ

ವೀರಭವ್ರಯ್ಯ ↓ ಕಾರ್ತಿಕೇಯಶಾಸ್ತ್ರಿ
↓
ಗುರುಮೂರ್ತಿಶಾಸ್ತ್ರಿ (ಸದ್ಯ ಶಿಕ್ಷಕವೃತ್ತಿ)

ಕವಿ ಜೀವನದ ಐತಿಹ್ಯವಾಗಿ ತಿಳಿದು ಬರುವ ಸಂಗತಿಯಿಷ್ಟು. ಮಲ್ಲಯ್ಯ ಭ್ರಮರಾಂಬೆಯರ ಮನೆತನದ ಗುರು ಹರಸೂರಿನ ಪರ್ವತಮಠದ ಶ್ರೀ ಚೆನ್ನಮಲ್ಲೇಶ್ವರ ಸ್ವಾಮಿಗಳು, ಈ ಗುರ್ವಾನುಗ್ರಹದಿಂದಲೂ ಪರ್ವತದ ಮಲ್ಲಿಕಾರ್ಜುನನಲ್ಲಿಟ್ಟ ಅಚಲ ಶ್ರದ್ಧೆಯಿಂದಲೂ ಜನಿಸಿದ್ದರಿಂದ ಈ ಕವಿಗೆ 'ಚನ್ನಮಲ್ಲ'ನೆಂಬ ಅಭಿಧಾನವನ್ನಿಟ್ಟರು. ಗೋತ್ರ-ಸೂತ್ರಗಳ ಬಗೆಗೆ ಹೇಳುವದಾದರೆ ಇವರು ಉಜ್ಜೈನಿಯ ಸದ್ಧರ್ಮ ಸಿಂಹಾಸನಕ್ಕೆ ಸೇರಿದವರು. ದಾರುಕ ಶಾಖಾನುವೃತ್ತಿ ಗುರುಸಿದ್ಧಸ್ವಾಮಿಗಳೆಂಬವರಿಂದ ಈ ಕವಿಗೆ ವೀರಮಾಹೇಶ್ವರ ದೀಕ್ಷೆಯಾಯಿತು. ಚನ್ನಮಲ್ಲ ಕವಿಯ ವಿವಾಹ ಯಾರೊಡನಾಯಿತೆಂಬ ಬಗೆಗೆ ವಂಶಪಟ್ಟಿಯಲ್ಲಿ ಉಲ್ಲೇಖವಿಲ್ಲದಿದ್ದರೂ ಇವನಿಗೆ 'ಚನ್ನಬಸವಯ್ಯ' ಎಂಬ ಮಗನಿದ್ದನೆಂಬುದು ವಿದಿತವಾಗುತ್ತದೆ. ಈ ಕವಿಯಿಂದ ಈಗ ಜೀವಿಸಿರುವ ಕಾರ್ತಿಕೇಯಶಾಸ್ತ್ರಿಗಳವರೆಗಿನ ತಲೆಮಾರಿಯಲ್ಲಿ ೨೫ ವರುಷಗಳ ಒಂದು 'ತಲೆ'ಯಂತೆ ಲೆಕ್ಕಹಾಕಿದರೂ ಸು. ೨೨೫ ವರುಷಗಳಾಗುತ್ತವೆ. ಈ ಕವಿ ಶಿವೈಕ್ಯನಾದ ಕಾಲ ಶಾಲಿವಾಹನ ಶಕೆ ೧೬೫೦ ಶ್ರಾವಣ ಬಹುಳ ಪಂಚಮಿ ಸೋಮವಾರ ಉದಯದ ಹತ್ತುಗಳಿಗೆ ಇಪ್ಪತ್ತು ಘಳ. ಇದು ಅವನ ವಂಶಿಕರ ಪ್ರಕಾರ ಗೊತ್ತಾಗುವ ಸಂಗತಿ. ಎಂದರೆ ಈ ಕವಿಯ ಕಾಲ ಕ್ರಿ. ಶ. ೧೭೨೮ ಕ್ಕೆ ಸರಿಯಾಗುತ್ತದೆ. ಕವಿ ಚನ್ನಮಲ್ಲ ಜ್ಯೋತಿಷವನ್ನು ತಿಳಿದವನಾಗಿದ್ದನೆಂತಲೂ ಒಮ್ಮೆ ಅಂಬಲಿಗೆಯ ಶೇಷಭಟ್ಟನು, ಇಂದು 'ಪೌರ್ಣಿಮೆ'ಎಂದು ಹೇಳಿದ್ದನ್ನು ಅಲ್ಲ, ಇಂದು ಅಮಾವಾಸ್ಯೆಯೆಂಬಾಗಿ ಹೇಳಿ ಅದನ್ನು ಅವನಿಗೆ ಮನವರಿಕೆಯಾಗುವಂತೆ ಮಾಡಿದನೆಂದು ಗೊತ್ತಾಗುತ್ತದೆ. ಆದರೆ ಈ ಸಂಗತಿ ಒಂದು ಪವಾಡವಾಗಿ ಈ ಕವಿಯ ಸುತ್ತ ಬೆಳೆದು ನಿಂತಿದೆ. ಆದರೂ ಶೇಷಭಟ್ಟನು ಇವನಿಂದ ಶಿವದೀಕ್ಷೆ ಪಡೆದ ಸಂಗತಿ ನೈಜವಿರಲೂಬಹುದು.

ಚನ್ನಮಲ್ಲ ಕವಿಗಳ ಆಸ್ತಿ-ಬಾಬುಗಳ ಬಗೆಗೆ ಸಂಗ್ರಹಿಸಿರುವ ಸಂಗತಿಗಳು ಇಂತಿವೆ. ಧಾರ್ಮಿಕವಾಗಿ ಇವರು ಶಾನುಭೋಗವೃತ್ತಿ-ಅಂತಸ್ತುಗಳನ್ನು ಪಡೆದು ಕೊಂಡಿರುವ ಒಂದು ಜಂಗಮ ಸಮಾಜಕ್ಕೆ ಸೇರುತ್ತಾರೆ. ಜಂಗಮರಲ್ಲಿ 'ಹಿರೇಮಠ'ಕ್ಕೆ ಸಂಬಂಧಪಟ್ಟಿರುವ ಕೆಲವೊಂದು ಅಧಿಕಾರಿಗಳು ಲೌಕಿಕವಾಗಿ ಕೈಕೊಳ್ಳಬೇಕಾದ ಆಚರಣೆಗಳು ಸಿರಾಭಾರಿ ಸಾಂಪ್ರದಾಯಿಕ ಮಠದವರಿಗಿರುವದಿಲ್ಲ. ಇದನ್ನು ಹೊಂದಿದ ಮಠಗಳು 'ಹಿರೇಮಠ'ಗಳೆಂದು ಮಾತ್ರ ಗೊತ್ತು. ಆದರೆ ಇವಕ್ಕೆ 'ಶಾನಭೋಗಮಠ' ಗಳೆಂದೂ ಈ ಪ್ರದೇಶದಲ್ಲಿ ಕರೆಯುತ್ತಿರುವದು ಕವಿ ಚನ್ನಮಲ್ಲನ ವಂಶದ ಬಾಬುಗಳಿಂದ ಗೊತ್ತಾಗುವ ಒಂದು ಹೊಸ ಸಂಗತಿ. ಪಟ್ಟಾಧಿಕಾರ, ಅಯ್ಯಾಚಾರ, ಎಡೆಕಾಸು, ಪತ್ರಿಕಾ ಬರೆಯುವ ಕೆಲಸಗಳೇ ಈ ಶಾನುಭೋಗಿಕ ವೃತ್ತಿಯ ಮಠಗಳಿಗೆ ಸಂಬಂಧಿಸಿದವು. ಕವಿ ಚನ್ನಮಲ್ಲರ ಅಂಬಲಿ ಮಠಕ್ಕೆ 'ಶಾನುಭೋಗಮಠ' ವೆಂದು ಕರೆಯುವದು ಈಗಲೂ ವಾಡಿಕೆಯಲ್ಲಿದೆ. ಇದಕ್ಕೆ ಸಂಬಂಧಿಸಿದ ಕೆಲವು ಶಾಖಾಮಠಗಳು ಚಿಟಗುಪ್ಪಾ, ಮನ್ನಾಎಕ್ಕೇಳಿ ಬಸವಕಲ್ಯಾಣ; ಜಾಮಾರುಗಳಲ್ಲಿವೆ. ಅಂಬಲಿಗೆಯಲ್ಲಿರುವ

ಪಂಚಮಠಗಳು ಹಿರೇಮಠ (ಮಹಾಗಾವ್ ಗಚ್ಚಿನಮಠ ಶಾಖೆ) ಚಿಕ್ಕಮಠ (ಸೊಂತ ಹಿರೇಮಠ ಶಾಖೆ) ಸಿಂಧ್ಗಿಮಠ (ಸಿಂದಗಿ ರಂಗಮಠ ಶಾಖೆ) ಹಾಗೂ ಶಾನುಭೋಗ ಮಠ (ಅಂಬಲಿಗಮಠ) ಹಾಗೂ ಭೃಂಗಿಮಠ (ಹುಮನಾಬಾದ ಹಿರೇಮಠ ಶಾಖೆ) ಈ ಕವಿಯ ಸಂತತಿ ಶಾನುಭೋಗ ಮಠಕ್ಕೆ ಸಂಬಂಧಿಸಿದೆ.

ಚನ್ನಮಲ್ಲನ ಕೃತಿಗಳು :

ಕವಿಚರಿತೆಕಾರರು[1] : ೧) ದೀಪದ ಕಲಿಮಾರನ ಕಾವ್ಯ (ಸಾಂಗತ್ಯ)
೨) ವೀರಸಂಗಯ್ಯನ ಚೌಪದ (ಚೌಪದಿ)

ಡಾ|| ಎಸ್. ವಿದ್ಯಾಶಂಕರ[2] : ೧) ದೀಪದ ಕಲಿಮಾರನ ಕಾವ್ಯ
೨) ವೀರಸಂಗಯ್ಯನ ಚೌಪದಿ
೩) ಗಂಗೆ-ಗೌರಿ ಚೌಪದನ
೪) ಶ್ವೇತನ ವಾರ್ಧಕ
೫) ಸಿರಿಯಾಳ-ಸೆಟ್ಟಿ ವಾರ್ಧಕ
೬) ಶಿಬಿರಾಯನ ಸ್ತುತಿ
೭) ನೀಲಕಂಠಯ್ಯನ ಭಾಮಿನಿ

ಹೊಸದಾಗಿ ಗೊತ್ತಾಗುವ ಕೃತಿಗಳು[3] : ೧) ಹರಳಯ್ಯಗಳ ವಾದಖಂಡನ
೨) ಮಠಪತಿ ಮಾಹೇಶ್ವರ ವಾರ್ಧಕ್ಯ
೩) ಸಿಂಧುಬಲ್ಲಾಳನ ಜೋಗುಳ[4]

ಹರಳಯ್ಯಗಳ ವಾದಖಂಡನ:

ಚನ್ನಮಲ್ಲ ಕವಿಯ ಒಟ್ಟು ೧೦ ವೀರಶೈವ ಲಘು ಕಾವ್ಯಗಳಲ್ಲಿ "ಹರಳಯ್ಯಗಳ ವಾದಖಂಡನ" ಒಂದು. ಒಟ್ಟು ೨೬ ಚೌಪದಿ ಪದ್ಯಗಳಲ್ಲಿದ್ದು, ಕಲ್ಯಾಣ ಕ್ರಾಂತಿಗೆ ಕಾರಣವಾದ ಒಂದು ಸಂಗತಿಯ ಮೇಲೆ ಇದು ಬೆಳಕು ಚೆಲ್ಲುತ್ತದೆ. ಬಿಜ್ಜಳ ದೊರೆ ಕೊಂಡಿಮಂಚಣ್ಣನ ಮಾತು ಕೇಳುತ್ತಾನೆ. ಹಾರುವನ ಮಗಳು ಹರಳಯ್ಯನ ಮಗ ಇವರಲ್ಲಿ ನಡೆಯುವ ವಿಲೋಮ ವಿವಾಹದಿಂದ ಕುಲಗೆಟ್ಟಿತೆಂದೂ, ಶರಣರು ಕುಲಗೆಡಿಸಿದರೆಂದೂ ಅವನು ದೂರಿದ್ದಕ್ಕೆ ದೊರೆ ಬಿಜ್ಜಳ 'ಎಳಹೂಟೆ' ಶಿಕ್ಷೆ ವಿಧಿಸುತ್ತಾನೆ. ಆಗ ಜಗದೇವ ಮಲ್ಲಿಬೊಮ್ಮರು ಬಂದು ದೊರೆಗೆ ಇದು ಮತಾಂಧರ ವಿಚಾರವೆಂತಲೂ ಶರಣರು ಕುಲಗೆಡಿಸಲಿಲ್ಲ. ಅವರು ಜಾತಿ-ಮತ-ಕುಲಗಳನ್ನೆಣಿಸಲಿಲ್ಲ, ಸಮಾಜದಲ್ಲಿ ಅಸಮಾನತೆ ಬೇರುಬಿಟ್ಟಿದೆ. ಪಾಚಿಗೆಟ್ಟ ಈ ಜಾತಿವ್ಯವಸ್ಥೆಯ ನಿರ್ಮೂಲನೆ ಮಾಡಲು

---

೧ ಕ.ಚ.ಭಾ. ೨. (ಕ.ಸಾ.ಪ. ೧೯೭೩) ೨. ದೀಕ ಕಾ. (ಸಂ) ಕನ್ನಡ ಅಧ್ಯಯನ ಕೇಂದ್ರಮಾಲೆ. ಬೆಂ.ವಿ. (೧೯೭೪), ೩. ಸ್ವಂತ ಸಂಗ್ರಹದಲ್ಲಿ ಹಸ್ತಪ್ರತಿ ರೂಪದಲ್ಲಿ ಉಳಿದಿವೆ. ೪. ಕನ್ನಡಛಂದಸ್ಸಿನ ಚರಿತ್ರೆ ಪು. ೬೩೧ ರಲ್ಲಿ ಉಲ್ಲಿಖಿತ.

ಈ ಶುಭವಿವಾಹಕ್ಕೆ ಅವರು ಮನಸ್ಸು ಮಾಡಿರುವದನ್ನು ನೀನು ತಿಳಿಯಲಿಲ್ಲ." ಎಂದಾಗಿ ಪ್ರತ್ಯುತ್ತರ ಕೊಡುತ್ತಾರೆ. ಈ ವಾದ-ವಿವಾದಗಳಿಂದ ಕೂಡಿರುವದರಿಂದಲೇ ಇದಕ್ಕೆ 'ಹರಳಯ್ಯಗಳ ವಾದಖಂಡನ' ಎಂದಾಗಿ ಹೆಸರಿಸಲಾಗಿದೆ.

ಎಟಿಹೂಡೆ > ಎಳಹೂಟೆ: ಆನೆಯ ಕಾಲಿಗೆ ಕಟ್ಟಿ ಶಿಕ್ಷಿತರಾದವರನ್ನು ಎಳೆಸಿ ಕೊಂಡು ಹೋಗುತ್ತ ಅವರನ್ನು ಸಾಯಿಸುವ ಒಂದು ಶಿಕ್ಷೆ. ಹರಳಯ್ಯ ಮಧುವರಸ ರಿಬ್ಬರಿಗೆ ಈ ದಂಡ ವಿಧಿಸಿದ ಪ್ರಸ್ತಾಪ ಅನೇಕ ಕಡೆಗಳಲ್ಲಿ ಬಂದಿದೆ. ನಿಮ್ಮನಿಬರಂ ಪಟ್ಟಣದ ಸುತ್ತ ಎಟಿಹೂಟೆ ಹೂಡಿಸುವೆ (ಬ.ಪು. ೫೭-೮೧) ಹಳ್ಳಯ್ಯ ಮಧುವಯ್ಯ ಗಳನ್ ಎಟಿಹೂಟೆಯುಂ ಕಟ್ಟಿಸೆ (ಚ.ಬ. ಪು೬೨-೭೦) ಶಿವಶರಣರರ್ ಎಟಿಹೂಟೆಯಿನ್ದೆ ಎಟಿಸಲ್ (ಅದೇ ೬೨-೨೯)ಇವಲ್ಲದೆಯೆ ಬ.ವ.ಕ. ಕಸಾ ಶಲೀ. ಭ.ಸೋ. ಚೋ.ಬ.ಚ ಪ್ರ.ದೇ.ಪು.(ಸಂದರ್ಭಕ್ಕೆ ಶಿವಶರಣ ಕಥಾರತ್ನಕೋಶ ಪು. ೫೨೨ ತ.ಸು. ಶಾಮರಾಯ) ಗಳಲ್ಲೂ ಇದರ ಉಲ್ಲೇಖವಿದೆ.

ನಿರಪರಾಧಿಗಳಾದ ಶರಣರಿಗೆ ದೊರೆತ ಈ ಶಿಕ್ಷೆಯ ಪ್ರತಿಭಟನೆ ಇಲ್ಲಿ ಉಗ್ರತರ ವಾಗಿ ನಡೆದಿದೆ. ಶಿವಶರಣರನ್ನು ಶಿಕ್ಷೆಗೆ ಗುರಿಮಾಡಿದ ಬಿಜ್ಜಳನನ್ನು ಜಗದೇವ-ಮಲ್ಲಿಬೊಮ್ಮರು ಕೊಲೆಮಾಡುತ್ತಾರೆ. ಕಲ್ಯಾಣದಲ್ಲಿ ಕಾಲಾಗ್ನಿ ಹೊಗೆಯಾಡುತ್ತದೆ.

ಪ್ರಾದೇಶಿಕವಾದ ನುಡಿಗಟ್ಟುಗಳಾದ 'ಡೊಣ್ಣೆನೀರುಹೊಯ್ಯಿ' (೧೪) 'ತಲೆ 'ಚೆಂಡಾಡು' ಭೌರಿಗ್ಹಚ್ಚು' (೧೫) 'ತಲೆಯ ಮೇಲಿನ ಮಾಸ-ಹಾರು' 'ಬಿಸಿನೀರ ಹೊಯ್ಯಿ'(೧೭) 'ಹೊಲೆಯರಿಗ್ಹಚ್ಚಿ ಸೀಳಿಸು' (೭) ಇಲ್ಲಿನ ಸಂವಾದನಿಷ್ಠ ಶೈಲಿಯನ್ನು ತೀರ ಜನಸಮ್ಮುಖವಾಗಿಸುತ್ತವೆ.

ಉಪಲಬ್ಧವಾದ ಏಕೈಕ ಕಾಗದದ ಪ್ರತಿಯನ್ನಾಧರಿಸಿದ, ಹಾಗೂ ಶಿವಶರಣರ ವೈಚಾರಿಕತೆ ಹಾಗೂ ಕಲ್ಯಾಣ ಕ್ರಾಂತಿಯ ಕೊನೆಯ ಘಟನೆಯೊಂದರ ಮೇಲೆ ಬೆಳಕು ಚೆಲ್ಲುವ 'ಹರಳಯ್ಯಗಳ ವಾದಖಂಡನ'ದ ಪಾಠವನ್ನಿಲ್ಲಿ ಕೆಳಗೆ ಕೊಟ್ಟಿದೆ.

ಹರಳಯ್ಯಗಳ ವಾದಖಂಡನೆ

(ಚೌಪದನ)

ಶ್ರೀ ಗುರುವೆ ಪಾದ ಪೂಜಿಸುವೆ ಪಶುಪತಿಗೆ
ಬೇಗದಿಂದಲಿ ಬೇಡಿಕೊಂಬುವೆ ಪಾರ್ವತಿಗೆ
ವಾಗೀಶನಗಜೆ [×××] ಸುವ್ವೆ ಸರಸ್ವತಿಗೆ
ನಾಗಭೂಷಣನ ಜಲಗೊಂಬೆ ಗಣಪತಿಗೆ ॥ ೧ ॥

ವರವ ಬೇಡುವೆ ನಾನು ಉರಗ ಭೂಷಣನ
ಸರಸಿಜೋದ್ಭವ ಶಿರ ಕರದಿ ಕಪಾಲನ
ಹರುಷದಿಂದಲಿ ನಿನ್ನ ಪಾಡಿ ಪೊಗಳುವೆನ
ಹರಿಸಿ ಪಾಲಿಸು ನಾದ ಖಂಡ ಚೌಪದನ || ೨ ||

ಧರಣಿಪತಿ ಕೇಳಿದನು ನಿಮ್ಮ ಪುರದೊಳಗೆ
ಹಾರುವನ ಮಗಳ [××] ಓತು ಸವುಗರಗೆ
ಮೀರಿ ತಪ್ಪಿತು ಕುಲ ನೆಂಟಸ್ತನದೊಳಗೆ
ಸಾರಿ ಹೇಳಿದರು ಮಂಚಣ್ಣ ಬಿಜ್ಜಳಗೆ || ೩ ||

ಕಲ್ಯಾಣದರಸು ಭೂವರನು ಬಿಜ್ಜಳನು
ಹರಳಯ್ಯ, ಮಧುವರಸುಗಳಿಗೆ ಕರಸಿದನು
ಎಲ್ಲರಿಗೆ ಕಟ್ಟಿ ಕೊಲ್ಲೆಂದು ಹೇಳಿದನು
ಕಲ್ಲುಗಾ[1]ಣಕೆ ಹಾಕಿರೆಂದು ಕ[2]ಳಸಿದನು || ೪ ||

ನಗರೌರು ಸಂದಿಸಂದಿಯಲಿ ನೆರೆದುಕೊಂಡು
ಹಗರಣಾಗುತಲೆ ಪಟ್ಟಣದೊಳು ಬಂದು
ಜಗದೇವ ಮಲ್ಲಿಬೊಮ್ಮಣ್ಣಗಳು ಬಂದು
ದುಃಖದ ಸಿಡಿಲಂತೆಯೆರಗಿದರು ಬಂದು || ೫ ||

ಬಂದರಿಬ್ಬರ ಕಂಡು ಬಿಜ್ಜಳನ ಭಟರು
ದಂಡು ನೆರೆದಿತು ಒಂದು ಕೋಟಿ ರಾಹುತರು
ಖಂಡೆ ಭರ್ಚಿ ಕಣಿಬಿಲ್ಲು ಅಂಬು ತರಿಸಿದರು
ತಂಡ ತಂಡಕೆ ಬಂದು ನಿಂತುಕೊಂಡಿದರು || ೬ ||

ನಿಂತವರ ಕಂಡು ಗುಡುಗುಡಿಸಿ ಬೊಮ್ಮಣ್ಣ
ದಂತ ಕಟಿಕಟಿಲೆನುತ ತೆರೆದ ಬಿಸಿಗಣ್ಣ
ಸಂತೆ ಸೂಳೆಯ ಮಗನೆ ಹೊಟ್ಟೆ ಹುರಿಬೆನ್ನ
ನಿಂತು ಮೊಲಿಯುರಿಗ್ಹಚ್ಚಿ ಸೀಳಿಸುವೆ ನಿನ್ನ || ೭ ||

೪. ೧ ಘಾ. ೨ ಖ.

ನಿಲ್ಲುವೆನು ಬಿಜ್ಜಳನ ಎದಿ ಮೇಲಕಾಗಿ
ಪುಲ್ಲುಪಶು ಕೊಂಬುವದು ಕಾಳ ಧರಣ್ಯಾಗಿ
ಬೆಳಗಾಯಿತು ಮಾಯಾ ಶಾಪಕೊಳಗಾಗಿ
ಅಲ್ಲೇನ ಮಗನೆ ಕೇಳು ತಲೆಬಾಗಿ || ೮ ||

ಯೋನಿಯ ಮಕ್ಕಳೆಂಬುದು ಬಲ್ಲರೆಲ್ಲ
ಗರತಿಗ್ಹುಟ್ಟಿದಿರಿ ಪಂಚಮರು ನೀವೆಲ್ಲ
ಒಲೆಯುದs ಕಿಚ್ಚು ಕೆದರುವದು ನಿತ್ತ್ರೈಲ್ಲ
ಬಿಚ್ಚಿ ಹೇಳಿದರೆ ನಿಮಗೇನು ಹುರುಳಿಲ್ಲ || ೯ ||

ಶಿಶ್ನದ ಜಗವೆಲ್ಲ ಕೂಡ್ಯೆತೆಲೊ ಬೋಡಿ
ಜಿನ್ನನ ಬಿಟ್ಟು ದಯವಿಲ್ಲ ವ್ರತಗೇಡಿ
ಅಣ್ಣತಂಗಿಗೆ ಮದವಿ ಮಾಳ್ಪ ಛಲಗೇಡಿ
ಪುಣ್ಯಪಾಪಕ ಹೇಸದಂಥ ಕುಲಗೇಡಿ || ೧೦ ||

ಕುಲಗೇಡಿ ಶೀಲ ಸಮನಿಲ್ಲ ಪ್ರಮಥರು
ಏಲೇಶ್ವರದ ಕ್ಯಾತಯ್ಯ ಮದವಿ ಮಾಡಿದರು
ಕಲಿಕಾಮದೇವ ಕೈಲಾಸಕೊಬ್ಬುವರು
ಹೊಲತಿ ಮಕ್ಕಳು ನೀನು ಜೈನ ಚಾರ್ವಾಕರು || ೧೧ ||

ಚಾರ್ವಾಕರು ಅನಬ್ಯಾಪ ಚಾಂಡಾಲ ನಾಯಿ
ಪಾರ್ವತಿಯ ರಮಣನಿಗೆ ಬಡಿಸುವದು ಬಾಯಿ
ಸರ್ವರೆಂಜಲು ತಿಂದು ಹೇಳುವದು ನಾಯಿ
ಏವರಿಗೆ ಹೋಗಿ ಹಡದಾಳೋ ನಿಮ್ಮ ತಾಯಿ || ೧೨ ||

ಹಾದರಗಿತ್ತಿ ಬಿಜ್ಜಳನ ತಂಗ್ಯೆಣ್ಣಾ
ಸೋದರಳಿಯನು ವೀರಬಸವಂತನಣ್ಣಾ
ಪ್ರಧಾನಿ ಆನಂದ ಚೆನ್ನಬಸವಣ್ಣಾ
ಮಾದಿಗರ ಡೊಣ್ಣಿ ನೀರು ಹೊಯ್ಯುವೆನಣ್ಣಾ || ೧೩ ||

ಡೊಣ್ಣಿ ನೀರು ಹೊಯ್ಯದಿದ್ದರೆ ನಿನ್ನ ಮೀಸಿ
ಕ್ಷೀಣಾನ ಸತಿ ಕಷ್ಟಕೇಳು ಪರದೇಸಿ
ಮಾದಿಗರ ಹಿಡಿತರಿಸಿ ಕೊಲ್ಲೊ ಕೈಕೊಯ್ಸಿ
ಪ್ರಾಣ ಕೊಲ್ಲಿಸಿ ಕಾಲ್ಕಟ್ಟಿಯೆಳಸಿ || ೧೪ ||

ಎಳಸದಿದ್ದರೆ ಬಾಯಿ ಸೂಳೆರ ಪುಚ್ಚಿ
ಕಳ್ಳ ( )* ನಿಗೆ ಹೊಡಿರಣ್ಣ ಮುಚ್ಚಿ
ಕುಲಗೇಡಿ ಬಾಯೊಳಗೆ ಹೊಯಿರೆಣ್ಣ ಪುಚ್ಚಿ
ತಲಿಯ ಚೆಂಡಾಡಿ ಹೋರಣ್ಣ ಭೌರಿಗ್ಹೆಚ್ಚಿ || ೧೫ ||

ಗಿಚ್ಚಿ ಹೊಡಿದಿದ್ದರೆ ಸೂಳೆಮಗ ನೀನು
ಪುಚ್ಚಿಗೇಡಿಯೇ ನಮ್ಮ ದಾಸಿ ಮಗ ನೀನು
ಹುಚ್ಚ ನಾಯಿಯೇನ ಮನದರೊಳಿದ್ದೇನು
ಬಿಚ್ಚಿ ಹೇಳದರೆ ಹುರುಳಿಲ್ಲ ನೀನು || ೧೬ ||

ಎಲಗ ತಲಗನುಬ್ಯಾಡಲ ಹಳಿಪೋರ
ಮಲತರಾಯರ ಗಂಡ ಮದನ ಕಂಠೀರ
ತಲಿಮ್ಯಾಲ ಮಾಸ ಹಾರಿಲ್ಲ ಮುಡದಾರ
ಛಲವಾದಿ ಕೈಲಿ ಹೊಯ್ಸುವೆ ಬಿಳಿನೀರ || ೧೭ ||

ಸುಡಗಾಡ ನಮಗೆಲ್ಲಿ ತಕ್ಕೊರೊ ಎಲೆ ಜೈನ
ಬಡನಾಯಿ ನಿನಗ್ಯಾಕೊ ಅರಸುತನ
ಬಿಡು ಸೆರೆಯ ಶರಣ ಹರಳಯ್ಯಗಳ ಸುತನ
ಫಡುಫಡಿಸಿ ಬೊಮ್ಮಣ್ಣ ಕಡಿದ ಸವಣನ || ೧೮ ||

ಸತ್ತಶ್ರವಣನ ಕಂಡು ನೆರೆದು ಭಟರೆಲ್ಲ
ಕೊಂಡೇರು ಮಲ್ಲಿಬೊಮ್ಮಣ್ಣಗೆಲ್ಲ
ತತ್ತರಾಗಡಿದು ಬಿಜ್ಜಳನ 'ಪೋಜೆ'[1]ಲ್ಲ
ನೆತ್ತರಾಗ ಹರಿದು ಹೆಣ ಬಿತ್ತು ಭೂಮ್ಯೆಲ್ಲ || ೧೯ ||

---

* ಇಲ್ಲಿನ ಕೆಲವು ಅಶ್ಲೀಲ ಪದಪ್ರಯೋಗವನ್ನು ಬಿಟ್ಟುಕೊಟ್ಟಿದೆ.
೧೯. 1 ಪೋಜು : ಸೈನ್ಯ

ಎಳ ಹೂಟಿ ಎಳೆವರನ ಕಡಿದು ಹೆಣ ಕೆಡವಿ
ಇಳೆಯ ಪಾಲಿಪನ ತೆಲಿಕೊಂಡು ಪ್ರಜಲುಳುಹಿ
ಮಲಹರನ ಭಕ್ತರನ ಸೆರೆ ಬಿಡಿಸುತುಳುಹಿ
ಉಳವಿಗೆ ಕಳುಹಿದರು ಪ್ರಮಥರಿಗೆ ನೆರಹಿ || ೨೦ ||

ಕಲ್ಯಾಣ ಪಟ್ಟಣ ಸುಟ್ಟು ವುರುಹಿದರು
ಮಲ್ಲಿ ಬೊಮ್ಮಣ್ಣನ ಬಿಟ್ಟು ತೆರಳಿದರು
ಎಲ್ಲ ಜೈನರ ತೆಲಿಯ ಕೊಯ್ದು ಹಾಕಿದರು
ಹರಳಯ್ಯನ ಕಾಲಾಗ್ನಿ ಮಹಿಮೆ ಹೇಳಿದನು || ೨೧ ||

ಸೋದರಳಿಯನು ವೀರ ಬಸವಂತನಣ್ಣ
ಪ್ರಧಾನಿ ಚೆನ್ನ ಬಸವಣ್ಣ ಆನಂದ
ಹಾದಿ ಬೀದಿಗೆ ತಳಿರು ಉತ್ಸಾಹದಿಂದ
ಆದಿ ಕಲ್ಯಾಣಕ್ಕೆ ಬರುವರಿಲ್ಲಿಂದ || ೨೨ ||

ಹನ್ನೆರಡು ಸಾವಿರ ವರುಷ ನಿಶ್ಚಿಂತ
ಚೆನ್ನ ಬಸವೇಶ್ವರನು ವೀರಬಸವಂತ
ಚೆನ್ನಾಗಿ ಬರುವರು ಸಕಲ ಜನ ಪ್ರಾಂತ
ಮುನ್ನ ಮಾಡಿದ ಪಾಪ ಹೋಯ್ತು ನಿಶ್ಚಿಂತ || ೨೩ ||

ಜಗದೇವ ಮಲ್ಲಿ ಬೊಮ್ಮಣ್ಣಗಳ ವಾದ
ಮಿಗಿಲಾಗಿ ಹಾಡಿ ಹರಸುವೆನು ವಿನೋದ
ಅಗ್ರಹರನ ಭಕ್ತರನ ಕೂಡಿಸೈ ವಾದ
ಜಗದೊಳಗೆ ಹುಟ್ಟಿತ್ತು ಜೈನರಿಗೆ ವಾದ || ೨೪ ||

ಬಸವ ದಂಡೇಶ್ವರನ ಚರಣ ಕಮಲವನು
ಹಸನಾಗಿ ಹಗಲಿರುಳು ಹಾಡಿ ಹರಸುವೆನು
ಶಶಿಮುಖಿಯು ನೀಲಲೋಚನಿಯಮೃತವನು
ರಸಗೊಂಡು ಸುಖಿಯಾಗಿ ಶರಣು ಮಾಡುವೆನು || ೨೫ ||

ಕಲಬುರಿಗಿ ದೇಶದೊಳು ಅಂಬುಲಿಗೆ ವಾಸ
ಮಲರಹನ ಜಾತ ಶ್ರೀ ಚನ್ನಮಲ್ಲೇಶ
ತಿಳಿದು ತಿದ್ದುವುದು ಯತಿ ಗಣ ಅಡಿ ಪ್ರಾಸ
ಲಹಯ್ಯುವು [× × × × × ×] ॥ ೨೬ ॥

ಅನುಬಂಧ

ಹಿಂದೆ ಅಂಶಗಣದ ಮೇಲೆ ನಡೆಯುತ್ತಿದ್ದ ಕರ್ನಾಟಕ ವಿಷಮ ಜಾತಿಗಳಲ್ಲಿ ಒಂದಾದ 'ಛಂದೋವತಂಸ' ವೇ ಮಾತ್ರಾಗಣಕ್ಕೆ ತಿರುಗಿ 'ಚೌಪದಿ' ಎನ್ನಿಸಿತು. 'ಚೌಪದಿ' ಛಂದಸ್ಸಿನ ಹೆಸರಾದರೆ 'ಚೌಪದನ' ಈ ಛಂದಸ್ಸಿನಲ್ಲಿ ರಚಿತವಾದ ಕೃತಿಯೆನ್ನಬಹುದು. ನಾಗವರ್ಮ ಹೇಳುವ 'ಚೌಪದಿ' ಅಂಶಗಣಾನ್ವಿತವಾದುದು. ಆದರೆ ಇದು ಈಗ ಚೌಪದನವೆಂದು ಕರೆಯಿಸಿಕೊಳ್ಳುವದಕ್ಕಿಂತ ಭಿನ್ನವಾದುದು.

ಚೌಪದಿ |ವಿ + |ರು

ಅಂಶಗಣಾನ್ವಿತ	ವಿ : ವಿ : ವಿ : ಬ್ರ
ಚೌಪದನ	ವಿ : ವಿ: ವಿ : ಬ್ರ
(ಛಂದೋವತಂಸ)	ವಿ : ವಿ: ವಿ : ಬ್ರ
	ವಿ : ವಿ : ವಿ : ಬ್ರ

ಮಾತ್ರಾಚೌಪದಿ : ಪ್ರತಿಚರಣಗಳಲ್ಲಿ ೫+೫+೫+೩ರಂತೆ
ಮಾತ್ರೆಗಳು : ಉದಾ : (ನುಡಿ ೪)

ಕಲ್ಯಾಣ|ದರಸುಭೂ|ವರನುಬಿ|ಜ್ಜಳನು	೫ + ೫ + ೫ + ೩
ಹರಳಯ್ಯ|ಮದುವರಸ|ಗಳಿಗೆ ಕರ|ಸಿದನು	೫ + ೫ + ೫ + ೩
ಎಲ್ಲರಿಗೆ|ಕಟ್ಟ ಕೊ|ಲ್ಲೆಂದು ಹೇ|ಳಿದನು	೫ + ೫ + ೫ + ೩
ಕಲ್ಲುಗಾ|ಣಕೆ ಹಾಕಿ|ರೆಂದು ಕಳಿ|ಸಿದನು	೫ + ೫ + ೫ + ೩

ಚನ್ನಮಲ್ಲ ಕವಿ ಈ ಛಂದಸ್ಸಿನಲ್ಲಿ ತನ್ನದೇ ಆದ ವೈಶಿಷ್ಟ್ಯ ಮೆರೆದಿದ್ದಾನೆ. ವೀರಸಂಗಯ್ಯನ ಚೌಪದಿ, ಗಂಗೆ-ಗೌರಿ ಸಂವಾದ ಹಾಗೂ ಸಿಂಧುಬಲ್ಲಾಳನ ಜೋಗುಳ ಅದೇ ಸಾಲಿಗೆ ಸೇರುವ ಹರಳಯ್ಯಗಳ ನಾದ ಖರಿಡನದಿಂದ ಚೌಪದನ ಸಾಹಿತ್ಯಕ್ಕೆ ಇವನ ಕೊಡುಗೆ ಸಮೃದ್ಧಿ ತಂದಿದೆ.

ಜಾನಪದ ಸಾಹಿತ್ಯದಲ್ಲಿ ಮಗನ ಪ್ರಲಾಪ:

(ಒಂದು ಅಪರೂಪದ ಹಾಡು)

● ಸದಾನಂದ ಪಾಟೀಲ

ಜಾನಪದ ಸಾಹಿತ್ಯದ ಹರಹಿನಲ್ಲಿ ಶಿಷ್ಟಪದ ಸಾಹಿತ್ಯವಿದೆ ಹೌದು. ಅದು ಒಳಗೊಳ್ಳದ್ದೇ ಇಲ್ಲ. ನಿಜವಾದ ಬದುಕು ಜಾನಪದರದು. ನಾಗರಿಕ ಮನಸ್ಸಿಗೆ ಸಹಜತೆಯಿಲ್ಲ. ಔದಾರ್ಯವಿಲ್ಲ. ಮಾನವೀಯ ಭಾವಗಳೂ ಕಡಿಮೆ. ಬಾಹ್ಯದ ಝಗಝಗಿಪ ಆಡಂಬರಗಳು ಜಾನಪದರ ಅಂತರಂಗದ ಸೂರ್ಯನೆದುರು ಒಮಣಿ ದೀಪಗಳು.

ಇಲ್ಲಿದೆ ನೋಡಿ 'ಮಗನ ಪ್ರಲಾಪ'. ಚಂದ್ರಮತಿಯ ಪ್ರಲಾಪವಲ್ಲ ಶಿರುಕೋಳವಿ ನಾಚಿಯ ಪ್ರಲಾಪವಲ್ಲ. ಹೆತ್ತ ತಾಯಿ ತೀರಿಕೊಂಡಿದ್ದಾಳೆ. ಹೆಣ ಮುಂದಿಟ್ಟುಕೊಂಡು ಮೀಸೆ ಹೊತ್ತ ಗಂಡಸು ಎಂದೆನಿಸಿದ ಪುರುಷ ದುಃಖ ಹತ್ತಿಕ್ಕದೇ ಪ್ರಲಾಪಿಸುತ್ತಿದ್ದಾನೆ. ತನ್ನ ಬದುಕಿನ ದಿಗಂತ ಬೆಳಗಿದ, ತನಗೆ ಜೀವಕೊಟ್ಟ, ಹೊಟ್ಟೆ ಬಗೆದು ಹಡೆದು ಜೋಪಾನಿಸಿದ ತಾಯಿಯ ಕಷ್ಟ ಪರಂಪರೆಗಳು ಕಣ್ಣೆದುರು ಕಟ್ಟಿ ನಿಂತಾಗ ಹೊರ ಹೊಮ್ಮಿದ ಸಾಲು ಸಾಲು ದುಃಖಾಲಾಪದ ಮಾತುಗಳು ಜಾನಪದ ಪ್ರಲಾಪ ಗೀತೆಯಲ್ಲಿವೆ.

> ಸತ್ತ ತಾಯಿಯ ಶ್ರವಕ ದುಃಖ ಮಾಡ್ಯಾರತಾನ
> ಚಿತ್ತಿಟ್ಟ ಕೇಳರಿ ಜನರೆಲ್ಲ ಶಿವ ! ಮಲ್ಲೀಗೆ ಸಣ್ಣ ಮಲ್ಲೀಗೆ ॥

'ಮಲ್ಲಿಗೆ ಸಣ್ಣ ಮಲ್ಲಿಗೆ' ಎಂಬ ಪುನರಾವರ್ತನಗೊಳ್ಳುವ ಚರಣದೊಂದಿಗೆ ಎಂದೂ ಅಳಲಾರದ ಮಗ ಒಂದರ್ಥದಲ್ಲಿ ಸಣ್ಣ ಮಲ್ಲಿಗಿಯಂತಹ ಮಗ ತಾಯಿಯ ಶವವನ್ನು ಮುಂದಿಟ್ಟುಕೊಂಡು ದುಃಖ ಮಾಡಿ ಮಾಡಿ ಅಳುವ ಈ ಚಿತ್ರಣ ತನ್ನೊಂದಿಗಿನ ಲಯ, ಧಾಟಿಯ, ಶೋಕ ತರಂಗ, ಶಬ್ದಗಳ ಸಪ್ಪಳ, ವ್ಯಕ್ತವಾಗುವ ಚಲಿಸುವ ಚಿತ್ರಗಳು ಮುಂದಣ ನುಡಿಯಲ್ಲಿ ಸ್ಫೋಟಗೊಳ್ಳುತ್ತವೆ.

> ಗಂಡ ಸತ್ತ ಮ್ಯಾಲೆ ರಂಡೀತನ ತಗದು
> ಪುಂಡ ಮಗನ ಜ್ವಾಪಾನ ಮಾಡಿದ್ದಾಳ।
> ಗುಂಡ ಗಜಗನಾಡಿ ಗುಡ್ಡ ಏರಿದ್ದಾನ।
> ಖಂಡಗ ಮಂದೀ ಕೂಡ ಕಾಳಗ ಮಾಡಿದ್ದಾನ !
> ಬಂದ್ ಹೇಳಿದ್ದಾನ ॥

ಸಿಟ್ಟೆ ಬಂದ್ಯಾಳೇಕ ಪಟ್ಟನ ಹೊಡಿದರೆ
ಮತ್ತೊಂದು ದೈವಕ ಮಗನಂದೆ ತಾಯಿ ।
ಮಲ್ಲೀಗೆ ಸಣ್ಣ ಮಲ್ಲೀಗೆ ॥

ನೆನಪಿನ ಸುರುಳಿ ಬಿಚ್ಚುತ್ತದೆ. ಕಣ್ಣೀರ ಮೋಡ ಕರಗತೊಡಗುತ್ತದೆ. ತನ್ನ ಕಿತಾಪತಿಗಳೊಂದಿಗೆ ಕರುಣಾಮಯಿ ಕಣ್ಣೆದುರು ನಿಲ್ಲುತ್ತಾಳೆ. 'ಖಂಡಗ ಮಂದಿ ಕೂಡ ಕಾಳಗ ಮಾಡಿದ್ದಾನ ।

ಬಂದ್ ಹೇಳಿದ್ದಾನ ॥ ಎಂಬಲ್ಲಿಯ 'ಬಂದ್ ಹೇಳಿದ್ದಾನ' ಎಂಬ ಅರೆ ವಾಕ್ಯ ಕ್ರಿಯೆಯನ್ನೂ, ಕ್ರಿಯೆ ಮುಗಿದ ಪರಿಣಾಮವನ್ನು ಶಬ್ದಶಃ ವ್ಯಕ್ತಗೊಳಿಸುತ್ತದೆ ಊಹಿಸಿದಾಗ; ಥಾಟಿಯ ಗತ್ತುಗಾರಿಕೆಯಲ್ಲಿಯೆ ಮಗನ ನಡವಳಿಕೆಗಳು, ತಾಯಿಯ ಕ್ಷಮಾಶೀಲ ಕರುಳಿನ ಗುಣಗಳೂ ಸಂಕೀರ್ಣವಾಗಿದ್ದುದು ವ್ಯಕ್ತವಾಗುತ್ತದೆ ಕೇಳುವ ಕಿವಿಗೆ.

ತನ್ನ ಉಡುಗೆ ತೊಡುಗೆ ಕಿರುವಣಿಗೆ ಬೆಳವಣಿಗೆ, ಉರುವಣಿಗೆ ಪುಂಡಾಟಗಿರಿ, ತಾಯ ಮಮತೆ, ತನ್ನ ಬಯಕೆ ಇವೆಲ್ಲ ಮುಪ್ಪುರಿಗೊಂಡು ಘನಿಭೂತವಾಗಿ ಚಿತ್ರ ಕಟ್ಟಿ ನಿಲ್ಲುತ್ತವೆ ಮುಂದಿನ ನುಡಿಗಳಲ್ಲಿ.

ಜಾನಪದರ ಬದುಕಿಗೆ ಇದು ಕಲಾನುಭವವೂ ಹೌದು ವಾಸ್ತವಾನುಭವವೂ ಹೌದು. ಇದನ್ನು ಒಟ್ಟಾರೆ ಕೇಳಿಯೇ ಅನುಭವಿಸಬೇಕು ಹಾಡಿಯೇ ಆನಂದಿಸ ಬೇಕು. ಇಂತಹ ಹಾಡು ದೊರೆಯುವುದೇ ಅಪರೂಪ; ದೊರೆತಾಗ ತೋರುವ ಅದರ ದರ್ಶನವೇ ಅಮರ. ಕೇಳಿ, ಮಗನ ಪ್ರಲಾಪ :

" ಮಗನ ಪ್ರಲಾಪ "

ಸತ್ತ ತಾಯಿಯ ಶ್ರವಕ ದುಃಖ ಮಾಡ್ಯಾಳ ತಾನ ।
ಚಿತ್ತಿಟ್ಟ ಕೇಳರಿ ಜನರೆಲ್ಲ ನೀವ ॥
ಮಲ್ಲೀಗೆ ಸಣ್ಣ ಮಲ್ಲೀಗೆ ॥
ಗಂಡ ಸತ್ತ ವ್ಯಾಲ ರಂಡೀತನಾ ತಗದು ।
ಪುಂಡ ಮಗನ ಜ್ವಾಪಾನ ಮಾಡಿದ್ದಾಳ ।
ಗುಂಡ ಗಜಗನಾಡಿ ಗುಡ್ಡವೇರಿದ್ದಾನ ।
ಖಂಡಗ ಮಂದಿ ಕೂಡ ಕಾಳಗ ಮಾಡಿದ್ದಾನ ।
ಬಂದ್ ಹೇಳಿದ್ದಾನ ॥
ಸಿಟ್ಟೆ ಬಂದ್ಯಾಳೇಕ ಪಟ್ಟನ್ನ ಹೊಡದರ ।
ಮತ್ತೊಂದು ದೈವಕ ಮಗನೆಂದೆ ತಾಯೆ ॥
ಮಲ್ಲೀಗೆ ಸಣ್ಣ ಮಲ್ಲೀಗೆ ॥ ೧ ॥

ಹಸದ ಬಂದ್ಯಾಳೇಕ ಶಿಸುವೀಗೆ ನೀರಿಟ್ಟು ।
ಹಸನಾಗಿ ಜಳಕವ ಮಾಡಸೂತಲೆ ।
ಕುಶಲದ ಮಡಿಗಳನುಡಸೂತಲೆ ।
ನೊಸಲೀಗೆ ವಿಭೂತಿ ಧರಸೂತಲೆ ॥
ಮಣಿ ಹಾಕೂತಲೆ ಎಡಿ ಮಾಡೂತಲೆ ॥
ಬಿಸಿ ಬಿಸಿ ಹೋಳಿಗೆ ಬೆಣ್ಣಿ ಕಾಸಿದ ತುಪ್ಪ ।
ಸಣ ತುತ್ತ ಮಾಡಿ ಉಣ್ಣಸ್ನ್ಯ ತಾಯಿ ॥
ಮಲ್ಲೀಗೆ ಸಣ್ಣ ಮಲ್ಲೀಗೆ ॥ ೨ ॥

ಕುದಿಗಾಲೊಳಗೀನ ಮುಚ್ಚಿ ಚುಂಗೀನ ರುಮಾಲ ।
ಉಂಡ ಉಂಡ ಹೊರಗೋಗುತಲೆ ।
ಎಲ್ಲಿಗೋಗುತಿ ಕಂದೌಂತ ಕೇಳೂತಲೆ ।
ತಾಯಿ ಮುಂದ ಎರಡು ಸುಳ್ಳಾಡುತಲೆ ।
ಹೊರಬೀಳೂತಲೆ ॥
ಹೊರಗೋಗಿದ್ದ ಮಗ ಹೊಳ್ಳಿ ಬರುವ ತನಕಾ ।
ಮಾರಿಯು ಮ್ಯಾಲ ಗೆನಪಿಲ್ಲದ ತಾಯಿ ॥
ಮಲ್ಲೀಗೆ ಸಣ್ಣ ಮಲ್ಲೀಗೆ ॥ ೩ ॥

ನಿಬ್ಬಣದ ಜಾತೂರಿ ಹಾತೊರೆದು ಬಂದರ ।
ಧಡಿಯ ಧೋತರವನ್ನು ಹಿಡಸೂತಲೆ ।
ಮೇಲಾದ ಕೊಡಿಗಳ ಕೊಡಮೂತಲೆ ।
ಕಂದನ್ನ ಮುಂದ್ಕಳುವಿ ಹಿಂಡ ದೇವರ ನೆನದು ।
ಕಂದವ್ನ ಮ್ಯಾಲೆ ಕರುಣೆರಲೆನ್ನೂ ತಾಯಿ ।
ಮಲ್ಲೀಗೆ ಸಣ್ಣ ಮಲ್ಲೀಗೆ ॥ ೪ ॥

ಕಾಲೂ ಮಾರಿ ತೊಳೆದು ಶೀರಿ ಸೆರಗೀಲೊರಸಿ ।
ಮ್ಯಾಲ ಸೆರಗ ಮಾಡಿ ಒರಸೂತಲೆ ।
ನೊಸಲೀಗೆ ಇಭೂತಿ ಧರಸೂತಲೆ ।
ಜೋಮಾಲಿ ಹೊಳೆವಂತ ಇದರೀಗೆ ಬಂದರ ।
ಕಾಮುಭೀಮನಂಥ ಕರೆದೆಲ್ಲ ತಾಯಿ ॥
ಮಲ್ಲೀಗೆ ಸಣ್ಣ ಮಲ್ಲೀಗೆ ॥ ೫ ॥

ಹುಟ್ಟೋತ ತಾಯವ್ವ ಸತ್ತ ಹೋಗಿದ್ದರ |
ಹೆತ್ತವ್ವನನ್ನೂದ ಮರೆಯೂತಿದ್ಯಾ |
ಒಂದ್ಪಕ್ಷೀ ಹೊಟ್ಟೀಲಾದರ್ಹುಟ್ಟತ್ತಿದ್ಯಾ |
ದಿಕ್ ದೇಶಾನೆಲ್ಲಾ ತಿರುಗಿ ಬರವೂತಿದ್ಯಾ |
ತಾಯಿ ಮರೆಯೂತಿದ್ಯಾ ||
ಮುಪ್ಪೀನ ತಾಯವ್ವ ಮೋಕ್ಷಕೊಂದೂ ತನಕ |
ಹಕ್ಕೀಯಂಗ ನನಗ ಹಲುಬಂದೆ ತಾಯಿ ||
ಮಲ್ಲೀಗೆ ಸಣ್ಣ ಮಲ್ಲೀಗೆ || ೬ ||

ಪತಿವರತಿ ತಾಯವ್ವ ಮತಿಗೇಡಿ ಮಗನವ್ವ |
ಗೊತ್ತೀಗ್ಹಚ್ಹ್ಯಾ ತಾಯಿ ಸಾಗೀದೆಲ್ಲ | ನಿನ್ನ
ಪತಿವರತಿ ಧರ್ಮವ ನೀಗೀದೆಲ್ಲ | ನನ್ನ
ಸತಿಗಳು ಬರುವೂದು ನೋಡಲಿಲ್ಲ |
ಪ್ರೀತಿ ಮಾಡಲಿಲ್ಲ ||
ಬಂದಂತಾ ಹೆಂಡರು ಚಂದಾಗಿ ನೋಡಿದರ |
ತಾಯಿ ತಂದಿನ್ಯಾಕ ನೆನಸೂನ ತಾಯಿ ||
ಮಲ್ಲೀಗೆ ಸಣ್ಣ ಮಲ್ಲೀಗೆ || ೭ ||

ಹೀಗೆ ಹಾಡು ಸಾವಿನ ಶೋಕ ಗೀತೆಯಾಗಿ ಮುಕ್ತಾಯಗೊಂಡಿದೆ. ಬಾಲ್ಯದಿಂದ ಯವ್ವನಕ್ಕೆ ಕಾಲಿಡುವವರೆಗೂ ಜೋಪಾನಿಸಿದ ತಾಯಿ ಮುಪ್ಪಾಗಿ ಸತ್ತಿದ್ದರೂ ಮಗನ ನಿಲುವು ಎಂತಹದು ? ಬಯಸಿದ ಬಯಕೆ ಯಾವುದು ? ತಾಯಿಯ ಮಹತ್ವ ಏನು ? ಈತ ದುರ್ಬಲನೆ ? ಸಂಕುಚಿತನೇ ? ಹೇಡಿಯೆ ? ಗಂಡುಸಲ್ಲವೆ ? ಈ ಪ್ರಶ್ನೆಗಳಿಗೆ ಯಾವ ಉತ್ತರ ಸಂದೀತು ? ಇವಕ್ಕೆ ತಾಯಿಯ ಅಪಾರ ಪ್ರೀತಿ, ವಾತ್ಸಲ್ಯ, ಜನ್ಮಕೊಟ್ಟು ಜೋಪಾನಿಸಿದುದು. ಇವೇ ಮತ್ತೆ ಮತ್ತೆ ಚಿತ್ರಗೊಂಡು ನಿಂತು ಸ್ತ್ರೀಯ ವಿಶಾಲ ವಿಶ್ವ ಪ್ರಕೃತಿದತ್ತ ಶ್ರೇಷ್ಠ ಮಾನವ್ಯದ ಮುಂದೆ ಪುರುಷ ಪ್ರಧಾನ ಪೌರುಷ್ಯದ ಅಮಾನವೀಯತೆಯು ಕುಬ್ಜನಾಗಿ ಕಾಣಿಸುತ್ತದೆ.

ಮಾನವತೆಯ ಘನತೆವೆತ್ತ ಪುರುಷರು ಸಾವಾಗುವುದಾದರೆ ಮಾನವತೆಯನ್ನು ಮೆರೆಯುತ್ತ ಬಂದ ಘನವಂತಿಕೆಯ ಸ್ತ್ರೀ ಪ್ರಕೃತಿಯನ್ನು ಹೇಗೆ ಕಾಣಬೇಕು ?

ಯಡ್ರಾಮಿಯ ಶಾಸನಗಳು

● ಬಿ. ಆರ್. ಹಿರೇಮಠ
● ಹನುಮಾಕ್ಷಿ ಗೋಗಿ

ದಕ್ಷಿಣಭಾರತ, ಅದರಲ್ಲಿಯೂ ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳು "ಶೈವಧರ್ಮದ ತೊಟ್ಟಿಲು" ಎಂದು ಕರೆಯಿಸಿಕೊಂಡಿವೆ. ವೀರಶೈವದ ಉದಯಕ್ಕಿಂತ ಮೊದಲು ಕರ್ನಾಟಕದಲ್ಲಿ ಲಕುಲೀಶ ಪಾಶುಪತ ಶೈವರು ಅತ್ಯಂತ ಪ್ರಬಲರೂ ಪ್ರಭಾವಶಾಲಿಗಳೂ ಆಗಿದ್ದರು. ಹೀಗಾಗಿ ಇವರಿಗೆ ಅನೇಕ ರಾಜಮನೆತನಗಳ ಆಶ್ರಯ-ಪ್ರೋತ್ಸಾಹ-ಮನ್ನಣೆಗಳು ಸಂದವು. ನಾಡಿನ ಉದ್ದಗಲಕ್ಕೂ ಸಾವಿರಾರು ಮಠಗಳನ್ನು ಕಟ್ಟಿಕೊಂಡು, ದಾನಗಳನ್ನು ಪಡೆದು ಕೊಂಡು ಸಮಾಜದಲ್ಲಿ ಸವ್ಯಸಾಚಿವ್ಯಕ್ತಿಗಳಾಗಿದ್ದರು. ಇಂಥ ಹಲವಾರು ವ್ಯಕ್ತಿ ಗಳ ಪ್ರಭಾವಲಯದಿಂದ ಪುನೀತವಾದ, ಲಕುಲೀಶ ಪಾಶುಪತಶೈವದ ಎಳಮೇಲ ಸಿಂಹಪರ್ಷನ್ಮಂಡಲಿಯ ಮಲಿಯಾಳ ಪಂಡಿತದೇವ ಹಾಗೂ ಈತನ ಶಿಷ್ಯ-ಪ್ರಶಿ ಷ್ಯರ ಕಾರ್ಯಕ್ಷೇತ್ರವಾಗಿ ಕಂಗೊಳಿಸಿದ ಊರು, ಯಡ್ರಾಮಿ. ಈ ಊರಿನಲ್ಲಿ ಕೈಕೊಂಡ ಪರಿವೀಕ್ಷಣೆಯಿಂದ ನಮಗೆ ಒಟ್ಟು ಹದಿನೈದು ಶಾಸನಗಳು ಲಭಿಸಿರು ತ್ತವೆ. ಇವುಗಳ ಅಧ್ಯಯನದಿಂದ ತಿಳಿದುಬರುವ ಸಂಗತಿಗಳನ್ನು ಇಲ್ಲಿ ವಿವರಿಸಿ ಹೇಳಲಾಗಿದೆ.

ಇಲ್ಲಿಯ ಶಾಸನಗಳಲ್ಲಿ ಯಡ್ರಾಮಿ ಗ್ರಾಮವನ್ನು ಯೆಳರಾಮೆ (ಸು. ಶ. ೧೨), ಶ್ರೀಮದ್ದಕ್ಷಿಣ ವಾರಣಾಸಿ ವೆಳರಾಮೆ (ಸು. ಶ. ೧೨), ಎಳರಾಮೆ ತೀರ್ಥ (ಸು. ಶ. ೧೨), ಎಳರಾವೆ (ಕ್ರಿ. ಶ. ೧೧೨೧), ದಕ್ಷಿಣ ವಾರಣಾಸಿ ಎಱರಾಮೆ ತೀರ್ಥ (ಕ್ರಿ. ಶ. ೧೧೬೮), ಸರ್ವನಮಸ್ಯದ ಅಗ್ರಹಾರಂ ದಕ್ಷಿಣವಾರಣಾಸಿ ಎಳರಾಮೆ (ಕ್ರಿ. ಶ. ೧೧೮೯) ಎಂದು ಕರೆಯಲಾಗಿದೆ.

ಇಲ್ಲಿ ದೊರೆಯುವ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯ ಆರನೆಯ ವಿಕ್ರ ಮಾದಿತ್ಯನ ಎರಡು ಶಾಸನಗಳೂ (ಕ್ರಿ. ಶ. ೧೦೯೫, ಕ್ರಿ. ಶ. ೧೧೨೧), ಇಮ್ಮಡಿ ಜಗದೇಕಮಲ್ಲನ ಒಂದು ಶಾಸನವೂ (ಸು. ಶ. ೧೨) ಮುಮ್ಮಡಿ ತೈಲಪನ ನಾಲ್ಕು ಶಾಸನಗಳೂ (ಕ್ರಿ. ಶ. ೧೧೫೫, ಇನ್ನುಳಿದ ಇಕ್ಕೆ ಮಿತಿ ನಿರ್ದೇಶನವಿಲ್ಲ) ಕಲ್ಯಾಣ ಚಾಲುಕ್ಯ ಅರಸರಿಗೆ ಸಂಬಂಧಿಸಿದ ಇನ್ನೂ ನಾಲ್ಕೈದು ಶಾಸನಗಳೂ (ಸು. ಶ. ೧೨) ಕಳಚುರಿ ಸೋವಿದೇವನ ಎರಡು ಶಾಸನಗಳೂ (ಕ್ರಿ. ಶ. ೧೧೬೮,

ಕ್ರಿ. ಶ. ೧೧೬೯) ಸೇರಿರುತ್ತವೆ. ಹೀಗಾಗಿ ಈ ಪ್ರದೇಶ ಕಲ್ಯಾಣ ಚಾಲುಕ್ಯ ಮತ್ತು ಕಳಚುರಿ ಅರಸರ ಆಳಿಕೆಗೆ ಒಳಪಟ್ಟಿದ್ದಿತೆಂಬುದು ಗೊತ್ತಾಗುತ್ತದೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಿಗೆ ಹೈಹಯ ವಂಶದ ರೇವರಸನು (ಕ್ರಿ. ಶ. ೧೧೨೧) ಮಹಾಮಂಡಲೇಶ್ವರನಾಗಿಯೂ ಏಚರಸನು ಕಲ್ಯಾಣ ಚಾಲುಕ್ಯ ಮುಮ್ಮಡಿ ತೈಲಪನಿಗೆ ಮಹಾಮಂಡಲೇಶ್ವರನಾಗಿಯೂ ರಾಜ ಕಾರ್ಯ ನಿರ್ವಹಿಸಿದ್ದಾರೆ. ಇದೇ ಹೈಹಯ ವಂಶದ ಅಲ್ಲಹುಲಿದೇವ ಕಲ್ಯಾಣ ಚಾಲುಕ್ಯ ಮುಮ್ಮಡಿ ತೈಲಪ (ಕ್ರಿ. ಶ. ೧೧೫೫) ಹಾಗೂ ಕಳಚುರಿ ಸೋವಿದೇವರಲ್ಲಿ (ಕ್ರಿ. ಶ. ೧೧೬೮, ೧೧೬೯) ಮಹಾಮಂಡಲೇಶ್ವರನಾಗಿದ್ದಂತೆ ಕಂಡುಬರುತ್ತದೆ. ಹೀಗೆ ಸಗರನಾಡಿನಲ್ಲಿ ಹೈಹಯ ವಂಶದವರು* ದೀರ್ಘಕಾಲದವರೆಗೆ ಮಹಾಮಂಡಲೇಶ್ವರರಾಗಿ ಆಡಳಿತ ನಡೆಸಿದರು. ಈ ಹೈಹಯ ವಂಶದಲ್ಲಿ ಅನೇಕ ಶಾಖೆಗಳು ಇದ್ದುದು ಗೊತ್ತಾಗುತ್ತದೆ. ಇಲ್ಲಿಯ ಶಾಸನಗಳ ಬಲದಿಂದ ಹೈಹಯ ಶಾಖೆಯೊಂದರ ವಂಶಾವಳಿಯನ್ನು ಹೀಗೆ ನಿರೂಪಿಸಬಹುದು :

ಚಂದ

ಬೂಹಾಂಕ | ನಿಂಬ I | ರೇವ | ಮುಂಜ | ಏಚ

ನಿಂಬ I → ಅಲ್ಲಹುಲಿದೇವ + ...ಲದೇವಿ

ಚಿದ್ದರಸ | ರೇವಣದೇವ ಅಥವಾ ರೇವರಸ | ಕನ್ನರಸ | ಅಲ್ಲಯ್ಯ | ಮಲ್ಲರಸ | ನಿಂಬರಸ II

ಇಲ್ಲಿಯ ಶಾಸನಗಳ ಆಧಾರದಿಂದ ಈ ಹೈಹಯ ವಂಶದ ಕೆಲವರ ಪರಿಚಯವನ್ನು ಹೀಗೆ ವಿವರಿಸಬಹುದು.

ಬೂಹಾಂಕ : ಸಾಗರದಂತೆ ಗಂಭೀರನಾಗಿಯೂ ಅಪಾರ ಯಶಸ್ಸು ಗಳಿಸಿದ ಪರಾಕ್ರಮಶಾಲಿಯೂ ಆಗಿ ಆಡಳಿತ ನಡೆಸಿದನು.

ರೇವರಸ : ಈತ ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರನಾಗಿದ್ದನೆಂದು ಕ್ರಿ. ಶ. ೧೦೯೫ರ ಶಾಸನ ತಿಳಿಸುತ್ತದೆ. ರೇವಭೂಪನ ತ್ಯಾಗಗುಣ ಸೂರ್ಯಪುತ್ರ ಕರ್ಣನನ್ನು ಮರೆಯಿಸಿತಂತೆ.

* ಬಾದಾಮಿ ಚಾಲುಕ್ಯ ಚಕ್ರವರ್ತಿ ಎರಡನೆಯ ವಿಕ್ರಮಾದಿತ್ಯನ ಅರಸಿಯರಾದ ಲೋಕ ಮಹಾದೇವಿ ಹಾಗೂ ತ್ರೈಲೋಕ್ಯ ಮಹಾದೇವಿಯರು ಹೈಹಯ ವಂಶದವರೆಂಬುದನ್ನು ಇಲ್ಲಿ ಗಮನಿಸಬೇಕು.

ಜನ್ನದಬಾವಿಯ ಸ್ವಯಂಭೂದೇವರಿಗೆ ಸುಂಕದಾನ ಮಾಡಿದ ವಿಷಯವನ್ನು ಕ್ರಿ.ಶ. ೧೧೨೧ರ ಶಾಸನ ತಿಳಿಸುತ್ತದೆ. ಶರಣುಬಂದವರನ್ನು ಕಾಯುವ ಕೀರ್ತಿ ದಿಕ್ಕುಂಜರಗಳನ್ನು ದಾಟಿತಂತೆ. ಈತನ ದಾನಗುಣ, ಧರ್ಮಗುಣಗಳಿಗೆ ಯಾವ ಮಹಾಮಂಡಲೇಶ್ವರರೂ ಸಾಟಿಯಿಲ್ಲವೆಂದು ಶಾಸನಕವಿ ಬಣ್ಣಿಸಿದ್ದಾನೆ. ಕ್ರಿ. ಶ. ೧೧೧೧ರ ಶಾಸನದಲ್ಲಿ ರೇವರಸನ ಉಲ್ಲೇಖ ಮಾತ್ರ ಕಂಡುಬಂದರೆ, ಕ್ರಿ. ಶ. ೧೧೨೧ರ ಶಾಸನ ಈತನನ್ನು "ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಮಾಹೇ(ಹಿ)ಷ್ಮತಿ ಪುರವರೇಶ್ವರಂ ಮಧ್ಯದೇಶಾಧೀಶ್ವರನ್ ಹೇಹಯ ವಂಶೋದ್ಭವಂ ವಿವೇಕವನ್ನರ್ಜವಮಾನ ಜೋದ್ಭವಂ ಮೂವಡಿಗಣ್ಡಂ ಮಣ್ಡಳಿಕ ಸರಭ ಭೇರುಣ್ಡಂ ವಾರಿಗೆದಪ್ಪುವ ಮಣ್ಡಳಿಕರ ಗಣ್ಡಂ ಪೆರ್ಮಾಡಿಯ ಸಿಡಿಲುಂ" ಎಂದು ಬಣ್ಣಿಸುತ್ತದೆ.

ಏಚರಸ : ಕಲ್ಯಾಣ ಚಾಲುಕ್ಯ ಮುಮ್ಮಡಿ ತೈಲಪನ ಮಹಾಮಂಡಲೇಶ್ವರನಾಗಿದ್ದ ಏಚರಸ ಎಳರಾಮೆ(ಯಡ್ರಾಮಿ)ಯಲ್ಲಿ ಹೊನ್ನಕಳಸದಿಂದ ಕೂಡಿದ ಶಿವದೇವಾಲಯುವನ್ನು ಮಾಡಿಸಿ, ತೀರ್ಥವೊಂದನ್ನು ನಿರ್ಮಿಸಿ, ಬ್ರಾಹ್ಮಣರಿಗೆ ಭೂದಾನ ಮಾಡಿದ್ದಾನೆ. ಈತನ ಬಿರುದುಗಳನ್ನು ವಿವರಿಸುವ ಹನ್ನೆರಡನೆಯ ಶತಮಾನದ ಶಾಸನ ತ್ರುಟಿತವಿದ್ದು, "ಕಪ್ರ್ಪೂರಪ್ರಿಯಂ ಭೂಷಮಾನ್ಬಾತಂ ಅಚಳಿತ ಧೈರ್ಯ್ಯಮ್ಮಾಹಿಷ್ಮತೀಪು........ ಶ್ರೀಮನ್ಮಹಾಸಾಮನ್ತನೇಚರಸರ್" ಎಂಬ ಭಾಗ ಮಾತ್ರ ಉಳಿದುಕೊಂಡಿದೆ.

ಅಲ್ಲಹುಲಿದೇವ : ಕಲ್ಯಾಣ ಚಾಲುಕ್ಯ ಮುಮ್ಮಡಿ ತೈಲಪ ಹಾಗೂ ಕಳಚುರಿ ಸೋವಿದೇವರಲ್ಲಿ ಈತ ಮಹಾಮಂಡಲೇಶ್ವರನಾಗಿ ಕಾರ್ಯನಿರ್ವಹಿಸಿದ. ಇವನನ್ನು ಕುರಿತು "ಹೇಹಯವಂಶೋದ್ಭವಂ ವಿವೇಕರಾಜಹಂಸ ಸರಸ್ವತೀಕರ್ಣಾವತಂಸ ಅತಿವಿಷಮ ಹಯಾರೂಢ ಪ್ರೌಢರೇಖಾ ರೇವಂತ ಸೂದ್ರಕ ಭೃಗುಮತಾಚಾರ್ಯ ಮಂದರಧೈರ್ಯನೇಕಾಂಗವೀರ ಮದನಾವತಾರ ಗುಣಮಣಿಭೂಷಣ ಪಜೆಘೋಷಣ ಚತುಸ್ಸಮುದ್ರಕೀರ್ತಿವಿಖ್ಯಾತಂ ಸೌಜನದೀಜಾತು ಭೈರವ ರಿಪುಮಂಡಳಿಕ ಸರಭ ಭೇರುಂಡ ಮೂವಡಿಗಂಡ ಜಗದೋರ್ವ್ವಗಂಣ್ಡ ವಾರಿಗೆ ದಪ್ಪುವ ಮಂಣ್ಡಳಿಕರ ಗಣ್ಡ ಆಶ್ರಿತಜನಚಿಂತಾಮಣಿಯಾಳಿಂ ಮುನ್ನಿಜೀವ ಸೌರ್ಯ್ಯವಂ ಮೆಜೆವ ಭೂಪಾಳರ ಸಿರವಂ ಮಜಿವ ಸರಣಾಗತ ವಜ್ರಪಂಜರಂ ವೈರಿದಿಕ್ಕುಂಜರಂ" ಎಂದು ಬರುವ ವರ್ಣನೆಯಿಂದ ಈತನ ಪರಾಕ್ರಮದ ಮೇಲ್ಮೈ ಗೊತ್ತಾಗುತ್ತದೆ.

ಕ್ರಿ. ಶ. ೧೧೫೫ರ ಶಾಸನ ಅಲ್ಲಹುಲಿದೇವ, ಹೆಂಡತಿ ....ಲದೇವಿ, ಮಗ ರೇವಣದೇವರು ಲಕ್ಷ್ಮಣೇಶ್ವರದೇವರಿಗೆ ಬಿಟ್ಟ ದತ್ತಿಯನ್ನು ಹೇಳಿದರೆ; ಕ್ರಿ. ಶ. ೧೧೬೯ರ ಇನ್ನೊಂದು ಶಾಸನ ಈತನ ಮಕ್ಕಳು, ಅಳಿಯ, ಹೆಗ್ಗಡೆ ಮುಂತಾದವರು ಲಕ್ಷ್ಮಣೇಶ್ವರ ದೇವರಿಗೆ ನೀಡಿದ ದಾನವನ್ನು ವಿವರಿಸುತ್ತದೆ. ಕ್ರಿ. ಶ. ೧೧೬೮ರ ಶಾಸನ ಅಲ್ಲಹುಲಿದೇವನ ಆಳಿಕೆಯ ಅವಧಿಯಲ್ಲಿ ಚಂದರಸನು ನೀಡಿದ ದಾನವನ್ನು ಉಲ್ಲೇಖಿಸುತ್ತದೆ.

ಕುಂದರಾಜ : ಈತನು ಪರೋಪಕಾರಚರಿತನೂ ಮನುನೀತಿ ನಿಸರ್ಗ ಮಾರ್ಗನೂ ಆದ ಮಹಾಮಂಡಲೇಶ್ವರ ಏಚರಸನಲ್ಲಿ ಮಂತ್ರಿಯಾಗಿದ್ದನು. ಭಾರದ್ವಾಜ ಕುಲಜನಾದ ಈತನಿಗೆ ಇಬ್ಬರು ಮಡದಿಯರು. ಈ ಇಬ್ಬರು ಮಡದಿಯರ ಉದರ ದಲ್ಲಿ ನಾಲ್ಕುಜನ ಮಕ್ಕಳು ಜನಿಸಿದರು. ಇವರಲ್ಲಿ ಹಿರಿಯಾತನೇ ಚಾವುಂಡರಾಯ (ಉಳಿದ ಮೂರು ಜನರ ಹೆಸರು ಗೊತ್ತಾಗುವುದಿಲ್ಲ). ಚಾವುಂಡರಾಯನ ಕನಸಿನಲ್ಲಿ ದೇವರು ಯತಿರೂಪದಲ್ಲಿ ಕಾಣಿಸಿಕೊಂಡು "ಕೆಂಬಾವಿಯ ದಾರಿಯಲ್ಲಿರುವ ಬಾವಿಯ ಹುತ್ತನ್ನು ತೋಡಿ ನೋಡು" ಎಂದು ಆಜ್ಞಾಪಿಸಿದನು. ಅದರಂತೆ ಮಾಡಲು ಒಂದು 'ಲಿಂಗ' ದೊರೆಯಿತು. ಇದನ್ನೇ 'ಸ್ವಯಂಭೂ' ಹೆಸರಿನಲ್ಲಿ ಪ್ರತಿಷ್ಠಾ ಪಿಸಿದ. ಈ ಚಾವುಂಡರಾಯನ ಸತಿಯ ಹೆಸರು ಜಕ್ಕಣಬ್ಬೆ. ಜಕ್ಕಣಬ್ಬೆಯ ತಂದೆ-ತಾಯಿಗಳ ಹೆಸರು ಅಪ್ಪಣಯ್ಯ-ರೇಕಣಬ್ಬೆ. ಜಕ್ಕಣಬ್ಬೆಯ ಗರ್ಭದಲ್ಲಿ ದಾಸಿ ರಾಜ, ಮಾರ್ತಂಡದೇವ, ಕುಂದರಾಜ, ಅಪ್ಪಣ್ಣ-ಹೀಗೆ ನಾಲ್ಕುಜನ ಮಕ್ಕಳು ಹುಟ್ಟಿದರು. ಇವರಲ್ಲಿ ದಾಸಿರಾಜನು ಪೆರ್ಗಡೆಯಾಗಿದ್ದಂತೆ ಕಾಣುತ್ತದೆ. ಈತ ಮಹಾಜನರ ಸತ್ರಕ್ಕಾಗಿ ಹಣದಾನ ಮಾಡಿದ್ದಾನೆ. "ಧನವನ್ನು ಬಚ್ಚಿಡಲಾರದೆ, ದಾನ ಮಾಡಿದ"ನೆಂಬ ಶಾಸನೋಲ್ಲೇಖದಿಂದ ದಾಸಿರಾಜನ ದಾನಗುಣ ವ್ಯಕ್ತವಾಗುತ್ತದೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿಯೊಬ್ಬನಲ್ಲಿ (ಶಾಸನದ ಮಿತಿ ಕ್ರಿ. ಶ. ೧೧೧೧ ಇರುವುದರಿಂದ ಆರನೆಯ ವಿಕ್ರಮಾದಿತ್ಯನೇ ಚಕ್ರವರ್ತಿ ಆಗಿರುವ ಸಾಧ್ಯತೆ ಅಧಿಕವಾ ಗಿರುತ್ತದೆ) ಮಧುವಣಭಟ್ಟನ ಮಗ ಆದಿತ್ಯಭಟ್ಟ ದಂಡಾಧೀಶನಾಗಿದ್ದ. ಕ್ರಿ. ಶ. ೧೧೧೧ರ ಶಾಸನವೊಂದು ಈತನು ಆದಿತ್ಯೇಶ್ವರ ದೇವಾಲಯ ಕಟ್ಟಿಸಿ, ಭೂದಾನ ಮಾಡಿದ ವಿಷಯವನ್ನು ಉಲ್ಲೇಖಿಸುತ್ತದೆ. ಇದಲ್ಲದೆ ಈತನು ಲಕ್ಷ್ಮೀಶ್ವರ ತೀರ್ಥದ ಪಶ್ಚಿಮ ದಿಕ್ಕಿನಲ್ಲಿ 'ತ್ರಿಕೂಟ' ವನ್ನೂ ರಚಿಸಿದ ಸಂಗತಿ ಸು. ಶ. ೧೨ರ ಶಾಸನ ದಲ್ಲಿದೆ. ಆದಿತ್ಯಭಟ್ಟನನ್ನು ಕುರಿತ ಶಾಸನ ತ್ರುಟಿತವಾಗಿರುವುದರಿಂದ ಇದಕ್ಕಿಂತಲೂ ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

ಕಲ್ಯಾಣ ಚಾಲುಕ್ಯ ಜಗದೇಕಮಲ್ಲನ ರಾಜ್ಯಾಡಳಿತದಲ್ಲಿ ವಾವಣನು ದಂಡ ನಾಯಕನಾಗಿದ್ದುದನ್ನು ಸು. ಶ. ೧೨ರ ಶಾಸನ ಉಲ್ಲೇಖಿಸುತ್ತದೆ.

ಜೈನ ಗುರುಗಳು ತಮಗೆ ಸಂಬಂಧಿಸಿದ ಸಂಘ, ಗಣ, ಗಚ್ಛ, ಅನ್ವಯಗಳನ್ನು ಹೇಳಿಕೊಳ್ಳುವಂತೆ ಶೈವಗುರುಗಳೂ ತಮ್ಮ ಹೆಸರಿನ ಹಿಂದೆ ಪರ್ಷೆ, ಆಮ್ನಾಯ (=ಆವಳಿ), ಸಂತತಿಗಳನ್ನು ಹಚ್ಚಿಕೊಳ್ಳುತ್ತಾರೆ. ಪರ್ಷೆಗಳಲ್ಲಿ ('ಪರಿಷತ್' ಪದದ ತದ್ಭವ ಪರ್ಷೆ) ಅತ್ಯಂತ ಪ್ರಸಿದ್ಧವಾದವು ಎರಡು : ಶಕ್ತಿಪರ್ಷೆ, ಸಿಂಹಪರ್ಷೆ. ಡಾ. ಎಂ. ಚಿದಾನಂದಮೂರ್ತಿ ಅವರು ಸಿಂಹಪರ್ಷೆಯ ವಿವರಗಳು ಶಾಸನಗಳಿಂದ ಅಷ್ಟಾಗಿ ತಿಳಿದುಬರುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.* ಆದರೆ

* ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೩೦

ಯಡ್ರಾಮಿಯ ಶಾಸನಗಳು ಎಳವೇಲ (ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಆಲಮೇಲ) ಸಿಂಹಪರ್ಷೆಯ ಸುಪ್ರಸಿದ್ಧ ಯತಿ ಮಲೆಯಾಳಪಂಡಿತ ಹಾಗೂ ಈತನ ಶಿಷ್ಯ-ಪ್ರಶಿಷ್ಯರಾದ ಅಮೃತರಾಶಿ ಪಂಡಿತದೇವ, ಮೋನಿಪಂಡಿತ, ಚಂದ್ರ ರಾಶಿಪಂಡಿತ, ಸೂರ್ಯರಾಶಿ ಪಂಡಿತ (ಈತ ಹಗರಟಗೆಯ ಗವರೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದ – ARIE 1959–60 No. 475–476 ಹಗರಟಗೆ) ರಿಗೆ ಸಂಬಂಧಿಸಿದಂತೆ ಹಲವಾರು ಹೊಸ ವಿಷಯಗಳನ್ನು ಪ್ರಕಟಪಡಿಸುತ್ತವೆ. ಈ ಎಲ್ಲ ಕಾರಣಗಳಿಂದ ಯಡ್ರಾಮಿ ಗ್ರಾಮವು ದಕ್ಷಿಣವಾರಣಾಸಿ, ಎಳರಾಮೆ ತೀರ್ಥ ಎಂದು ಕರೆಯಿಸಿಕೊಂಡಿದೆ ಮುದನೂರ ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯನೂ ಎಳವೇಲ ಸಿಂಹಪರ್ಷನ್ಮಂಡಲಿಯ ಗುರುವೂ ಅಷ್ಟಾಂಗಯೋಗ ಸಂಪನ್ನನೂ ಆದ ಮಲೆಯಾಳ ಪಂಡಿತದೇವ ಹಾಗೂ ಈತನ ಶಿಷ್ಯ-ಪ್ರಶಿಷ್ಯರನ್ನು ಕುರಿತು ಯಡ್ರಾಮಿ ಮತ್ತು ಬೇರೆ ಗ್ರಾಮಗಳ ಶಾಸನಗಳು ಅನೇಕ ಸಂಗತಿಗಳನ್ನು ವಿವರಿಸುತ್ತವೆ. ಅವು ಹೀಗಿರುತ್ತವೆ:

೧. ಮುದನೂರ ಮಲೆಯಾಳಪಂಡಿತ ಹಾಗೂ ಈತನ ಶಿಷ್ಯ-ಪ್ರಶಿಷ್ಯರನ್ನು ಉಲ್ಲೇಖಿಸುವ ಯಡ್ರಾಮಿಯ ಶಾಸನಗಳು :

i. "ಸ್ವಸ್ತಿ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧಿ ರೂಪಾಷ್ಟಾಂಗಯೋಗ ಸಂಪಂನ .... ವಿನೇಯಮುಹಿ .... ಗುರು ವಾರಣಾಸಿ ಸರಸಿರುಹಭೃಂಗರುಂ ನಿರ್ಜಿತಾನಂಗರುಂ ಆ ಶ್ರೀಮದೆಳವೇಲ ಸಿಂಹಪರುಷನ್ಮಂಡಲಿ ಮಲೆಯಾಳದೇವರ ಶಿಷ್ಯ-ಪ್ರಶಿಷ್ಯರಪ್ಪ ಶ್ರೀಮತು ದಕ್ಷಿಣವಾರಣಾಸಿ ಎಳರಾಮೆಯ ತೀರ್ಥದಾ ರಾಮೇಶ್ವರದೇವರ ಮಠಾಚಾರ್ಯ್ಯ ಚಂದ್ರಾಸಿ ಪಂಡಿತದೇವ" (ಕ್ರಿ.ಶ. ೧೧೭೮).

ii. "ಸ್ವಸ್ತಿ ಯಮ ನಿಯಮ ಸ್ವ(ಸ್ವಾ)ಧ್ಯಾಯ ಧ್ಯಾನ ಧಾರಣ ಮೋನಾನುಷ್ಠಾಣ ಜಪಸಮಾಧಿ ಶೀಳಸಂಪನ್ನರಪ್ಪ ಶ್ರೀಮದೆಳವೇಲ ಸಿಂಹಪರ್ಷನ್ಮಣ್ಡಲಿ ಮಲೆಯಾಳದೇವರ ಶಿಷ್ಯ-ಪ್ರಶಿಷ್ಯರಪ್ಪ ಮೋನಿಪಂಡಿತ" (ಸು.ಶ. ೧೨).

iii. "ಶ್ರೀರಾಮೇಶ್ವರದೇವರ ಮಠದಾಚಾರ್ಯರ್ಮದ್ದೆಳವೇಲ ಸಿಂಹಪರ್ಷನ್ಮಂಡಲಿ ಮಲೆಯಾಳ ಪಂಡಿತದೇವರ ಶಿಷ್ಯ-ಪ್ರಶಿಷ್ಯರಪ್ಪ ಅಮೃತರಾಶಿ ಪಂಡಿತ ದೇವ" (ಸು.ಶ. ೧೨).

iv. ".ಲಯಾಳದೇವರ ಪ್ರಶಿಷ್ಯರಪ್ಪ ಸೂರ್ಯರಾಶಿ ಪ..." (ಸು.ಶ. ೧೨). ಈ ಮೇಲಿನ ಉಲ್ಲೇಖಗಳಿಂದ ಚಂದ್ರರಾಶಿಪಂಡಿತನು ಕ್ರಿ.ಶ. ೧೧೭೮ ರಲ್ಲಿ ರಾಮೇಶ್ವರದೇವರ ಮಠದಾಚಾರ್ಯನಾಗಿದ್ದುದು ಖಚಿತವಾಗುತ್ತದೆ. ಜೊತೆಗೆ ಮೋನಿಪಂಡಿತ, ಅಮೃತರಾಶಿಪಂಡಿತ ಹಾಗೂ ಸೂರ್ಯರಾಶಿಪಂಡಿತರು ಹನ್ನೆರಡ

ನೆಯ ಶತಮಾನದಲ್ಲಿ ಇದೇ ಗ್ರಾಮದ ರಾಮೇಶ್ವರ ಇಲ್ಲವೆ ಬೇರೆ ಶಿವಾಲಯುಗಳ ಸ್ಥಾನಾಚಾರ್ಯರಾಗಿರುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಇದೇ ಗ್ರಾಮದ ಕ್ರಿ. ಶ. ೧೧೫೫ ರ ಶಾಸನವೊಂದು ಸಿಂಹಪರ್ಷನ್ಮಂಡಲಿಯ ಯತಿಯೊಬ್ಬನು ಲಕ್ಷ್ಮಣೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದನೆಂದು ಹೇಳುತ್ತದೆ. ಇದರಲ್ಲಿ ಯಡ್ರಾಮಿ ಗ್ರಾಮದಲ್ಲಿ ಶಿವಾಲಯವೊಂದನ್ನು ಕಟ್ಟಿಸಿದ ಮೋನಿಪಂಡಿತನ ವಿದ್ವತ್ತು, ವೈದ್ಯಸಾಮರ್ಥ್ಯ, ಹಾಗೂ ಯೋಗ ಸಂಪನ್ನತೆಗಳನ್ನು ಶಾಸನ ಹೀಗೆ ವಿವರಿಸುತ್ತದೆ.

"ದಕ್ಷಿಣವಾರಣಾಸಿಯೆನಿಸಿಪೆಳರಾವೆಗೆ ದಿವ್ಯಮೂರ್ತಿ ಪಾ
ಪಕ್ಷಯ ಕಾ....ದ್ದಿ ಜನ್ನದಬಾವಿಗೆ ಬಂದು ರಾಗದಿಂ
ತ್ರ್ಯಕ್ಷ ನಿವಾಸಮೆ ನೆಱೆಯೆ ಮಾಡುವೆಂದೆನಲೇಂ ಬ್ರತಗಳಿ
ನಕ್ಷಯ ನುಡಿ ಮಾಡಿಸಿದನೇಂ ಕ್ರಿತಪುಣ್ಯನೋ ಮೋನಿಪಂಡಿತ ||

ಅಟಮದನ ವಿಷವಿದ್ಯಾನಿಪುಣಂ ಯಮನಿಯಮ ನಿಯತ ಸರ್ಪ್ವಯಶಃ ಶ್ರೀ ಆಪ್ತಲಲಾಮಂ ಶ್ರೀ ಮೋನಿಪಣ್ಡಿತಂ ಪಣ್ಡಿತಾಬ್ಜವನ ಕಳಹಂಸಂ"

೨. ಮಲೆಯಾಳ ಪಂಡಿತ ಹಾಗೂ ಈತನ ಶಿಷ್ಯ-ಪ್ರಶಿಷ್ಯರನ್ನು ಉಲ್ಲೇಖಿಸುವ ಬೇರೆ ಗ್ರಾಮದ ಶಾಸನಗಳು :

i. ಕ್ರಿ.ಶ. ೧೦೨೮ರ ಅಸುಂಡಿ ಶಾಸನ : "ಅಂಣ್ಣಿಗೆಱೆಯ ನಕರೇಶ್ವರದ ಮಲೆಯಾಳ ಪಣ್ಡಿತರ ಶಿಷ್ಯಂ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೋನಾನುಷ್ಠಾಣ ಪರಾಯಣರಪ್ಪ ದೇವಸಿಂಗಿ ಪಣ್ಡಿತರ್"[1]

ii. ಕ್ರಿ. ಶ. ೧೦೪೫ರ ಮೋರಿಗೇರಿ ಶಾಸನ: "ಸ್ವಸ್ತಿ ಸಂಸಾರ ಪಾರಾವಾರ ಮದಜಳ ಮಹಾಪ್ರಯಾಸೋತ್ತುಂಗ ತರಂಗಭಂಗ ಭಗ್ನಮಗ್ನಾನೇಕ ಪ್ರಾಣಿಜಾತಿ ಕರಿಮಕರ ತಿಮಿ ತಿಮಿಂಗಿಳ ಪ್ರಭೃತಿ ಪ್ರಕ್ಷುಭಿತಾವರ್ತ್ತಗರ್ತ್ತಾಂತಃಪತಿತ ಶಿವಾನುಗ್ರಹೀತ ಶಿಷ್ಟಜನೋತ್ತರಣಕರಣ ಸಾಮರ್ತ್ಥ್ಯೋಪೇತ ಪುರಂದರ ಬಲಿಂದ ಮಾರವಿಂದ ನಂದನ ದಿವ್ಯಮುನಿಬೃಂದ ವಂದಿತ ಸುಂದರ ಚರಣಾರವಿಂದ ಶ್ರೀಮಲ್ಲ ಕುಳೇಶ ಮುಖಕಮಳ ವಿನಿರ್ಗ್ಗತ ಶಕಳ ಶಾಸ್ತ್ರಾರ್ತ್ಥ ಸದ್ಭಾವಾಭಿಜ್ಞರ್ | ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಜಪಸಮಾಧಿ ಸಂಪನ್ನರಪ್ಪ ಕೋಗಳಿಯಯ್ನೂಱಱ ಮಠಾಧಿಪತಿಗಳಪ್ಪ ಸಿಂಹಪರ್ಷೆಯ ಶ್ರೀಮನ್ಮಲೆಯಾಳ ಪಣ್ಡಿತದೇವರವರ ಶಿಷ್ಯರ್ಸ್ಸಮಸ್ತ ಶಾಸ್ತ್ರವಾದ ಪಾರಗರಪ್ಪ ಶ್ರೀಮಜ್ಞಾನೇಶ್ವರ ಪಣ್ಡಿತರವರ ಶಿಷ್ಯರ್ಯ್ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಜಪಸಮಾಧಿ ಸಂಪನ್ನರಪ್ಪ ಶ್ರೀಮತ್ಸೋಮೇಶ್ವರ ಪಣ್ಡಿತರ್"[2]

1 South Indian Inscriptions XI—i 63
2 South Indian Inscriptions XI—i 101

iii. ಕ್ರಿ. ಶ. ೧೦೪೬ರ ಮೋರಿಗೇರಿ ಶಾಸನ: "ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಜಪಸಮಾಧಿ ಸಂಪನ್ನರಪ್ಪ ಕೋಗಳಿಯಯ್ನೂಱ ಮಠಾಧಿಪತಿಗಳಪ್ಪ ಶ್ರೀಮಲೆಯಾಳ ಪಣ್ಡಿತದೇವರವರ ಶಿಷ್ಯರ್ ಶ್ರೀಜ್ಞಾನೇಶ್ವರ ಪಣ್ಡಿತರವರ ಶಿಷ್ಯರ್ ಸಮಸ್ತ ಶಾಸ್ತ್ರಪಾರಾವಾರಗರಪ್ಪ ಶ್ರೀಮತ್ ಸೋಮೇಶ್ವರ ಪಂಡಿತರ್"[3]

iv. ಕ್ರಿ. ಶ. ೧೦೪೯ರ ಶಿರೂರ ಶಾಸನ: "ಉತ್ತರೇಶ್ವರ ದೇವಸ್ಯ ಮಠೇ ಸಾಂಸ್ಥ ತಪಸ್ವಿನಃ ತೇಷಾಂ ಮುಖ್ಯೋ ಮಹಾಪ್ರಾಜ್ಞೋ ಮಲಯಾಲಾಖ್ಯ ಬುಧ ಸ್ಥಿತಃ || ತಚ್ಛಿಷ್ಯೋತ್ರ ...... ಮಹಾಮುನೇಃ ಪಾದಪ್ರಕ್ಷಾಲ್ಯ ವಿಧಿನಾ ಭೂಮಿರ್ದತ್ತಾತಿ ಭಕ್ತಿತಃ || ಸಿಂಘಪರ್ಷಸ್ತತೋ ಮುಖ್ಯಃ ತೇಜೋರಾಶಿ ಮಹಾಯತೇ" [4]

v. ಕ್ರಿ. ಶ. ೧೦೭೧ರ ಹೂವಿನಹಡಗಲಿ ಶಾಸನ: "ಮುದನೀರ ತೀರ್ತ್ಥದ ರಾಮೇಸ್ವರದ ಮಲೆಯಾಳ ಪಣ್ಡಿತದೇವರ ಸನ್ತತಿ. ಈ ಸ್ಥಾನ ಲಕುಳೀಸ್ವರ ಪಣ್ಡಿತರ ಮಠ"[5]

vi. ಕ್ರಿ. ಶ. ೧೦೭೪ರ ಬೈಚಬಾಳ ಶಾಸನ: "ಶ್ರೀಮದೆಳಮೇಲ ಸಿಂಹ ಪರ್ಷೆ ಮಂಡಲಿಯ ಮಲೆಯಾಳದೇವರ ಪ್ರಶಿಷ್ಯಶಿಷ್ಯರಪ್ಪ ಶ್ರೀಮತ್ತೇಜೋರಾಶಿ ಪಂಡಿತದೇವರು"[6]

vii. ಕ್ರಿ.ಶ. ೧೦೭೭ರ ಏವೂರ ಶಾಸನ: "ಎಳಮೇಲ ಸಿಂಹಪರ್ಷನ್ಮಂಡಲಿಯ ಮಲೆಯಾಳ ಪಣ್ಡಿತದೇವರ ಶಿಷ್ಯರ್ ಮಿರಿಂಜೆಯ ಚಿಕ್ಕದೇವರ ಪ್ರಶಿಷ್ಯರಪ್ಪ ಶ್ರೀಮದ್ ಈಶಾನರಾಶಿ ಪಣ್ಡಿತರ್"[7]

viii. ಕ್ರಿ.ಶ. ೧೧೯೩ರ ಹಲಗೊಂದಿ ಶಾಸನ: "ಸ್ವಸ್ತಿ ಸಂಸಾರ ಪಾರಾವಾರ ಮದಜಳ ಮಹಾಯಸೋತ್ತುಂಗ ತರಂಗ ಭಗ್ನಮಗ್ನಾನೇಕ ಪ್ರಾಣಿಜಾತಿ ಕರಿಮಕರ ತಿಮಿತಿಮಿಂಗಳ ಪ್ರಭೃತಿ ಪ್ರಕ್ಷುಭಿತಾವರ್ತ್ತಗರ್ತ್ತಾನ್ತಃಪತಿತ ಸಿವಾನುಗ್ರಹೀತ ಶಿಷ್ಯ ಜನೋತ್ತರಣ ಕಾರಣ ಸಾಮರ್ತ್ಥ್ಯ .... ಬಲಿಸ್ಟಮಾರವಿಸ್ಟಸಸ್ಟಸ ಮುಸಿದಿವ್ಯ ವನ್ದಿತ ಸುನ್ದರ ಚರಣಾರವಿನ್ದ ಶ್ರೀಮಲ್ಲಿಕಾರ್ಜುನೇಶ್ವರದೇವ ಮುಖಕಮಳ ವಿನಿರ್ಗ್ಗತ ಸಕಳ ಶಾಸ್ತ್ರಾರ್ತ್ಥ ... ರಪ್ಪ ಮುದಿನೀರ ತೀರ್ತ್ಥದ ರಾಮೇಶ್ವರದ ಶ್ರೀ ಮಲೆಯಾಳ ಪಂಡಿತದೇವರ ಶಿಷ್ಯರು ಜ್ಞಾನೇಶ್ವರ ಪಣ್ಡಿತದೇವರು ಅವರ ಶಿಷ್ಯರು ಶ್ರೀ ಸೋಮೇಶ್ವರ ಪಂಡಿತದೇವರು ಅವರ ಶಿಷ್ಯರು ಶ್ರೀ ಸಾಂತರಾಸಿ ಪಂಡಿತದೇವರು ಅವರ ಶಿಷ್ಯರು ||ಶ್ರಿ||

3 South Indian Inscriptions, IX - i 104
4 South Indian Inscriptions, XI - i 85
5 South Indian Inscriptions, IX - i 135
6 ಅಪ್ರಕಟಿತ
7 Epigraphia Indica, XII P. 268

ಹರಹಸನಕ್ಕೆ ದೇವಕಃಧರಕ್ಕೆ ಸೀತಾಂಬುರುಹಕ್ಕೆ ಪೌಕ್ತಿಕಾಭರಣಗಣ........ ಗಜಕ್ಕೆ ಗರಧರ ಫೇನಪಿಂಡನಿವಹಕ್ಕೆ ಮುಕುಂದ ಮಕುಟ ಸೋಭೆಗೆ ದೊರೆಯೆನಿಸಿತ್ತೊ ಭಾವಿಸೆ ಕಳೇಸಮುನೀಶ ಯಶಂ ಧರಿತ್ರಿಯೊ.... ಮೂರ್ತ್ತಿಯಂ ವಿನಯ ಸಮಾಧಿ ಶೀಲಗುಣ ಶೌಚಚರಿತ್ರ ತಪಜ್ಪ್ರಭಾವದೊಳ್ ಮನುಮುನಿಸಂದಗಸ್ತ್ಯ... ಸಿಪಕಾನ್ಯ ಪರ್ತ್ತವಗೆಣೆಯೆಂದು ಬಣ್ಣಿಸೆ ಖಳೇಶ್ವರಪಣ್ಡಿತರೇಂ ಕ್ರಿತಾರ್ತ್ಥರೋ"[8]

ix ಕ್ರಿ. ಶ. ೧೧೦೪ ರ ಕುರವತ್ತಿ ಶಾಸನ: "ಶ್ರೀಮನು ಮಲೆಯಾಳ ಪಂಡಿತ ದೇವರ್...."[9]

x. ಕ್ರಿ. ಶ. ೧೧೧೬ ರ ಜಾಡಕೊಂಡಗುಳಿ ಶಾಸನ: "ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಜಪಸಮಾಧಿಶೀಲಗುಣಸಂಪಂನ್ನರಪ್ಪ ಸಿಂಹಪರ್ಷೆ ಯಭಿನವ ಪಾಶುಪತ ಸುಭತಾಭರಣರಪ್ಪ ಸವರವಳ್ಳಿಯ ಜ್ಞಾನರಾಸಿ ರಾಜಗುರು ದೇವರ ಶಿಷ್ಯರಪ್ಪ ಸ್ರೀ ಸಿದ್ಧಯೋಗಿ ಪಂಡಿತದೇವ" [9A]

xi. ಕ್ರಿ. ಶ. ೧೧೪೯ ರ ಬೆಣ್ಣೇಹಳ್ಳಿ ಶಾಸನ: "ಸ್ವಸ್ತಿ ಸಂಸಾರಸಾರ ಪಾರಾವಾರ ಮದಜಳ ಮಹಸೋತ್ತುಂಗತರಂಗ ಭಗ್ನ ಮುಗ್ನಾನೇಕ ಪ್ರಾಣಿಜಾತಿ ಕರಿ ಮಕರ ತಿಮಿ ತಿಮಿಂಗ್ಗಿಳ ಪ್ರಕ್ರಿತಿ ಪ್ರಕ್ಷುಭಿತವರ್ತ್ತಗರ್ತ್ತಾನ್ತ ಶಿವಾನುಗೃಹೀತ ಶಿಷ್ಟಜನೋತ್ತರಣ .... ಚತುರ ಗಮಕ ವಾದಿವಾದ ನಿಯಮೋಪಾಸನ್ಯಾಸ ಚತುರ್ವೇದ ವೇದಾನ್ತ ಸಿದ್ಧಾನ್ತ ಶ್ರವಣವೇದಿತರು ಶ್ರೀಮಲ್ಲಕುಳೀಶ್ವರದೇವ ಮುಖಕಮಳ ವಿನಿ[ರ್ಗ್ಗತ] ಚರಣಾರವಿನ್ದ ಪುರನ್ದ ಬಲಿನ್ದಮಾರವಿನ್ದ ನನ್ದನನೇಸೌನ್ದರರುಮಪ್ಪ ಶ್ರೀಮನ್ಮಹಾಗ್ರಾಹಾರ ಹೂಲಿಯ ಶ್ರೀ ಪಂಚಲಿಂಗದೇವಪಾದಾಬ್ಜಭ್ರಿಂಗರುಂ ಶ್ರೀ ಸಿಂಹಪರ್ಷೆ ಅಭಿನವ ಪಾಶುಪತಮಠ ಶ್ರೀ ವಿದ್ಯಾರಾಶಿ ಪಂಡಿತದೇವರು ||ಅವರ ಶಿಷ್ಯರು|| ಶ್ರುತದೊಳು ಶೀಲದೊಳಾಗಮೋಕ್ತ ಶಾಸ್ತ್ರದೊಳು ತಪೋನುಷ್ಠಾನದೊಳು ಪರಹಿತ ಬ್ಯಾಪಾರದೊಳು ಗೌರವಾಕೃತಿಯೊಳು ಮನ್ದರಧೈರ್ಯ್ಯದೊಳು ಪೋಲ್ವರೆನೆ ಬಣ್ಣಿಸೆ ಧರ್ಮ್ಮರಾಶಿ ಮುನಿಪಂ ಧನ್ಯಂ ಪೆಜರ್ದ್ಧನ್ಯರೇ ||ಅವರ ಶಿಷ್ಯರು|| ಸುಕನೋರ್ಬ್ಬನಂ ಸ್ಕಂದನೋರ್ಬ್ಬನಂ ಪವನತನೆಯನೋರ್ಬ್ಬನ್ನದೀಜಾತನೋರ್ಬ್ಬ[ಂ] ನದೀಜಾತನನ್ನನೆಸೆ ಜಗಂ ಬಣ್ಣಿಸೆ ಚಂದ್ರರಾಶಿ ಮುನೀಶ || ಇನ್ತೀ ಅಭಿನವ ಪಾಶುಪತ ಸನ್ತಾನದ [ದೇವರೆನಿ]ಸುವುದು ||"[9B]

xii. ಕ್ರಿ. ಶ. ೧೧೭೭ ರ ಅಸುಂಡಿ ಶಾಸನ : "ಸ್ವಸ್ತ್ಯನೇಕ ಶಿವತತ್ತ್ವಾಗಮ ಸಂಪಂನ್ನರುಂ । ಶಿಷ್ಟಪ್ರಸನ್ನರುಂ । ಸಕಳಶಾಸ್ತ್ರಪಾರಗರುಂ । ಚೌಷಷ್ಟಿಕಳಾ

8 South Indian Inscriptions, IX-i 163

9 South Indian Inscriptions, IX-i 169

9A ಅಪ್ರಕಟಿತ : ಡಾ. ಎಂ. ಎಂ. ಕಲಬುರ್ಗಿ ಅವರ ಸಂಗ್ರಹ.

9B South Indian Inscriptions, vol IX-i 251

ಧರರುಂ । ಪಶುಪತಿಮತ ತಪಃಪ್ರಭಾವಮಾರ್ಗ್ಗ ಸುಭೋದಯ ನಿಯಮಿತ ಮಹೇಶ್ವರಜನ ಶಿವಮುನಿಗಣ ಶಿಷ್ಯೋಕ್ತ ದೀಕ್ಷಾದಕ್ಷರುಂ...ಯ........ಣ ಜಪ ಸಮಾಧಿ ಶೀಳ ಸಂಯುತರಪ್ಪ ಶ್ರೀಮತು ಸಿಂಗ ಪರಿಷೆಯ ಮಠದಾಚಾರ್ಯ್ಯರು ಸೋಮೇಶ್ವರ ಪಣ್ಡಿತರ ಪುತ್ರ ಶಿಷ್ಯ...." 10

xiii. ಕ್ರಿ. ಶ. ೧೧೭೯ ರ ಇಂಗಳೇಶ್ವರ ಶಾಸನ : "ಪರಿರಾಜಿತ ಸಿಂಹಪಜಿಶು ಮಂಡಳಿ ಮಲೆಯಾಳರ ಶಿಷ್ಯಪ್ರತಿಶಿಷ್ಯನ್ನಿರವದ್ಯಂ ಧರ್ಮ್ಮರಾಶಿ ಮುನಿಪೋತ್ತಂಸಂ। ತನ್ಮುನಿಪ... ನರ್ತ್ಥಿ ಮರುನ್ಮಹೀಜಂ ವಿಬುಧಜನನಿಧಾನಂ ವಾಣಿಜನ್ಮನಿವಾಸಂ ವಿಶ್ರುತಸಂನ್ಮಾರ್ಗ್ಗಂ ಜ್ಞಾನರಾಶಿ ಮುನಿಪೋತ್ತಂಸಂ। ದಾಸವಿನೋದಂ ವಿಬುಧ ನಿಧಾನಂ .... ವಿಜಯಪುರ ಕೇದಾರ ಮಹಾಸ್ಥಾನಾಚಾರ್ಯ್ಯ ಕೀರ್ತ್ತಿಶ್ರ(ಶ್ರೀ) ನಾರೀಪತಿ ಕುಮಾರದೇವಬ್ರತಿಪಂ"11

xiv. ಕ್ರಿ. ಶ. ೧೧೭೯ ರ ಏಹೂರ ಶಾಸನ : "ಶ್ರೀಮದ್ಧಳಮೇಲ ಶ್ರೀ ಸಿಂಹ ಪರ್ಷನ್ಮಂಡಲಿ ಮಲೆಯಾಳದೇವರ ಶಿಷ್ಯರಪ್ಪ ಮಿರಿಂಜೆಯ ಚಕ್ಕದೇವರ ಸಂತಾನಂ ಏಹೂರ ಶ್ರೀ ಸ್ವಯಂಭೂ ಸೋಮನಾಥದೇವರ ಸ್ಥಾನದಾಚಾರ್ಯ್ಯರು ಶ್ರೀಮತು ಜ್ಞಾನರಾಶಿಪಂಡಿತದೇವರ್"12

xv. ಸು. ಶ. ೧೨ರ ಕಲಬಾವಿ ಶಾಸನದಲ್ಲಿ[12A] ಮಲೆಯಾಳ ಪಂಡಿತ ಹಾಗೂ ಈತನ ಪ್ರತಿಶ್ಯ ತೇಜೋರಾಶಿಪಂಡಿತರ ಉಲ್ಲೇಖವಿರುತ್ತದೆ.

xvi. ಕ್ರಿ. ಶ. ೧೨೦೦ ರ ಮನಗೂಳಿ ಶಾಸನ : "ಆಚಾರ್ಯ್ಯಾನ್ವಯ ವೆಂತೆಂದಡೆ ವರ ವಿದ್ಯಾನಿಧಿ ಗೌಳದೇವ ಮುನಿಪಂಗಾತ್ಮಾಗ್ರ ಶಿಷ್ಯಂ ಜಿತಸ್ಮರಬಾಣಂ ವಾರ್ಧಿ ಮಲಯಾಳ ಜ್ಞಾನರಾಶಿ ಬ್ರತೀಶ್ವರನಾದಂ ಧರಣೀವಿಶ್ರುತ ಧರ್ಮ್ಮರಾಶಿ ಮುನಿಪಂ" 13

xvii. ಕ್ರಿ. ಶ. ೧೨೨೬ ರ ಬೆಣ್ಣೀಕಲ್ ಶಾಸನ : "ಶ್ರೀಮದಖಿಳ ಭುವನಜನ ಜನಿತ ಸಂಸಾರ ಪಾರಾವಾರ ಮದಜಳ ಮಹಾಪ್ರಯಂಸೋತ್ತುಂಗ ತರಂಗ ಭಗ್ನಮ ಗ್ನಾನೇಕ ಪ್ರಾಣಿಜಾತಿ ಪ್ರಭೃತಿ ಪ್ರಭೃತಿ ಪ್ರಕ್ಷುಭಿತವರ್ತ್ತಗರ್ತ್ತಾಂತಃ ಪತಿತ ಶಿವಾನು ಗ್ರಹೀತ ಶಿಷ್ಯಜನೋತ್ತರಣ ಕರಣ ಸಾಮರ್ಥೋಪೇತ ಪುರಂದರ ಬಲಿಂದಮಾರವಿಂದ ನಂದನ ಮುನಿದಿಬ್ಯವಂದಿತ ಪಾದಾರವಿಂದ ಶ್ರೀಮಲ್ಲಕುಳೇಶ್ವರದೇವಮುಖಕಮಳ

10 South Indian Inscriptions, XVIII 133
11 South Indian Inscriptions, XV 129
12 Epigraphia Indica, XII P. 338
12A Annual Report on Indian Epigraphy 1960-61 No. 386
13 Epigraphia Indica, XII P. 338

ವಿನಿರ್ಗ್ಗತ ಸಕಲಶಾಸ್ತ್ರ ತತ್ವಜ್ಞರುಂ ನಿಖಿಳ ಧರ್ಮಜ್ಞರುಂ ಯಮನಿಯಮ ಪ್ರಾಣಾಯಾಮ ಪ್ರತ್ಯಾಹಾರಾದಿ ನಿಜಕ್ರಿತ್ಯಕ್ರಿಯಾಕರಣಾನುರಕ್ತ ಸ್ವಾಂತಃಕರಣ ಪರಿಣತಿ ವಿಶೇಷ ಪರಾಕ್ರಿತ ಪ್ರತ್ಯವಾಯುರುಂ ಸ್ವರ್ಗ್ಗಾಪವರ್ಗ್ಗ ಮಾರ್ಗ್ಗೋಪಾಯರುಂ ಪರವಾದಿ ಘರಟ್ಟರುಂ| ಸರಸ್ವತೀ ಲಲಾಟಪಟ್ಟರುಂ| ಸಮವಾದಿ ಸರಭಭೇರುಂಡರುಂ ತಪಪ್ರಭಾವ ತೇಜೋಮಾರ್ತ್ತಂಡರುಂ| ಅನ್ನದಾನ ವಿನೋದರುಂ ನಿಖಿಳ ಧರ್ಮ್ಮಾಹ್ಲಾದರುಂ ಅಭಿನವಪಾಶುಪತ ಸಮಯವಾರ್ದ್ಧಿವರ್ಧನ ಸುಧಾಕರರುಂ| ಮೇರು ಸನ್ನಿಭಸ್ಥಿರರುಂ| ಸ್ವಕೀಯಾನುಷ್ಠಾನ ನಿಷ್ಠಿತ ಮಹಿಮೋಪಾರ್ಜ್ಜಿತ ಸಪ್ತಾಹತ್ತರೀ ಸ್ಥಾನಾಚಾರ್ಯ್ಯರುಮಪ್ಪ ತಪಚಕ್ರವರ್ತ್ತಿ ಖಳೇಶ್ವರದೇವರನ್ವಯ| ಕ್ಷಿತನುತ ಲಕುಳೀಶಸ್ತ್ರೋತ್ತಮ ಶಿಷ್ಯ ಲೋಕಸ್ತುತ ಯತಿ ಮುದಿನೀರ ಶ್ರೀ ಮಲೆಯಾಳದೇವ ಬ್ರತಿಕುಳಕಮಳಾರ್ಕ್ಕಸ್ತತ್ಪ್ರಶಿಷ್ಯರ್ಸ ಪೂಜ್ಯಾಂನ್ವಿತ ಭುವಿ ಜಯತು ಶ್ರೀಜ್ಞಾನರಾಶಿರ್ಮ್ಮುನೀಶಃ ತತ್ಸಿಷ್ಯಸ್ಸಾಪನಃ ಸ್ರೇಷ್ಠಃ ಸೋಮೇಶ್ವರ ಮಹಾಬ್ರತಿಃ ತನ್ಮುನಿಶಿಷ್ಯ ವಿಖ್ಯಾತೋ ಶಾಂತರಾಸಿರ್ಯ್ಯತೀಶ್ವರಃ ||ಕಂದ|| ಆ ಮುನಿಯ ಶಿಷ್ಯ ಭೃಗ್ವಿಶ್ವಾಮಿತ್ರಾಂಗೀರಸ ಕಪಿಲ ಸನಕಾದಿ ಮುನಿಸ್ತೋಮತ್ತಮಗೆಣೆಯೆನಲಂತಾ ಮಹಿಮೆಯಂ ತಾಳ್ದಿದ ಕಳೇಶ ಮುನೀಶಂ" 14

ಮೇಲಿನ ಈ ಎಲ್ಲ ಉಲ್ಲೇಖಗಳಿಂದ ಬಳ್ಳಾರಿ ಜಿಲ್ಲೆಯ ಮೋರಿಗೇರಿ, ಹೂವಿನ ಹಡಗಲಿ, ಕುರವತ್ತಿ, ಹಲಗೊಂದಿ, ಬೆಣ್ಣೆಕಲ್; ಗುಲಬುರ್ಗಾ ಜಿಲ್ಲೆಯ ಏವೂರ, ಬೈಚಬಾಳ, ಯಡ್ರಾಮಿ, ಮುದನೂರ, ಜಾಡಕೊಂಡಗುಳಿ; ವಿಜಾಪುರ ಜಿಲ್ಲೆಯ ಮನಗೂಳಿ, ಇಂಗಳೇಶ್ವರ, ಶಿರೂರ; ಧಾರವಾಡ ಜಿಲ್ಲೆಯ ಅಸುಂಡಿ; ಬೆಳಗಾವಿ ಜಿಲ್ಲೆಯ ಹೂಲಿ ಕಲಬಾವಿ ಗ್ರಾಮಗಳು ಎಳಮೇಲ ಸಿಂಹಪರ್ಷೆಯ ಪ್ರಮುಖ ಶೈವಕೇಂದ್ರಗಳಾಗಿದ್ದುದು ವ್ಯಕ್ತವಾಗುತ್ತದೆ. ಇದಲ್ಲದೆ ಕ್ರಿ.ಶ. ೧೦೨೬ರ ಅಸುಂಡಿ ಶಾಸನ ದೇವಸಿಂಗಿಪಂಡಿತನು ಮಲೆಯಾಳ ಪಂಡಿತದೇವನ ಶಿಷ್ಯನೆಂದು ಸ್ಪಷ್ಟವಾಗಿ ಹೇಳುತ್ತದೆ. ಇದರಿಂದ (ಮಲೆಯಾಳ ಪಂಡಿತದೇವನ ಶಿಷ್ಯ) ದೇವಸಿಂಗಿ ಪಂಡಿತನ ಕಾಲ ಕ್ರಿ.ಶ. ೧೦೨೬ ಎಂದೂ ಈತನ ಗುರು ಮಲೆಯಾಳ ಪಂಡಿತನ ಕಾಲ ಕ್ರಿ.ಶ. ೧೦೨೬ ಇಲ್ಲವೆ ಇದಕ್ಕಿಂತ ಹಿಂದೆ, ಅಂದರೆ ಕ್ರಿ.ಶ.ಸು. ೧೦೦೦ ಎಂದೂ ನಿರ್ಧಾರವಾಗುತ್ತದೆ. ಈ ಸಮಯದಲ್ಲಿ ಮಲೆಯಾಳ ಪಂಡಿತದೇವನು ಮುದನೂರ ರಾಮೇಶ್ವರದೇವಾಲಯ ಮತ್ತು ಅಣ್ಣಿಗೆರೆಯ ನಕರೇಶ್ವರ ದೇವಾಲಯಗಳ ಸ್ಥಾನಾಚಾರ್ಯನಾಗಿಯೂ ಕೋಗಳಿ-೫೦೦ರ ಮಠಪಾಚಾರ್ಯನಾಗಿಯೂ ಇದ್ದನು. ಈ ಎಲ್ಲ ಶಾಸನಗಳ ಆಧಾರಗಳಿಂದ ಎಳಮೇಲ ಸಿಂಹಪರ್ಷೆಯ ಶೈವಯತಿ ಮಲೆಯಾಳ ಪಂಡಿತ ಹಾಗೂ ಈತನ ಶಿಷ್ಯ-ಪ್ರಶಿಷ್ಯ ಪರಂಪರೆಯನ್ನು ಹೀಗೆ ಪುನರ್ ರಚಿಸಬಹುದಾಗಿದೆ.

---

14 South Indian Inscriptions, IX-i 343

* South Indian Inscriptions, IX-i 251 (ಕ್ರಿ.ಶ. 1149)
(ಈಗ ಹೂಲಿಯಲ್ಲಿರುವುದು "ಶ್ರೀ ಸಿಂಹಪರ್ಷೆಯ ಅಭಿನವಪಾಶುಪತ ಮಠ")

ಇವರಲ್ಲಿ ತೇಜೋರಾಶಿ ಪಂಡಿತ ಕ್ರಿ.ಶ. ೧೦೪೯ ರಿಂದ ೧೦೮೭ರ ವರೆಗೆ ಮುದನೂರ ರಾಮೇಶ್ವರ ದೇವಾಲಯುದ, ಈಶಾನ್ಯರಾಶಿ ಕ್ರಿ. ಶ. ೧೦೭೭ರಲ್ಲಿ ಏವೂರ ಸ್ವಯಂಭೂ

..........ಶ
ಜೀರ್ಣೋದ್ಧಾರ-ತಪ್ರೋದನರ, ಛಾತ್ರರ ಅಶನಾಚ್ಛಾದನ-ಪರ್ವ-ಹೋಮ-ಬಲಿಕ್ರಿಯಾದಿಗಳಿಗಾಗಿ ಭೂಮಿ (ಗದ್ದೆ, ತೋಟ, ನಿವೇಶನ), ಹಣಗಳನ್ನು ದಾನವಾಗಿ ಕೊಟ್ಟಿದ್ದಾರೆ.

ವಿನಿರ್ಗ್ಗತ ಸಕಲಶಾಸ್ತ್ರ ತತ್ವಜ್ಞರುಂ ನಿಖಿಳ ಧರ್ಮಜ್ಞರುಂ ಯಮನಿಯಮ ಪ್ರಾ
ಯಾಮ ಪ್ರತ್ಯಾಹಾರಾದಿ ನಿಜಕೃತ್ಯಕ್ರಿಯಾಕರಣಾನುರಕ್ತ ಸ್ವಾಂತಃಕರಣ ಪರಿ

14 South Indian Inscriptions, IX-i 343

* South Indian Inscriptions, IX-i 251 (ಕ್ರಿ.ಶ. 1149)
(ಈಗ ಹೂಲಿಯಲ್ಲಿರುವುದು "ಶ್ರೀ ಸಿಂಹಪರ್ಷೆಯ ಅಭಿನವಪಾಶುಪತ ಮಠ")

ಇವರಲ್ಲಿ ತೇಜೋರಾಶಿ ಪಂಡಿತ ಕ್ರಿ.ಶ. ೧೦೪೯ ರಿಂದ ೧೦೮೨ರ ವರೆಗೆ ಮುದನೂರ ರಾಮೇಶ್ವರ ದೇವಾಲಯದ, ಈಶಾನ್ಯರಾಶಿ ಕ್ರಿ. ಶ. ೧೦೭೭ರಲ್ಲಿ ಏವೂರ ಸ್ವಯಂಭೂ ಸೋಮನಾಥ ದೇವಾಲಯದ, ಬಲ್ಲಜೀಯ ಕ್ರಿ. ಶ. ೧೧೬೭ರಲ್ಲಿ ಮುದನೂರ ಲಕ್ಷ್ಮಣೇಶ್ವರ ದೇವಾಲಯದ, ಬ್ರಹ್ಮರಾಶಿ ಕ್ರಿ.ಶ. ೧೦೯೯ರಲ್ಲಿ ಹಗರಟಗೆಯ ಉಗ್ರ ಭೀಮೇಶ್ವರ ದೇವಾಲಯದ, ಎರಡನೆಯ ಜ್ಞಾನರಾಶಿ ಕ್ರಿ. ಶ. ೧೧೬೬ರಿಂದ ೧೧೭೯ರ ವರೆಗೆ ಏವೂರ ಸ್ವಯಂಭೂ ಸೋಮನಾಥ ಹಾಗೂ ವಿಜಾಪುರದ ಸ್ವಯಂಭೂ ಕೇದಾರೇಶ್ವರ ದೇವಾಲಯಗಳ ಸ್ಥಾನಾಚಾರ್ಯರಾಗಿದ್ದುದು ಶಾಸನಗಳಿಂದ ಗೊತ್ತಾಗುತ್ತದೆ.

ಹೀಗೆ ಯಡ್ರಾಮಿ ಹಾಗೂ ಮುದನೂರ ಗ್ರಾಮಗಳು (ದೇವರದಾಸಿಮಯ್ಯ) ಜೇಡರದಾಸಿಮಯ್ಯನಿಗಿಂತ ಪೂರ್ವದಲ್ಲಿಯೇ ಎಳಮೇಲ ಸಿಂಹಪರ್ಷೆಯ ಲಕುಲೀಶ ಪಾಶುಪತ ಶೈವದ ಅತ್ಯಂತ ಪ್ರಬಲ ಕೇಂದ್ರಗಳಾಗಿದ್ದವು. ಮಲೆಯಾಳ ಪಂಡಿತನು (ಕ್ರಿ.ಶ.ಸು ೧೦೦೦) ಈ ಶೈವ ಶಾಖೆಯ ನಾಯಕವ್ಯಕ್ತಿಯಾಗಿ ನಿಂತು ತನ್ನ ಶಿಷ್ಯ ಪ್ರಶಿಷ್ಯರ ಮೂಲಕ ನಾಡಿನ ಉದ್ದಗಲಕ್ಕೂ ನಡೆಸಿದ ಶೈವಧರ್ಮದ ಪ್ರಸಾರಕಾರ್ಯ ಬಸವಪೂರ್ವಯುಗದ ಕೊಂಡಗುಳಿ ಕೇಶಿರಾಜ, ಜೇಡರದಾಸಿಮಯ್ಯ ಮುಂತಾದವರ ವೀರಶೈವ ಚಟುವಟಿಕೆಗಳಿಗೆ ಪೂರಕವಾಗಿ ಪರಿಣಮಿಸಿರುವ ಸಾಧ್ಯತೆಯಿದೆ.

ಯಡ್ರಾಮಿಯಲ್ಲಿ ಮುನ್ನೂರು ಮಹಾಜನರೂ ಇದ್ದರು. ಇವರು "ಅನವದ್ಯರನುಪಮಪ್ಪಾರ್ವನಚರಿತಯ್ಯರ್ಜನಯಾಜಯುನಾಧ್ಯಪನದಾನ ಸತ್ಪ್ರತಿಗ್ರಹವಿನೋದ" ರಾಗಿದ್ದರು (ಕ್ರಿ.ಶ. ೧೧೧೧). ಇದಲ್ಲದೆ ಹದಿನೆಂಟುಸಂತತಿ ಹಾಗೂ ಹೆಗ್ಗಡೆ ಕೇತಯ ನಾಯಕರ ಉಲ್ಲೇಖಗಳೂ ಇಲ್ಲಿಯ ಶಾಸನಗಳಲ್ಲಿ ಕಂಡುಬರುತ್ತವೆ.

ಲಕುಲೀಶ ಪಾಶುಪತದ ಎಳಮೇಲ ಸಿಂಹಪರ್ಷೆಯ ಮಲೆಯಾಳ ಪಂಡಿತದೇವನ ಶಿಷ್ಯ-ಪ್ರಶಿಷ್ಯ ಪರಂಪರೆಯ ಆಡುಂಬೊಲವಾಗಿದ್ದಿತು ಸಗರನಾಡು. ಈ ಸಗರನಾಡಿನಲ್ಲಿ ಸಮಾವೇಶವಾಗುವ ಯಡ್ರಾಮಿಗ್ರಾಮದಲ್ಲಿಯೂ ಇವರ ಪ್ರಾಬಲ್ಯವಿದ್ದುದು ಸಹಜವೆನಿಸುತ್ತದೆ. ಇದರಿಂದ ಯಡ್ರಾಮಿಯಲ್ಲಿ ದೇವಾಲಯ ನಿರ್ಮಾಣ, ದಾನಸ್ವೀಕರಣ ಕಾರ್ಯಗಳು ಭರದಿಂದ ಸಾಗಿದುದನ್ನು ಇಲ್ಲಿಯ ಶಾಸನಗಳು ತಿಳಿಯಪಡಿಸುತ್ತವೆ. ಈ ಗ್ರಾಮ "ಬಲ್ಲದ ಕನ್ನಡಕ್ಕರದ ವಿದ್ಯಾಸ್ಥಾನ"ವೂ ಆಗಿದ್ದುದು ಗೊತ್ತಾಗುತ್ತದೆ.

ರಾಮೇಶ್ವರ, ಲಕ್ಷ್ಮಣೇಶ್ವರ ದೇವಾಲಯಗಳ ಉಲ್ಲೇಖ ಇಲ್ಲಿಯ ಬಹುಪಾಲು ಶಾಸನಗಳಲ್ಲಿ ಬರುತ್ತದೆ. ಕಾರಣ ಇವು ಈ ಗ್ರಾಮದ ಪ್ರಧಾನ ದೇವಾಲಯಗಳಾಗಿದ್ದುದರಲ್ಲಿ ಸಂದೇಹವಿಲ್ಲವೆನಿಸುತ್ತದೆ. ಮಹಾಜನರು– ಮಂಡಳೇಶ್ವರರು–ದಂಡನಾಯಕರು–ಸಾಮಾನ್ಯರು ಈ ದೇವಾಲಯಗಳ ಅಂಗಭೋಗ-ರಂಗಭೋಗ-ನಂದಾದೀವಿಗೆ-ನೈವೇದ್ಯ-ಜೀರ್ಣೋದ್ಧಾರ-ತಪೋದನರ, ಛಾತ್ರರ ಅಶನಾಚ್ಛಾದನ-ಪರ್ವ-ಹೋಮ-ಬಲಿಕ್ರಿಯಾದಿಗಳಿಗಾಗಿ ಭೂಮಿ (ಗದ್ದೆ, ತೋಟ, ನಿವೇಶನ), ಹಣಗಳನ್ನು ದಾನವಾಗಿ ಕೊಟ್ಟಿದ್ದಾರೆ.

ಇಲ್ಲಿಯ ರಾಮೇಶ್ವರ–ಲಕ್ಷ್ಮಣೇಶ್ವರ ದೇವಾಲಯಗಳು ಮಠಗಳೂ ಆಗಿದ್ದು, ಮಹತ್ವದ ವಿದ್ಯಾಸ್ಥಾನಗಳೆನಿಸಿದ್ದವು. ಈ ಮಠಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ದಿನನಿತ್ಯದ ಊಟಕ್ಕಾಗಿ 'ಅನ್ನಸತ್ರ'ದ ವ್ಯವಸ್ಥೆಯಿದ್ದಿತು. ದೇವಾಲಯಗಳಲ್ಲಿ ರಂಗ ಭೋಗ ಸೇವೆ ಸಲ್ಲಿಸುವುದಕ್ಕಾಗಿ ದೇವದಾಸಿಯರಿರುತ್ತಿದ್ದರು (ಉದಾ: ಪಾತ್ರದ ಚಾವಿಕಬ್ಬೆ).

ಮಠಗಳಲ್ಲಿ ವಾಸಿಸುವ ಗುರು(=ಯತಿ)ಗಳು ತಪೋಧನರೂ ಪರಮಧಾರ್ಮಿಕರೂ ಉತ್ತಮ ನೈಷ್ಠಿಕರೂ ಭಯಲೋಭ ವರ್ಜಿತರೂ ಆಗಿರಬೇಕಾಗಿದ್ದಿತು. ಒಂದು ವೇಳೆ ಇವರು ಗುಣಹೀನರಾಗಿ ವರ್ತಿಸಿದರೆ ಊರಿನ ಜನ ಹಾಗೂ ಅರಸು ಸೇರಿ, ಮಠ-ದೇವಾ ಲಯಗಳಿಂದ ಹೊರ ಹಾಕುತ್ತಿದ್ದರು. ಇಂಥವರು ನಾಯಿ, ಕತ್ತೆ, ಚಾಂಡಾಲರಿಗೆ ಸಮಾನರು. ಇವರು ಸತ್ತರೆ ನಾಯಿ ಸತ್ತಿದೆ, ಹಂದಿ ಸತ್ತಿದೆಯೆಂದು ಭಾವಿಸಬೇಕೆಂಬ ಸಂಗತಿಯನ್ನು ಇಲ್ಲಿಯ ಶಾಸನಗಳು ತಿಳಿಯಪಡಿಸುತ್ತವೆ. ಇದರಿಂದ ದೇವಾಲಯ ಮಠಗಳ ಬಗೆಗೆ ಪ್ರಾಚೀನ ಕನ್ನಡಿಗರು ಹೊಂದಿದ್ದ ಪೂಜ್ಯತೆ ಪಾವಿತ್ರ್ಯತೆಗಳೂ ಚಾರಿತ್ರ್ಯದ ಬಗೆಗೆ ವಹಿಸಿದ ಕಾಳಜಿಗಳೂ ಗೊತ್ತಾಗುತ್ತವೆ.

ಇಲ್ಲಿಯ ಎಂಟುಹಿಟ್ಟು (ಎಂಟುಜನ ಆಯಗಾರರು) ಗಣಕೇರಿ, ಗೊರವಗೇರಿ ಹಾಗೂ ಬ್ರಹ್ಮಪುರಿಗಳ ಉಲ್ಲೇಖ ಶಾಸನಗಳಲ್ಲಿದೆ. ಇದಲ್ಲದೆ ಆಯದಾಯ, ಕಿಱುಕುಳ ಸಿದ್ಧಾಯ, ಪಾರಿಖಾಯ, ದಸವಂದ, ಅರುವಣ, ತಳಾಱಿಕೆಯ ಮೂಲೆ, ಸಂತೆವಣ, ತಿಪ್ಪೆಸುಂಕ ಮೊದಲಾದ ತೆರಿಗೆಗಳು; ಭಟ್ಟವೃತ್ತಿ, ಭತ್ತಭೋಗದ ದಾನಗಳು, ಕಮ್ಮ, ಮತ್ತರ, ತೀರ್ಥದ ಗಡಿಂಬದ ಕೋಲು ಇತ್ಯಾದಿ ಭೂಮಿಯ ಅಳತೆ ಪ್ರಮಾಣಗಳು; ಗದ್ಯಾಣ ತಿಲುವಗದ್ಯಾಣ, ಪೊನ್ ಎಂಬ ನಾಣ್ಯಗಳು ಇಲ್ಲಿಯ ಶಾಸನಗಳಲ್ಲಿ ಉಲ್ಲೇಖ ಗೊಂಡಿರುತ್ತವೆ.*

ಈ ಎಲ್ಲ ಶಾಸನಗಳು ಹೆಚ್ಚಾಗಿ ಗದ್ಯದಲ್ಲಿರುತ್ತವೆ. ಕೇವಲ ನಾಲ್ಕು ಶಾಸನ ಗಳಲ್ಲಿ ಮಾತ್ರ ಪದ್ಯಗಳು ಕಂಡುಬರುತ್ತವೆ. ಇವುಗಳಲ್ಲಿ ಹೆಚ್ಚಾಗಿ ಚಂಪಕಮಾಲೆ, ಉತ್ಪಲಮಾಲೆ, ಮತ್ತೇಭ ವಿಕ್ರೀಡಿತ, ಸ್ರಗ್ಧರೆ, ಮಹಾಸ್ರಗ್ಧರೆ ಮೊದಲಾದ ಖ್ಯಾತ ಕರ್ನಾಟಕ ವೃತ್ತಗಳೂ ಕಂದಪದ್ಯಗಳೂ ಬಳಕೆಯಾಗಿರುತ್ತವೆ (ಶಾಸನ ನಂ, ೧, ೭, ೮, ೧೨, ೧೩).

---

* ಈ ಶಾಸನಗಳ ಅಧ್ಯಯನ ಹಾಗೂ ಪ್ರಕಟನೆಗೆ ಅವಕಾಶ ಕಲ್ಪಿಸಿಕೊಟ್ಟ ಡಾ. ಎಂ. ಎಂ. ಕಲಬುರ್ಗಿ ಅವರಿಗೂ ಪರಿವೀಕ್ಷಣ ಕಾರ್ಯದಲ್ಲಿ ಸಹಕರಿಸಿದ ಪ್ರೊ. ಎಂ.ಎಂ. ಪಡಶೆಟ್ಟಿ ಅವರಿಗೂ ಸಕಲ ಸಹಾಯಗಳನ್ನು ನೀಡಿ ಉಪಕರಿಸಿದ ಮುದನೂರ ಗ್ರಾಮದ ಶಿವ ಬಸಪ್ಪ ಪಡಶೆಟ್ಟಿ ಅವರಿಗೂ ಯಡ್ರಾಮಿ ಗ್ರಾಮದ ಸಮಸ್ತ ಜನರಿಗೂ ಅನಂತ ಕೃತಜ್ಞತೆಗಳು.

ಕೊನೆಯದಾಗಿ ಒಂದು ಮಾತು: ಯಡ್ರಾಮಿ ಮತ್ತು ಮುದನೂರ ಗ್ರಾಮಗಳೆರಡೂ 'ದಕ್ಷಿಣವಾರಣಾಸಿ', 'ಸರ್ವನಮಸ್ಯದಗ್ರಹಾರ', 'ತೀರ್ಥ'ಗಳೆಂದು ಪ್ರಖ್ಯಾತವಾಗಿವೆ. ಲಕುಲೀಶ ಪಾಶುಪತದ ಎಳಮೇಲ ಸಿಂಹಪರ್ಷೆಯ ಮೂಲಕೇಂದ್ರಗಳಾಗಿರುತ್ತವೆ. ರಾಮೇಶ್ವರ, ಲಕ್ಷ್ಮಣೇಶ್ವರ ದೇವಾಲಯಗಳನ್ನು ಹೊಂದಿರುತ್ತವೆ. ಹೀಗೆ ಅನೇಕ ಅಂಶಗಳಲ್ಲಿ ಸಾಮ್ಯತೆಯನ್ನು ಸಾಧಿಸಿರುವ ಈ ಎರಡೂ ಗ್ರಾಮಗಳಲ್ಲಿ ಕೈಕೊಳ್ಳುವ ಪರಿವೀಕ್ಷಣ, ನಡೆಸುವ ಅಧ್ಯಯನಗಳಿಂದ ಇನ್ನೂ ಹೆಚ್ಚಿನ ವಿಷಯಗಳು ಹೊರಬರುವ ಸಾಧ್ಯತೆಯಿದೆ. ಯಡ್ರಾಮಿ ಗ್ರಾಮದಲ್ಲಿ ಲಭಿಸಿದ ಸರ್ವ ಶಾಸನಗಳ ಪೂರ್ಣಪಾಠ ಹೀಗಿರುತ್ತದೆ.

೧

ಕಲ್ಯಾಣಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದ ಈ ಶಾಸನವನ್ನು ಬಸವಣ್ಣನ ಗುಡಿಯ ಮುಂದೆ ನಿಲ್ಲಿಸಲಾಗಿದೆ.

ಶಾಸನದ ಆರಂಭದಲ್ಲಿ ಕಲ್ಯಾಣಚಾಲುಕ್ಯರ ವಂಶಾವಳಿಯನ್ನೂ ಸಗರನಾಡಿನ ಮಹಾಮಂಡಲೇಶ್ವರರಾದ ಹೇಹಯ ವಂಶದವರ ವಂಶಾವಳಿಯನ್ನೂ ದೀರ್ಘವಾಗಿ ಹೇಳಲಾಗಿದೆ. ನಂತರ ಹನ್ನೆರಡುಜನ ಬ್ರಾಹ್ಮಣವಿದ್ವಾಂಸರ ಪ್ರತಿದಿನದ ಊಟದ ವ್ಯವಸ್ಥೆಗಾಗಿ ಎಳರಾಮೆಯ ಮುನ್ನೂರು ಮಹಾಜನರು ಹೆಗ್ಗಡೆ ದಾಸಿರಾಜನಿಗೆ ಹಣ ದಾನಮಾಡಿದ ವಿಷಯ ಬರುತ್ತದೆ.

ಸಾಲು ೫೭-೫೮ರಲ್ಲಿ ಬರುವ "ಶ್ರೀಮಚ್ಚಾಳುಕ್ಯ ವಿಕ್ರಮವರ್ಷ ೧೯ನೆಯ ಭಾವಸಂವತ್ಸರ ಪಾಲ್ಗುಣದ ಪುಣ್ಣಮೆ ಆದಿತ್ಯವಾರ" ಮಿತಿಯು ಕ್ರಿ. ಶ. ೧೧೯೫ ಫೆಬ್ರುವರಿ ೨೨ ಗುರುವಾರಕ್ಕೆ ಸಮಾನವಾಗಿರುತ್ತದೆ.

● 'ಏತಗಿರಿ ನಿಗಳ' ಹಾಗೂ 'ದಿವಸವಾಳ' ಪದಗಳನ್ನೂ ಜನ್ನದಬಾವಿಯ ಸ್ವಯಂಭೂದೇವ(ದೇವಾಲಯ)ನನ್ನೂ ಇಲ್ಲಿ ಲಕ್ಷಿಸಬೇಕು.

೧ ಸ್ವಸ್ತಿ, [*] ಶ್ರೀಮಚ್ಚಾಳುಕ್ಯಾನ್ವಯದ ಮೊದಲಿಗಂ ತೈಲಪಃ ತತ್ಪುತ್ರಃ ರಾಜ್ಯಸ್ತಂ-
೨ ಭಂ ಚಕ್ರಿ ಸತ್ಯಾಶ್ರಯನನುಜ ಸುತಂ ವಿಕ್ರಮಾಂಕಾನುಜಂ ವಿನ್ಯಸ್ತ
೩ ಶ್ರೀಯಯ್ಯಣಯ್ಯಂ ತದನುಜಂ ಜಯಸಿಂಗಂ ತದೀಯಾತ್ಮಜಂ ಲೋ-
೪ ಕಸ್ತುತ್ಯಂ ರಾಯನಾರಾಯಣನನುಪಮಃ[ದೊ]ಶ್ಯಾಳಿ ಚಾಳುಕ್ಯರಾಮಃ||
೫ ಎನಿಸಿದ್ದಾರ್ಹವಮಲ್ಲದೇವನ ಮಗಂ ಸೋಮೇಶ್ವರೋಬ್ಬಿರ್ೀಶ್ವರಂ-
೬ ಗನುಜಂ ವಿಕ್ರಮಚಕ್ರಿ ಚಕ್ರಧರರೂಪಂ ವಿಕ್ರಮಾದಿತ್ಯನನ್ಯ-
೭ ನರೇಂದ್ರರ್ಕ್ಕಳ ತೇಜಮಿಲ್ಲಿರ್ಪುದುವಿನ್ನೇಕೆಂದು ತನ್ನಾಣೆ ಗೋಸಣೆಯಾಗಲ್ಸ-
೮ ಕನಾಮಮಂ ಕಳೆದು ಚಾಳುಕ್ಯಾಂಕಮನ್ಮಾಡಿದಂ || ಕಂದ || ಅರಿರಾ-
೯ ಯರೊಳಪ್ಪಂ ರಾಯರಾಕ್ಷಸಂ ರಾಯ ಜಗದಳಂ ರಾಯ

೧೦ ಧರಾಧರ ವಜ್ರರಾಯ ವಿಧ್ವಂಸಿರಾಯ ಸರ್ವಜ್ಞಮೂರ್ತ್ತಿ
೧೧ ತ್ರಿಭುವನಮಲ್ಲಂ|| ಇಂತೆನಿಸಿದ ಚಾಳುಕ್ಯರ ಸಂತತಿಗಭಿವ್ರಿ-
೧೨ ದ್ಧಿಯೆನಿಸಿದ ಹೇಹಯಕುಳಮೆಲ್ಲಂ ತತ್ಪಾದ ಸೇವಕತನದಿಂ ತಳೆದರ್ಸ್ಸ-
೧೩ ಗರನಾಡ ಮಾನ್ಯಕ ಪದಮ [೦*]|| ಅಲ್ಲಿ ಸಂಚಿತ ರಿಪುಚಂದಂ ಚಂದನಸುತ
೧೪ ನಿಂಬಂ ನಿಂಬನನುಜ ರೇವಂ ರೇವ ಕ್ಷಿತಿಪಾಳಕನನುಜಂ ಭೂಪತಿ ಮುಂಜಂ
೧೫ ಮುಂಜನನುಜನೇಚನ್ರಿಪಾಳ [೦*]||ವ್ರಿತ್ತ||ತೊಳಗುವ ಚೆನ್ನಪೊಂಗಳಸದಿಂದೆಸೆ-
೧೬ ದೀಶನಿವಾಸಮಂ ಮನಂಗೊಳಿಸುವ ತೀರ್ತ್ಥಮಂ ನೆಱೆಯೆ ಮಾಡಿ ನಮಶ್ಯ-
೧೭ ಮೆನಲ್ಕೆ ವಿಪ್ರಮಣ್ಡಳಿಗೆ ಸಭೂಮಿದಾನಮಿದು ದಾನದಲುತ್ತಮಮೆಂ-
೧೮ ದು ಕೊಟ್ಟ ಸಯ್ಪ್ಪಿಳೆಯೊಳುದಾತ್ತ ವ್ರಿತ್ತಿವಡೆದಲೆ ರಾಮೆಯೊಳೇಚ-
೧೯ ಭೂಪನಿಂ|| ಎನಿಸಿಳ್ದೇಚನ್ರಿಪಾಳಂ ಪಿರಿಯವಂ ಬೂಹಾಂಕನಾ
೨೦ ಬೂಹನಂದನಂಬೋಧಿ ಗಭೀರನಾರ್ಜಿತ ಯಶಂ ಸಂದಲ್ಲು ಗಂಗಾಗ್ರಜಂ ಘನ
೨೧ ವೀರಾಗ್ರಣಿ ಬೂಹನಾತನನುಜಂ ಶ್ರೀಯೇಚ ಭೂಪಾಳನಾತನ
೨೨ ತಮ್ಮಂ ವಿಭು ಮುಂಜನಾತನನುಜಾತಂ ರೇವಭೂಪಾಳಕಂ|| ಬಿರುದು ಸ-
೨೩ ಮಸ್ತ ಭೂಭುವನ ಭುಂಭುಕಮಾದುದು ಚಾಗದೇಳ್ಗೆ ಭಾಸುರ ಸುತನಂ [ಮ]-
೨೪ ರಟ್ಚಿದುದು ಬಂದು ಶರಣ್ಬುಗೆ ಕಾವ ಪೆಂಪು ದಿಗ್ದ್ವಿರದದಿನತ್ತ ದಾಂಟಿತೆನೆ
೨೫ ರೇವನ್ರಿಪಾಳಕನೀವ ಕಾವನುರ್ವ್ವಿರುದಿನಮಯ್ಯಗೇಂ ದೊರೆಗೆ ವರ್ಪ್ಪರೆ ಮ-
೨೬ ತ್ತಿನ ಮಣ್ಡಳೇಶ್ವರರು ||ಕಂದ|| ಎನಿಸಿಳ್ದ ಹೇಹಯ ವಂಶಕ್ಕನರ್ಗ್ಘ್ಯಮಣಿ-
೨೭ ಹಾರಮೊಪ್ಪುವಂತೆ ಜಗನ್ಮಂಡನರಮಳಚರಿತ್ರರ್ವ್ವೆಂಗಿನ ಕಮ್ಮೆಗಳೊಪ್ಪಿ-
೨೮ ದರ್ಬ್ಭರದ್ವಾಜ ಕುಲರ್|| ಅವರೊಳಗೆಸೆದಂ ಶ್ರೀ ಮಾದೇವರಾಜ... –
೨೯ ವಾಗ್ರಜಾತಂ ಗುಣಿ ಮಾನವ ಮೇರು ದೋಣ ಮನ್ಹಾನ ವಿಭುಸುತಂ ಕುಂದರಾ-
೩೦ ಜನೂರ್ಜ್ಜಿತ ತೇಜ [೦*]|| ಪರಮ ಪರೋಪಕಾರಚರಿತಂ ಮನುನೀತಿ ನಿಸರ್ಗ್ಗ-
೩೧ ಮಾರ್ಗ್ಗನೇಚರಸನ ಮಂತ್ರಿ ಕುಂದವಿಭುಗಾತ್ಮಕುಲಾಂಗನೆಯರ್ಕ್ಕಳಿ ವ್ವರಾಗಿ-
೩೨ ರೆ ಕುಲವ್ರಿದ್ಧಿ ಕಾರಣದೆ ವಾಸವ ಕುಂಜರ ದಂತದಂತಿಗಳಾಧರನ ಚತುರ್ಬ್ಭು-
೩೩ ಜಂಗಳೆನಿಪಂತಳವಟ್ಟರೆ ನಾಲ್ವರುಂ ಸುತರ್ ||ಅಲ್ಲಿ|| ಕಂದ|| ನಿರುತಂ
೩೪ ದಶರಥ ಚಕ್ರೇಶ್ವರ ತನೆಯನ್ನಾಲ್ವರೊಳಗೆ ರಾಮನ ಪೆಸರುತ್ತ-
೩೫ ರಿಪಂತೆ ಕು[೦*]ದರಾಜನ ವರಪುತ್ರಂನ್ನಾಲ್ವರೊಳಗೆ ರಾಯಂ ನೆಗಟ್ದಂ
೩೬ ಶ್ರೀಯುತನುದಾರಗುಣ ರಾಧೇಯಂ ಸಜ್ಜನ ಸಹಾಯನತಿ-
೩೭ ಚತುರೋಪಾಧ್ಯಾಯಂ ಶೌಚಬ್ರತ್ಯ ಗಾಂಗೇಯಂ ಚಾಮುಂಡ-
೩೮ ರಾಯನಾರ್ಗ್ಗವಜೇಯಂ ||ವ್ರಿತ್ತ|| ಕೇವಳಮಲ್ತು ಶಂಭು ಸದ್ ಭ-
೩೯ ಕ್ತಿಯದೆಂತೆನೆ ಚೌಂಡರಾಯನೆಂಬಾ ವಿಭುವಿಂಗಿರುಳ್ಕನಸಿನೊ[ಳ್*]
೪೦ ಯತಿರೂಪದೆ ಬಂದು ನಿಂದು ಕೆಂಬಾವಿಯ ಬಟ್ಟೆಯಿಟ್ಟೆಡೆಯಿ[೦]-

೪೧ ದ ಬಾವಿಯ ಪುತ್ತಿನಲ್ಲಿ ನೀಂ ಬಾವಿಸಿ ತೋಡಿ ನೋಡು ಗಡ ಕಾಣ್ಬ. . –
೪೨ [ಗ]ಳ ಸ್ವಯಂಭುವಮು ಕಣ್ಡು ಸ್ವಯಂಭುವೆಂದಱಿದಾರೋಗಿಸಿ ಮಜ್ಜದೇಳ್ವಂ
೪೩ ನಿಧಾನಮಂ ಕಣ್ಡಪ್ರೊಲತ್ಥಿರ್ಯಿಃಂ ನಲಿದು ಪೀಠಮಃನಿಕ್ಕಿಸಿ ದೇಗುಲಕ್ಕೆ-
೪೪ ಮುಂ ಕೊಣ್ಡದನೆಯ್ದೆ ತನ್ನ(ನ್ನೊ)ಳಳಕ(ಕಿ)ಲ್ಲದೆ ಮಾಡಿಸಿದಂ ಬಬಾಪ್ಪ
ಚಾಮುಣ್ಡ –
೪೫ ನಶೇಷ ಸದ್ಗುಣಕರಣ್ಡನಿದೇಂ ಕ್ರಿತಕ್ರಿತ್ಯನಾದನೋ|| ಆ ವಿಭು ಪೂ-
೪೬ ರ್ವಜನ್ಮದೊಳ್ ರಾಜಿಸಿದಂದಿನ ಪುಣ್ಯದೇವಿ ಪೆಣ್ಬಾವದಿನಪ್ಪಣಯ್ಯ–
೪೭ ನೆನಿಪಂಗೆ ಮಹಾಸತಿ ರೇಕಣಬ್ಬೆಗಂ ಭಾವಕಿ ಜಕ್ಕಣ್ಣಬ್ಬೆ ಸುತೆ
೪೮ ಪುಟ್ಟೆ ಮಹಾಪ್ರಭು ಚೌಂಡರಾಯ ಲಕ್ಷ್ಮೀವಧುವಾದಳಂತವರ್ಗ್ಗೆ
೪೯ ಪುಟ್ಟಿದರುತ್ತಮ ನಾಲ್ವರುಂ ಸುತರ್ ||ಅಕ್ಷ|| ವನಜ ಪ್ರಾದ್ಯೂತ
೫೦ ವಂಶಾಂಬರಖರಕಿರಣಂ ನೀತಿರತ್ನಾಕರಂ ಶಿಷ್ಟನಿಧಾನಂ ದಾಸಿರಾಜಂ ಪರಹಿತಚರಿ-
೫೧ ತೋದ್ಯೋಗಿ ಮಾರ್ತ್ತಣ್ಡದೇವಂ ಮನುಮಾರ್ಗ್ಗಂ ಕುಂದರಾಜಂ ವಿನೇಯನಿಧಿ
೫೨ ಸದಾಚಾರಿಯಪ್ಪಣ್ಣನೆಂದೀ ತನೆಯರ್ಕ್ಕಳು ನಾಲ್ವರಿಂದಂ [ಪೆ]ಸರಿಸದಿರೆ
ಚಾಮುಣ್ಡರಾಯ
೫೩ ಕ್ರಿತಾರ್ತ್ಥ [ಂ*] ||ಕಂದ|| ಅವರೊಳಗೆ ದಾಸಿರಾಜಂ ಭುವನಸ್ತುತನಾದ ಕಾಲ
ಮುಂನ-
೫೪ [ಡೆ]ಗುಂ ಸತ್ರಮಿದೆಂದಪೂರ್ಬ್ಬ ಧರ್ಮ್ಮವ್ಯವಸಾಯಂಗೆಯ್ಯಲುತ್ತಮವಿಪ್ರ–
೫೫ ದ್ವಾಂಸರ್|| ಅನವದ್ಯರನುಪಮಪ್ಪಾವನಚರಿತಯ್ಯರ್ಜನಯಾ–
೫೬ ಜನಾಧ್ಯಯನಾಧ್ಯಾಪನ ದಾನ ಸತ್ಪ್ರತಿಗ್ರಹ ವಿನೋದರೆಳರಾಮೆ –
೫೭ ಯ ದ್ವಿಜರ್ಮುನ್ನೂರ್ಬ್ಬರು| ಆ ಮುನ್ನೂರ್ಬ್ಬರು ಶ್ರೀ ಚಾಳುಕ್ಯ ವಿಕ್ರಮ–
೫೮ ವರ್ಷದ ೧೯ನೆಯ ಭಾವ ಸಂವತ್ಸರ ಪಾಲ್ಗುಣದ ಪುಣ್ಣಮೆ ಆದಿತ್ಯವಾರ-
೫೯ ದಂದು ಪೆರ್ಗ್ಗಡೆ ದಾಸಿರಾಜನ ಕೆಯ್ಯಲು ವರ್ಷಂಪ್ರತಿ ನಿಬನ್ಧದಿಂ ಹತ್ತುಗದ್ಯಾ-
೬೦ ಣ ಪೊನ್ನಂ ತಿಱುವಂತಾಗಿ ಮೊದಲ್ಕೊಣ್ಡ ಏತಗಿರಿ ನಿಗಳಂ ಗದ್ಯಾಣಂ
ಮೂವತ್ತು ಅಂಕದೊ-
೬೧ ಳಂ ಗದ್ಯಾಣಂ ೩೦ ಅಂತು ವರ್ಷವರ್ಷಂದಪ್ಪದೆ ತಿಱುವ ನಿಬನ್ಧದ ಹತ್ತು
ಗದ್ಯಾಣ
೬೨ ಪೊನ್ನಮಂ ಜನ್ನದಬಾವಿಯ ಶ್ರೀಸ್ವಯಂಭುದೇವರ ಸನ್ನಿಧಾನದಲು ದಿವಸವಾ–
೬೩ ಳಂ ಪನ್ನಿರ್ಬ್ಬರ ಪೂರ್ಬ್ಬಿಗರಪ್ಪ ಬ್ರಾಹ್ಮಣರುಣ್ಬ ಸತ್ರವಾ ಚಂದ್ರಾರ್ಕ್ಕ
ತಾರಂಬರಂ
೬೪ ನಡೆವಂತಾಗಿ ಮಹಾಜನಂ ಪಾಲ್ಗುಣದ ಪುಣ್ಣಮೆಗೆ ಸತ್ರಕ್ಕೆ ಕುಡುವರು
ದೇಶಕಾ-

೬೫ ಲಸ್ತಿತಿಯಿಂ ದೆಯ್ವುಕಂ ರಾಜಿಕವೆನಲಾಗದು| ಈ ಪ್ರಕಾರದಿಂ ಮಹಾಜನ ಧ-
೬೬ ರ್ಮ್ಮಮಂ ನಡಸುತ್ತಮಿರಲು ಪೆರ್ಗ್ಗಡೆ ದಾಸಿರಾಜನಕ್ಕವರ ವಂಶಜರಕ್ಕೆ ಮೊದಲ
೬೭ ಪೊನ್ನೆಂಬುದು ಸಲ್ಲ| ಮಹಾಜನಂ ಬಡ್ಡಿಯಿಂ ತಿಱಲಾರೆವೆಂದು ಮೊದಲ ಪೊನ್ನ ಕುಡಸಲ್ಲ [|| *]
೬೮ ವೃತ್ತ|| ಸುಮನಸ್ಸಿಂದಮೆ ದಾಸಿರಾಜ ವಿಭು ಸತ್ಕೃತ್ಕೀರ್ತ್ತಿಯಿಂ ಮಾಜನಕ್ಕೆ ಮ-
೬೯ ನಸ್ಸಂತೋಸಮಾಗೆ ಕೊಟ್ಟಡೆ ಮೊದಲ್ಮೂವತ್ತಱಲು ವ್ರಿದ್ಧಿಯಿಂದ-
೭೦ ಮೆ ವರ್ಷಂಪ್ರತಿ ಹತ್ತುಪೊಂಗು ದೇವರಾ ಪೊನ್ನಿಂದೆ ಪನ್ನಿರ್ಬ್ಬರುತ್ತಮ ವಿದ್ವಾಂ-
೭೧ ಸರಪೂರ್ಬ್ಬಿಗಸ್ಸಂತತಮುಂಣ್ಬರು ಗ್ರಾಮಮುಳ್ಳಂನ್ನೆಗಂ ||ಕಂದ|| ಇದ-
೭೨ ನಾ ಚಂದ್ರಾರ್ಕ್ಕಂಬರಮುದಿತೋದಿತಮಾಗೆ ಸಲಿಸಿದಂ ಪರಮಸುಖಾ-
೭೩ ಸ್ಪದನಕ್ಕುಮೊಡಂಬಡದಿರ್ಪ್ಪ ದುರಾತ್ಮಂ ರೌರವಕ್ಕೆ ಗಳಗಳನಿಳಿಗುಂ[||*]

೨

ಬಸವಣ್ಣನ ಬಾವಿಯ ಎಡಕಟ್ಟೆಯಲ್ಲಿರುವ ಈ ಶಾಸನ, ಕಲ್ಯಾಣ ಚಾಲುಕ್ಯರ ಆಳಿಕೆಗೆ ಸಂಬಂಧಪಟ್ಟುದಾಗಿದೆ.

ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ವಂಶಾವಳಿಯನ್ನು ವಿವರಿಸಲಾಗಿದೆ. ಆಮೇಲೆ ದಂಡಾಧೀಶ ಆದಿತ್ಯಭಟ್ಟನು ಎಳರಾಮೆಯಲ್ಲಿ ಆದಿತ್ಯೇಶ್ವರ ದೇವಾಲಯ ಕಟ್ಟಿಸಿ, ಇದರ ಅರ್ಚನೆ, ನೈವೇದ್ಯ, ದೀಪ, ಖಂಡಸ್ಫುಟಿತ ಜೀರ್ಣೋದ್ಧಾರ ಹಾಗೂ ತಪೋಧನರ ಅಶನ-ಆಚ್ಛಾದನಗಳಿಗಾಗಿ ಬಿಟ್ಟ ಭೂದತ್ತಿಯನ್ನು ಹೇಳಲಾಗಿದೆ.

ಸಾಲು ೫೩ರಲ್ಲಿ ಬರುವ “ಖರ ಸಂವತ್ಸರದ ವೈಶಾಖದ ಪುಣ್ಣಮೆ ಸೋಮವಾರ ಸೋಮಗ್ರ[ಹಣ]” ಎಂಬ ಮಿತಿಯ ವಿವರ ಕ್ರಿ. ಶ. ೧೦೫೧ ಎಪ್ರಿಲ ೨೮ ರವಿವಾರ ಇಲ್ಲವೆ ಕ್ರಿ.ಶ. ೧೧೧೧ ಎಪ್ರಿಲ ೨೫ ಮಂಗಳವಾರಕ್ಕೆ ಸಮಾನವಾಗಿದೆ.

● ಇಲ್ಲಿಯ ಹೋಮಬಲಿ, ಗೊರವಗೇರಿ, ಎಕ್ಕೋಟಿ ತಪೋಧನ ಪದಗಳನ್ನು ಅವಶ್ಯ ಗಮನಿಸಬೇಕು.

೧* ಡೆದ ....
೨ ಜನಿಯಿಸಿದನಮೋಘವಾಕ್ಯನೆನಿಪ ಚಳುಕ್ಯ || ಆ ವಂಶಜ . .
೩ ಪೋಲೆಸೆವ ಬೊಸ್ತಾದೇವಿಗವಾದಂ ತನೂಜ ತೈಲ ನೃಪ||ಜ.... –
೪ ತನ ತಮ್ಮಂ ವಿಕ್ರಮನಾತನ ತಮ್ಮಂ ಸಿಂಹವಿಕ್ರಮಂ ಜ . .

* ಕಲ್ಲಿನ ಮೇಲ್ಭಾಗ ಹಾಗೂ ಎಡಭಾಗ ಒಡೆದು ಕಳೆದು ಹೋಗಿದೆ ಮಧ್ಯಭಾಗದಲ್ಲಿ ಸವೆದಿದೆ.

೫ ಕ್ಯಮಲ್ಲನಾಹವಮಲ್ಲಂ ಪು . ಶೌರ್ಯ್ಯಾಗ್ರಣಿ ತತ್ಸುತ ....
೬ ಶ್ವರ ಭೂಮೀಶ್ವರ ಸಹಿತ ಪೆಱು (?) ಪೆಂಎಳ್ದ ಬಳಿಕಂ ಶ್ರೀಮಚ್ಚ . .
೭ ಜನಮೆಲ್ಲ ರಾಗದಿಂ ಕೆಯ್ಯುಗೆ ವ್ಯತೀತ ದಿಶಾಚಕ್ರ . . .
೮ ಹಿಪಳೆ ಶುದ್ಧಾಂತ . . . ಭಾಸ್ವದ್ವಕ್ತ್ರ ಚಂದ್ರದ್ಯು . .
೯ ಪೂರ್ಬ್ಬಾದ್ರಿ . . . . ನಿಸಿದಂ ವಿಕ್ರಮಾದಿ . .
೧೦ ದ ತುಳಾಪುರು . . . . ರಂ ಬೆಂಕೊಂ . . . .
೧೧ ಬಳದಿಂ ಸಿಂಹ .... ವೆತ್ತಿದ್ದ ನೃಪೇಂದ್ರ ...
೧೨ ಗಳ್ ಸಾಸಿರವಾ .... ಪ್ಪತು ಸಾಸಿ ...
೧೩ ಶ್ವರನ್ನಿರಿದಾರಾಗ .... ಙ್ಧೇಕಾಂಗದಿಂ ...
೧೪ ರಾಮ ಬನ್ಧು .... ಗ್ರಮದರ ....
೧೫ ಲ ಕ್ಷಿತಿಪತಿ .... ಕೆಯಲಾದಿ ...
೧೬ ಕ್ಕರ್ಗಳ ರಕ್ಷಿಸು .... [ಯ]ಕ್ಷಂ ಕೊನ್ದ...
೧೭ ಗಳ ಮಲ್ಲ ....
೧೮ ವಾಕ್‌ಶ್ರೀ .... ಮಹಿಮರು ...
೧೯ ಶ ಶಾಸ್ತ್ರ ಪುರಾಣ .... ಸ್ವ .. ಧಿಕ ಕಳಾ ....
೨೦ ಸಾರಸ್ವ .... ಹಾತ್ಯ ವಿದ್ಯಾ –
೨೧ ದದ್ದ .... ವತೀಂ ...
೨೨ ವ್ಯಸ .... ದಿಪ್ಪ ವಿಶಿಷ್ಟ ...
೨೩ .... ಗೃಹಸ್ಥಾ ..
೨೪ .... ಅನುಜಗಂ
೨೫ .... ಮಹಿಮಾಸ್ಪದನನು
೨೬ ದೇಶ .... ಸೌಮ್ಯ ...
೨೭ ಮೂಮ .... ರ್ಯ್ಯಸೌರ್ಯ್ಯ ...
೨೮ ಗೆ ದಣ್ಡನಾ .... ಭಟ್ಟಂ ಗ ...
೨೯ ಅನುಜನಕಂ .... ಬಿಟ್ಟಂ ||ವಚನ||
೩೦ ಭವಜನನಾ .... ಮಾಲೆ ಪಗ ...
೩೧ ನ್ಯ ಭೋಜನ .... ದೊಳಗ್ಗದಿ ...
೩೨ ಳಿಯೇಕನಾದಿ .... ನಜನವೆನಿತ ...
೩೩ ದ್ಯನೆನಿಸಿ ಜ .... ತ್ರಗೋತ್ರವದು ನಿಜ
೩೪ ಅಬ್ಬಣಾಂಬಿಕೆ[ಗೆ] ...... ಧಾಕರರೆನಿಸಿ ...
೩೫ ಬ್ಬರಸಿ ವಿಶ್ವಾಮಿತ್ರ .... ಚಂದ್ರನನೆ ಚಟ್ಟಕಬ್ಬೆ ..

೩೬ ತ್ರತರ ಭಾಸ್ವಂ ...... ನೆಸೆದು ಕೃತಾರ್ತ್ಥನೆ ..
೩೭ ಸತ್ಕವಿಗಳ ವರ .... ಮುಮನ ಅ ..
೩೮ ತ್ಯಭಟ್ಟನೊಬ್ಬ್ರ್ಗಂ .... ಳೀತಂ ಮುನ್ನಮೆನಿ ..
೩೯ ರದ್ಯಂ ಮಿಯೋ .... ವೇದದೊ ..
೪೦ ವಿದ್ವತ್ಸಭೆ ಕು .... ದಾದಿತ್ಯದಂಣ್ಡೇಶನ||
೪೧ ಯ್ದಾನ ಸನಾದಿತ್ಯ.........ಸ್ರಬರ ..
೪೨ ವೇದ್ಯದ .... ಭೂರಾಮುಂದದಿಂ ತೇ ..
೪೩ ಮೆಸೆವ .... ಸಗರ ದೇಶ ರೂಢಿ ...
೪೪ ಹರತೀರ್ತ್ಥ|| ಆ .... ದಿಶಾಭಾಗದೊಳ್|| ..
೪೫ ತಿಯಂ ಪವಿತ್ರಮೆನೆ ಮಾಡಿದವೋಲ್ ಬುಧರೆಯ್ದೆ ಕೂ ..
೪೬ ತೆನೆಸೆದುದೊ ಲಕ್ಷ್ಮಣೇ ... ಳೋದಿತ ತೀರ್ತ್ಥವಿಳಾತಳಾಗ್ರ
೪೭ ಹರಶೈಳೇಂದ್ರ .... ನೆಲೆಸಿದಂ ದೇವಾಳಯಾ ..
೪೮ ನೋಹರವಪ್ಪವೆಳರಾಮೆಯೊಳೆ ನಿಲಿಸಿದಾದೀಶ್ವರ ..
೪೯ ರಂ ಬರಂ|| ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲ .....
೫೦ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣ ....
೫೧ ತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾ ಚ[ಂ*]ದ್ರಾರ್ಕ್ಕ ತಾ .....
೫೨ ವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆ[ಯ್ಯು] ....
೫೩ ಖರಸಂವತ್ಸರದ ವೈಶಾಖದ ಪುಣ್ಣಮೆ ಸೋಮವಾರ ಸೋಮಗ್ರ....
೫೪ ಮನ್ಮಹಾಪ್ರಧಾನಂ ದಣ್ಡನಾಯಕಂ ಆದಿತ್ಯಭಟ್ಟಯ್ಯಂಗಳ......
೫೫ ದೀಪನೈವೇದ್ಯಾಭ್ಯರ್ಚ್ಚನಕ್ಕಂ ಖಂಣ್ಡಸ್ಫುಟಿತ ಜೀರ್ಣ್ನೋದ್ಧಾರ ....
೫೬ ಪೋಧನರಚ್ಛಾತ್ರರಶನಾಚ್ಛಾದನಕ್ಕಂ ಅವರ್ಗ್ಗೆ ವಕ್ಖಾಣಿ ....
೫೭ ಹಣಾದಿ ಪರ್ವ ಹೋಮಬಲಿ ಕ್ರಿಯಾದಿಗಳ್ಗೆ.
೫೮ ಮಯ್ಯನ ದಸವಂದಕೆ ಮತ್ತರು ೨೦ ಅದೊಳಗೆ ಹರಿಹರ ಆದಿತ್ಯ ...
೫೯ ಎಳರಾಮೆಯ ಪ್ರಭುತ್ವದ ಗುಡ್ಡೆಮಾನ್ಯದ ಕೆಯ್ಗದ್ದೆ....
೬೦ ಮ ಶ್ರೀಮನ್ಮಹಾಮಣ್ಡಳೇಶ್ವರಂ ರೇವರಸರ ಕಯ್ಯಲ್ಕೆ ...
೬೧ ವಣಮುಮ ಗೊರವಗೇರಿಯಲುವೆಂಟುಹಿಟ್ಟೆನಲು.....
೬೨ ರಾದಿತ್ಯೇಶ್ವರದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಕೊಟ್ಟರೀ ಸ್ಥಾನ ....
೬೩ ವಿರ್ಮ್ಮಕರುಂ ಭಯಲೋಭವರ್ಜಿತರು[ಂ*]ವಾಗಿನ ದೇವರನ್ತಲ್ಲ ....
೬೪ ಮಿದ್ದುದ ಪೊಂಜಡಿಸಿ ಕಳೆದರೀ ಧರ್ಮ್ಮಮಂ ಪ್ರತಿಪಾಳಿ....
೬೫ ಗಯೆ ಗಂಗಾ ಸಾಗರವಾದಿಯಾಗಿ ಮಹಾಪುಣ್ಯತೀರ್ತ್ಥಗ .....
೬೬ ಬ್ರಾಹ್ಮಣರ್ಗ್ಗೆ ಸಾಸಿರ ಕವಿಲೆಯ ಕೋಡುಂ ಕೊಳಗುಮಂ .....

೬೭ ಕ್ರಾನ್ತಿ ಬ್ಯತೀಪಾತಂಗಳಲುಭಯಮುಖಿ ಮಹಾ .....
೬೮ ಪುಣ್ಯತೀರ್ತ್ಥಂಗಳಲು ಚತುರ್ವ್ವೇದ ಪಾರಗರುಂ ಸಕಳ ....
೬೯ ಪ್ರವೀಣರಪ್ಪ ಎಕ್ಕೋಟಿ ತಪೋಧನರುಮನ ......
೭೦ ನ್ಯೋಯಂ ಧರ್ಮ್ಮಸೇತುರ್ನ್ನೃಪಾಣಾಂ ಕಾಲೇಕಾಲೇ ಪಾಳನೀಯೋ ......
೭೧ ಯಾಚತೇ ರಾಮಭದ್ರಃ|| ಸ್ವದತ್ತಾಂ ಪರದತ್ತಾಂ [ವಾ] ....
೭೨ ಕೃ(ಕ್ರಿ)ಮಿಃ|| ಬಹುಭಿರ್ವ್ವಸುಧಾ ದತ್ತಾ ರಾಜಭಿಸ್ಸ ....
೭೩ ಸರೊಳುತ್ತಮನಾದಿತ್ಯರಸಂ ಬೆಸಸಲ್ಕೆ ಪೇ[ಟ್ಟ] ...

೩

ಕಲ್ಯಾಣಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದ ಈ ಶಾಸನ, ಬಸವಣ್ಣನ ಗುಡಿಯ ಮುಂದೆ ಬಲಭಾಗದಲ್ಲಿರುತ್ತದೆ.

ಮಹಾಮಂಡಲೇಶ್ವರ ರೇವರಸನು ಜನ್ನದಬಾವಿಯ ಸ್ವಯಂಭೂ ದೇವಾಲಯದ ನಿವೇದ್ಯ, ನಂದಾದೀವಿಗೆಗಳಿಗಾಗಿ ಎಳರಾವೆಯ ತಳಾರಿಕೆಯ ಮೂಲೆಯ ಸುಂಕ ಹಾಗೂ ಸಂತೆಯ ಆಯಗಳನ್ನು ದಾನವಾಗಿ ನೀಡಿದ ವಿಷಯ ಈ ಶಾಸನದಲ್ಲಿದೆ.

ಸಾಲು ೧೮-೨೧ರಲ್ಲಿ ಬರುವ "ಶ್ರೀಮಚ್ಚಾಳುಕ್ಯ ವಿಕ್ರಮ ವರಿಷದ ೪೫ನೆಯ ಪ್ಲವ ಸಂವತ್ಸರದ ಪುಶ್ಯ ಸುಗ್ಧ ೧೦ ಯಾದಿತ್ಯವಾರ ಉತ್ತರಾಯಣ ಸಂಕ್ರಾಂತಿ" ಮಿತಿಯು ಕ್ರಿ.ಶ. ೧೧೨೧ ಡಿಸೆಂಬರ ೨೦ ಮಂಗಳವಾರಕ್ಕೆ ಸಮಾನವಾಗಿರುತ್ತದೆ.

● ಸಂತೆಗೆ ಬಂದ ವರ್ತಕರು "ಅಡಕೆ ಮಾಱಿದಡೆ ಪೊಂಗೆ ಹತ್ತಡಕೆಯುಮಂ ಬೆಲ್ಲಂ ಮಾಱಿದಡೆ ಪೊಂಗೆ ಹತ್ತು ಬೆಲ್ಲಮುಮಂ ಮರಳ ಭಣ್ಡ ತನ್ದು ಮಾಱಿದಡೆ ಸುಂಕ ಪಾಗಮುಮಂ" ಕೊಡುತ್ತಿದ್ದರು.

೧ ಸ್ವಸ್ತಿ [।*] ಸಮಸ್ತ ಭುವನಾಶ್ರಯ ಶ್ರೀ ಪ್ರಿ-
೨ ಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ
೩ ಪರಮಭಟ್ಟಾರಕಂ ಸತ್ಯಾಶ್ರಯ
೪ ಕುಳತಿಳಕಂ ಚಾಳುಕ್ಯಾಭರಣಂ ಶ್ರೀ-
೫ ಮತ್ತ್ರಿಭುವನಮಲ್ಲದೇವರ ವಿಜಯರಾಜ್ಯಮು-
೬ ತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾ ಚಂದ್ರಾ-
೭ ರ್ಕ್ಕ ತಾರಾಂಬರಂ ಸಲುತ್ತಂ ಜಯನ್ತೀಪುರದ ನೆ-
೮ ಲೆವೀಡಿನೊಳ್ ಸುಖಸಂಕಥಾ ವಿನೋದದಿಂ
೯ ರಾಜ್ಯಂ ಗೆಯ್ಯುತ್ತಮಿರೆ [।*] ತತ್ಪಾದಪದ್ಮೋಪ-
೧೦ ಜೀವಿ [||*] ಸಮಧಿಗತ ಪಂಚಮಹಾಶ-

೧೧ ಬ್ದ ಮಹಾಮಂಡಳೇಶ್ವರಂ ಮಾಹೇ(ಹಿ)ಶ್ಮ(ಷ್ಮ)ತೀ ಪುರವರೇ-
೧೨ ಶ್ವರಂ ಮಧ್ಯದೇಶಾಧೀಶ್ವರನ್ ಹೇಹ-
೧೩ ಯ ವಂಶೋದ್ಭವಂ ವಿವೇಕವರ್ನ್ನಜವಾ-
೧೪ ನಜೋದ್ಭವಂ ಮೂವಡಿಗಣ್ಡಂ ಮಣ್ಡಳಿಕ
೧೫ ಸರಭ ಭೇರುಣ್ಡಂ ವಾರಿಗೆದಪ್ಪುವ
೧೬ ಮಂಡಳಿಕರ ಗಣ್ಡಂ ಪೆರ್ಮ್ಮಾಡಿಯ
೧೭ ಸಿಡಿಲುಂ ಶ್ರೀಮನ್ಮಹಾಮಣ್ಡಳೇ-
೧೮ ಶ್ವರಂ ರೇವರಸರು ಶ್ರೀಮಚ್ಚಾ-
೧೯ ಳುಕ್ಯ ವಿಕ್ರಮ ವರಿಷದ ೪೫ನೆ-
೨೦ ಯ ಪ್ಲವ ಸಂವತ್ಸರದ ಪುಶ್ಯ ಸುದ್ಧ ೧೦ ಯಾ-
೨೧ ದಿತ್ಯವಾರ ಉತ್ತರಾಯಣ ಸಂಕ್ರಾಂತಿ ವ್ಯತೀಪಾತ-
೨೨ ದ ದೆವಸಂ ಜನ್ನದಬಾವಿಯ ಶ್ರೀ ಸ್ವಯಂ-
೨೩ ಭುದೇವರಲ್ಲಿಗೆ ವನ್ದು ದೇವರ ನಿವೇದ್ಯಕ್ಕಂ
೨೪ ನನ್ದಾದೀವಿಗೆಗೆವೆನ್ದು ಎಳರಾಮೆಯ ತಳಾ-
೨೫ ಱಿಕೆಯ ಮೂಲೆಯುಮುಂ ಅಡಕೆ ಮಾಱಿ-
೨೬ ದಡೆ ಪೊಂಗೆ ಹತ್ತಡಕೆಯುಮಂ ಬೆಲ್ಲಂ ಮಾಱಿ-
೨೭ ದಡೆ ಪೊಂಗೆ ಹತ್ತು ಬೆಲ್ಲಮುಮಂ ಮರಳ ಭಣ್ಡ
೨೮ ತನ್ದು ಮಾಱಿದಡೆ ಸುಂಕ ಪಾಗಮುಮಂ ಯಿ-
೨೯ ನಿತುಮನಾ ಚಂದ್ರಾರ್ಕ್ಕ ಸ್ಥಾಯಿಯಾಗಿ ಧಾರಾ-
೩೦ ಪೂರ್ವ್ವಕಂ ಮಾಡಿ ಕೊಟ್ಟನೀ ಧರ್ಮ್ಮವನ[ರಸು]-
೩೧ ಗಳುಮೂರು ಸಧರ್ಮ್ಮದಿಂ ಪ್ರತಿಪಾಳಿಸುವರ್ [||*]
೩೨ ಶ್ರೀಮಜ್ಜನ್ನದಬಾವಿಯಲು ನೆಲಸಿ ನಿನ್ದ[ನಾ]-
೩೩ ದಿಸ್ವಯಂಭಿಂಗಿಳಾರಾಮಾ-
೩೪ ಸ್ಥಾನದ ಮೂಱುವೋದೆಲೆಯ ಪೇಱಿಂಗಯ್ದ ..
೩೫ [ಆ] ಕೊಳ್ವುದೆಂಬೀ ಮರ್ಯಾದೆಯನೆಯ್ದೆ ಹಂ-
೩೬ . ಗ ಸಾಸಿರ್ವರಿಟ್ಟಿತ್ತರೀ ಚಾಮುಇನ್ದೆ.
೩೭ ರ್ಯ್ಯ[ನ] ಮಾರ್ಪ್ಪ ಧರ್ಮಕ್ಕೆ ನೆ[ರಂ] ಚಂದ್ರಾರ್ಕ್ಕ-
೩೮ ರುಳ್ಳನ್ನೆಗಂ|| ಇದನಾ ಚಂದ್ರಾರ್ಕ್ಕಂಬರಂ
೩೯ ಉದಿತೋದಿತಮಾಗಿ ನಡಸಿದಂ ಸ್ವರ್ಗದೊ-
೪೦ ಳತ್ಯಧಿಕನೆ[ನೆ] ಸಲ್ಗುಂ ಮತ್ತಿನ್ತಿದನಳಿದಪನ್ಗೆ
೪೧ ಪಾಪಿ ನರಕಕ್ಕಿಳಿಗೆ ||

೪

ರಾಮತೀರ್ಥ ಮಸೀದೆಯ ಹಿಂಭಾಗದಲ್ಲಿರುವ ಕಲ್ಲಿನ ಬಲಭಾಗದಲ್ಲಿ ಕೆಂಡರಿಸಲಾದ ಪ್ರಸ್ತುತ ಶಾಸನ, ಕಲ್ಯಾಣಚಾಲುಕ್ಯ ಮೂರನೆಯ ತೈಲಪನ ಕಾಲದಲ್ಲಿ ಹುಟ್ಟಿದೆ.

ಶಾಸನ ಬಹಳ ತ್ರುಟಿತವಾಗಿದ್ದು, ಹೇಹಯ ವಂಶದ ಮಹಾಮಂಡಳೇಶ್ವರ ಅಲ್ಲಹುಲಿದೇವ, ಈತನ ಪತ್ನಿ ಹಾಗೂ ಕುಮಾರ ರೇವಣಾದೇವರು ಕೂಡಿ ಲಕ್ಷ್ಮಣೇಶ್ವರ ದೇವಂಗೆ ಬಿಟ್ಟ ದತ್ತಿಯ ಉಲ್ಲೇಖವಿದೆ.

ಸಾಲು ೧೨-೧೩ರಲ್ಲಿ ಬರುವ "....ಲ್ಲದೇವ ವರ್ಷದ ೭ನೆಯ ಯುವ ಸಂವ......" ಮಿತಿಯು ಕ್ರಿ.ಶ. ೧೧೫೫ ಕ್ಕೆ ಸಮಾನವಾಗಿರುತ್ತದೆ.

೧ ಶ್ರೀ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾ ....
೨ ಭಾಯ ಶಂಭವೇ|| ಸ್ವಸ್ತಿ ಸಮಸ್ತ ಭುವನಾ ....
೩ ಜ ಪರಮೇಸ್ವರಂ ಪರಮಭಟ್ಟಾರಕಂ ಸತ್ಯಾ ....
೪ ತ್ರೈಳೋಕ್ಯಮಲ್ಲದೇವರ ವಿಜಯರಾಜ್ಯ ....
೫ ತಾರಾಂಬರಂ ಸಲುತ್ತಮಿರೆ ಕಲ್ಯಾಣದ...............
೬ ಯುತ್ತಮಿರೆ|| ಸ್ವಸ್ತ್ಯನೇಕ ಭಂಗುರ ತರ ....
೭ ಯವ. ವನ ಗಂಗಾತೀರ ಪಾರಿಯಾತ್ರ ....
೮ ರಂ ಆ ಹೇಹಯ ವಂಶೋದ್ಭವಂ ವಿವೇಕ...............
೯ ಜ ಹಂಸ ಸರಸ್ವತೀ ಕರ್ಣ್ಣಾವತ[ಂ*]ಸ ವಾ ....
೧೦ ಸರಭ ಭೇರುಂಡ ಮೂವಡಿಗಂಡ ಜ ....
೧೧ ದೇವರ ಸಿಡಿಲು|| ನಾಮಾದಿ ಸಮಸ್ತ ....
೧೨ ಅಲ್ಲಹುಲಿದೇವರಸರು| ಸ್ವಸ್ತಿ ಶ್ರೀ ....
೧೩ ಲ್ಲದೇವ ವರ್ಷದ ೭ನೆಯ ಯುವ ಸಂವ ....
೧೪ ವಾರ ನಕ್ರ(ಕ್ಷ)[ತ್ರ*]ದ ದಿವಸ ಶ್ರೀಮನ್ಮಹಾಮಂಡ ....
೧೫ ಲದೇವಿಯರುಂ ಕುಮಾರ ರೇವಣಾದೇವ ....
೧೬ ದೇ ಶ್ರೀಮಲ್ಲಕ್ಷ್ಮಣೇಸ್ವರದೇವರ್ಗ್ಗೆ ಬಿಟ್ಟ ವಿ ....
೧೭ ಮನೆಯ ತೇಜ ಸಾಮ್ಯದ ....
೧೮ ಮಾರ ಸಮಸ್ತಮೊಳಮಂತ್ತರಿ ....
೧೯ ಮಲ್ಲಕ್ಷ್ಮಣೇಸ್ವರ ದೇವರ ಮಠದಾಚಾರ್ಯ್ಯ ....
೨೦ ತ ದೇವರ ಶಿಷ್ಯ ಪ್ರಶಿಷ್ಯರ ....
೨೧ ಚ್ಚಿ ಧಾರಾಪೂರ್ವ್ವಕಂ ಮಾಡಿ ....
೨೨ [ಮಾ] ... ಯ ....*

*ಕಲ್ಲಿನ ಅರ್ಧಭಾಗ ಒಡೆದು ಕಳೆದು ಹೋಗಿದೆ.

೫

ಕಳಚುರಿ ಚಕ್ರವರ್ತಿ ರಾಯಮುರಾರಿ ಸೋವಿದೇವನ ಕಾಲದಲ್ಲಿ ಹುಟ್ಟಿದ ಈ ಶಾಸನ, ಬಸವಣ್ಣನ ಬಾವಿಯ ಬಲಭಾಗದ ಕಟ್ಟೆಯಲ್ಲಿ ಕಟ್ಟಲಾದ ಕಲ್ಲಿನಲ್ಲಿದೆ.

ಆರಂಭದಲ್ಲಿ ಹೇಹಯ ವಂಶದ ಮಹಾಮಂಡಳೇಶ್ವರ ಅಲ್ಲಹುಲಿದೇವನ ವರ್ಣನೆಯಿದೆ. ತರುವಾಯ ಎಳಮೇಲ ಸಿಂಹಪರ್ಷನ್ಮಂಡಲಿಯ ಮಲೆಯಾಳದೇವರ ಶಿಷ್ಯ-ಪ್ರಶಿಷ್ಯರಾದ ಎಳರಾಮೆಯ ರಾಮೇಶ್ವರ ದೇವಾಲಯದ ಮಠದಾಚಾರ್ಯ ಚಂದ್ರರಾಶಿ ಪಂಡಿತದೇವರಿಗೆ ಚಂದರಸರು ಆಯದಾಯ, ಕಿರುಕುಳ, ಸಂತೆವಣ, ಸಿದ್ಧಾಯ ಹಾಗೂ ಪಾರಿಖಾಯಗಳನ್ನು ದಾನವಾಗಿ ನೀಡಿದ ವಿಷಯವಿರುತ್ತದೆ.

ಸಾಲು ೧೪-೧೬ರಲ್ಲಿ ಬರುವ "ಶ್ರೀಮತ್ ಕಳಚುರ್ಯ್ಯ ಚಕ್ರವರ್ತ್ತಿ ತ್ರಿಭುವನ ಮಲ್ಲದೇವ ವರ್ಷದ ೨ ನೆಯ ಸರ್ವ್ವಧಾರಿ ಸಂವತ್ಸರದ ಶ್ರಾವಣದ ಪೌರ್ಣ್ನಮಾವಾಸೆ ಆದಿವಾರ"ಎಂಬ ಮಿತಿಯು ಕ್ರಿ.ಶ.೧೧೬೮ ಜುಲೈ೨೧ರವಿವಾರಕ್ಕೆ ಸಮಾನವಾಗಿರುತ್ತದೆ.

ಯಡ್ರಾಮಿ ಗ್ರಾಮವನ್ನು 'ದಕ್ಷಿಣವಾರಣಾಸಿ', 'ತೀರ್ಥ' ಎಂದು ಕರೆಯಲಾಗಿದೆ.

೧ *ಸೂದ್ರಕ ಭೃಗುಮತಾಚಾರ್ಯ ಮಂದರಧೈರ್ಯ್ಯ.
೨ ಕಾಂಗವೀರ ಮದನಾವತಾರ ಗುಣಮಣಿಭೂಷಣ|| ಮಾ.
೩ ಪಚಿ೩ ಘೋಶ(ಷ)ಣ ರಿಸು ಮಂಣ್ಡಳಿಕ ಸರಭ ಭೇರುಂಣ್ಡ ಜ.
೪ ದೋರ್ವ್ವ ಗಂಣ್ಡ ವಾರಿಗೆದಪ್ಪುವ ಮಂಣ್ಡಳಿಕ-
೫ ರ ಗಂಣ್ಡ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ-
೬ ಮನ್ಮಹಾಮಂಣ್ಡಳೇಸ್ವರಂ ಯಲ್ಲಹುಲಿದೇವರಸರು||
೭ ಸ್ವಸ್ತಿ [|*] ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾ-
೮ ಹಾರ ಧ್ಯಾನಧಾರಣ ಸಮಾಧಿ ರೂಪಾಷ್ಟಾಂಗಯೋಗ ಸಂಪ್ರ.
೯ ನ...ವಿನೇಯ ಮಹಿ. ಪಂ....ಗುರು ಬಾರಣಾಸಿ
೧೦ ಸರಸಿರುಹ ಭೃಂಗರುಂ ನಿರ್ಜ್ಜಿತಾನಂಗರು[ಂ*] ಆ ಶ್ರೀಮದ್ದೆಳಮೇಲ ಸಿಂ-
೧೧ ಹ ಪರುಷನ್ಮಂಡಲಿ ಮಲೆಯಾಳದೇವರ ಶಿಷ್ಯ ಪ್ರಶಿಷ್ಯ-
೧೨ ರಪ್ಪ ಶ್ರೀಮತು ದಕ್ಷಿಣವಾರಣಾಸಿ ಎಬಿರಾಮೆಯ ತೀರ್ಥದ
೧೩ ರಾಮೇಶ್ವರದೇವರ ಮಠದಾಚಾರ್ಯ್ಯ ಚಂದ್ರಾಸಿಪಂಡಿತದೇವಗ್ಗ
೧೪ ಶ್ರೀಮತ್ ಕಳಚುರ್ಯ್ಯ ಚಕ್ರವರ್ತಿ ತ್ರಿಭುವನಮ-
೧೫ ಲ್ಲದೇವ ವರ್ಷದ ೨ನೆಯ ಸರ್ವಧಾರಿ ಸಂವತ್ಸರದ ಶ್ರಾ-
೧೬ ವಣದ ಪೌರ್ಣ್ನಮಾವಾಸೆ ಆದಿವಾರದಂದು ಶ್ರೀ-
೧೭ ಚಂದರಸರು ಪೂರಿಂಗೆ ಬಿಜಯಂಗೆಯ್ದು ತೀರ್ತ್ಥ-
೧೮ .. ಜ ಬಪ್ಪನುಂ ಆಹುಮಲ್ಲದೇವರಸನು ಕಚ್ಚಿ

*ಕಲ್ಲಿನ ಮೇಲ್ಭಾಗ ಒಡೆದು ಕಳೆದುಹೋಗಿದೆ.

೧೯ ಕೊಟ್ಟ ಧರ್ಮ್ಮವದು ಪರಾಷ್ಟ್ರರ ಮಾತಂ ಕೇಳ್ದು ತಾಂಬ್ರಶಾಸ-
೨೦ ನ ಇಂತರಿಸಿ .. ಱಿಸಿಯು ತ್ರಿಭೋಗಾಭ್ಯಂನ್ತ್ರರ ಸಿ-
೨೧ ದ್ಧಿಯಂನಳಿದು ಆಯದಾಯ ಕಿಱುಕುಟಿ ಸ ..
೨೨ ...... ಸಂನ್ತೈವಣವೊಳಗಾಗಿ ಶ್ರೀ ರಾ ....
೨೩ ....ಸಿದ್ಧಾಯದೊಳಗಣಮೊಳಪಾರಿಖಾಯ ಕೊಡ-
೨೪ ....ವೃದ್ಧಿಗೆ ಯಿಂತಿನಿತುಮಂ ತಾಂಬ್ರಸಾಸನದ ಪಱಿ-
೨೫ ....ಶಾಸನವಾಗಿ ದೇವಗ್ಗೆ ಕೊಟ್ಟನು|| ಶ್ರೀ-
೨೬ +....ಸ್ವ...||

೬

ರಾಮತೀರ್ಥದ ಬಲಕಮಾನಿನ ಬಾಗಿಲದ ಎಡಗಡೆಯ ಗೋಡೆಯಲ್ಲಿರುವ ಕಲ್ಲಿನಲ್ಲಿ ಕೆತ್ತಲಾದ ಈ ಶಾಸನ, ಕಳಚುರಿ ರಾಯಮುರಾರಿ ಸೋವಿದೇವನ ಆಳಿಕೆಗೆ ಸಂಬಂಧಿಸಿದುದಾಗಿದೆ.

ಮಹಾಮಂಡಲೇಶ್ವರ ಅಲ್ಲಹುಲಿದೇವ,ಕುಮಾರರಾದ ಚಿದ್ದರಸ,ರೇವರಸ,ಕನ್ನರಸ, ಅಲ್ಲಯ್ಯ, ಮಲ್ಲರಸ, ಸಿಂಬರಸ, ಅಳಿಯ ಕಚ್ಚಿಯ ರಾಮದೇವ ಮುಂತಾದವರು ಹಾಗೂ ಹೆಗ್ಗಡೆ ಕೇತಯನಾಯಕರು ಅಗ್ರಹಾರ ಎಳರಾಮೆಯ ಲಕ್ಷ್ಮಣೇಶ್ವರ ದೇವಾಲಯಕ್ಕಾಗಿ ಮಹಾಜನರಿಂಗೆ ದತ್ತಿ ನೀಡಿದಂತೆ ಕಾಣುತ್ತದೆ.

ಸಾಲು ೧೨-೧೩ರಲ್ಲಿ ಬರುವ "ಶ್ರೀಮತು ಕಳಚುರಿಯ ಚಕ್ರವರ್ತ್ತಿ ರಾ...... ೩ನೆಯ ವಿರೋಧಿ ಸಂವತ್ಸರ ಪುಷ್ಯ ಸುದ್ಧ ೫ ಬ್ರಿಹಸ್ಪತಿ ವಾ. ಮಿತಿಯು" ಕ್ರಿ.ಶ ೧೧೬೯ ಡಿಸೆಂಬರ ೨೫ಕ್ಕೆ ಸಮಾನವಾಗಿರುತ್ತದೆ.

ಇಲ್ಲಿಯ "ಹದಿನೆಂಟುಸಂತತಿ" ಪದ ಹದಿನೆಂಟುಜನ ಮಹಾಮಂಡಲೇಶ್ವರರನ್ನು ಸೂಚಿಸುವಂತಿದೆ. "ಸಗರವಯಿನೂಱುಂಬಾಡ" ಪದಪ್ರಯೋಗದಿಂದ ಕಳಚುರಿ ಅರಸರ ಕಾಲದ ಸಗರನಾಡಿನಲ್ಲಿ ಐದುನೂರು ಗ್ರಾಮಗಳಿದ್ದುದು ಗೊತ್ತಾಗುತ್ತದೆ.

೧ *ಮಹಯಾರೂಢ ಪ್ರೌಢರೇಖಾರೇ .... ಲಕ್ಷ್ಮೀ ....
೨ ಕಭ್ರಿಗುಮತಾಚಾರ್ಯ್ಯ ಮಂದರಧೈರ್ಯ್ಯನೇಕಾಂಗವೀರ ಮದನಾವತಾರ
೩ ಪಱಿ ಘೋಷಣ ಚತುಸ್ಸಮುದ್ರ ಕೀರ್ತ್ತಿ ವಿಖ್ಯಾತಂ ಸೌ(ಶೌ)ಚನದೀಜಾತ
೪ ಭೈರವ ರಿಪುಮಂಡಳಿಕ ಸರಭಭೇರುಂಡ ಮೂವಡಿಗಂಡ ಆಶ್ರಿತಜನ ಚಿಂ-
೫ ತಾಮಣಿಯಾಳಿಂ ಮುನ್ನಿಱಿವ ಸೌರ್ಯ್ಯವಂ ಮೆಱಿವ ವಯಿರಿ ಚತುರ ...

+ ಈ ಸಾಲು ಕಲ್ಲಿನ ಎಡಭಾಗದಲ್ಲಿದೆ.
ಈ ಕಲ್ಲಿನ ನಾಲ್ಕೂ ಮುಖಗಳು ಒಡೆದು ಕಳೆದು ಹೋಗಿವೆ.

೬ ಭೂಪಾಳರ ಸಿರವಂ ಮೆಱೆವ ಸರಣಾಗತವಜ್ರಪಂಜರಂ ವೈರಿದಿಕ್ಕುಂಜರ[ಂ*] ಸ-
೭ ಮಸ್ತ ಪ್ರಸ(ಶ)ಸ್ತಿ ಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಅಲ್ಲಹುಲಿ .....
೮ ನ ಮಗ ಕೊಮಾರ ಚಿದ್ದರಸ ರೇವರಸ ಕನ್ನರಸನ ಅಲ್ಲಯ್ಯನುಂ ವ.......
೯ ಹುಮಲ್ಲರಸ ನಿಂಬರಸ ಅಳಿಯ ಕಚ್ಚೆಯ ರಾಮದೇವ ಬಿಟ್ಟೆಯಲ್ಲ...
೧೦ ಸ ಸಹಿತವಾಗಿ ಹದಿನೆಂಟು ಸಂತಾ(ತ)ತಿಗಳುಂ ಹೆಗ್ಗಡೆಕೇತಯನಾಯ ... ...
೧೧ ಥಾನರು ಸಹಿತವಾಗಿ ಸಗರವಯಿನೂಱುಂ ಬಾಡವಂ ದುಷ್ಟನಿಗ್ರಹ ಸಿಷ್ಟ......
೧೨ ತ್ತ ರಾಜ್ಯಂ ಗೈಯುತ್ತಮಿರ್ದ್ದ।ಶ್ರೀಮತು ಕಳಚುರಿಯ ಚಕ್ರವರ್ತಿಗರಾ......
೧೩ ಙನೆಯ ವಿರೋಧಿ ಸಂವತ್ಸರ ಪುಷ್ಯ ಸುದ್ಧ ೫ ಬ್ರಿಹಸ್ಪತಿವಾ....
೧೪ ಣದಲುಂ ಶ್ರೀಮತು ಸರ್ವನಮಸ್ಯದಗ್ರಹಾರಂ ದಕ್ಷಿಣವಾರಣಾ .....
೧೫ ಮಹಾಜನಂಗಳಿಗಂ ಶ್ರೀಲ[ಕ್ಷ್ಮೀ]ಣೇ[ಶ್ವ]ರ ದೇವರ್ಗ್ಗೆ......

೭

ಕಲ್ಯಾಣಚಾಲುಕ್ಯ ಇಮ್ಮಡಿ ಜಗದೇಕಮಲ್ಲನ ಕಾಲದಲ್ಲಿ ಹುಟ್ಟಿದ ಈ ಶಾಸನವನ್ನು ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕಲ್ಲಿನಲ್ಲಿ ಕಂಡರಿಸಲಾಗಿದೆ.

ಶಾಸನ ತ್ರುಟಿತವಿದ್ದು, ಅಸ್ಪಷ್ಟವಾಗಿರುತ್ತದೆ. ಹೀಗಾಗಿ ವಾವಣ ದಂಡನಾಯಕನ ಗುಣವಿಶೇಷಗಳ ವರ್ಣನೆ ಮಾತ್ರ ಗೊತ್ತಾಗುತ್ತದೆ.

ಇಮ್ಮಡಿ ಜಗದೇಕಮಲ್ಲನ ಉಲ್ಲೇಖವನ್ನಾಧರಿಸಿ, ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ಹೇಳಬಹುದು.

● ವಾವಣದಂಡನಾಯಕನನ್ನು ಸುಭಟಕೇಸರಿ, ಗುಣರತ್ನ, ಯಶೋನಂದನ, ಪುಣ್ಯಮೂರ್ತಿ, ನಯಪತಿ, ವಿಳಾಸಪತಿ, ಶುಭಚರಿತ, ಸಚ್ಚರಿತ, ರಾಜಮತಿ ಮುಂತಾದ ವಿಶೇಷಣಗಳಿಂದ ಕೀರ್ತಿಸಲಾಗಿದೆ.

೧ *ನಾಯಕಂ..............
೨ ಅರಿತಾಶರದಾವಿತಾರದೆ..........
೩ ನೆ ಮಹಿಮಾ ....
೪ ಕಂ ಕೊನಾ ನಾಯಕಂ...............
೫ ಟಂ ಜಗದೇಕಮಲ್ಲನಾಸ್ಥಾನದೊಳೊಪ್ಪುವ
೬ ಸುಭಟಕೇಸರಿ ವಾವಣದಂಡನಾಯಕ. .
೭ ಲವ. ಗುಣರತ್ನಂ ಲಕ್ಷಿತ ಮಣಿಯ ..
೮ ನಿಪ್ಪ ಮಧ್ಯದೇಶ....ಗಂಗಾ [ಭೂಮಾ]
೯ ಣನ. ದಿಯೋ. ಕರ್ಣ....

* ಕಲ್ಲಿನ ಮೇಲ್ಭಾಗ ಹಾಗೂ ಕೆಳಭಾಗ ಒಡೆದು ಕಳೆದು ಹೋಗಿವೆ.

೧೦ ನಾಮವರ್ಣ್ಣ ಪ್ರಮಥಂ|| ತದ್ಗೋತ್ರ ಶಿ.-
೧೧ ಮಣಿ ಸಂಪದಿವ್ಪುಣಂ [ಪ್ರ]ಶಿಷ್ಯ ಶಿಷ್ಟ-
೧೨ ನಾಪದಿರಿಪಹಿ ನೆಗಳ್ದ ತ್ರಿವರ್ಗ್ಗ-
೧೩ ಶಪ್ಪಿಪದನಾ ಭೂಧರೆಯಾರ್ಗ್ಗೆ|| ಗಂಡ-
೧೪ ನಾತಂಗೆ ಜಗದ್ವಂದಿತನಾದಂ ಸಮಗ್ರಸಾ-
೧೫ ಜನೆಲ ತಾ ಕಂಡೇಂ ಗುಣಜಳಧಿಯಶೋನ-
೧೬ ದಂ ಮುದಿತಾರ್ತ್ಥಿ ಬೃಂದನೆಶೋಗಾನಂದಂ||
೧೭ ವಿನೋದ ಯಶೋನಂದನ ನಂದನನೂರ್ಜ್ಜಿತ ಪು-
೧೮ ಣ್ಯಮೂರ್ತ್ತಿ ನಯಪತಿ ವಿಳಾಸ-
೧೯ ಪತಿ ಶುಭಚರಿತಂ|| ಪುರುಷಾರ್ತ್ಥ ಪ್ರತಿಪತ್ತಿ-
೨೦ ಯಿಂದುಗೆ ಪವಿತ್ರಂ ಮಾಳ್ಪೆ . ನಂದ| ಭಾಸು-
೨೧ ರ ಕರ್ಣ್ಣಾಟ ಧರಿತ್ರಿಯುಂ ಪ್ರಿಯದಿವಂಶರ್ವ್ವೇದಿ-
೨೨ ಯಿಂ ಬಂದಂ ಸಚ್ಚರಿತಂ ಕುಂತಳರಾಜ ಮು-
೨೩ ತಿ ವಿಭು[ಯೆಳರಾಮೆ]ನಾಡೊಳ್ಪ ಬಿತ್ತರಿಸಲ್ಚಿ-
೨೪ ತ್ರವಿದಾಗ .... ಪರಿಪ್ರಖ್ಯಾತಿ ಕೋಕೋ-
೨೫ ಕರಂ|| ವಂದಿಸಿ ವಿಸ್ವಲೋಕವತುಳಾಮಳ ಸದು-
೨೬ ಗುಣ ಭೂಪನಾಂ ಜನಾನಂದ ಪಯೋಧಿಚಂದ್ರ-
೨೭ ನಭಿಮಾನವ ....
೨೮ ನಂದ ತನು ......

೮

ಕಲ್ಯಾಣ ಚಾಲುಕ್ಯ ಮೂರನೆಯ ತೈಲಪನ ಆಳಿಕೆಯನ್ನು ತಿಳಿಸುವ ಈ ಶಾಸನ, ಬಸವಣ್ಣ ಬಾವಿಯ ಎಡಭಾಗದ ಕಟ್ಟೆಯಲ್ಲಿದೆ.

ಶಾಸನ ಅಲ್ಲಲ್ಲಿ ತ್ರುಟಿತವಾಗಿದೆ. ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ವಂಶಾವಳಿಯಿದ್ದು, ಆಮೇಲೆ ಮೂರನೆಯ ತೈಲಪನ ದಂಡನಾಯಕ ಭಾಸ್ಕರಭಟ್ಟನ ವರ್ಣನೆ ಮಾಡಲಾಗಿದೆ.

ಕಲ್ಯಾಣ ಚಾಲುಕ್ಯ ಮೂರನೆಯ ತೈಲಪನ (೧೧೪೯-೧೧೬೨) ಆಳಿಕೆಯ ಉಲ್ಲೇಖವನ್ನಾಧರಿಸಿ, ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ನಿರ್ಧರಿಸಬಹುದಾಗಿದೆ.

೧ *ನದಿದೆಸೆ ತನು ಮುಂ ನಯಕ [ರಂ] ಬುಳು. ಜಳದಿಂ
೨ ವಿಜಯಶ್ರೀವಲ್ಲಭನೆನಿಪ ವಿಕ್ರಮಾದಿತ್ಯಂಗಂ ಶ್ರೀವಧು
೩ .. ತೆ ಆ ನೃಪಾಳನಲವಾಭಜಂ ಸೂಕ್ತಿ ಸತ್ಯಸತ್ಯಾಶ್ರಯನಾ-
೪ . ಸಿಂಹ|| ಎನಿಪ ಜಯಸಿಂಹ ಭೂಪನ ತನುಜಂ ತ್ರೈಳೋ-
೫ . ದ ಸೋಮೇಶ್ವರಂ ಚಳುಕ್ಯ ಲಲಾಮ|| ಇ(ಈ) ಮಹಿಯಂ ಸೋಮೇ-
೬ . ಕ್ಯ ವಿಕ್ರಮ ಭೂಪನೆಳೆಯ ವಿಷ್ಣು ಬಿಷ್ಮನಾದ ||ವೃ||
೭ .. ಧಾತ್ರಿಯಂ ಪರ್ಬ್ಬಿ ನಿಜಾಶ್ಚರ್ಯ್ಯ ಪ್ರತಾಪ ಬಳವದಶಮ-
೮ .. ಮಸಳೆ ಭುಜಾಗರ್ವ್ವದಿಂ ವೀರಸಿಂಹಾಸನವೆಂಬುತ್ತುಂ ....
೯ ... ದೇವ ||ವೃ|| ಅರಿಭೂಪಾಳಕರರ್ತ್ಥವೆ . ವರ್ದ್ಧ ಕೊಂಣ್ಡುದರ್ತ್ಥದಿಂ
೧೦ ... ಸೆ ಕಾಡಾನೆಯಿಂದ್ವಿರದಾರೋಹಣವಾತ್ಮ ಹೇಹು-
೧೧ .. ರಾಬ್ಬುವನದೊಳೆ ಚಾಳುಕ್ಯಧಾಮಂಬರಂ ||ವೃ|| ಕರಿ-
೧೨ .. ನಲ್ಸೆರಗಿಲ್ಲದೊಂದ ಹಯದಿಂ ಸಾಸಿರ್ಬ್ಬರುರ್ಬ್ಬಿ-
೧೩ -. ದುರ್ಧರ ವೀರಾಗ್ರಣಿಯಾದ ಬೀರಭಟರಾಚ್ಚಾಳುಕ್ಯ-
೧೪ .. ಗಳೊಳೆ ತೈಲಪಂ ತೈಲಪಂಗೆ ಪಿರಿಯಂ ತ್ರೈಳೋಕ್ಯಮ-
೧೫ .. ತ್ಯದಿಂ ಸತ್ಯದಿನಃಪಸಮದಿಂದಾನಳಿ ಧರ್ಮ್ಮದಿಂ ತಶ್ಚರಣಾಯಾತ-
೧೬ .. ದೇವ||ದೇವನ|| ಆ ನೃಪ ಶ್ರೀ ಚಾ[ಲುಕ್ಯ]ರಪ್ಪಯ್ಯಂ-
೧೭ .. ಶಿಷ್ಟಗೋತ್ರ ಲಲಾಮಂ ತ್ರೈಳೋಕ್ಯಮಲ್ಲವಲ್ಲಭಗುಪಾ-
೧೮ .. ಭಟ್ಟದಂಣ್ಡಾಧೀಶ ||ವೃತ್ತ|| ಪ್ರತಿಭಾ ಬಾಣನಶೇ-
೧೯ .. ಸುಕವಿಮಾರ್ಗ ವ್ಯೋಮತಿಗ್ಮಾಂಶು ವಿಶ್ರುತ
೨೦ .. ಸ್ವತಿ ಸಾಮಾನ್ಯನೆ ರುದ್ರಮಿಶ್ರನವನೀಶ ಸ್ತುತ್ಯಪೊ-
೨೧ .. ಶಟ್ಕಂಮ್ಮ ಕಂಮ್ಮ ಪ್ರವೃದ್ಧತೆಯಿಂದಾಶ್ರಿತ ಪೋಷಣ
೨೨ .. ಶಿಷ್ಟಜನತೋ ಸನ್ಮಾನದಿಂದ ಸಮಗ್ರತೆವೆತ್ತಿರ್ದ್ದ
೨೩ .. ಶ್ರಮ ||ಕಂದ|| ಮನುಜನೆನವೇಡ ಸಾಮಾನ್ಯನಲ್ಲ ನಾ-
೨೪ .. ಳೆಸೆವಯ್ದುನೆಯ ನೆಗಳ್ತೆಯಂ ಮಹಾಸಮುದ್ರಂ ರುದ್ರ||
೨೫ .. ನ ಮಹಿಮಾಸ್ಪದಮೆಂನ್ತೆಂದೊಡೆ ||ಕಂದ|| ಪರಮ ಚತು-
೨೬ .. ನಪನ ಗುರು ಗುರೋರಪಿ ಗುರು ಭಾಸ್ಕರಭಟ್ಟ ದಂಣ್ಡನಾಥ ಲಲಾ-
೨೭ .. ದ್ರ ವಿಭವಂ ವಿಭವಂ ಮುನಿಧೃತಿ ಧೃತಿಯೆನೆ ನೆಗಟ್ಬಂ ಮನೆ-
೨೮ .. ದಿಂ ಷಟ್ತರ್ಕ್ಕ ವೇದವೇದಾಂಗವಿದಂ ಜನಪಂ ತ್ರ(ತ್ರಿ)ಭುವನ ಮ-
೨೯ . ನೃಪೇಶ್ವರಾರಾಧ್ಯರನುಜನ ಮಹಿಮೆ|| ಉದಿಯಿಸಿ
೩೦ .. ವದನಾಂಬೋರುಹವೊಂದಱೊಳುದಿಯಿಸಿದವ ಪ ...

*ಕಲ್ಲಿನ ಮೇಲ್ಭಾಗ, ಬಲಭಾಗ ಹಾಗೂ ಕೆಳಭಾಗಗಳು ಒಡೆದಿರುತ್ತವೆ.

೯

ರಾಮತೀರ್ಥ ಮಸೀದೆಯ ಹಿಂಭಾಗದ ಎಡಭಾಗದಲ್ಲಿರುವ ಪ್ರಸ್ತುತ ಶಾಸನ, ಕಲ್ಯಾಣ ಚಾಲುಕ್ಯ ಮೂರನೆಯ ತೈಲಪನ ಆಳಿಕೆಗೆ ಸಂಬಂಧಿಸಿದುದಾಗಿದೆ.

ಹೇಹಯವಂಶದ ಮಹಾಸಾಮಂತ ಏಚರಸನು ದೇವಾಲಯದ ಅಂಗಭೋಗ, ವಿದ್ಯಾಸತ್ರಗಳಿಗಾಗಿ ಎಳಮೇಲ ಸಿಂಹಪರ್ಷನ್ಮಂಡಲಿಯ ಸ್ಥಾನಾಚಾರ್ಯನೊಬ್ಬನಿಗೆ ನೀಡಿದ ಭೂದಾನದ ಉಲ್ಲೇಖ ಇಲ್ಲಿದೆ. ಇದಲ್ಲದೆ ಚಂದಭೂಪನು ದೇವಾಲಯವೊಂದರ ರಂಗಭೋಗಕ್ಕೆ ಭೂಮಿ, ನಿವೇಶನ, ತಿಪ್ಪೆಸುಂಕ, ಹಣದಾನ ಮಾಡಿದ ವಿಷಯವೂ ಇಲ್ಲಿರುತ್ತದೆ.

ಕಲ್ಯಾಣ ಚಾಲುಕ್ಯ ಮೂರನೆಯ ತೈಲಪನ (೧೧೪೯-೧೧೬೨) ಆಳಿಕೆಯ ಉಲ್ಲೇಖವನ್ನಾಧರಿಸಿ ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ನಿರ್ಧರಿಸಬಹುದು.

● ಹೇಹಯ ವಂಶದ ಮಹಾಸಾಮಂತ ಏಚರಸನನ್ನು ‘ಕರ್ಪ್ಪುರಪ್ರಿಯ’, ‘ಭೂಪಮಾನ್ಧಾತ’ನೆಂದು ಕರೆಯಲಾಗಿದೆ. ಈತನು ಯಡ್ರಾವಿಯ ರಾಮೇಶ್ವರ ತೀರ್ಥಕ್ಕೆ ಬಂದುದೂ ಗೊತ್ತಾಗುತ್ತದೆ.

೧ ರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ....
೨ ಮತ್ತ್ರೈಳೋಕ್ಯಮಲ್ಲದೇವರ ವಿಜಯರಾ ....
೩ ರ್ಕ್ಕ ತಾರಂಬರಂ ಸಲುತ್ತಿರೆ [|*] ಕಲ್ಯಾಣದ ನೆಲೆವೀಡಿ ....
೪ ಣ ಶುದ್ಧ ೧೩ ಬೃಹಸ್ಪತಿವಾರದಂನ್ದು ಕೃತ ....
೫ ಪಾಳನಗ್ರತನೂಜಂ ಜಿತವೈರಿ ನಿಂಬ ಮಹಿ.......
೬ ಪಂ ರೇವಾನುಜಂ ಮುಂಜಭೂಪತಿ ಮುಂಜಕ್ಷಿ ....
೭ ತೀರ್ತ್ಥಮುನಿನ್ತ್ರೀ ಮಹಿ ಪೊಗಳಲ್ಕಪೂರ್ವ್ವರಚನಾ ....
೮ ನೇಚ ಭೂಭುಜನಸಘಂ|| ಸ್ವಸ್ತಿ ಸಮಧಿಗತ ಪಂ .....
೯ ನಾಶ್ರಯಂ ಕರ್ಪ್ಪುರಪ್ರಿಯಂ ಭೂಪಮಾನ್ಧಾತಂ ದಾ ......
೧೦ ವೀರ್ಯನಚತಳಿಧೈರ್ಯ್ಯಮ್ಮಾಹಿಷ್ಮತೀ ಪು ...
೧೧ ತಂ ಶ್ರೀಮನ್ಮಹಾಸಾಮನ್ತನೇಚರಸರ್|| ....
೧೨ ಮ ಸಮುದ್ಧರಸಿಯೆಳಮೇಲ ಸಿಂಹಪರ್ಷನ್ಮಂ.......
೧೩ ಣ್ಡಿತರ್ಗ್ಗೆ ಧಾರಾಪೂರ್ವ್ವಕಮ್ಮಾಡಿ ಎರೆಪೊಲಮ್ಮ ....
೧೪ ರಿನ್ನೂಱಂಕದೊಳಮ್ಮತ್ತರ ೨೦೦[|*] ತೀರ್ತ್ಥದ ಬ ......
೧೫ ದೇವರಂಗಭೋಗಕ್ಕೆ ಬಿಟ್ಟ ಕುಕ್ಕನೂರೊನ್ದು ಮಠದ ....

೧೬ ಗೆನ್ನೀಳವಿಪ್ಪ್ರರ್ತ್ತಾಗೆ . ಮನೆಯ ನಿವೇಶಣ ೧೦೦[|*] ...
೧೭ ಗಣಕೇರಿಯೊನ್ದು | ಅಲ್ಲಿ ವಿದ್ಯಾಸತ್ರಕ್ಕೆ ಮ .....
೧೮ ತಾನೀ ತೀರ್ತ್ಥಕ್ಕೆವನ್ದು ದೇವರುಮಂ ಪಣ್ಡಿತರುಮಂ ....
೧೯ ಸಿದ್ಧಿಯಿನ್ದುಭಯಪುರಿ ಮಾಡಿಯುಃಭಯ ......
೨೦ ರಿಗಳಪ್ಪ ತಪೋಧನಪ್ರ್ವರಮನೈಷ್ಠಿಕರು ಮು .....
೨೧ ಯಿಸುವರನ್ತಲ್ಲದೆ ಗುಣಹೀನರಾದಂದಾರು ಮ ......
೨೨ ತನಂಗೆಯ್ದಶ್ವಗರ್ದ್ದಭ . ಚಾಣ್ಡಾಲನವಂ ಸತ್ತಡೆ ಹ ....
೨೩ ವಾಯೋ ಹರೇತ ವಸುನ್ಧರಾಂ ಷಷ್ಟಿರ್ವ್ವರ್ಷ ಸಹ ......
೨೪ ದ್ದೇವಸ್ವಂ ವಿಷಮುಚ್ಯತೇ [|*] ವಿಷಮೇಕಾಕಿನಂ ಹನ್ತಿ .....
೨೫ ಸಗರಾದಿಭಿ[|*]ರ್ಯ್ಯಸ್ಯಯಸ್ಯ ಯದಾ ಭೂಮಿಸ್ತ ......
೨೬ ತಿ ವಂಶಜಾ ವಾ ಪಾಪದಪೇತ ಮನಸೋಭ್ಯ ವಿಭಾ ......
೨೭ ತೇಭ್ಯೋಮಯಾ ವಿರಚಿತಾಂಜಲಿ ಕೇಷ ಮುದ್ಧಾರ್ದ್ಧ|| .....
೨೮ ಯೋ ಭವದ್ಭಿಸ್ಸರ್ವ್ವಾನೇತಾನ್ ಭಾವಿನಃಪ್ಪಾರ್ತ್ಥಿವೇಂ ....
೨೯ ಸ್ಯ ಕರಿಕರಣಂ ಗೋಸಹಸ್ರ ವಧ್ಮೃತಃ ಕರದ್ರ .....
೩೦ ತನ್ದಿಗತ್ತಿಮ್ಮ್ರಡಿಯೆನಿಸಿದ ತದ್ಧರ್ಮ್ಮ ರಕ್ಷ ......
೩೧ ಕಸನ್ಮೂರ್ತೇ ತಾರಾಭೃತ್ಪ್ರಳಿಯಾದ್ರಿ ತಾರಾ......
೩೨ ಭಿಮಾನಂ ಸ್ವಯಮೆನೆ ನೆಗಟ್ದಂ ಚನ್ದಭೂಪಂ
೩೩ ರಂಗಭೋಗಕ್ಕೆ ಬಿಟ್ಟುದು|| ಮರೆಯಲಾಗ ......
೩೪ .. ಗೆ ಮಾನ್ಯಂ ಮತ್ತ ೨ರ ಮನೆಯ ನಿ ......
೩೫ .... ಬ್ಬಣದೆ ಭಿನ್ನ ತಿಪ್ಪೆಸುಂಕ ......
೩೬ .. ಗೆಯ ಬಂಡೆಗಾಣದಿಂ ತಿಲುವ ಗದ್ಯಾ .....
೩೭ ... ಕ್ಕೆಯಿ ಮತ್ತರ್ ೩ ನಿವೇಶನ ...
೩೮ ... ನ ೧ ಪಾತ್ರ ಚಾವಿಕಬ್ಬೆಯ ....*

೧೦

ಅರಸು ಹಾಗೂ ಅರಸು ಮನೆತನದ ಉಲ್ಲೇಖವಿರದ ಈ ಶಾಸನವನ್ನು ರಾಮಲಿಂಗೇಶ್ವರ ಗುಡಿಯ ಮುಂದಿರುವ ಕಲ್ಲಿನ ಎಡಭಾಗದಲ್ಲಿ ಕೆತ್ತಲಾಗಿದೆ.

ಎಳರಾಮೆ(ಯಡ್ರಾಮಿ) ಯರಾಮೇಶ್ವರದೇವರ ಅಂಗಭೋಗ, ರಂಗಗಭೋಗಗಳಿಗಾಗಿ ಮಠದಾಚಾರ್ಯ ಎಳಮೇಲ ಸಿಂಹಪರ್ಷನ್ಮಂಡಲಿಯ ಮಳಿಯಾಳ ಪಂಡಿತದೇವರ ಪ್ರಶಿಷ್ಯ ಅಮೃತರಾಶಿ ಪಂಡಿತದೇವರ ಕಾಲಂಕರ್ಚಿ ಬಿಟ್ಟ ಭೂದಾನದ ಉಲ್ಲೇಖವಿಲ್ಲಿದೆ.

*ಮುಂದಿನ ಭಾಗ ಒಡೆದಿದೆ.

ಮಿತಿಯ ಉಲ್ಲೇಖವಿರುವ ಭಾಗ ನಷ್ಟವಾಗಿದ್ದು, ಲಿಪಿ ಸ್ವರೂಪವನ್ನಾಧರಿಸಿ, ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ಹೇಳಬಹುದಾಗಿದೆ.

● ಯಡ್ರಾಮಿಯನ್ನು 'ದಕ್ಷಿಣವಾರಣಾಸಿ' ಎಂದು ಕರೆಯಲಾಗಿದೆ. 'ಧರ್ಮ್ಮಕೀರ್ತಿ', 'ಹಿರಿಯಕೆರೋಲು' ಪದಗಳನ್ನು ಗಮನಿಸಬೇಕು.

೧ *ಸ್ವಸ್ತಿ ಸಹಿತಂ ಶ್ರೀಮನ್ಮಹಾಪ್ರಧಾನಂ ....
೨ ...... ಗೆಯ||
೩ ಶ್ರೀಮದ(ದ್ದ)ಕ್ಷಿಣ ವಾರಣಾಸಿಯೆಳರಾಮೆಯ ಶ್ರೀ-
೪ ರಾಮೇಶ್ವರದೇವರ್ಗ್ಗೆ ನಿತ್ಯಸೇವೆಯುಲು ಹಾಗಮೆಂಟು . -
೫ ರ ಅಂಗಭೋಗಕ್ಕಂ ರಂಗಭೋಗಕ್ಕಂ|| ಶ್ರೀರಾಮೇ-
೬ ಶ್ವರದೇವರ ಮಠವಾಚಾರ್ಯರ್ಮ್ಮದ್ದೆಳಮೇಲ ಸಿಂಹ-
೭ ಪರ್ಷನ್ಮಂಡಲಿ ಮಲೆಯಾಳ ಪಂಡಿತದೇವರ ಶಿ-
೮ ಷ್ಯಪ್ರಶಿಷ್ಯರಪ್ಪ ಅಮ್ರಿತರಾಸಿ ಪಂಡಿತದೇವರ
೯ ಕಾಲಂಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿಕೊಟ್ಟರು||
೧೦ ಮತ್ತಂ .... ಮಾನ್ಯದ ಹೊಲದೊಳಗೆ
೧೧ ಸರಸ್ವತಿಯ .... -
೧೨ ಗೆಯಗಿಲೆರೆಯಿಂ ತೆಂಕಲು ... ಯಜ .
೧೩ ಯಿಂ ಮೂಡಲು ಧರ್ಮ್ಮಕೀರ್ತಿಕ್ಕೆ ಹಿರಿಯಕೆರೋಲ
೧೪ ಮತ್ತರು ೨೦ಕ್ಕಂ ...... ಮತ್ತರ ..
೧೫ ದಕ್ಷಿಣವಾರಣಾಸಿಯೆಳರಾಮೆಯ ಧ-
೧೬ ರ್ಮ್ಮ .. ಧಂಮ್ರ್ಮ .. ತಕ್ಕೈಯಿಸಿದ್ದರ್ನ್ನತರಾ-
೧೭ ಗೆ ..... ದಯಂ ಸುಚರಿ-
೧೮ .... ಕ್ಷಯಿಂ|| ನಿಲ್ದಡಾತನ ಸಮಸ್ತ
೧೯ ಧನ ಕ್ಷಯಮಕ್ಕುಂ|| ಆತನಾಯುಕ್ಷಯಮ-
೨೦ ಕ್ಕು ಆತನ ಕುಲಕ್ಷಯಮಕ್ಕುಮದಾವ ಸಂ
೨೧ ದೇಹ||

೧೧

ಅರಸು ಮನೆತನದ ಉಲ್ಲೇಖವಿರದ ಈ ಶಾಸನ, ರಾಮತೀರ್ಥದ ಬಲಭಾಗದ ಕಮಾನಿನ ಬಾಗಿಲದ ಬಲಗೋಡೆಯಲ್ಲಿದೆ.

*ಮೇಲಿನ ಭಾಗ ಸಂಪೂರ್ಣ ಸವೆದಿದೆ.

ಪ್ರಸ್ತುತ ಶಾಸನದ ನಾಲ್ಕೂ ಮುಖಗಳು ಒಡೆದಿದ್ದು, ಮಹಾಜನ-ಸಂತತಿ-ಸಂತೆವಣದ ಉಲ್ಲೇಖ ಮಾತ್ರ ಉಳಿದುಕೊಂಡಿರುತ್ತದೆ.

ಲಿಪಿಸ್ವರೂಪವನ್ನಾಧರಿಸಿ, ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ನಿರ್ಧರಿಸಬಹುದು.

● "ಎಳರಾಮೆಯಧರ್ಮ್ಮ", "ಪುನದ್ಧಾರೆ" ಪದಗಳನ್ನು ಗಮನಿಸಬೇಕು.

೧ *ಜಯುಗೆಯ್ದ್ದಲ್ಲಿತರಿಸವಾದಿಸಿ ಮಹಾಜನಂಗಳಿಗೆ ....
೨ ಭ್ಯಂತರ ಸಿದ್ಧಿಯನಱಿದು ಆ ಮಹಾತಿಥಿಯಲು ಹೇಹ ......
೩ ತಮುಂ ಸಂತಾ(ತ)ತಿಗಳಿಗೆ ಯೆರಗನಱಿಹಿ ತಮ್ಮ . ವಂದಕಾಣಿ ......
೪ ಸ್ತಾ(ನ್ತ)ತಿಗಳು ತಂತಂಮಲ್ಲಿ ಸಂತೆವಣವೆಲ್ಲವಂ ಪ್ರತ್ಯೇಕಪ್ರತ್ಯೇಕ ತಿ ....
೫ ಯದಂತಾಗಿ ಪುನದ್ಧಾರೆಯಾಗಿ ಧಾರಾಪೂರ್ವ್ವಕಂ ಮಾಡಿಕೊಟ್ಟ ......
೬ ಭಿಃಸ್ಸಗರಾದಿಭಿಃ [|*]ಯಸ್ಯಯಸ್ಯ ಯದಾ ಭೂಮಿಸ್ತಸ್ಯತಸ್ಯ ತದಾ ....
೭ ಹರೇತಿ ವಸುಂಧರಾ[|*]ಷಷ್ಟಿವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯ ....
೮ ಹು ಬ್ರಹ್ಮಸ್ವಂ ವಿಷಮುಚ್ಯತೇ[|*] ವಿಷಮೇಕಾಕಿನಂ ಹನ್ತಿ ಬ್ರಹ್ಮಸ್ವಂ ಪುತ್ರ-
೯ ಶಿಯುಳರಾಮೆಯ ಧರ್ಮ್ಮಮಿದಂ ಸ್ವಧರ್ಮ್ಮದಿಂ ರಕ್ಷಿಸಿದಾತಂಗೆ ಜ ....
೧೦ ರ್ತ್ಥದುಪೇಕ್ಷೆಯನೊ . ದಾತನ ಸಮಸ್ತ ಧನಕ್ಷಯ-
೧೧ ಮುಕ್ಕುವಾತನ ಕುಲಕ್ಷಯಮುಕ್ಕುಮುದಾವ ಸಂದೇಹಂ[||*]

೧೨

ಬಸವಣ್ಣನ ಗುಡಿಯ ಬಲಗಡೆಯಲ್ಲಿರುವ ಕಲ್ಲಿನ ಎಡಭಾಗದಲ್ಲಿ ಪ್ರಸ್ತುತ ಶಾಸನವನ್ನು ಕಂಡರಿಸಲಾಗಿದೆ. ಇಲ್ಲಿ ಅರಸನ ಉಲ್ಲೇಖವಿರುವುದಿಲ್ಲ.

ಎಳಮೇಲ ಸಿಂಹಪರ್ಷನ್ಮಂಡಲಿಯ ಪ್ರಶಿಷ್ಯ ಮೋನಿಪಂಡಿತದೇವನು ದಕ್ಷಿಣ ವಾರಣಾಸಿ ಎಳರಾಮೆಯ ಜನ್ನದಬಾವಿಗೆ ಬಂದ, ದೇವಾಲಯಕ್ಕೆ ದತ್ತಿಬಿಟ್ಟ, ಬಾಚ ನೃಪನು ದೇವರ ಪೂಜಾರಿ- ಬ್ರಹ್ಮಪುರಿ- ಮಾಲೆಗಾರ- ಶಂಖದವರಿಗೆ ನೀಡಿದ ದಾನಗಳ ಉಲ್ಲೇಖಗಳು ಇಲ್ಲಿರುತ್ತವೆ.

ಲಿಪಿಸ್ವರೂಪವನ್ನಾಧರಿಸಿ, ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ನಿರ್ಧರಿಸಬಹುದಾಗಿದೆ.

● ಇಲ್ಲಿ ಬರುವ "ಬಲ್ಲದ ಕನ್ನಡಕ್ಕರದ ವಿದ್ಯಾಸ್ಥಾನ" ಎಂಬುದನ್ನು ಗಮನಿಸಬೇಕು.

---

* ಕಲ್ಲಿನ ನಾಲ್ಕೂ ಮುಖಗಳು ಒಡೆದಿರುತ್ತವೆ.

೧ ಧನಮುಂ ಬಯಸ್ತು ಸದ್ಧರ್ಮ್ಮಮುಂ ತೊಱೆದು ದೃಷ್ಟಾ-
೨ ದ್ರಿಷ್ಟ ವಿಜ್ಞಾನಮುಳ್ಳನಿತುಂ ಪೊ[ಱೆ]ದನರ್ಥ್ಥವಾ-
೩ ಗ್ಗವದನತಂ ಭಾವಿಸೆಲೆ ದಾಸಿರಾಜನ ಧರ್ಮ್ಮಾದಿ
೪ ತದರ್ತ್ಥ ವಿಶದದ ಪೂಜಾರ್ತ್ಥ ವಿಶಿಷ್ಟಿಷ್ಟತುಷ್ಟಿ ನಿಮಿ-
೫ ತ್ತಾರ್ತ್ಥನಶೇಷ ಗೋತ್ರ ಪರಿವಿದ್ಯರ್ತ್ಥಂ ಧರಾಚಕ್ರದಿ [||*]
೬ ಸ್ವಸ್ತಿ ಯಮನಿಯಮಸ್ವ(ಸ್ವಾ)[ಧ್ಯಾಯ*] ಧ್ಯಾನಧಾರಣ ಮೋ-
೭ ನಾನುಷ್ಠಾಣ ಜಪಸಮಾಧಿಶೀಳಸಂಪನ್ನರಪ್ಪ
೮ ಶ್ರೀಮಡೆಳಮೇಲ ಸಿಂಹಪರ್ಷನ್ಮಣ್ಡಲಿ ಮಳೆ-
೯ ಯಾಳದೇವರ ಶಿಷ್ಯಪ್ರಶಿಷ್ಯರಪ್ಪ ಮೋನಿಪಂ-
೧೦ ಡಿತರ ||ವ್ರಿತ್ತ|| ದಕ್ಷಿಣವಾರಣಾಸಿಯೆನಿಸಿದೆ-
೧೧ ಳರಾಮೆಗೆ ದಿವ್ಯಮೂರ್ತ್ತಿ[ರ್*] ಪಾಪಕ್ಷಯ ಕಾ... –
೧೨ ಟ್ಟ್ ಜನ್ನದಬಾವಿಗೆ ಬಂದು ರಾಗದಿಂ ತ್ರ್ಯಕ್ಷನಿವಾಸ[ಮೆ]
೧೩ ನೆಱೆಯೆ ಮಾಡುವೆಮೆಂದೆನಲೇಂ ಬ್ರತಗಳ[ನಿ]ಕ್ಷಯ
೧೪ ನುಡೆ ಮಾಡಿಸಿದನೇಂ ಕ್ರಿತ್ಯಪುಣ್ಯನೋ ಮೋನಿಪಂಡಿತ [||*]
೧೫ ಅ[ಟ]ಮದನ ವಿಷವಿದ್ಯಾನಿಪುಣಂ ಯಮನಿಯ[ಮ*]
೧೬ ನಿಯತ ಸರ್ವ್ವಯಶಃ ಶ್ರೀ ಅಪ್ತುಲಲಾಮಂ ಶ್ರೀ ಮೋನಿ[ಪ*]
೧೭ ಣ್ಡಿತಂ ಪಣ್ಡಿತಾಬ್ಜವನ ಕಳಹಂಸ|| ಈ ಮೋನಿಪಂಡಿತರ
೧೮ ಸಂನಿಧರ್ಮ್ಮಮುಂ ಕಂಡು ಮತ್ತಂ ಮಹೇಶ್ವರರು ||ವ್ರಿತ್ತ||
೧೯ ಸ್ಥಿರ ಚಂದ್ರಾರ್ಕ್ಕಮೆನಲ್ಕೆ ದೇವರಿಗೆ ಧಾರಾಪೂರ್ಬ್ಬಕಂ ಮಾಡಿ-
೨೦ ಯಾಚರಸ ಬಾವಿಯ ತೆಂಕಲುಂ ಪಡುವಲುಂ ಪೂದೋಂಟ-
೨೧ ವಿರ್ಮ್ಮತ್ತರಂ ಪುರಮುಂ ಮಾಡಿಪಿಮೊಂದು ಮುಂದೆ [ಮನೆ]-
೨೨ ಯಂ ನಾಲ್ವತ್ತಂ ಸತ್ರಕ್ಕೆ ಮತ್ತರಮಯ್ದುಂ ಪೊಳಲಲ್ಲಿಯ
೨೩ ಗಡೆಯಲೆಲ್ಲಂ ಹೊಂದಿ . ದೊಳಮುಂ|| ಪುರಂ ಕು .
೨೪ ಹದೆ ಪತ್ತು ಕೆಯ್ಯಗಲವಿಪ್ಪತ್ತೊಂದು ಕೈನೀಳಮಾ-
೨೫ ಗಿರಲ್ ಬಾಚನ್ರಿಪಂ ನಿವೇಶನಮುಮಂ ನಾಲ್ವತ್ತನೀಳ ..
೨೬ ದೇವರ ಪೂಜಾರಿಗೆ ನಾಲ್ಕು ಬ್ರಹ್ಮಪುರಿಗ ....
೨೭ ಸ ಮಾಲಗಾಱಂಗಂ ಸ[೦]ಕದವಂಗೆ ಸಾರನಿಯಮ-
೨೮ ದಿಂ ಕಟ್ಟಿ ಲಿಂಗಂ ಗ್ರಿಹ|| ಪತ್ತರ್ಕ್ಕೆ ತೆಱೆಯೆಲ್ಲ ಮಾನ್ಯ.
೨೯ .... ಮೇಲೆ ತದ್ಗೇಹಮಾದರ್ತ್ತಕ್ಕಂ ಸಲೆ.
೩೦ ದಿಗೆಮನೆ . ಮ್ಮಾನೆ ನಾನಯಂ ಸ್ವೇಚ್ಛೆಯಿಂ ವೆತ್ತಾನಂದದಿಂ ನೋ-
೩೧ . ಲಿಪ್ಪರ್ದ್ದವ ದ . ದಂ ಮಾ .. ಪ್ಪಾತನಾಳುತ್ತಿಕ್ಕುಂ ಸ-

೩೨ ... ಮಹಾನರಕದೊಳು ನಾನಾವಿಧಂ ದುಃಕ(ಖ)ದಿಂ||
೩೩ ಇದು ಬಲ್ಲದ ಕನ್ನಡಕ್ಕರದ ವಿದ್ಯಾಸ್ಥಾನವೀ ಸ್ಥಾ-
೩೪ ನಮೆಂಬುದನೆಂದೀಶ್ವರ ಭಕ್ತರಿತ್ತ ನೆಲ ಪಂನ್ನಿರ್ಮ್ಮ-
೩೫ ತ್ತರ ಭತ್ತಭೋಗದ ಕೊಟ್ಟ ಬೆಳಸಿಂದ ಪೂ . -
೩೬ ಗಗ್ಗೆ ಪನ್ನಿರ್ಬ್ಬಗುಣಾಲ್ಕಿ . ಜಾಥವ ಕೂಡೆ ..
೩೭ ಗಂದಿಮುಕ್ಕದ.|| ಈ ಯಥ್ಥಾರ್ಥಥ್ಥ ಪ್ರಮಾಣೀ ...
೩೮ . ಸ್ಥಿರ ಚಂದ್ರಾರ್ಕ್ಕಮೆನೆ ....
೩೯ ....
೪೦ ....
೪೧ ಮರನಂ|| ಇ[ಷ್ಟಾಗಿ] ಸರ್ವ್ವಾಧಿಕಾರಿಯ ....
೪೨ . ವನಗೆ ಸಿಕ್ಷಾಸೂತ್ರ||ವ್ರಿತ್ತ|| ....
೪೩ ಕ್ಕಂಬರಂ ಸಂತತಮೆಂಬೀ ನವವಿದ್ಯಾ . ಪನ್ನಿರ್ವ್ವರು-
೪೪ [ಣ್ಬಂತ] ಪನ್ನಿರ್ಮ್ಮತ್ತರಂ ಭಾಗದಲೇನುವು ..
೪೫ ಯ್ಗೆ ಸಂಕ್ರಾನ್ತಿಯಂದಿಂಗೆರಡಚ್ಚಂ ಮಾಜನರಿಕ್ಕುವು-
೪೬ ದು ತೊರೆಯ ಪೂದೋಂಟದೊಳೆ ಬಿತ್ತಿ ಅಲ್ಲಿಂ ಸರಿಯಾ-
೪೭ ಗಲು ಪಚ್ಚುಕೊಂಡೊಪ್ಪಳೆ ಮಡಕೆಗಳಂ ..
೪೮ ದಾ .. ದಿಂದೆ .. ತಂ ಮಾ ಸಾರ್ವ್ವರೆ ದೇವರ ಕೆ-
೪೯ ಯಮೆನೆ ತೋಂಟಮೆಂಬಿವಕ್ಕೆಲಂ ಜೀಯರ ಕೈಯ್ಯಲೆ-
೫೦ ರಡು ಪೊನ್ನದರುವಣಮುಂ ಕೊಂಡು ಧರ್ಮ್ಮಮುಂ ಪಾಲಿ-
೫೧ ಸುವರ್|| ಇ(ಈ)ಸ್ಥಾನಕ್ಕಧಿಕಾರಿಗಳಪ್ಪ ತಪೋಧ-
೫೨ ನರ್ ಪರಮಧಾರ್ಮ್ಮಿಕರ್ಮುತ್ತಮ ನೈಷ್ಠಿ-
೫೩ ಕರುಂ ಭಯಲೋಭವರ್ಜ್ಜಿತರುಮಾಗಿ ನಡೆ-
೫೪ ಯಿಸುವರನ್ತಲ್ಲದೆ ಗುಣಹೀನರಾದಂದೂರು-
೫೫ ಮರಸುಮಿಟ್ಟು [ಪೊ]ಱ ಕಿಡಿಸಿ ಕಳೆವರಲ್ಲದೆ ದಾ-
೫೬ ಳಿವಡ್ಡಿತನಂ ಗೆಯ್ದು ಶ್ವಾನ ಗಾರ್ದಭಂ .. ನವ ಸತ್ತಡೆ
೫೭ ಪಂ ದಿಸತ್ತುದು ನಾಯಿ ಸತ್ತುದು ||ಶ್ಲೋಕ||
೫೮ ಸ್ವದತ್ತಾಂ ಪರದತ್ತಾಂ ವಾಯೋ ಹರೇತ ವಸುಂಧ-
೫೯ ರಾಂ[|*] ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯ-
೬೦ ತೇ ಕ್ರಿಮಿಃ|| ನ ವಿಷಂ ವಿಷಮಿತ್ಯಾಹುರ್ದೇವಸ್ವಂ
೬೧ ವಿಷಮುಚ್ಚತೇ [|*] ವಿಷಮೇಕಾಕಿನಂ ಹನ್ತಿ ದೇವ-
೬೨ ಸ್ವಂ ಪುತ್ರ ಪೌತ್ರಿಕಂ|| ಬಹುಭಿರ್ವ್ವಸುಧಾ ದ-

೬೩ ತ್ತಾ ರಾಜಭಿಸ್ಸಗರಾದಿಭಿ[।*]ರ್ಯ್ಯಸ್ಯಯಸ್ಯ
೬೪ ಯದಾ ಭೂಮಿಸ್ತಸ್ಯತಸ್ಯ ತದಾ ಫಲಂ|| ಅಕ-
೬೫ ರಸ್ಯ ಕರಿಕರಣಂ ಗೋಸಹಸ್ರ ವಧಕೃ್ರತ [।*]
೬೬ ಕರಂ ಪ್ರವ್ರಿತ್ತಿ ವಿಚ್ಛೇದಾ . ದೋಷಾದಿ ಫಲಮಶ್ಟ*

೧೩

ಪ್ರಸ್ತುತ ಶಾಸನವನ್ನು ರಾಮತೀರ್ಥದ ಹಿಂಭಾಗದ ಕಮಾಸಿನ ಕಟ್ಟೆಯಲ್ಲಿ ಕಟ್ಟಲಾಗಿದೆ.

ಶಾಸನದ ಮೇಲ್ಭಾಗ, ಕೆಳಭಾಗ ಹಾಗೂ ಬಲಭಾಗಗಳು ಒಡೆದಿದ್ದು, ಮದುವಣ ಭಟ್ಟನ ಮಗ ಆದಿತ್ಯಭಟ್ಟ ದಂಡಾಧೀಶನ ವರ್ಣನೆ ಮಾತ್ರ ಉಳಿದುಕೊಂಡಿರುತ್ತದೆ.

ಲಿಪಿಸ್ವರೂಪವನ್ನಾಧರಿಸಿ, ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ಹೇಳಬಹುದಾಗಿದೆ.

ಇಲ್ಲಿ 'ಎಳರಾಮೆ ರಾಮೇಶ್ವರತೀರ್ತ್ಥ'ದ ಉಲ್ಲೇಖ ಬಂದಿರುತ್ತದೆ.

೧ *ಬಾಪ್ಪನೆ ವಿಶ್ವಾಮಿತ್ರ ಸೃ(ಸೃ)ಷ್ಟಿಯಂ ಮಾಡಿ ಜಗಜ್ಜನವಂ ....
೨ ತ್ರ|| ಜನಕಂ ಮಧುವಣಭಟ್ಟಂ ಜನನಿ ಜಗಜ್ಜನನಿ ....
೩ ನಾದಿತ್ಯಭಟ್ಟ ದಂಣ್ಡಾಧೀಶ ||ವೃ|| ವನಜಾತನನೆ ನಾಗಲ ....
೪ ಪಿಯೆಂಬೀ ಯಿರ್ವ್ವರುಂ ಕಾನ್ತೆಯರ್ತ್ತನೆಯುಚಾರ್ತ್ಥಮರಸಂ ಪವಿ ......
೫ ಗಳ್ಪಿನಾನಾದಿತ್ಯ ದಂಣ್ಡೇಶನ ||ಕಂದ|| ಕವಿತಾ ಪ್ರಭಾವದಿಂ ......
೬ ವ ಮುಗಿಯಿಪ ಬಿನ್ನಣಮಂ ಭುವನದೊಳಾದಿ ....
೭ ಶಾಸ್ತ್ರವನಿತುಂ ತನ್ನಿಂದೆ ಪಂಚಾಂಗ ಮಂತ್ರದೊಳೆಸ್ಪತ್ತೆ ....
೮ . ದಶಧರ್ಮ್ಮಶಾಸ್ತ್ರದೊಳವಿಂತ್ರಾರ್ತ್ಥತ್ಪರರ್ಪ್ಪಳಿವೆಂಬುದು ....
೯ ||ಕಂದ|| ಇರೆ ಬುಧಸೊರ್ವನೆ ಪೊರೆಯೊಳೆಸರಿ ರಕ್ಷಿಸಿ ಮು ....
೧೦ ರದಾದಿತ್ಯಭಟ್ಟನಾಂಪನೆ ಮುಯ್ಯ|| ಸರನಿಧಿ ಮಧ್ಯದೊಳೆಸೆ .....
೧೧ ಭರತ ಭರತೋರ್ಬ್ಬಿಯೊಳೆಸುವುದಲ್ಲಿ ಕುಂತಳದೇಶ|| ಕರ ......
೧೨ ಕಾ ಚರಣರೆಳರಾಮೆ ರಾಮೇಶ್ವರ ತೀರ್ತ್ಥಂ ಸಕಳಜನಮನೋ ......

೧೪

ರಾಮತೀರ್ಥ ಮಸೀದೆಯ ಬಲಭಾಗದಲ್ಲಿರುವ ಕಲ್ಲಿನಲ್ಲಿ ಈ ಶಾಸನವನ್ನು ಕಂಡರಿಸ ಲಾಗಿದೆ. ಇಲ್ಲಿ ಅರಸನ ಅಥವಾ ಅರಸುಮನೆತನದ ಉಲ್ಲೇಖ ಇರುವುದಿಲ್ಲ.

ಶಾಸನ ತ್ರುಟಿತವಾಗಿದ್ದು, ಎಳಮೇಲ ಸಿಂಹಪರ್ಷನ್ಮಂಡಲಿಯ ಮಲೆಯಾಳ ಪಂಡಿತರ ಪ್ರಶಿಷ್ಯ ಸೂರ್ಯರಾಶಿ ಪಂಡಿತರ ಕಾಲಂಕರ್ಚಿ ನೀಡಿದ ಭೂದಾನದ ಉಲ್ಲೇಖ ಮಾತ್ರ ಗೊತ್ತಾಗುತ್ತದೆ.

---

*ಮುಂದಿನ ಭಾಗ ಒಡೆದಿದೆ.

*ಕಲ್ಲಿನ ಮೇಲ್ಭಾಗ, ಬಲಭಾಗ ಹಾಗೂ ಕೆಳಭಾಗಗಳು ಒಡೆದಿರುತ್ತವೆ.

ಲಿಪಿಸ್ವರೂಪವನ್ನಾಧರಿಸಿ ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ಹೇಳಬಹುದಾಗಿದೆ.

● 'ತೀರ್ತ್ಥದ ಗಡಿಂಬದ ಕೋಲು' ಪದ ಗಮನಿಸುವಂಥದಾಗಿದೆ.

೧ *ಲಯಾಳದೇವರ ಪ್ರಶಿಷ್ಯರಪ್ಪ ಸೂರ್ಯ್ಯರಾಶಿ ಪಂ ......
೨ ನಲ್ಲಿ ತೀರ್ತ್ಥದ ಗಡಿಂಬದ ಕೋಲಿನ್ದ ಕೊಟ್ಟ ಕೆಯ್ಮತ್ತ ......
೩ ಮತ್ತರೆಂಟು ಗರ್ದ್ದೆ ಮತ್ತರೊನ್ದು ತೋಂಟಮ್ಮತ್ತರೆರಡು ......
೪ ಯ್ದುವರ್ಗ್ಗೆ ಭಟ್ಟವೃತ್ತಿ ಮತ್ತರ್ ೩೪ ಪತ್ತು ಕಯ್ಯ ......
೫ ಮೀಹದ ಕೆರೆಯೊಂದು ಬ್ರಹ್ಮಪುರಿಯಿಂ ಬಡ ......
೬ ಗರ್ದ್ದೆ ಕಮ್ಮಂ ೪೫೦ ತೋಂಟ ೧|| ಈ ಧರ್ಮ್ಮಮಂ ಚಕ್ರವರ್ತ್ತಿ[ರ್*]
೭ ಸದಕ್ಷಿಣವಾಗಿ ಧಾರೆಯೆಱೆದು ಸರ್ವ್ವಾಭ್ಯನ್ತರ ......
೮ ದ ತೇಜ್ಯ ವಿಶೇಷಮೆಲ್ಲಮಂ ಕೊಟ್ಟ|| ಈ ಸ್ಥಾನಕ್ಕಧಿಕ ......
೯ ವ್ರಿಕ್ಕರುಂ ಭಯಲೋಭವರ್ಜಿತರುಮಾಗಿ ನಡೆ ......
೧೦ .... ಅನುದಿಸಿ ....

೧೫

ಕಬ್ಬಿಲಿಗರ ಓಣಿಯಲ್ಲಿರುವ ಸಿದ್ಧರಾಮಪ್ಪ ಮರಗಾನೂರ ಅವರ ಮನೆಯ ಹೊರಗೋಡೆಯಲ್ಲಿರುವ ಕಲ್ಲಿನಲ್ಲಿ ಈ ಶಾಸನವನ್ನು ಬರೆಯಲಾಗಿದೆ.

ಅಲ್ಲಲ್ಲಿ ತ್ರುಟಿತವಾಗಿರುವ ಈ ಶಾಸನ, ಲಕ್ಷ್ಮಣೇಶ್ವರ ತೀರ್ಥ-ಆದಿತ್ಯಭಟ್ಟರ ಉಲ್ಲೇಖಗಳನ್ನು ಮಾತ್ರ ಹೇಳುತ್ತದೆ. ಜೊತೆಗೆ ಲಕ್ಷ್ಮಣೇಶ್ವರ ತೀರ್ಥದ ಪಶ್ಚಿಮ ದಿಕ್ಕಿನಲ್ಲಿ ಆದಿತ್ಯಭಟ್ಟ ತ್ರಿಕೂಟ ದೇವಾಲಯ ಕಟ್ಟಿಸಿದ ಸೂಚನೆಯೂ ಇದ್ದಂತೆ ಕಾಣುತ್ತದೆ.

ಲಿಪಿಸ್ವರೂಪವನ್ನಾಧರಿಸಿ, ಈ ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನವೆಂದು ನಿರ್ಧರಿಸಬಹುದಾಗಿದೆ.

೧ ..... ಜಗಮಂ ಪವಿತ್ರತರ ಪ ....
೨ .... ಲಕ್ಷ್ಮಣೇಶ್ವರ ತೀರ್ತ್ಥದ ಪಶ್ಚಿಮ ದಿಶಾಭಾಗದೊಳ್ ||ವೃತ್ತ||
೩ .... [ತೆ] ಲೋಕಕ್ಕೆನೆ ಭೂತಳಂ ಪೊಗಳಲೊಲ್ದಾದಿತ್ಯಭಟ್ಟವರ್ಮ್ಮ ...
೪ .... [ದ] ವ್ಯಾಪಯಶಂ ತ್ರಿಕೂಟ ರಚಿತಂ ಚಂದ್ರಾರ್ಕ್ಕ ತಾ*-

● ●

* ಕಲ್ಲಿನ ನಾಲ್ಕೂ ಭಾಗಗಳು ಒಡೆದುಹೋಗಿವೆ.

ಸಾದರ ಸ್ವೀಕಾರ

೧. ನಟರಾಜ್, ಪಿ. : ಮನೋರೋಗ ವಿಜ್ಞಾನ, ೧೯೮೫, ಮೈಸೂರು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪುಟ xx+೫೯೬, ಬೆಲೆ ರೂ. ೬೦-೦೦

೨. ಶೇಷಗಿರಿರಾವ್, ವಿ. ಎನ್. : ಪಾಶ್ಚಾತ್ಯ ತಾತ್ತ್ವಿಕ ಚಿಂತನೆ, ೧೯೮೫, ಅದೇ ಪುಟ xii+೨೭೨, ಬೆಲೆ ರೂ. ೩೦-೦೦

೩. ಶೇಷಗಿರಿ, ಕೆ. ಆರ್. (ಸಂ.): ಶಾಂತವೀರ ವಿರಚಿತ ವೀರಭದ್ರ ಲೀಲಾರತ್ನ, ೧೯೮೫, ಅದೇ ಪು. ೬೪+೨೩೨ ಬೆಲೆ ರೂ. ೨೧-೦೦

೪. ಹಿರಿಯಣ್ಣ, ಅಂಬಳಿಕೆ (ಸಂ.): ಲೌಕಿಕ ಸಂಪ್ರದಾಯದ ಚೌಡಿಕೆ ಕಾವ್ಯಗಳು, ೧೯೮೫, ಅದೇ ಪು. xii + ೩೨೪ ಬೆಲೆ ರೂ. ೩೦-೦೦

೫. ರೇವಣ್ಣ, ಮೈಲಹಳ್ಳಿ (ಸಂ.): ಅಡವಿಗುಮಾರ ಮತ್ತು ಇತರ ಜನಪದ ಕಥೆಗಳು, ೧೯೮೫, ಅದೇ ಪು. xxvii + ೨೮೬ ಬೆಲೆ ರೂ. ೩೦-೦೦

೬. ಶಾಮರಾಯ, ತ. ಸು: ಪ್ರಾಧ್ಯಾಪಕ ವೆಂಕಣ್ಣಯ್ಯ, ೧೯೮೫, ಅದೇ ಪು. xvi + ೧೧೬, ಬೆಲೆ: ಸಾದಾ ರೂ. ೧೫-೦೦ ಉತ್ತಮ ರೂ.೩೦-೦೦

೭. ಭೀಮಸೇನರಾವ್, ಡಿ. ಕೆ. (ದಿವಂಗತ) ಮತ್ತು ಕೆ. ರಾಘವೇಂದ್ರರಾವ್ (ಸಂ.): ಸುಕುಮಾರ ಭಾರತಿ ವಿರಚಿತ ಮಹಾಭಾರತ– ಯುದ್ಧ ಪಂಚಕ (ಛಾಯಣ ಭಾರತ) ಅದೇ ಪು. x + ೩೫ + ೨೧೮, ಬೆಲೆ ರೂ. ೩೦-೦೦

೮. ರಮೇಶ್, ಡಿ. ಎ: ಕಿವಿ ಮೂಗು ಗಂಟಲು ರೋಗಗಳು, ೧೯೮೫, ಮೈಸೂರು: ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ ಪು. xx + ೨೧೮ ಬೆಲೆ ರೂ. ೯-೦೦

೯. ರಾಘವಯ್ಯ, ವಿ: ಅನುವಾದ: ಅಕ್ಕಮಹಾದೇವಿ ಬುಡಕಟ್ಟು ನ್ಯಾಯ, ೧೯೮೪ ಅದೇ ಪು. iv + ೧೨೮ ಬೆಲೆ ರೂ. ೮-೦೦

೧೦. ಭೀಮಯ್ಯ, ಕೆ. ಎನ್: ಶಿಕ್ಷಣದಲ್ಲಿ ಆರ್ಥಿಕ ಮೌಲ್ಯ, ೧೯೮೫, ಅದೇ ಪು. xvi + ೧೦೫ ಬೆಲೆ ರೂ. ೧೦-೦೦

೧೧. ತುಕೋಳ್, ಟಿ. ಕೆ. (ಜಸ್ಟೀಸ್): ಜೈನ ಆಚಾರ, ೧೯೮೫, ಮೈಸೂರು: ಜೈನ ಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮಾನಸಗಂಗೋತ್ರಿ, ಪು. xii + ೧೪೪, ಬೆಲೆ ರೂ ೧೦-೦೦

12. Sureswaracarya (Sri), *Naiskarmyasiddhi.* S. S. Raghavachar (Tr.), 1985, Mysore, Prasaranga, University of Mysore Pp. xxxviii 234, Price: Rs. 20-00

13. Umapathy, M. *A History of Lcoal Self-Government in Rural Karnataka* 1985, Id. Pp. xii 280, Price: Rs. 30-00

– ವಿಲ್ಯಂ ಮಾಡ್ತ

ಈ ಸಂಚಿಕೆಯ ಲೇಖಕರು

೧. ಡಾ. ಬಸವರಾಜ ಸಬರದ
"ಪಲ್ಲವಿ" ಕೆ. ಇ. ಬಿ. ರಸ್ತೆ,
ಬೀದರ – ೫೮೫ ४೦೧

೨. ಕಿರಣ್ ಕಮಲಾಪ್ರಸಾದ. ಜೆ. ಸ.

೩. ಎಂ. ಇಕ್ಬಾಲ್,
ಶಿಕ್ಷಣ ವಿಭಾಗ, ಧಾರವಾಡ

೪. ಪ್ರೊ. ವ್ಹಿ. ಜಿ. ಮಾರೀಹಾಳ
ಪ್ರವಾಚಕರು, ಸ್ನಾತಕೋತ್ತರ ಶಿಕ್ಷಣ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ವಿಲ್ಯಂ ಮಾಡ್ತ
ಪ್ರವಾಚಕರು, ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಶ್ರೀ ಎಸ್. ವ್ಹಿ. ಪಿ. ಹಳಕಟ್ಟಿ
ಸಂಶೋಧನ ವಿದ್ಯಾರ್ಥಿ,
ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ
ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಡಾ. ಎಚ್. ಆರ್. ರಘುನಾಥ್ ಭಟ್
ಪ್ರವಾಚಕರು, ಪ್ರಾಚೀನ ಭಾರತೀಯ ಇತಿಹಾಸ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಶ್ರೀ ಎಸ್. ಕೆ. ಜೋಶಿ
ಭಾರತೀಯ ಪುರಾತತ್ವ ಸರ್ವೇಕ್ಷಣ
ಧಾರವಾಡ

೧೦. ಶ್ರೀ ಕೆ. ಬಿ. ಶಿವತಾರಕ್
ಪ್ರಾಧ್ಯಾಪಕರು,
ಪ್ರಾಚೀನ ಭಾರತೀಯ ಇತಿಹಾಸ ಮತ್ತು ಪ್ರಾಚ್ಯ ಶಾಸ್ತ್ರ
ಸೇಂಟ್ ಮೇರೀಜ ಸೈರಿಯನ್ ಕಾಲೇಜ,
ಬ್ರಹ್ಮಾವರ – ೫೭೬ ೨೧೩

೧೧. ಶ್ರೀಮತಿ ಎಸ್. ಎಲ್. ಸಣ್ಣೆಲ್ಲಪ್ಪನವರ
ಅಧ್ಯಾಪಕಿಯರು, ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ಡಾ. ವ್ಹಿ. ಶಿವಾನಂದ
ಕನ್ನಡ ಪ್ರಾಧ್ಯಾಪಕರು,
ಭಾರತೀಯ ಭಾಷಾ ವಿಭಾಗ
ಬನಾರಸ ಹಿಂದೂ ವಿಶ್ವವಿದ್ಯಾಲಯ
ವಾರಣಾಸಿ – ೨೨೧ ೦೦೫

೧೩. ಶ್ರೀ ಸದಾನಂದ ಪಾಟೀಲ
ಕನ್ನಡ ಅಧ್ಯಾಪಕರು,
ಸರಕಾರಿ ಕಿರಿಯ ಕಾಲೇಜ,
ಆಡೂರು. ತಾ: ಹಾನಗಲ್

೧೪. ಡಾ. ಬಿ. ಆರ್. ಹಿರೇಮಠ
ಪ್ರವಾಚಕರು, ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫. ಹನುಮಾಕ್ಷಿ ಗೋಗಿ
ಕಲ್ಯಾಣನಗರ,
ಕಲಬುರ್ಗಿ.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂ. ಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿಸುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ : ರೂ. ೪-೦೦

ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರ ವಿಳಾಸಕ್ಕೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩